www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಂತ್ರಜ್ಞಾನ**
ಹಕ್ಕಿಯನ್ನು ಕಂಡಾಗ 'ನಾನೂ ಹಾರಬೇಕು' ಎಂಬ ಆಸೆ ಮನುಷ್ಯನ ಮನಸ್ಸಿನಲ್ಲಿ ಬಲಿತು, ಮುಂದೊಂದು ದಿನ ವಿಮಾನದ ಸೃಷ್ಟಿಯಾಯಿತು...



**ಮಹಿಳಾ ಮತ**
ಮಹಿಳೆಯರ ಬದುಕು ಕಸಿದ ತಾಲಿಬಾನ್

'2ಎ ಮೀಸಲಾತಿ: ಧರಣಿಗೆ ತೀರ್ಮಾನ' 4B

ಹುಲಿ ಕಾರಿಡಾರ್‌ನಲ್ಲಿ ಹೆದ್ದಾರಿ ವಿಸ್ತರಣೆ 6

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 59,031 ▲ | 17,577 ▲ | 79.83 ▲ |

## 'ಬ್ರಹ್ಮೋಸ್' ಆಕಸ್ಮಿಕ ಉಡಾವಣೆ: ಮೂವರು ಅಧಿಕಾರಿಗಳ ವಜಾ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬ್ರಹ್ಮೋಸ್ ಕ್ಷಿಪಣಿಯನ್ನು ಆಕಸ್ಮಿಕವಾಗಿ ಉಡಾವಣೆ ಮಾಡಿದ್ದ ಭಾರತೀಯ ವಾಯುಪಡೆಯ (ಐಎಎಫ್) ಮೂವರು ಹಿರಿಯ ಅಧಿಕಾರಿಗಳನ್ನು ಕೇಂದ್ರ ಸರ್ಕಾರವು ಮಂಗಳವಾರ ವಜಾಗೊಳಿಸಿದೆ.

ಮಾರ್ಚ್ 9ರಂದು ಉಡಾವಣೆಯಾಗಿದ್ದ ಕ್ಷಿಪಣಿಯು ಪಾಕಿಸ್ತಾನದ ನೆಲದಲ್ಲಿ ಹೋಗಿ ಬಿದ್ದಿತ್ತು. ಈ ಘಟನೆಯು ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಮುಜುಗರ ಉಂಟುಮಾಡಿತ್ತು.

ಒಬ್ಬರು ಗ್ರೂಪ್ ಕ್ಯಾಪ್ಟನ್ ದರ್ಜೆಯ ಅಧಿಕಾರಿ ಹಾಗೂ ಇಬ್ಬರು ವಿಂಗ್ ಕಮಾಂಡರ್‌ಗಳ ಬೇಜವಾಬ್ದಾರಿಯಿಂದ ಈ ಅಚಾತುರ್ಯ ನಡೆದಿರುವುದು ಐಎಎಫ್‌ನ ತನಿಖೆಯಿಂದ ದೃಢಪಟ್ಟಿತ್ತು.

12ನೇ ಪುಟ ನೋಡಿ

'ಮಡಿಕೇರಿ ಚಲೋ ಮುಂದೂಡಿಕೆ' 4B

### ಚಿನಕುರಳಿ

ಪ್ರಕಾಶ್ ಶೆಟ್ಟಿ




### ಉತ್ತರ ಪ್ರದೇಶ ಮಾದರಿ ಜಾರಿಯತ್ತ ರಾಜ್ಯ ಸರ್ಕಾರದ ಚಿತ್ತ

# ಮದರಸಾ ಶಿಕ್ಷಣಕ್ಕೆ 'ಮಂಡಳಿ'

• ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ಮುಸ್ಲಿಂ ಧಾರ್ಮಿಕ ಶಿಕ್ಷಣ ಕೇಂದ್ರಗಳ ನಿಯಂತ್ರಣಕ್ಕೆ ಉತ್ತರ ಪ್ರದೇಶದ ಮಾದರಿಯಲ್ಲಿ 'ಕರ್ನಾಟಕ ಮದರಸಾ ಶಿಕ್ಷಣ ಮಂಡಳಿ' ರಚಿಸಲು ಸರ್ಕಾರ ಮುಂದಾಗಿದೆ.

ಉತ್ತರ ಪ್ರದೇಶ, ಉತ್ತರಾಖಂಡ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಮದರಸಾ ಶಿಕ್ಷಣ ಮಂಡಳಿ ರಚಿಸಿವೆ. ಅಲ್ಲಿನ ಮಂಡಳಿಗಳು ಈಗಾಗಲೇ ಮದರಸಾಗಳಲ್ಲಿನ ಶಿಕ್ಷಣ ಕೇಂದ್ರಗಳನ್ನು ನಿಯಂತ್ರಿಸುತ್ತಿವೆ. ಶೈಕ್ಷಣಿಕ ಚಟುವಟಿಕೆಗಳಲ್ಲಿ ಹಸ್ತಕ್ಷೇಪ, ಪಠ್ಯಕ್ರಮ ಪರಿಷ್ಕರಣೆ ಕಾರ್ಯಗಳೂ ನಡೆದಿವೆ ಎಂಬ ಆರೋಪವೂ ಇದೆ. ಅಂತಹ ಮಂಡಳಿಗಳ ಸ್ವರೂಪ, ರಚನೆ, ಅನುಷ್ಠಾನ, ಕಾರ್ಯವಿಧಾನಗಳನ್ನೇ ರಾಜ್ಯದಲ್ಲೂ ಅನುಸರಿಸಲು ಸಿದ್ಧತೆಗಳು ನಡೆದಿದೆ.

ಧಾರ್ಮಿಕ ಶಿಕ್ಷಣದ ಜತೆಗೆ, ಸ್ಥಳೀಯ ಶಾಲೆಗಳಲ್ಲಿ ಔಪಚಾರಿಕ ಶಿಕ್ಷಣ ಕಡ್ಡಾಯಗೊಳಿಸುವುದು. ಮಂಡಳಿಯ ಅನುಮತಿ ಪಡೆದು ಪ್ರತಿ ಮದರಸಾಕ್ಕೂ ಇಬ್ಬರು ಹಿಪ್ಜ್ (ಕುರ್‌ಆನ್ ಕಂಠಪಠಣ), ನಾಜಿಯಾ (ಧಾರ್ಮಿಕ ವಿಧಿ ವಿಧಾನ ಹೇಳಿಕೊಡುವ) ಬೋಧಕರನ್ನು ಅತಿಥಿ ಶಿಕ್ಷಕರ ಮಾದರಿಯಲ್ಲಿ ನೇಮಿಸುವುದು. ಮಕ್ಕಳಲ್ಲಿ ರಾಷ್ಟ್ರಪ್ರೇಮ ಜಾಗೃತಗೊಳಿಸಲು ಇತರೆ ಶಾಲೆಗಳಂತೆ ಬೆಳಗಿನ ಪ್ರಾರ್ಥನೆಯ ವೇಳೆ ರಾಷ್ಟ್ರಗೀತೆಗಳನ್ನು ಕಡ್ಡಾಯವಾಗಿ ಹಾಡಿಸುವುದು, ಮೂಲಸೌಕರ್ಯಗಳ ಅಭಿವೃದ್ಧಿಗೆ ನೆರವು ನೀಡಿ, ಅನುಷ್ಠಾನಗೊಳಿಸಲು ಈ ನೀತಿ ರೂಪಿಸಲಾಗುತ್ತಿದೆ ಎಂದು ಶಿಕ್ಷಣ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪ್ರಜಾವಾಣಿ ವಿಶೇಷ

ಕರ್ನಾಟಕ ವಕ್ಫ್ ಮಂಡಳಿಯಲ್ಲಿ ನೋಂದಾಯಿಸಿಕೊಂಡಿರುವ 966 ಮದರಸಾಗಳು ರಾಜ್ಯದಲ್ಲಿವೆ. ಮುಸ್ಲಿಂ ಸಮುದಾಯದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಧಾರ್ಮಿಕ ಶಿಕ್ಷಣ ನೀಡುವ ಇಂತಹ ಬಹುತೇಕ ಮದರಸಾಗಳು ಅಸಂಘಟಿತವಾಗಿದ್ದು, ಮೂಲ ಸೌಕರ್ಯಗಳಿಲ್ಲ. ಮದರಸಾಗಳಲ್ಲಿ ಮೂಲಸೌಕರ್ಯ ಕಲ್ಪಿಸಲು 2016ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಬಜೆಟ್‌ನಲ್ಲಿ ₹ 50 ಕೋಟಿ ಮೀಸಲಿಟ್ಟಿದ್ದರು. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ನಂತರ ಈ ಅನುದಾನ ಬಳಸಲು ಒಪ್ಪಿಗೆ ಸೂಚಿಸಿದ್ದಾರೆ. ಕುಡಿಯುವ ನೀರು, ಶೌಚಾಲಯ, ವಸತಿ ಸೌಕರ್ಯಕ್ಕೆ ಈ ಅನುದಾನ ಉಪಯೋಗಿಸಲು ಸೂಚಿಸಿದ್ದಾರೆ. ವಕ್ಫ್ ಮಂಡಳಿಯಲ್ಲಿ ನೋಂದಾಯಿಸಿದ ಪ್ರತಿ ಮದರಸಾಗಳಿಗೂ ತಲಾ ₹ 10 ಲಕ್ಷ ನಿಗದಿ ಮಾಡಲಾಗಿದೆ.

'ಮದರಸಾಗಳಲ್ಲಿ ಧಾರ್ಮಿಕ ಶಿಕ್ಷಣ ಕುರಿತು ಅಪನಂಬಿಕೆಗಳಿದ್ದವು. ನಮ್ಮೆಲ್ಲರ ಪ್ರಯತ್ನದ ಫಲವಾಗಿ ಮದರಸಾ ವಿದ್ಯಾರ್ಥಿಗಳು ಬೇರೆಯುವರಂತೆ ಇಂದು ಸಾಮಾನ್ಯ ಶಿಕ್ಷಣವನ್ನೂ ಕಲಿಯುತ್ತಿದ್ದಾರೆ. ಸಾಮರಸ್ಯಕ್ಕೆ ಒತ್ತು ನೀಡಲಾಗುತ್ತಿದೆ. ಮಂಡಳಿ ರಚನೆ ಸ್ವಾಗತಾರ್ಹವಾದರೂ, ಗುಪ್ತ ಕಾರ್ಯಸೂಚಿಗಳಿದ್ದರೆ ಯಾವುದೂ ಸಫಲವಾಗದು' ಎನ್ನುತ್ತಾರೆ ಮುಸ್ಲಿಂ ಸಮುದಾಯದ ಮುಖಂಡ, ವಕೀಲ ಅನೀಸ್ ಪಾಷಾ.

4B ಪುಟ ನೋಡಿ

### ಮಂಡಳಿ ರಚನೆ: ಇಂದು ಸಭೆ

ಮದರಸಾ ಶಿಕ್ಷಣ ಮಂಡಳಿ ರಚನೆ ಕುರಿತು ಚರ್ಚಿಸಲು ಆ.24ರಂದು ಸಂಜೆ 4.30ಕ್ಕೆ ವಿಧಾನಸೌಧದಲ್ಲಿ ಸಭೆ ಕರೆಯಲಾಗಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಯಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಆಯುಕ್ತರು, ನಿರ್ದೇಶಕರು ಭಾಗವಹಿಸುವರು.

> ಮದರಸಾಗಳ ನಿರ್ವಹಣೆಗೆ ಈಗಾಗಲೇ ಹಲವು ವ್ಯವಸ್ಥೆಗಳಿವೆ. ಅಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸಬಹುದಿತ್ತು. ಮಂಡಳಿ ರಚನೆ ಭವಿಷ್ಯದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ದಾರಿ ಮಾಡಿಕೊಡಲಿದೆ
>
> **ಮೌಲಾನಾ ಶಾಹುಲ್ ಹಮೀದ್**
> ಮುಸ್ಲಿಂ ಧರ್ಮಗುರು, ಶಿವಮೊಗ್ಗ

# 'ಹೆಚ್ಚು ಸಾಲ'ದಲ್ಲಿ ಅದಾನಿ ಸಮೂಹ

**ನವದೆಹಲಿ (ಪಿಟಿಐ):** ದೇಶದ ಅತ್ಯಂತ ಶ್ರೀಮಂತ, ಉದ್ಯಮಿ ಗೌತಮ್ ಅದಾನಿ ಅವರ ಅದಾನಿ ಸಮೂಹವು 'ಹೆಚ್ಚು ಸಾಲದಲ್ಲಿದೆ' ಎಂದು ಫಿಚ್ ಸಮೂಹದ ಅಂಗಸಂಸ್ಥೆ ಕ್ರೆಡಿಟ್‌ಸೈಟ್ಸ್ ವರದಿ ಹೇಳಿದೆ. ಸಮೂಹವು ಹಾಲಿ ಹಾಗೂ ಹೊಸ ವಹಿವಾಟುಗಳಿಗೆ ಹೂಡಿಕೆ ಮಾಡಲು ಸಾಲವನ್ನು ಮುಖ್ಯವಾಗಿ ಬಳಸುತ್ತಿದೆ ಎಂದು ಕೂಡ ವರದಿಯಲ್ಲಿ ಹೇಳಲಾಗಿದೆ.

'ಹೆಚ್ಚು ಮಹತ್ವಾಕಾಂಕ್ಷೆಯ, ಸಾಲದ ಹಣದಲ್ಲಿ ನಡೆಯುವ ಬೆಳವಣಿಗೆ ಯೋಜನೆಗಳು ಕಾಲಕ್ರಮೇಣ ಭಾರಿ ಸಾಲದ ಸುಳಿಗೆ ಸಿಲುಕಬಹುದು. ಅತ್ಯಂತ ನಕಾರಾತ್ಮಕ ಸಂದರ್ಭದಲ್ಲಿ ಮಾತ್ರ ಹೀಗಾಗಬಹುದು' ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅದಾನಿ ಸಮೂಹದ ಆರು ಕಂಪನಿಗಳು ಷೇರುಪೇಟೆಯಲ್ಲಿ ನೋಂದಾಯಿತ ಆಗಿವೆ. ಈ ಆರು ಕಂಪನಿಗಳ ಒಟ್ಟು ಸಾಲವು ಈ ವರ್ಷದ ಮಾರ್ಚ್ 31ಕ್ಕೆ ₹ 2.30 ಲಕ್ಷ ಕೋಟಿ ಆಗಿತ್ತು. ಕಂಪನಿಗಳ ಬಳಿ ಇರುವ ನಗದನ್ನು ಪರಿಗಣಿಸಿದರೆ, ನಿವ್ವಳ ಸಾಲದ ಮೊತ್ತವು ₹ 1.72 ಲಕ್ಷ ಕೋಟಿ ಆಗುತ್ತದೆ.

12ನೇ ಪುಟ ನೋಡಿ

### ಎನ್‌ಡಿಟಿವಿ ಸ್ವಾಧೀನಕ್ಕೆ ಸಜ್ಜಾದ ಅದಾನಿ

**ನವದೆಹಲಿ (ಪಿಟಿಐ):** ದೇಶದ ಪ್ರಮುಖ ಸುದ್ದಿ ವಾಹಿನಿಗಳಲ್ಲಿ ಒಂದಾಗಿರುವ ನ್ಯೂ ಡೆಲ್ಲಿ ಟೆಲಿವಿಷನ್ ಲಿಮಿಟೆಡ್‌ನ (ಎನ್‌ಡಿಟಿವಿ) ಬಹುಪಾಲು ಷೇರುಗಳನ್ನು ಖರೀದಿಸುತ್ತಿರುವುದಾಗಿ ಗೌತಮ್ ಅದಾನಿ ಒಡೆತನದ ಸಮೂಹವು ಮಂಗಳವಾರ ಹೇಳಿದೆ.

ಅದಾನಿ ಸಮೂಹವು ವಿಸ್ತರಣಾ ಯೋಜನೆಯ ಭಾಗವಾಗಿ ಮಾಧ್ಯಮಗಳಲ್ಲಿ ಹೂಡಿಕೆಯನ್ನು ಹೆಚ್ಚಿಸುವ ಗುರಿ ಹೊಂದಿದೆ. ಈ ಸಮೂಹದ ಅದಾನಿ ಮೀಡಿಯಾ ವೆಂಚರ್ಸ್ ಲಿಮಿಟೆಡ್ (ಎಎಂವಿಎಲ್), ವಿಶ್ವಪ್ರಧಾನ್ ಕಮರ್ಷಿಯಲ್ ಪ್ರೈ.ಲಿ. (ವಿಸಿಪಿಎಲ್) ಕಂಪನಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿತು. ಈ ಕಂಪನಿಯು ಎನ್‌ಡಿಟಿವಿಗೆ ಸಾಲ ನೀಡಿತ್ತು. ಅದಾನಿ ಸಮೂಹವು, ಈ ಕಂಪನಿ ನೀಡಿದ್ದ ಸಾಲವನ್ನು ಎನ್‌ಡಿಟಿವಿಯ ಶೇ 29.18ರಷ್ಟು ಷೇರುಗಳನ್ನಾಗಿ ಪರಿವರ್ತನೆ ಮಾಡುವ ಅವಕಾಶವನ್ನು ಬಳಸಿಕೊಂಡಿದೆ.

12ನೇ ಪುಟ ನೋಡಿ











### ಮೀನಿನ ಮಾರುಕಟ್ಟೆಯೂ ಆರಂಭವಾಗಿಲ್ಲ; ಸಮನ್ವಯ ಸಾಧಿಸಲಾಗದೆ ಕುಂಟುತ್ತಿವೆ ಕಾಮಗಾರಿಗಳು

# ‘ಸ್ಮಾರ್ಟ್ ಮಾರ್ಕೆಟ್’ ಸದ್ಯಕ್ಕಂತೂ ಆಗಲ್ಲ

• ಆರ್. ಮಂಜುನಾಥ್


ಬೆಂಗಳೂರು: ‘ಸ್ಮಾರ್ಟ್ ಸಿಟಿ’ ಯೋಜನೆಯ ಐಕಾನಿಕ್ ಕಾಮಗಾರಿಗಳಲ್ಲಿ ಒಂದಾದ ಕೆ.ಆರ್. ಮಾರುಕಟ್ಟೆ ಮರು ಅಭಿವೃದ್ಧಿ ಇನ್ನೊಂದು ವರ್ಷ ಪೂರ್ಣಗೊಳ್ಳುವ ಯಾವುದೇ ಲಕ್ಷಣಗಳಿಲ್ಲ.

‘ಮೀಟ್ ಮಾರ್ಕೆಟ್’ ಕೆಲಸಕ್ಕೆ ಇನ್ನೂ ಚಾಲನೆಯೇ ಸಿಕ್ಕಿಲ್ಲ. ಇನ್ನು ಅತ್ಯಾಧುನಿಕವಾಗಿ ನಿರ್ಮಾಣವಾಗಿರುವ ಸಬ್‌ವೇಗೆ ಉದ್ಘಾಟನೆ ಭಾಗ್ಯ ಸಿಕ್ಕಿಲ್ಲ.

ಕೆ.ಆರ್. ಮಾರುಕಟ್ಟೆ ಕೇಂದ್ರ ಕಟ್ಟಡವನ್ನು ‘ಸ್ಮಾರ್ಟ್ ಸಿಟಿ’ ಯೋಜನೆಯಡಿ ₹34.67 ಕೋಟಿ ವೆಚ್ಚದಲ್ಲಿ ಮರು ಅಭಿವೃದ್ಧಿ ಮಾಡುವ ಉದ್ದೇಶವಿದೆ. ಈ ಕಾಮಗಾರಿ ಆರಂಭವಾಗಿ ವರ್ಷಗಳೇ ಕಳೆದರೂ ನಿರೀಕ್ಷಿತ ಹಂತ ತಲುಪಿಲ್ಲ. ವ್ಯಾಪಾರಿಗಳೊಂದಿಗಿನ ಸಮನ್ವಯ ಸಾಧಿಸಲಾಗದೆ ಈ ಕೆಲಸ ಕುಂಟುತ್ತಲೇ ಸಾಗಿದೆ. ಅಷ್ಟೇ ಅಲ್ಲ, ಆಗಾಗ್ಗೆ ಕಾಮಗಾರಿಗಳ ಸ್ವರೂಪವೂ ಬದಲಾಗುತ್ತಿದೆ.

ಮೈಸೂರಿನ ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಅವರು 1928ರಲ್ಲಿ ಕೆ.ಆರ್. ಮಾರುಕಟ್ಟೆ ಸ್ಥಾಪಿಸಿದ್ದರು. ಈ ಮಾರುಕಟ್ಟೆ ಸಾಕಷ್ಟು ಬಾರಿ ಮರು ಅಭಿವೃದ್ಧಿಗೊಂಡಿದೆ. ಇಷ್ಟಾದರೂ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ ಎಂಬ ಉದ್ದೇಶದೊಂದಿಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ. 168 ನಾಲ್ಕು ಚಕ್ರ ಹಾಗೂ 279 ದ್ವಿಚಕ್ರ ವಾಹನಗಳಿಗೆ ನಿಲುಗಡೆ ಕಲ್ಪಿಸುವ ತಾಣದೊಂದಿಗೆ ಜಾಗತಿಕ ಸ್ನೇಹಿ ಕಟ್ಟಡವನ್ನಾಗಿ ನಿರ್ಮಿಸುವ ಯೋಜನೆ ಇದೆ. ಲಿಫ್ಟ್, ಶೌಚಾಲಯ, ಸುವ್ಯವಸ್ಥಿತ ವ್ಯಾಪಾರ ಮಳಿಗೆ, ಲೋಡ್–ಅನ್‌ಲೋಡ್ ಬೇ ಒದಗಿಸುವ ಯೋಜನೆ ಇದು. ಆದರೆ, ಇವೆಲ್ಲ ಕಾರ್ಯಗತವಾಗಲು ಸಾಕಷ್ಟು ಸಮಯಬೇಕು. ಸ್ಥಳೀಯರ ವಿರೋಧ ಹಾಗೂ ಅರಿವಿನ ಕೊರತೆ ಇದೆ. ಸಮನ್ವಯ ಸಾಧಿಸಲು ಬಿಬಿಎಂಪಿ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳು ಮಾತುಕತೆ ನಡೆಸುತ್ತಲೇ ಇದ್ದಾರೆ. ಸುರಂಗ ಮಾರ್ಗದ ಕಮಾನುಗಳು ಕಾಣುವುದು ಬಿಟ್ಟರೆ ಕಾಮಗಾರಿಗಳಿಗೆ ವೇಗವೇ ದೊರೆತಿಲ್ಲ.

ಇನ್ನು ಮೀನಿನ ಮಾರುಕಟ್ಟೆಯ ಕೆಲಸವೇ ಆರಂಭವಾಗಿಲ್ಲ. ಈಗಿರುವ ಮೀನಿನ ಮಾರುಕಟ್ಟೆ ಕಟ್ಟಡವನ್ನು ಸಂಪೂರ್ಣವಾಗಿ ತೆಗೆದುಹಾಕಿ ಮರು ನಿರ್ಮಿಸಬೇಕು ಎಂಬುದು ‘ಸ್ಮಾರ್ಟ್ ಸಿಟಿ’ ಯೋಜನೆ. ಇದಕ್ಕೆ ವ್ಯಾಪಾರಿಗಳು ಒಪ್ಪುತ್ತಿಲ್ಲ. ಈಗಿರುವ ಕಟ್ಟಡವನ್ನೇ ಮರು ಅಭಿವೃದ್ಧಿಪಡಿಸಿ ಎಂಬುದು ಅವರ ಒತ್ತಾಯ. ಅಧಿಕಾರಿಗಳು ಹಾಗೂ ವ್ಯಾಪಾರಿಗಳ ಅಭಿಪ್ರಾಯಗಳು ಒಂದಾಗದಿರುವುದರಿಂದ ಕಾಮಗಾರಿಗೆ ಯಾವುದೇ ರೀತಿಯಲ್ಲೂ ಚಾಲನೆ ದೊರೆತಿಲ್ಲ. ಮುಖ್ಯರಸ್ತೆಯಲ್ಲಿ ತಾತ್ಕಾಲಿಕ ಅಂಗಡಿಗಳನ್ನು ಮಾತ್ರ ನಿರ್ಮಿಸಲಾಗಿದೆ.



ಕೆ.ಆರ್. ಮಾರುಕಟ್ಟೆ ಮರು ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದು (ಒಳಚಿತ್ರದಲ್ಲಿ ನೀಲನಕ್ಷೆ)




**ಯಾವುದಕ್ಕೆ ಎಷ್ಟೆಷ್ಟು?**

| | | | |
|---|---|---|---|
| ₹34.67 ಕೋಟಿ | ₹18.68 ಕೋಟಿ | ₹2.87 ಕೋಟಿ | ₹18.76 ಕೋಟಿ |
| ಕೆ.ಆರ್. ಮಾರುಕಟ್ಟೆ ಮರುಅಭಿವೃದ್ಧಿ | ಕೆ.ಆರ್. ಮಾರುಕಟ್ಟೆ ಮೊಬಿಲಿಟಿ ಹಬ್ | ಶಿವಾಜಿನಗರ ಬಸ್ ನಿಲ್ದಾಣ ಟರ್ಮಿನಲ್ | ಗಾಂಧಿಬಜಾರ್ ಮಲ್ಟಿಲೆವೆಲ್ ಕಾರ್ ಪಾರ್ಕಿಂಗ್ |

## ಪಾರ್ಕಿಂಗ್ ಕಟ್ಟಡವೂ ಆರಂಭವಾಗಿಲ್ಲ

ಗಾಂಧಿ ಬಜಾರ್‌ನಲ್ಲಿ ಬಹು ಅಂತಸ್ತಿನ ಕಾರು ಪಾರ್ಕಿಂಗ್ ಹಾಗೂ ಮಾರುಕಟ್ಟೆಗಾಗಿ ಐದು ಅಂತಸ್ತಿನ ಕಟ್ಟಡ ನಿರ್ಮಾಣವಾಗಲಿದೆ. 128 ಕಾರುಗಳಿಗೆ ನಿಲುಗಡೆ ಒದಗಿಸಲಿರುವ ಕಟ್ಟಡದ ಕೆಳಅಂತಸ್ತು ವ್ಯಾಪಾರಸ್ಥರಿಗೆ ಮೀಸಲು. ಇದಕ್ಕಾಗಿ ಈಗ ಆಗಿರುವುದು ನೀಲನಕ್ಷೆ ಮಾತ್ರ. ಬಿಬಿಎಂಪಿ ಜಾಗ ತೋರಿಸಿದೆಯಾದರೂ ಅದನ್ನು ಸ್ಮಾರ್ಟ್ ಸಿಟಿಯವರಿಗೆ ಕಾಮಗಾರಿ ಆರಂಭಿಸಲು ನೀಡಿಲ್ಲ. ಹೀಗಾಗಿ ಹೊಸದಾಗಿ ಸೇರ್ಪಡೆಯಾಗಿರುವ ಈ ಬಹುಅಂತಸ್ತಿನ ಕಾರು ಪಾರ್ಕಿಂಗ್ ಕಟ್ಟಡ ಇದೀಗ ಆರಂಭವಾದರೂ ಮುಂದಿನ ವರ್ಷದ ಅಂತ್ಯದವರೆಗೆ ಮುಗಿಯುವ ಲಕ್ಷಣಗಳಿಲ್ಲ.

ಶಿವಾಜಿನಗರ ಬಸ್ ಟರ್ಮಿನಲ್ ಅಭಿವೃದ್ಧಿಯನ್ನೂ ಕೈಗೊಳ್ಳಲಾಗಿದೆ. ಪಾದಚಾರಿಗಳಿಗೆ ರಕ್ಷಣೆ, ತಾಯಿ ಆರೈಕೆ, ತಂಗುದಾಣ, ಶೌಚಾಲಯ, ಸಬ್‌ವೇ ಮರು ಅಭಿವೃದ್ಧಿ ಸೌಲಭ್ಯಗಳು ಇಲ್ಲಿ ಒದಗಿಸಲಾಗಿದೆ. ಕಾಮಗಾರಿ ಪೂರ್ಣಗೊಂಡು, ಬಿಎಂಟಿಸಿಗೆ ಒದಗಿಸಲಾಗಿದೆ. ಆದರೆ ನಾಗರಿಕರಿಗೆ ಇದರ ಪೂರ್ಣ ಪ್ರಯೋಜನ ಇನ್ನೂ ಲಭಿಸಿಲ್ಲ.

## ಇಂಟಿಗ್ರೇಟೆಡ್ ಮೊಬಿಲಿಟಿ ಹಬ್

ಕೆ.ಆರ್. ಮಾರುಕಟ್ಟೆಯಲ್ಲಿ ವ್ಯಾಪಾರಸ್ಥರು, ಗ್ರಾಹಕರು ಹಾಗೂ ಪಾದಚಾರಿಗಳೊಂದಿಗೆ ಸೀಮಾತೀತ ಸಂಪರ್ಕ ಕಲ್ಪಿಸುವ ವ್ಯವಸ್ಥೆಯೇ ‘ಇಂಟಿಗ್ರೇಟೆಡ್ ಮೊಬಿಲಿಟಿ ಹಬ್’. ಮಾರುಕಟ್ಟೆ ಜಂಕ್ಷನ್ ಅಭಿವೃದ್ಧಿಯಿಂದ ಹಿಡಿದು, ಫುಟ್‌ಪಾತ್, ಬಸ್ ಬೇ, ಶೌಚಾಲಯ ಹಾಗೂ ಸಬ್‌ವೇಗಳು ಈ ಯೋಜನೆಯಡಿ ನಿರ್ಮಾಣವಾಗಿವೆ. ಇವೆಲ್ಲವೂ 32 ಸಿ.ಸಿ ಟಿ.ವಿ. ಕ್ಯಾಮೆರಾಗಳ ನಿಗಾದಲ್ಲಿರುವುದು ವಿಶೇಷ.

ಅತ್ಯಾಧುನಿಕವಾಗಿ ನಿರ್ಮಿಸಲಾಗಿರುವ ಸಬ್‌ವೇಯಲ್ಲಿ ಎಸ್ಕಲೇಟರ್, ಇಂಟರ್‌ನೆಟ್, ವೈಫೈ, ಭದ್ರತೆ, ಯುಪಿಎಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ವ್ಯಾಪಾರ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶವಿದೆ. ಮಹಿಳೆಯರಿಗೆ ಮಳಿಗೆಗಳನ್ನು ಕಲ್ಪಿಸಿ, ಆರ್ಥಿಕವಾಗಿ ಸಬಲರನ್ನಾಗಿಸುವ ಗುರಿ ಇದೆ. ಇದಕ್ಕಾಗಿ ಬಿಬಿಎಂಪಿಯೊಂದಿಗೆ ಚರ್ಚೆ ನಡೆಸಲಾಗಿದ್ದು, ಅವರು ಒಪ್ಪಿದ ಕೂಡಲೇ ಸಬ್‌ವೇ ಉದ್ಘಾಟಿಸಿ, ಮಹಿಳೆಯರಿಗೆ ಮಳಿಗೆಗಳನ್ನು ಒದಗಿಸಲಾಗುವುದು ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ತಿಳಿಸಿದರು.




ಬಸವನಗುಡಿಯಲ್ಲಿ ನಿರ್ಮಾಣವಾಗಲಿರುವ ಕಾರು ನಿಲ್ದಾಣದ ನೀಲನಕ್ಷೆ

## ಆಗಸ್ಟ್ 26ಕ್ಕೆ ‘ಪ್ರಗತಿಪಥ–2022’ ಉದ್ಯೋಗ ಮೇಳ

ಬೆಂಗಳೂರು: ರೋಟರಿ ಕ್ಲಬ್ ಆಫ್ ಬೆಂಗಳೂರು ಮತ್ತು ರೋಟರಿ ವಿಜಯ ನಗರ, ರಾಮನಾರಾಯಣ ಚೆಲ್ಲರಾಮ್ ಕಾಲೇಜ್ ಆಫ್ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ಹಾಗೂ ಕಾಲೇಜು ಶಿಕ್ಷಣ ಇಲಾಖೆ ಸಹಯೋಗದಲ್ಲಿ ಆ. 26ಕ್ಕೆ ‘ಪ್ರಗತಿ ಪಥ–2022’ ಉದ್ಯೋಗ ಮೇಳವನ್ನು ರೇಸ್‌ಕೋರ್ಸ್ ರಸ್ತೆಯ ಆರ್.ಸಿ. ಕಾಲೇಜು ಕ್ಯಾಂಪಸ್‌ನಲ್ಲಿ ಹಮ್ಮಿಕೊಳ್ಳ ಲಾಗಿದೆ. ಮೇಳದಲ್ಲಿ 200 ಕಾರ್ಪೊರೇಟ್ ಕಂಪನಿಗಳು ಭಾಗವಹಿಸುವ ನಿರೀಕ್ಷೆಯಿದೆ. ಆಸಕ್ತರು 9632502552, 9880309800 ಅಥವಾ pragatipath2022@gmail.com, http://gfgc.kar.in/rcc/ನಲ್ಲಿ ನೋಂದಾಯಿಸಿಕೊಳ್ಳಬೇಕು.

## ಸೆ.1ಕ್ಕೆ ಪತ್ರಿಕಾ ವಿತರಕರ ದಿನಾಚರಣೆ

ಬೆಂಗಳೂರು: ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದಿಂದ ಸೆಪ್ಟೆಂಬರ್ 1ರಂದು ಬೆಳಿಗ್ಗೆ 10.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಹಿರಿಯ ಪತ್ರಿಕಾ ವಿತರಕರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



## ನಗರದಲ್ಲಿ ಇಂದು

**ಮನೆ–ಮನಗಳಲ್ಲಿ ಶಿವಪೂಜೆ ಶಿವಾನು ಭವ ಹಾಗೂ ಸಿದ್ಧಾಂತ ಶಿಖಾಮಣಿ–ವಚನ ಪ್ರವಚನ ಕಾರ್ಯಕ್ರಮ:** ಸಿದ್ಧಗಂಗಮ್ಮ ಮತ್ತು ಮಲ್ಲಪ್ಪ, ಸ್ಥಳ: ನಂ.132, ಸಿದ್ಧಗಂಗಾ 1ನೇ ಮುಖ್ಯರಸ್ತೆ, 3ನೇ ಹಂತ, 4ನೇ ಬ್ಲಾಕ್, ಬಸವೇಶ್ವರನಗರ, ಬೆಳಿಗ್ಗೆ 7.30

**ರಾಷ್ಟ್ರೀಯ ವೈದ್ಯರ ದಿನಾಚರಣೆ:** ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಡಾ. ಕೆ ಸುಧಾಕರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್ ವಿಧಾನಸೌಧದ ನೆಲಮಹಡಿ, ಬೆಳಿಗ್ಗೆ 11

ಆವಿಷ್ಕಾರಗಳು ನವೋದ್ಯಮಕ್ಕೆ ಪೂರಕ ಕುರಿತು ಉಪನ್ಯಾಸ: ಉಪನ್ಯಾಸಕರು: ಎಲ್.ಎಂ ಪಟ್ನಾಯಕ್, ಆಯೋಜನೆ ಮತ್ತು ಸ್ಥಳ: ಬಿ.ಎನ್.ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

**ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–5:** ಅತಿಥಿಗಳು: ಕೆ.ಜಿ. ಕುಂದಣಗಾರ, ನಿಟ್ಟೂರು ಶ್ರೀನಿವಾಸ ರಾವ್, ಅದರಗುಂಚಿ ಶಂಕರಗೌಡ ಪಾಟೀಲ್, ಅಧ್ಯಕ್ಷತೆ: ವ.ಚ ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಬಿಎಂಶ್ರೀ ಪ್ರತಿಮೆ ಎದುರು ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

**ಪ್ರೆಸ್‌ಕ್ಲಬ್ ಬಿಸಿನೆಸ್ ಐಕಾನ್ ಅವಾರ್ಡ್–2022:** ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಮುರುಗೇಶ್ ನಿರಾಣಿ, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಭಾ. ಮ ಹರೀಶ್, ಕೆ. ಗೋಪಾಲಯ್ಯ, ರಿಜ್ವಾನ್ ಅರ್ಷದ್, ಆಯೋಜನೆ ಮತ್ತು ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಪಾರ್ಕ್, ಸಂಜೆ 5.30

**ವಚನ ಶ್ರಾವಣ:** ಗಾಯನ: ಈರಯ್ಯ ಚಿಕ್ಕಮಠ, ಉಪನ್ಯಾಸ: ಎಸ್. ಪಿನಾಕ ಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕನ್ನಡ ಸಂಘದ ಆವರಣ, ಸಂತ ಮಾರ್ಕರ್ ರಸ್ತೆ, ಸಂಜೆ 5.30

**‘ವಿಧುರಾಶ್ವಥ ಹತ್ಯಾಕಾಂಡ’ ನಾಟಕ ಪ್ರದರ್ಶನ:** ಪ್ರಸ್ತುತಿ: ರಂಗಮಧುರ ತಂಡ, ರಚನೆ ಮತ್ತು ನಿರ್ದೇಶನ: ನಂಜಪ್ಪ.ಡಿ.ಎಸ್., ಆಯೋಜನೆ: ಮಧುರ ಫೌಂಡೇಷನ್, ಸ್ಥಳ: ಡಾ.ರಾಜ್‌ಕುಮಾರ್ ಪ್ರತಿಮೆ ಮುಂಭಾಗ, ಕುರುಬರಹಳ್ಳಿ ಬಸ್ ನಿಲ್ದಾಣ, ಸಂಜೆ 5.30

**ಯಕ್ಷಗಾನ ಪ್ರದರ್ಶನ:** ಸಹಕಾರ: ಪ್ರಸಂಗ: ಚಂದ್ರಹಾಸ ಚರಿತ್ರೆ, ವಿ. ಸೋಮಣ್ಣ, ದಾಸೇಗೌಡ, ಆಯೋಜನೆ: ಗಾನಸೌರಭ, ಯಕ್ಷಗಾನ ಶಾಲೆ, ಸ್ಥಳ: ಜ್ಞಾನಸೌಧ, 3ನೇ ಮುಖ್ಯರಸ್ತೆ, ಕಲ್ಯಾಣನಗರ, ಮೂಡಲಪಾಳ್ಯ, ಸಂಜೆ 5.45

**ಭಜನೆ ಮತ್ತು ಪ್ರವಚನ:** ಭಜನೆ ಪ್ರಸ್ತುತಿ: ರಾಜಾಜಿನಗರದ ವಾಸವಿ ಗಾನ ತಂಡ, ‘ಭಾಗವತ ಅಷ್ಟಮ ಸ್ಕಂದ’ ಪ್ರವಚನ: ರಾಮವಿಠಲಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ರಾಜಾಜಿನಗರ, ಸಂಜೆ 6

### ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘ ದೂರು

## ಕಮಿಷನ್ ಶೇ 40ರಿಂದ 50ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರರು, ಅದರ ಹಣವನ್ನು ಪಡೆಯಬೇಕಾದರೆ ಕಮಿಷನ್ ಪ್ರಮಾಣ ಶೇ 40ರಿಂದ ಶೇ 50ರಷ್ಟಾಗಿದೆ' ಎಂದು ಮುಖ್ಯ ಆಯುಕ್ತರಿಗೆ ನೀಡಿರುವ ಮನವಿಯಲ್ಲಿ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘ ತಿಳಿಸಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ನಮ್ಮ ಗುತ್ತಿಗೆದಾರರಿಗೆ 22 ತಿಂಗಳಿಂದ ಬಿಲ್ ಪಾವತಿಯಾಗಿಲ್ಲ. ತಾವು ಹೊಸ-ಹೊಸ ಆದೇಶಗಳನ್ನು ಹೊರಡಿಸಿರುವುದರಿಂದ ಗುತ್ತಿಗೆದಾರರ ಆರೋಪದಂತೆ ಶೇ 40ರ ಕಮಿಷನ್ ಶೇ 50ರ ಹಂತಕ್ಕೆ ತಲುಪಿದೆ' ಎಂದು ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಹಾಗೂ ಪದಾಧಿಕಾರಿಗಳು ಮಂಗಳವಾರ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ನೀಡಿದ ಮನವಿಯಲ್ಲಿ ತಿಳಿಸಿದ್ದಾರೆ.

'ತಾವು ಹೊಸ ಹೊಸ ಕಚೇರಿಗಳಿಗೆ ಕಡತಗಳನ್ನು ಪರಿಶೀಲಿಸಲು ಮಂಡಿಸಲು ಆದೇಶಿಸಿದ್ದೀರಿ. ಪ್ರತಿ ಹಂತದಲ್ಲೂ ಸಹಾಯಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕಾರ್ಯಪಾಲಕ ಎಂಜಿನಿಯರ್, ಮುಖ್ಯ ಎಂಜಿನಿಯರ್ ಹಾಗೂ ಸಂಬಂಧಪಟ್ಟ ಜನಪ್ರತಿನಿಧಿಗಳು ಕಾಮಗಾರಿಗಳು ವೀಕ್ಷಿಸಿ ದೃಢೀಕರಿಸಿರುತ್ತಾರೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಪರಿವೀಕ್ಷಿಸಿ, ಅನುಮೋದಿಸಿದ್ದರೂ ಹೆಚ್ಚುವರಿಯಾಗಿ ಬೇರೆ ಬೇರೆ ಕಚೇರಿಯ ಅಧಿಕಾರಿಗಳು ಕಾಮಗಾರಿ ಪರೀಕ್ಷಿಸಲು ಆದೇಶಿಸಿರುವುದರಿಂದ ಗುತ್ತಿಗೆದಾರರಿಗೆ ಕಿರುಕುಳ ಹೆಚ್ಚಾಗುತ್ತಿದೆ' ಎಂದು ದೂರಿದ್ದಾರೆ.

'ಟಿವಿಸಿಸಿ ವಿಭಾಗ ಮತ್ತು ಗುಣನಿಯಂತ್ರಣ ವಿಭಾಗದಲ್ಲಿ ಅಧಿಕಾರಿಗಳ ಕೊರತೆಯಿಂದ ಕಾಮಗಾರಿಗಳನ್ನು ಪರಿಶೀಲಿಸಲು ತಿಂಗಳಾನುಗಟ್ಟಲೆ ಕಾಯಬೇಕು. ಗುತ್ತಿಗೆದಾರರು ಸಕಾಲದಲ್ಲಿ ಬಿ.ಆರ್. ನಮೂದಿಸಲು ತೊಂದರೆಯಾಗುತ್ತಿದೆ. ಆದ್ದರಿಂದ ಕೂಡಲೇ ಕಡತಗಳನ್ನು ಮಂಡಿಸುವ ಕಚೇರಿಗಳ (ಟೇಬಲ್) ಸಂಖ್ಯೆಯನ್ನು ಕಡಿಮೆ ಮಾಡಬೇಕು' ಎಂದು ಕೋರಿಕೊಂಡಿದ್ದಾರೆ.

'ಟಿವಿಸಿಸಿ ವಿಭಾಗದವರು ಕಡತವನ್ನು ಪರಿಶೀಲಿಸಿ ಬಿ.ಆರ್. ನಮೂದಿಸಲು ಎಲ್ಲ ಗುತ್ತಿಗೆದಾರರಿಗೆ ಅನುವು ಮಾಡಿಕೊಡಬೇಕು' ಎಂದು ಸಂಘದ ಪದಾಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ.

## ದಲಿತರಲ್ಲಿ ಆಂತರಿಕ ಸಂಘಟನಾ ಶಕ್ತಿ ಕೊರತೆ: ಸಿಗದ ಪರಿಹಾರ

ಪ್ರಜಾವಾಣಿ ವಾರ್ತೆ



ಭಾರತ ವಿಶ್ವವಿದ್ಯಾಲಯದ ತಳ ಸಮುದಾಯಗಳ ಅಧ್ಯಯನ ಕೇಂದ್ರ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ರಾಷ್ಟ್ರೀಯ ಕಾನೂನು ಶಾಲೆಯ ಕುಲಸಚಿವ ಪ್ರೊ. ನಿಗಮ್ ನುಗ್ಗೆಹಳ್ಳಿ ಉದ್ಘಾಟಿಸಿದರು. ಡಾ.ಬಾಬು ಜಗಜೀವನ್ ರಾಂ ಸಂಶೋಧನಾ ಸಂಸ್ಥೆಯ ನಿರ್ದೇಶಕ ಅರುಣ್ ಪುರ್ಟಾಡೊ, ನಿವೃತ್ತ ಐಎಎಸ್ ಅಧಿಕಾರಿ ಇ.ವೆಂಕಯ್ಯ, ಸಾಹಿತಿ ದಾನಸೂರು ಕುಣ್ಣಣ್ಣ, ಮೈಲಳ್ಳಿ ರೇವಣ್ಣ, ಆರ್ ವಿ. ಚಂದ್ರಶೇಖರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ಆಂತರಿಕ ಸಂಘಟನಾ ಶಕ್ತಿಯ ಕೊರತೆಯಿಂದಾಗಿ ಶತಮಾನಗಳು ಕಳೆದರೂ ದಲಿತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ ಎಂದು ಸಾಹಿತಿ ದಾನಸೂರು ಕುಣ್ಣಣ್ಣ ಬೇಸರ ವ್ಯಕ್ತಪಡಿಸಿದರು.

ನಾಗರಭಾವಿ ರಾಷ್ಟ್ರೀಯ ಕಾನೂನು ಶಾಲೆಯ ತಳ ಸಮುದಾಯಗಳ ಅಧ್ಯಯನ ಕೇಂದ್ರ, ಡಾ.ಬಾಬು ಜಗಜೀವನ್ ರಾಂ ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ಮಾದಿಗ ಮತ್ತು ಅದರ ಉಪ ಸಮುದಾಯಗಳ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಮುಖ್ಯ ಅವಲೋಕನ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ನಮ್ಮ ಸಮಸ್ಯೆಗಳ ವಿರುದ್ಧ ನಾವೇ ಧ್ವನಿ ಎತ್ತದಿದ್ದರೆ ಯಾವ ಸಮಸ್ಯೆಗಳೂ ಬಗೆಹರಿಯುವುದಿಲ್ಲ. ಬೇರೆಯವರ ಮೇಲಿನ ಅವಲಂಬನೆಯಿಂದ ಶಾಶ್ವತ ಪರಿಹಾರ ಸಾಧ್ಯವಿಲ್ಲ. ಇದು ಸಂಘಟನೆಯ ವೈಫಲ್ಯವಲ್ಲ, ಸಮನ್ವಯತೆಯ ಕೊರತೆ. ದಲಿತರ ಹೆಸರಲ್ಲಿ ಇರುವಷ್ಟು ಸಂಘಟನೆಗಳು ಬೇರೆ ಯಾವ ಜಾತಿಯಲ್ಲೂ ಇಲ್ಲ. ಅಂತಹ ಬಿಡಿ ಸಂಘಟನೆಗಳಿಂದ ಸಮಾಜಕ್ಕೆ ಯಾವ ಲಾಭವೂ ಆಗುವುದಿಲ್ಲ' ಎಂದು ಕಿವಿಮಾತು ಹೇಳಿದರು.

ಎಲ್ಲಿಯವರೆಗೆ ಕಾನೂನಿಗೆ ಗೌರವ ತೋರುವ ಸಮಾಜ ನಿರ್ಮಾಣವಾಗುವುದಿಲ್ಲವೋ, ಅಲ್ಲಿಯವರೆಗೂ ಕಾನೂನು ಪರಿಣಾಮಕಾರಿ ಆಗುವುದಿಲ್ಲ. ಆತ್ಮಸಾಕ್ಷಿ ಒಂದೇ ತಕ್ಷಣದ ಪರಿಹಾರವಾಗಿ ತೋರುತ್ತದೆ ಎಂದು ವಿಶ್ಲೇಷಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ತಪ್ಪದೇ ಮಾಸ್ಕ್ ಧರಿಸಿ

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸರ್ವ ಸದಸ್ಯರ ಸಭೆ ಸೆ. 18ರಂದು ಕ್ವೀನ್ಸ್ ರಸ್ತೆಯ ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣದಲ್ಲಿ ನಡೆಯಲಿದೆ.

ಅಂದು, 2021-22ರ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುವ ಸದಸ್ಯರು ಹಾಗೂ ಸಹ ಸದಸ್ಯರ ಪ್ರತಿಭಾವಂತ ಮಕ್ಕಳನ್ನು ಸಂಘ ಗೌರವಿಸಲಿದೆ.

ಆದ್ದರಿಂದ, ಶೇ 80ಕ್ಕಿಂತ ಅಧಿಕ ಅಂಕ ಪಡೆದಿರುವ ಮಕ್ಕಳ ಅಂಕಪಟ್ಟಿ, ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರದ ಜತೆ ಪೂರಕ ಮಾಹಿತಿ ಯನ್ನು ಸೆಪ್ಟೆಂಬರ್ 5ರ ಒಳಗೆ ಸಂಘಕ್ಕೆ ತಲುಪಿಸಬೇಕು ಎಂದು ಸಂಘದ ಕಾರ್ಯದರ್ಶಿ ಎಸ್. ತೇಜಸ್ವಿನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ ಮೊಬೈಲ್ ಸಂಖ್ಯೆ: 94804 16505 ಸಂಪರ್ಕಿಸಬಹುದು.

## ಕೇಂದ್ರ ಕೈಗಾರಿಕಾ ನ್ಯಾಯಮಂಡಳಿ ಅಧಿಕಾರಿ ನೇಮಕ

ಬೆಂಗಳೂರು: 'ಕೇಂದ್ರ ಸರ್ಕಾರದ ಕೈಗಾರಿಕಾ ನ್ಯಾಯಮಂಡಳಿ ಹಾಗೂ ಕಾರ್ಮಿಕ ನ್ಯಾಯಾಲಯಕ್ಕೆ ಪೀಠಾಸೀನ ಅಧಿಕಾರಿಯನ್ನಾಗಿ ಎಚ್.ಜಿ.ನಾಗರತ್ನ ಅವರನ್ನು ನೇಮಕ ಮಾಡಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ ಕೈಗಾರಿಕಾ ಕಾನೂನು ವೃತ್ತಿನಿರತರ ವೇದಿಕೆ ಕಾರ್ಯದರ್ಶಿ ಕೆ.ಬಿ.ನಾರಾಯಣ ಸ್ವಾಮಿ ಸಲ್ಲಿಸಿದ್ದ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರದ ಪರ ಹಾಜರಾಗಿದ್ದ ವಕೀಲ ಎ.ವಿ.ನಿಶಾಂತ್, 'ಇದೇ 18ರಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಪೀಠಾಸೀನ ಅಧಿಕಾರಿಯನ್ನಾಗಿ ಎಚ್.ಜಿ.ನಾಗರತ್ನ ಅವರನ್ನು ನೇಮಕ ಮಾಡಲಾಗಿದೆ' ಎಂದು ಆದೇಶವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು.

---

### ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 146, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, 7ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.
ಕೇಂದ್ರ ಕಛೇರಿ: 23364609, 23464713 ಶಾಖೆ: 23481556

**ವಾರ್ಷಿಕ ಮಹಾಸಭೆಯ ನೋಟೀಸ್**

ಮೇಲ್ಕಂಡ ಬ್ಯಾಂಕಿನ 2021–22 ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ: 11–09–2022 ನೇ ಭಾನುವಾರ ಬೆಳಿಗ್ಗೆ 10:00 ಗಂಟೆಗೆ ಬ್ಯಾಂಕಿನ ಕೇಂದ್ರ ಕಛೇರಿಯ ಮುಂಭಾಗದಲ್ಲಿರುವ ಶ್ರೀರಾಮ ಮಂದಿರ ಟ್ರಸ್ಟ್‌ನ ಕಾಲೇಜಿನ ಸಭಾಂಗಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್.ಕೆ. ಕರಿಯಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ನೋಟಿಸನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಮಾನ್ಯ ರೆಗ್ಯೂಲರ್ ಸದಸ್ಯರು ಕಡ್ಡಾಯವಾಗಿ ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಸಭೆಗೆ ಆಗಮಿಸಬೇಕಾಗಿ ವಿನಂತಿಸಲಾಗಿದೆ. ಕರ್ನಾಟಕ ಸ್ಟೇಟ್ ಬೋರ್ಡ್‌ನ SSLC/II PUC ಪರೀಕ್ಷೆಯಲ್ಲಿ ಶೇ.85ಕ್ಕೂ ಹೆಚ್ಚು ಹಾಗೂ CBSE/ICSE ಯಲ್ಲಿ SSLC/II PUC ಪರೀಕ್ಷೆಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕ ಗಳಿಸಿರುವ ಸದಸ್ಯರ / ಸಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಅರ್ಜಿಯನ್ನು ಬ್ಯಾಂಕಿನಲ್ಲಿ ವಿತರಿಸಲಾಗುತ್ತಿದೆ. ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ಅಂತಿಮ ದಿನಾಂಕ: 02–09–2022 ರ ಸಂಜೆ 6.00 ಆಗಿರುತ್ತದೆ.

ದಿನಾಂಕ: 24–08–2022 ಬೆಂಗಳೂರು | ಎಸ್.ಕೆ. ಕರಿಯಪ್ಪಗೌಡ ಅಧ್ಯಕ್ಷರು | ಟಿ.ಎಸ್. ಗಂಗನರಸಿಂಹಯ್ಯ ಉಪಾಧ್ಯಕ್ಷರು | ಜಿ. ಶ್ರೀನಿವಾಸ್ ಜನರಲ್ ಮ್ಯಾನೇಜರ್.

---

### ನಗರಸಭಾ ಕಾರ್ಯಾಲಯ ರಾಮನಗರ

ರಾಮನಗರ ಜಿಲ್ಲೆ – 562 159.
ದೂ.: 080–27271286. ಇಮೇಲ್: itstaff_ulb_ramanagaram@yahoo.com
ವೆಬ್‌ಸೈಟ್: www.ramanagaracity.mrc.gov.in

ಸಂಖ್ಯೆ: ನಸರಾ/ಆ.ಶಾ./ಘ.ವನಿ/ಟೆಂಡರ್/ಸಿಆರ್01/28/22–23 ದಿನಾಂಕ: 23–08–2022

**ಮರು ಟೆಂಡರ್ ಪ್ರಕಟಣೆ 3ನೇ ಕರೆ**

2022–23 ನೇ ಸಾಲಿನ ನಗರ ಸಭಾ ನಿಧಿ ಮತ್ತು ಎಸ್.ಎಫ್.ಸಿ. 24.10% ಅನುದಾನದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಸರಬರಾಜುದಾರರು / ಗುತ್ತಿಗೆದಾರರು ದಿನಾಂಕ : 06–09–2022 ರ ಸಂಜೆ 4.30 ಗಂಟೆಯೊಳಗೆ ಭಾಗವಹಿಸಬಹುದಾಗಿರುತ್ತದೆ. "ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ".

ವಿವರ : 1) ನಗರಸಭೆ ರಾಮನಗರ ಆರೋಗ್ಯ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಮತ್ತು ನೇರ ವೇತನ ಪಾವತಿ ಪೌರಕಾರ್ಮಿಕರು, ಸ್ಯಾನಿಟರಿ ಸೂಪರ್‌ವೈಸರ್, ಖಾಯಂ ಮತ್ತು ಹೊರಗುತ್ತಿಗೆ ವಾಹನ ಚಾಲಕರು, ಲೋಡರ್‌ಗಳಿಗೆ ಬೆಳಗಿನ ಉಪಹಾರ ಪೂರೈಸುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 20.95, ಇ.ಎಂ.ಡಿ (ರೂ. ಗಳಲ್ಲಿ) : 52,400.00/–, ಷರಾ : ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ.

ಸಹಿ/– ಅಧ್ಯಕ್ಷರು, ನಗರಸಭೆ, ರಾಮನಗರ. | ಸಹಿ/– ಪೌರಾಯುಕ್ತರು, ನಗರಸಭೆ, ರಾಮನಗರ.
ಡಿಐಪಿಆರ್/ರಾಮನಗರ/190/ಮಣಿಪಾಲ್/2022–23

---

### ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

(ಕಾರ್ಮಿಕ ಇಲಾಖೆ)
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.
ದೂ.: 080–29753350, ಇ–ಮೇಲ್: karbuildworkerswelfare@gmail.com

ಸಂಖ್ಯೆ: KBOCWWB/E-Auction/FD2&3/CR-04/2022-23 ದಿನಾಂಕ: 22.08.2022

**ಇ–ಆಕ್ಷನ್ ಪ್ರಕಟಣೆ**

ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non- Callable ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಹೆಚ್ಚುವರಿ ಸುಂಕದ ಅಂದಾಜು ಮೊತ್ತ ರೂ.600.00 ಕೋಟಿ (ರೂಪಾಯಿ ಆರು ನೂರು ಕೋಟಿ ಮಾತ್ರ) ಮತ್ತು ರೂ.600.00 ಕೋಟಿ (ರೂಪಾಯಿ ಆರು ನೂರು ಕೋಟಿ ಮಾತ್ರ) ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non-Callable ನಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.

ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://eproc.karnataka.gov.in) ಸಲ್ಲಿಸುವುದು.

| ಕ್ರ. ಸಂ. | ಅಂದಾಜು ಮೊತ್ತ | ಇ–ಆಕ್ಷನ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ |
|---|---|---|
| 1 | 600 ಕೋಟಿ | 26.08.2022 ಸಂಜೆ 4:00 ಗಂಟೆಯೊಳಗಾಗಿ |
| 2 | 600 ಕೋಟಿ | 29.08.2022 ಸಂಜೆ 4:00 ಗಂಟೆಯೊಳಗಾಗಿ |

ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ಕಾರ್ಯದರ್ಶಿಗಳು (ಆಡಳಿತ), ಫೋನ್: 080–29753350/54/56, ಮೊ: 9448533794 ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಜಂಟಿ ಕಾರ್ಯದರ್ಶಿ, ಕ.ಕ.ಇ.ನಿ.ಕಾ.ಕ.ಮಂ.
ವಾಸಾಸಂಇ/ವಾಪ್ರ/ಎಲ್‌ಸಿ/1907/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

### ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ, ನಂ. 2152/20, ಡಿಫೆನ್ಸ್ ಕಾಲೋನಿ, ಬಿಡಬ್ಲ್ಯೂಎಸ್‌ಎಸ್‌ಬಿ ಟ್ಯಾಂಕ್ ರಸ್ತೆ, ಸಹಕಾರನಗರ, ಬೆಂಗಳೂರು – 560 092

ಸಂ: ಕಾಪಾಅ/ಬ್ಯಾವಿ/ಬೃಬೆಂಮಪಾ/ಇ–ಪಿಎಂಟಿ/12/2022–23 ದಿನಾಂಕ: 22.08.2022

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ **"ವಿವರವಾದ ಯೋಜನಾ ವರದಿಗಾಗಿ ಸಲಹಾ ಸೇವೆಗಳು, ಕ್ಷೇತ್ರ ಸಮೀಕ್ಷೆ, ಸಾಮಾನ್ಯ ವರದಿ, ಮೂಲ ರೇಖಾಚಿತ್ರ, ತಾಂತ್ರಿಕ ವರದಿ, ವಿವರವಾದ ರೇಖಾಚಿತ್ರ, ವಿವರವಾದ ವೆಚ್ಚ ಅಂದಾಜು"** ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಇಎಂಡಿ (ರೂ. ಗಳಲ್ಲಿ) |
|---|---|---|---|
| 1. | ಹಳೇ ವಾರ್ಡ್ ಸಂಖ್ಯೆ 08, ಹೊಸ ವಾರ್ಡ್ ಸಂಖ್ಯೆ 12ರ ಟಾಟಾನಗರ, ಎಲ್‌ಕೆಆರ್ ನಗರ, ದೇವಿನಗರ, ಭದ್ರಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳಿಗಾಗಿ ಯೋಜನಾ ವ್ಯವಸ್ಥಾಪನಾ ಸೇವೆಗಳನ್ನು ಒದಗಿಸುವುದು. | 300.00 | 10,000/- |
| 2. | ಹಳೇ ವಾರ್ಡ್ ಸಂಖ್ಯೆ 06, ಹೊಸ ವಾರ್ಡ್ ಸಂಖ್ಯೆ 07ರ ಥಣಿಸಂದ್ರ ಗ್ರಾಮ ಸರಾಯಿಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಒಳಚರಂಡಿಗಳು ಮತ್ತು ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿಗಳಿಗಾಗಿ ಯೋಜನಾ ವ್ಯವಸ್ಥಾಪನಾ ಸೇವೆಗಳನ್ನು ಒದಗಿಸುವುದು. | 300.00 | 10,000/- |

1) ಆರ್‌ಎಫ್‌ಪಿ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ: **25.08.2022ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **26.08.2022ರ ಸಂಜೆ 4.00 ಗಂಟೆಗೆ.** 3) ಬಿಡ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **03.09.2022ರ ಸಂಜೆ 4.00 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **05.09.2022ರ ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

### ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,

# ಜಿ.ಬಿ.–7.4, ಜಿಲ್ಲಾಡಳಿತ ಭವನ, ಪೂಜನ ಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ
E-mail id:dhochikballapur@gmail.com Phone & Fax:08156-277034

ಸಂಖ್ಯೆ:ಜಿಆಕುಕ/ಚಿ.ಮರ/ನಾನ್ ಕ್ಲಿನಿಕಲ್/ಟೆಂಡರ್/01/2022–23 ದಿನಾಂಕ:20.08.2022

**ಅಲ್ಪಾವಧಿ ಮರು ಇ–ಟೆಂಡರ್ ಅಧಿಸೂಚನೆ**

**ವಿಷಯ:** 2022–23ನೇ ಸಾಲಿಗೆ ತಾಲ್ಲೂಕು ಮಟ್ಟದ ಆಸ್ಪತ್ರೆಯಾದ ಶಿಡ್ಲಘಟ್ಟ, ಸಮುದಾಯ ಆರೋಗ್ಯ ಕೇಂದ್ರಗಳಾದ ಬಟ್ಲಹಳ್ಳಿ, ಗೂಳೂರು ಇಲ್ಲಿಗೆ ನಾನ್ ಕ್ಲಿನಿಕಲ್ ಸೇವೆಯನ್ನು ಗುತ್ತಿಗೆ ನೀಡುವ ಬಗ್ಗೆ.

**ಉಲ್ಲೇಖ:** (1) ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಮುಲೆಪಅ(ಆ)/ನಾನ್ ಕ್ಲಿನಿಕಲ್/53/2014–15 ದಿನಾಂಕ:16.02.2015. (2) ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೆಪವಿ(2)/ಆ/ಟೆಂ/ಮೈ/08/2017–18 ದಿನಾಂಕ: 29.05.2019. (3) ಸರ್ಕಾರಿ ಆದೇಶ ಸಂಖ್ಯೆ:ಆಕುಕ108 ಹೆಚ್‌ಎಸ್‌ಎಂ 2019 ಬೆಂಗಳೂರು. ದಿನಾಂಕ:15.05.2019 (4) ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರ ಅನುಮೋದನೆ ದಿನಾಂಕ:19.08.2022

ಚಿಕ್ಕಬಳ್ಳಾಪುರ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ ಸಮುದಾಯ ಆರೋಗ್ಯ ಕೇಂದ್ರಗಳಾದ ಬಟ್ಲಹಳ್ಳಿ ಮತ್ತು ಗೂಳೂರು ಇಲ್ಲಿಗೆ 2022–23ನೇ ಸಾಲಿಗೆ (ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ) ನಾನ್ ಕ್ಲಿನಿಕಲ್ ಸೇವೆಯನ್ನು ಗುತ್ತಿಗೆ ನೀಡಲು ಉಲ್ಲೇಖಿತ ಆದೇಶಗಳ ಅನುಸಾರ ಅಲ್ಪಾವಧಿ ಮರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(www.eproc.karnataka.gov.in)** ಮುಖಾಂತರ ಆಹ್ವಾನಿಸಲಾಗಿದೆ. (1) ಸೇವೆಯ ವಿವರ: **ನಾನ್ ಕ್ಲಿನಿಕಲ್ ಸೇವೆಗಳು** (2) ಟೆಂಡರ್ ಫಾರಂ ಡೌನ್‌ಲೋಡ್ **ದಿನಾಂಕ:20.08.2022ರ ಸಂಜೆ 5.00 ರಿಂದ 03.09.2022 ಸಂಜೆ 5.00 ಗಂಟೆಯವರೆಗೆ** (3) ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 03.09.2022ರ ಸಂಜೆ 5.00 ಗಂಟೆವರೆಗೆ** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:05.09.2022ರ ಬೆಳಿಗ್ಗೆ 11.00 ಗಂಟೆಗೆ** (5) ಸಾಧ್ಯವಾದಲ್ಲಿ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06.09.2022ರ ಬೆಳಿಗ್ಗೆ 11.00 ಗಂಟೆಗೆ** (6) ಪ್ರಿ–ಬಿಡ್ ಸಭೆ **ದಿನಾಂಕ:29.08.2022ರ ಬೆಳಿಗ್ಗೆ 11.00 ಗಂಟೆಗೆ.** (7) ಇ.ಎಂ.ಡಿ.: **ಎಲ್ಲಾ 3 ಆಸ್ಪತ್ರೆಗಳಿಗೂ ಸೇರಿ ರೂ.9,00,000/–.**

ವಿ.ಸೂ. ನಾನ್ ಕ್ಲಿನಿಕಲ್ ಸೇವೆ ಟೆಂಡರ್‌ನ ಗುತ್ತಿಗೆ ನೀಡುವುದು ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರ ಅನುಮೋದನೆ ಷರತ್ತುಗಳಿಗೆ ಒಳಪಟ್ಟಿರುತ್ತದೆ ಹಾಗೂ ಟೆಂಡರ್ ಅಂಗೀಕರಿಸುವುದು ಅಥವಾ ರದ್ದುಪಡಿಸುವ ಬಗ್ಗೆ ಅಂತಿಮ ನಿರ್ಧಾರ ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳದ್ದಾಗಿರುತ್ತದೆ. ಕಾರ್ಯಾದೇಶದಲ್ಲಿ ನೀಡಲಾಗುವ ದರಗಳಂತೆ ಸರಬರಾಜು ಮಾಡುವುದಾಗಿ ಯಶಸ್ವಿ ಟೆಂಡರ್‌ದಾರರು ಕರಾರು ಪತ್ರ ನೀಡತಕ್ಕದ್ದು. ಹಾಗೂ ದರಗಳಿಗೆ ಸಂಬಂಧಿಸಿದಂತೆ ಕಾರ್ಯಾದೇಶ ನೀಡಿದ ನಂತರ ದರಗಳ ಪರಿಶೀಲನೆಗೆ ಹಾಗೂ ಹೆಚ್ಚಿಸುವ ಬಗ್ಗೆ ಅವಕಾಶವಿರುವುದಿಲ್ಲ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ236/ಎಂ.ಸಿ.ಎ/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

### ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ

ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561203,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 8029799416 ಇ–ಮೇಲ್: apmc.dbpur@gmail.com

ಸಂಖ್ಯೆ: ಕೃಉಮಾಸ/ದೊ/173/2022–23 ದಿನಾಂಕ: 22–08–2022

**ಬಹಿರಂಗ ಹರಾಜು ಪ್ರಕಟಣೆ**

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಮೂಲೆ ನಿವೇಶನಗಳ ಸಂಖ್ಯೆ: 34, 51, 62, 74 ಹಾಗೂ 95 ಗಳನ್ನು ಮಾನ್ಯ ನಿರ್ದೇಶಕರು ನಿವೇಶನಕ್ಕೆ ನಿಗದಿಪಡಿಸಿರುವ ದರಗಳನ್ವಯ ಬಹಿರಂಗ ಹರಾಜಿನ ಮೂಲಕ ಲೀಸ್–ಕಂ–ಸೇಲ್ ಆಧಾರದ ಮೇಲೆ** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿ 2004 ರನ್ವಯ ಹಂಚಿಕೆ ಮಾಡಲು ಉದ್ದೇಶಿಸಿರುವುದರಿಂದ, ಪರವಾನಗಿ ಪಡೆದು ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆ ಕಾರ್ಯಕರ್ತರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

–: ವಿವರಗಳು :–

| ಕ್ರ. ಸಂ. | ಹಂಚಿಕೆ ಮಾಡಲು ಉದ್ದೇಶಿಸಿರುವ ಮೂಲೆ ನಿವೇಶನಗಳ ಸಂಖ್ಯೆ. | ನಿವೇಶನದ ಅಳತೆ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ನಿವೇಶನದ ಒಟ್ಟು ಮೌಲ್ಯ (ರೂ. ಗಳಲ್ಲಿ) | ನಿವೇಶನ ಮೌಲ್ಯದ ಶೇ.25 ರ ಮೊತ್ತ (ರೂ. ಗಳಲ್ಲಿ) |
|---|---|---|---|---|
| 1 | ನಿವೇಶನ ಸಂಖ್ಯೆ: 34 | 2174.15 | 1195783 | 298946 |
| 2 | ನಿವೇಶನ ಸಂಖ್ಯೆ: 51 | 1179.75 | 648863 | 162216 |
| 3 | ನಿವೇಶನ ಸಂಖ್ಯೆ: 62 | 2460.00 | 1353000 | 338250 |
| 4 | ನಿವೇಶನ ಸಂಖ್ಯೆ: 74 | 2419.00 | 1330450 | 332612 |
| 5 | ನಿವೇಶನ ಸಂಖ್ಯೆ: 95 | 4823.00 | 2652650 | 663162 |

–: ಷರತ್ತು ಮತ್ತು ನಿಬಂಧನೆಗಳು :–

1) ಬಹಿರಂಗ ಹರಾಜು ಮೂಲಕ ಹಂಚಿಕೆ ಪಡೆಯಲು ಇಚ್ಛಿಸುವ ಲೈಸೆನ್ಸ್ ಹೊಂದಿರುವ ಪೇಟೆ ಕಾರ್ಯಕರ್ತರು ದಿನಾಂಕ: **24–08–2022 ರಿಂದ ದಿನಾಂಕ: 08–09–2022 ರಂದು ಸಂಜೆ 4.30 ಗಂಟೆಯೊಳಗಾಗಿ** ನೋಂದಣಿ ಶುಲ್ಕ **ರೂ. 500/–** ಗಳನ್ನು (ಮರು ಪಾವತಿಸುವುದಿಲ್ಲ) ಪಾವತಿಸಿ ನೋಂದಣಿ ಮಾಡಿಕೊಳ್ಳತಕ್ಕದ್ದು. ಈ ಹಿಂದೆ ಸಮಿತಿಯಲ್ಲಿ ನೋಂದಾಯಿಸಿಕೊಂಡವರು ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.
2) ನೋಂದಾಯಿತ ಅರ್ಹ ಪೇಟೆ ಕಾರ್ಯಕರ್ತರು ಅರ್ಜಿ ಶುಲ್ಕ **ರೂ. 500.00 (ರೂ. ಐದು ನೂರು ಮಾತ್ರ)** ಗಳನ್ನು (ಮರು ಪಾವತಿಸುವುದಿಲ್ಲ) ಪಾವತಿಸಿ ಅರ್ಜಿ (ನಮೂನೆ–III) ನ್ನು ದಿನಾಂಕ: **24–08–2022 ರಿಂದ 25–09–2022 ರವರೆಗೆ ಪಡೆಯಬಹುದು.**
3) ಭರ್ತಿ ಮಾಡಿದ ಅರ್ಜಿ ನಮೂನೆ–III ರೊಂದಿಗೆ ಹಾಗೂ ನಿವೇಶನ ಮೌಲ್ಯದ ಶೇ. 25 ರಷ್ಟು ಮುಂಗಡ ಹಣವನ್ನು **ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ** ಇವರ ಹೆಸರಿಗೆ ಡಿ.ಡಿ. ಪಡೆದು, ಸದರಿ ಡಿ.ಡಿ. ಹಾಗೂ ನಿಗದಿಪಡಿಸಿದ ದಾಖಲೆಗಳನ್ನು ಲಗತ್ತಿಸಿ ದಿನಾಂಕ: **26–09–2022 ರಂದು ಸಂಜೆ 5.30 ಗಂಟೆಯ ಒಳಗೆ** ಅರ್ಜಿಗಳನ್ನು ಸಲ್ಲಿಸತಕ್ಕದ್ದು.
4) ದಿನಾಂಕ: **27–09–2022 ರಂದು ಬೆಳಿಗ್ಗೆ 11.30 ಗಂಟೆಗೆ ಬಹಿರಂಗ ಹರಾಜು ಪ್ರಕ್ರಿಯೆಯು ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಕಛೇರಿಯಲ್ಲಿ ನಡೆಸಲಾಗುವುದು.**
5) ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ದರ ಕೂಗಿ ಯಶಸ್ವಿಯಾದ ಹರಾಜುದಾರರು ಹೆಚ್ಚಿನ ದರದ ಮೇಲೆ ಶೇ. 25 ರಷ್ಟು ಹಣವನ್ನು ಈಗಾಗಲೇ ಪಾವತಿಸಿರುವ ಠೇವಣಿಯ ಮೊತ್ತವನ್ನು ಕಡಿತ ಮಾಡಿ ಇನ್ನುಳಿದ ಹಣವನ್ನು ಹರಾಜು ಮಾಡಿದ ಒಂದು ವಾರದೊಳಗಾಗಿ ಸಮಿತಿಗೆ ಡಿ.ಡಿ. ಮೂಲಕ ಪಾವತಿಸತಕ್ಕದ್ದು. ತಪ್ಪಿದಲ್ಲಿ ಪಾವತಿಸಿರುವ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಎರಡನೇ ಹೆಚ್ಚಿನ ದರ ನಮೂದಿಸಿರುವ ಹರಾಜುದಾರರಿಗೆ ಸದರಿ ಮೊಬಲಗನ್ನು ಪಾವತಿಸಲು ಅವಕಾಶ ನೀಡಲಾಗುವುದು. ಎರಡನೇ ಹೆಚ್ಚಿನ ದರ ನಮೂದಿಸಿ ಕೂಗಿರುವ ಹರಾಜುದಾರರು ಸಹ ಹಣ ಪಾವತಿಸದಿದ್ದಲ್ಲಿ ಸಮಿತಿಯು ಮರು ಬಹಿರಂಗ ಹರಾಜು ಮಾಡಲು ಕ್ರಮಕೈಗೊಳ್ಳಲಾಗುವುದು.
6) ಪ್ರತಿ ನಿವೇಶನದ ಹಂಚಿಕೆಗಾಗಿ ಪ್ರತ್ಯೇಕವಾಗಿ ಈ ಮೇಲೆ ತಿಳಿಸಿರುವ ನಿವೇಶನ ಮೌಲ್ಯದ ಶೇ. 25 ರಷ್ಟು ಮುಂಗಡ ಮೊತ್ತವನ್ನು ಡಿ.ಡಿ. ಯೊಂದಿಗೆ ಪ್ರತ್ಯೇಕ ಅರ್ಜಿ ಸಲ್ಲಿಸತಕ್ಕದ್ದು.
7) ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಛೇರಿಗೆ ಬಂದು ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ | ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ
ವಾಸಾಸಂಇ/ವಾ.ಪ್ರ/1915/ಅಡ್ವಟೋರ್/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

### ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು 560 020.

**ತಿದ್ದುಪಡಿ**

ಈ ದಿನಪತ್ರಿಕೆಯಲ್ಲಿ ದಿನಾಂಕ 01.08.2022ರಂದು **ಪ್ರಕಟಗೊಂಡಿದ್ದ ಇ–ಹರಾಜು ಪ್ರಕಟಣೆ ಸಂಖ್ಯೆ : ಬೆಂಅಪ್ರಾ / ಅಸ / ಇ–ಹರಾಜು/ ಟ–03 /2022–23, ದಿನಾಂಕ 14.07.2022**ಕ್ಕೆ ಸಂಬಂಧಿಸಿದಂತೆ ಮತ್ತು ದಿನಾಂಕ: 21.08.2022ರಂದು ಪ್ರಕಟಗೊಂಡಿದ್ದ ತಿದ್ದುಪಡಿಯಲ್ಲಿ ಕ್ರಮ ಸಂಖ್ಯೆ 728 ರಿಂದ 789ರ ನಿವೇಶನಗಳ ಹರಾಜು ತಾಂತ್ರಿಕ ಕಾರಣಗಳಿಂದ ರದ್ದುಗೊಂಡಿದ್ದು, ಸದರಿ ನಿವೇಶನಗಳನ್ನು ಮರು ಹರಾಜು ಮಾಡಲಾಗುತ್ತಿದ್ದು, ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ 07.09.2022, ಸಂಜೆ 6.00 ಗಂಟೆಗೆ, ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ 08.09.2022, ಸಂಜೆ 6.00 ಗಂಟೆಗೆ ಎಂದು ತಿಳಿಸಲಾಗಿದೆ. ತಿದ್ದುಪಡಿಯಲ್ಲಿ ಕ್ರಮ ಸಂಖ್ಯೆ 669 ರಿಂದ 727 ಎಂಬುದನ್ನು ಕ್ರಮ ಸಂಖ್ಯೆ 728 ರಿಂದ 789 ಎಂದು ತಪ್ಪಾಗಿ ಪ್ರಕಟಿಸಲಾಗಿದೆ. ಆದ್ದರಿಂದ, ಈ ದಿನಪತ್ರಿಕೆಯಲ್ಲಿ ದಿನಾಂಕ 21.08.2022 ರಂದು ಪ್ರಕಟಗೊಂಡ ತಿದ್ದುಪಡಿಯನ್ನು ನಿರ್ಲಕ್ಷಿಸಬೇಕಾಗಿ ವಿನಂತಿ.

ಕ್ರಮ ಸಂಖ್ಯೆ 669 ರಿಂದ 727ರ ನಿವೇಶನಗಳ ಹರಾಜು ತಾಂತ್ರಿಕ ಕಾರಣಗಳಿಂದ ರದ್ದುಗೊಂಡಿದೆ. ಸದರಿ ನಿವೇಶನಗಳನ್ನು ಮರು ಹರಾಜು ಮಾಡಲಾಗುತ್ತಿದೆ. ಕ್ರಮ ಸಂಖ್ಯೆ 669 ರಿಂದ 727ರ ನಿವೇಶನಗಳ ವೇಳಾಪಟ್ಟಿ ಈ ಕೆಳಕಂಡಂತಿದೆ:

**ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ 07.09.2022, ಸಂಜೆ 6.00 ಗಂಟೆಗೆ.**
**ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ 08.09.2022, ಸಂಜೆ 6.00 ಗಂಟೆಗೆ.**
ಇ–ಹರಾಜಿನ ವೇಳಾಪಟ್ಟಿಯಲ್ಲಿನ ತಿದ್ದುಪಡಿಯನ್ನು ದಯವಿಟ್ಟು ಗಮನಿಸಿ. ಅನಾನುಕೂಲತೆಗಾಗಿ ಬಿಡಿಎ ವಿಷಾದ ವ್ಯಕ್ತಪಡಿಸುತ್ತದೆ.

ಸಹಿ/– ಅಭಿಯಂತರ ಸದಸ್ಯರು

---

### ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-107/1231/2022–23 ದಿನಾಂಕ: 23.08.2022

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ.ನಂ | ವಿಸ್ತೀರ್ಣ ಎ–ಗುಂ | ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1 | ಶ್ರೀ ಡಿ.ಎಸ್.ದೇವರಾಜು | ಪೂರ್ವ | ವರ್ತೂರು | ನಿಂಬೇಕಾಯಿಪುರ | 59/3 | 3–10 | ವ್ಯವಸಾಯ | ವಸತಿ |
| 2 | ಶ್ರೀ ಡಿ.ಎಸ್.ದೇವರಾಜು | ಪೂರ್ವ | ವರ್ತೂರು | ನಿಂಬೇಕಾಯಿಪುರ | 59/4 | 3–14 | ವ್ಯವಸಾಯ | ವಸತಿ |

**ಷರಾ:** ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವ್ಯವಸಾಯ ವಲಯ" ದಿಂದ "ವಸತಿ ಉಪಯೋಗಕ್ಕೆ"** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/84/2022-23 — ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

---

### ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್: 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/27/2022–23 ದಿನಾಂಕ: 22.08.2022

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ ಎ/ಗು | ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ | ಷರಾ |
|---|---|---|---|---|---|---|---|---|---|
| 1 | ಶ್ರೀ ಎಂ. ರಾಮರೆಡ್ಡಿ ಬಿನ್ ಲೇ. ಮುನಿಸ್ವಾಮಿ ರೆಡ್ಡಿ | ಆನೇಕಲ್ | ಅತ್ತಿಬೆಲೆ | ರಾಮಸಾಗರ | 123/1 | 0–32 | ಕೃಷಿ | ವಸತಿ | |
| 2 | ಶ್ರೀ ಎಂ. ನಾರಾಯಣ ರೆಡ್ಡಿ ಬಿನ್ ಮುನಿಶಾಮಿ ರೆಡ್ಡಿ | ಆನೇಕಲ್ | ಅತ್ತಿಬೆಲೆ | ರಾಮಸಾಗರ | 123/2 | 0–36.04 | ಕೃಷಿ | ವಸತಿ | |
| 3 | ಶ್ರೀ ಆರ್. ಮಂಜುನಾಥ ಬಿನ್ ರಾಮಯ್ಯ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ। ಶ್ರೀ ಸಂಪಧ ಗ್ರೂಪ್ ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಕೆ. ಸುರೇಶ್ ಬಿನ್ ಕೆ. ರಾಮಕೃಷ್ಣ | ಆನೇಕಲ್ | ಅತ್ತಿಬೆಲೆ | ರಾಮಸಾಗರ | 124/1 | 2–08 | ಕೃಷಿ | ವಸತಿ | |
| 4 | ಶ್ರೀ ವೈ. ನಂಜುಂಡರೆಡ್ಡಿ ಬಿನ್ ಲೇ. ಯಲ್ಲಾ ರೆಡ್ಡಿ | ಆನೇಕಲ್ | ಅತ್ತಿಬೆಲೆ | ರಾಮಸಾಗರ | 124/2 | 1–01 | ಕೃಷಿ | ವಸತಿ | |
| 5 | ಶ್ರೀ ಗೋಪಾಲ ರೆಡ್ಡಿ ವಿ., | ಆನೇಕಲ್ | ಅತ್ತಿಬೆಲೆ | ರಾಮಸಾಗರ | 126/1 | 0–30.08 | ಕೃಷಿ | ವಸತಿ | |
| 6 | ಶ್ರೀ ಶ್ರೀನಿವಾಸ ರೆಡ್ಡಿ ಆರ್.ವಿ. ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ। ಶ್ರೀ ಸಂಪಧ ಗ್ರೂಪ್ ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಕೆ. ಸುರೇಶ್ ಬಿನ್ ಕೆ. ರಾಮಕೃಷ್ಣ | ಆನೇಕಲ್ | ಅತ್ತಿಬೆಲೆ | ರಾಮಸಾಗರ | 126/4 | 0–30.04 | ಕೃಷಿ | ವಸತಿ | |

**ಷರಾ:** ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ದೊರಕುತ್ತದೆ. ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ದೊರಕುತ್ತವೆ ಹಾಗೂ ಕಾನೂನು ಬದ್ಧ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
ವಾಸಾಸಂಇ/ವಾಪ್ರ/ಎಲ್‌ಸಿ/1911/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

### ಬ್ರೇಕ್ ಇನ್‌ಸ್ಪೆಕ್ಟರ್: ವಯೋಮಿತಿ ಮೀರಿದ 631 ಅಭ್ಯರ್ಥಿಗಳ ಅಳಲು

# ಅರ್ಹತೆ ಇದ್ದರೂ ಸಿಗದ ಹುದ್ದೆ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಮೋಟಾರು ವಾಹನ ನಿರೀಕ್ಷಕ (ಐಎಂವಿ– ಬ್ರೇಕ್ ಇನ್‌ಸ್ಪೆಕ್ಟರ್) 141 ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಪ್ರಕಟಿಸಿದ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಅನರ್ಹರಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ಖಚಿತವಾದ ಬೆನ್ನಲ್ಲೆ, 'ಅರ್ಹತೆ' ಇದ್ದೂ ಹುದ್ದೆ ಪಡೆಯುವ ಭಾಗ್ಯದಿಂದ ವಂಚಿತರಾಗಿದ್ದೇವೆ ಎಂದು ವಯೋಮಿತಿ ಮೀರಿದ 631 ಅಭ್ಯರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

150 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ ಆರು ವರ್ಷ ಎರಡು ತಿಂಗಳ ಬಳಿಕ ಪರಿಷ್ಕೃತ ಆಯ್ಕೆ ಪಟ್ಟಿಯನ್ನು ಸಾರಿಗೆ ಇಲಾಖೆಗೆ ಕೆಪಿಎಸ್‌ಸಿ ಸಲ್ಲಿಸಿದೆ. ಆದರೆ, ಈ ಪಟ್ಟಿಯಲ್ಲಿ ಇರುವವರಲ್ಲಿ ದೈಹಿಕ ಕ್ಷಮತೆ ಇಲ್ಲದಿರುವ, ಗ್ಯಾರೇಜ್ ಸೇವಾನುಭವದ ನಕಲಿ ಪ್ರಮಾಣಪತ್ರ ಸಲ್ಲಿಸಿದ ಕಾರಣಕ್ಕೆ ಕೆಲವರು ಹೊರಗುಳಿಯುವ ಸಾಧ್ಯತೆಗಳಿವೆ. ವೈದ್ಯಕೀಯ ಪರೀಕ್ಷೆಯೊಂದರಲ್ಲಿಯೇ 10ಕ್ಕೂ ಹೆಚ್ಚು ಅಭ್ಯರ್ಥಿಗಳು ಫೇಲಾಗಿದ್ದಾರೆ.

'2008ರಲ್ಲಿ ಕೆಪಿಎಸ್‌ಸಿ ಮೂಲಕ 124 ಹುದ್ದೆಗಳಿಗೆ ನೇಮಕಾತಿ (ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ) ನಡೆದ ಬಳಿಕ, 2016ರಲ್ಲಿ 150 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಈ ಅಧಿಸೂಚನೆಯಲ್ಲಿ ಸೂಚಿಸಿದಂತೆ ಒಂದು ವರ್ಷದ ಗ್ಯಾರೇಜ್ ಸೇವಾನುಭವ ಪ್ರಮಾಣಪತ್ರಕ್ಕೆ ಸಂಬಂಧಿಸಿದ ವಿಷಯವು ಕೆಎಟಿ, ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಸುದೀರ್ಘ ಅವಧಿಯ ಬಳಿಕ ಕೆಪಿಎಸ್‌ಸಿ ಆಯ್ಕೆ ಪಟ್ಟಿ ಪ್ರಕಟಿಸಿದೆ. ಪಟ್ಟಿಯಲ್ಲಿ ಅನರ್ಹರಿರುವ ಕಾರಣಕ್ಕೆ ಮತ್ತು ಮೋಟಾರು ವಾಹನ ನಿರೀಕ್ಷಕ ಹುದ್ದೆಗಳ ತೀವ್ರ ಕೊರತೆ ಇರುವುದರಿಂದ ಇದೇ ಅಧಿಸೂಚನೆಗೆ ಹೆಚ್ಚುವರಿ ಹುದ್ದೆಗಳನ್ನು ಸೇರಿಸಬೇಕು' ಎಂದು ವಯೋಮಿತಿ ಮೀರಿದ ಹುದ್ದೆ ವಂಚಿತ ಅರ್ಹ ಅಭ್ಯರ್ಥಿಗಳು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

'ಸಿಬ್ಬಂದಿ ಕೊರತೆ ನೀಗಿಸಲು ಸಾರಿಗೆ ಇಲಾಖೆ ಇತರ ಇಲಾಖೆಗಳಿಂದ ಸಿಬ್ಬಂದಿಯನ್ನು ಎರವಲು ಸೇವೆ ಮೇಲೆ ನಿಯೋಜನೆ ಮಾಡಿಕೊಳ್ಳುತ್ತಿದೆ. ಸರ್ಕಾರದ ಬೊಕ್ಕಸಕ್ಕೆ ನಿರೀಕ್ಷಿತ ಮಟ್ಟದ ಆದಾಯ ಕ್ರೋಡೀಕರಿಸಲು ಸಾಧ್ಯವಾಗದೆ ವಾರ್ಷಿಕ ನೂರಾರು ಕೋಟಿ ಆರ್ಥಿಕ ನಷ್ಟ ಉಂಟಾಗುತ್ತಿದೆ. 150 ಹುದ್ದೆಗಳ ನೇಮಕಾತಿಗೆ ಹೊರಡಿಸಿದ ಅಧಿಸೂಚನೆಯಲ್ಲಿ, ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ ಎಂದು ತಿಳಿಸಲಾಗಿದೆ. ಹೀಗಾಗಿ, ಈ ಅಧಿಸೂಚನೆಗೆ ಹೆಚ್ಚುವರಿ ಹುದ್ದೆಗಳ ಸೇರ್ಪಡೆಗೆ ಅವಕಾಶವಿದೆ. ಬೇರೆ ಇಲಾಖೆಗಳ ನೇಮಕಾತಿಗಳಲ್ಲೂ ಅಧಿಸೂಚನೆಗಳಲ್ಲಿ ಸೂಚಿಸಿದ ಹುದ್ದೆಗಳ ಜೊತೆ ಖಾಲಿ ಇರುವ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೇರಿಸಿ ನೇಮಕಾತಿ ಮಾಡಿರುವ ಸಾಕಷ್ಟು ಉದಾಹರಣೆಗಳಿವೆ' ಎಂದೂ ಅವರು ಪ್ರತಿಪಾದಿಸಿದ್ದಾರೆ.

'ಖಾಲಿ ಇರುವ ಮೋಟಾರು ವಾಹನ ನಿರೀಕ್ಷಕ ಮತ್ತು ಹಿರಿಯ ಮೋಟಾರು ವಾಹನ ನಿರೀಕ್ಷಕ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಕಳೆದ ವಿಧಾನಮಂಡಲ ಅಧಿವೇಶನದಲ್ಲಿ ಸಾರಿಗೆ ಸಚಿವ ಬಿ. ಶ್ರೀರಾಮುಲು ಭರವಸೆ ನೀಡಿದ್ದರು. ಹೀಗಾಗಿ, ಖಾಲಿ ಇರುವ 300 ಹುದ್ದೆಗಳನ್ನು ಇದೇ ನೇಮಕಾತಿ ಅಧಿಸೂಚನೆಯಲ್ಲಿ ಸೇರಿಸಿ, ಅವಕಾಶ ಕಲ್ಪಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

> **141 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ದಾಖಲೆಗಳ ನೈಜತೆ ಪರಿಶೀಲನೆ ಪ್ರಕ್ರಿಯೆ ನಡೆಯುತ್ತಿದೆ. ಹೆಚ್ಚುವರಿಯಾಗಿ ಹುದ್ದೆ ಸೇರ್ಪಡೆಗೆ ಸರ್ಕಾರದಿಂದ ಯಾವುದೇ ಪ್ರಸ್ತಾವ ಬಂದಿಲ್ಲ**
>
> **ಟಿ.ಎಚ್.ಎಂ. ಕುಮಾರ್**
> ಆಯುಕ್ತ, ಸಾರಿಗೆ ಇಲಾಖೆ

## 'ಕಾಯುವಿಕೆಯಿಂದ ಮೀರಿದ ವಯೋಮಿತಿ'

'150 ಹುದ್ದೆಗೆ ಅರ್ಜಿ ಸಲ್ಲಿಸಿದ್ದ 2,048 ಅಭ್ಯರ್ಥಿಗಳು ಅಂತಿಮ ಆಯ್ಕೆ ಪಟ್ಟಿಗಾಗಿ ಆರು ವರ್ಷ ಎರಡು ತಿಂಗಳಿನಿಂದ ಕಾಯುತ್ತಿದ್ದಾರೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ಕಂಪ್ಯೂಟರ್ ಆಧಾರಿತ ಬಹು ಆಯ್ಕೆ ಪ್ರಶ್ನೆಗಳ ಪರೀಕ್ಷೆ, ವೈದ್ಯಕೀಯ ತಪಾಸಣೆ, ಮೂಲ ದಾಖಲೆಗಳ ಪರಿಶೀಲನೆಯಲ್ಲಿ ಅರ್ಹರಾಗಿದ್ದಾರೆ. ಆದರೆ, ಕಾಯುವಿಕೆಯಲ್ಲೇ ವಯೋಮಿತಿ ಮೀರಿದ ಕಳೆದ ಕಾರಣ ಮುಂದಿನ ದಿನಗಳಲ್ಲಿ ಯಾವುದೇ ಸರ್ಕಾರಿ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಲ್ಲದ ಪರಿಸ್ಥಿತಿ ಉಂಟಾಗಿದೆ' ಎಂದು ಮುಖ್ಯಮಂತ್ರಿ, ಸಾರಿಗೆ ಸಚಿವರಿಗೆ ಹಲವು ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದಾರೆ.

**ಬ್ರೇಕ್ ಇನ್‌ಸ್ಪೆಕ್ಟರ್ (ಐಎಂವಿ) ಹುದ್ದೆ ಸ್ಥಿತಿಗತಿ**

| ವೃಂದ | ಮಂಜೂರು | ಕಾರ್ಯನಿರತ | ಖಾಲಿ |
|---|---|---|---|
| ಐಎಂವಿ | 430 | 122 | 308 |
| ಹಿರಿಯ ಐಎಂವಿ | 214 | 86 | 128 |
| ಒಟ್ಟು | 644 | 208 | 436 |

## 'ಎಸಿಬಿ ರದ್ದು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲ್ಲ'

ಪ್ರಜಾವಾಣಿ ವಾರ್ತೆ

**ದೊಡ್ಡಬಳ್ಳಾಪುರ (ಬೆಂ. ಗ್ರಾಮಾಂತರ):** ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರದ್ದುಗೊಳಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

'ಹೈಕೋರ್ಟ್ ಆದೇಶದಂತೆ ಲೋಕಾಯುಕ್ತಕ್ಕೆ ಹಿಂದೆ ಇದ್ದ ಎಲ್ಲಾ ಅಧಿಕಾರ ನೀಡಲು ಸಿದ್ಧತೆ ನಡೆದಿದೆ. ಸಚಿವ ಸಂಪುಟದಲ್ಲಿಯೂ ನಿರ್ಧಾರ ಕೈಗೊಳ್ಳಲಾಗಿದೆ. ಹೀಗಾಗಿ, ಮೇಲ್ಮನವಿ ಸಲ್ಲಿಸುವ ವಿಚಾರ ಸರ್ಕಾರದ ಮುಂದೆ ಇಲ್ಲ' ಎಂದು ಹೇಳಿದರು.

ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಎಸಿಬಿ ರದ್ದುಗೊಳಿಸುವ ಆದೇಶ ಪ್ರಶ್ನಿಸಿ ವ್ಯಕ್ತಿಯೊಬ್ಬರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಮೇಲ್ಮನವಿ ಕುರಿತ ಪ್ರಶ್ನೆಗೆ ಈ ಪ್ರತಿಕ್ರಿಯೆ ನೀಡಿದರು.

'ಈ ಮೇಲ್ಮನವಿಗೂ, ಸರ್ಕಾರಕ್ಕೂ ಸಂಬಂಧ ಇಲ್ಲ. ಎಸಿಬಿ ವಿಚಾರದಲ್ಲಿ ನಮ್ಮ ನಿಲುವು ಸ್ಪಷ್ಟ. ಲೋಕಾಯುಕ್ತ ಬಲಪಡಿಸುವ ಅಂಶ ಬಿಜೆಪಿ ಪ್ರಣಾಳಿಕೆಯಲ್ಲಿಯೂ ಇದೆ. ನಾವು ಅದೇ ನಿಲುವಿಗೆ ಬದ್ಧರಾಗಿದ್ದೇವೆ' ಎಂದು ಹೇಳಿದರು.

### ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ

**ನವದೆಹಲಿ:** ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ಕರ್ನಾಟಕ ಹೈಕೋರ್ಟ್ ರದ್ದು ಮಾಡಿರುವುದನ್ನು ಪ್ರಶ್ನಿಸಿ ವ್ಯಕ್ತಿಯೊಬ್ಬರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ಕನಕರಾಜು ಎಂಬುವರು ಮೇಲ್ಮನವಿ ಸಲ್ಲಿಸಿದ್ದು, ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ, ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ಪೀಠವು ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದೆ.

'ಹೈಕೋರ್ಟ್ ಆದೇಶದಿಂದ ತನಿಖಾ ಹಂತದಲ್ಲಿರುವ ಕ್ರಿಮಿನಲ್ ಪ್ರಕರಣಗಳ ಮೇಲೆ ಪರಿಣಾಮ ಬೀರಲಿದೆ ಮತ್ತು ಇತರ ಪ್ರಕರಣಗಳ ತನಿಖೆ ಸಹ ಸ್ಥಗಿತವಾಗುವ ಅಪಾಯ ಇದೆ. ಇದರಿಂದ ಆರೋಪಿಗಳು ಬಚಾವ್ ಆಗುವ ಸಾಧ್ಯತೆ ಇದೆ' ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

## ರಾಜ್ಯದಲ್ಲಿ ಶೀಘ್ರ ಮೊದಲ ವಿಧಿ ವಿಜ್ಞಾನ ವಿ.ವಿ

ಪ್ರಜಾವಾಣಿ ವಾರ್ತೆ

**ಕೆಜಿಎಫ್ (ಕೋಲಾರ):** ರಾಜ್ಯದಲ್ಲಿ ಮೊದಲ ವಿಧಿವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆಗೆ ಸರ್ಕಾರ ಒಪ್ಪಿಗೆ ಕೊಟ್ಟಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಇಂತಹ ವಿಶ್ವವಿದ್ಯಾಲಯ ಎಲ್ಲೂ ಇಲ್ಲ. ಈ ಸಂಬಂಧ ದೆಹಲಿಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ ಎಂದರು. ಮಂಗಳವಾರ ಮಾಧ್ಯಮಗಳಿಗೆ ಈ ವಿಷಯ ತಿಳಿಸಿದ ಅವರು, ವಿವಿ ಸ್ಥಾಪನೆಯಿಂದಾಗಿ ಯುವ ಕರು ವಿಧಿ ವಿಜ್ಞಾನ ವಿಷಯದಲ್ಲಿ ಶಿಕ್ಷಣ ಪಡೆಯಬಹುದು. ಇದರಿಂದ ಉದ್ಯೋಗ ಅವಕಾಶ ಸೃಷ್ಟಿಯಾಗಲಿದೆ ಎಂದು ಹೇಳಿದರು.

## ಬಿಪಿಎಲ್ ಕಾರ್ಡ್: 1.50 ಲಕ್ಷ ಹೊಸ ಅರ್ಜಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಹೊಸದಾಗಿ 1.50 ಲಕ್ಷ ಮಂದಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಒಪ್ಪಿಗೆ ಪಡೆಯಲು ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮತಿ ಸಿಕ್ಕಿದ ತಕ್ಷಣವೇ ಪಡಿತರ ಚೀಟಿ ವಿತರಿಸಲು ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಆಹಾರ ಸಚಿವ ಉಮೇಶ ಕತ್ತಿ ತಿಳಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹೊಸದಾಗಿ ಪಡಿತರ ಕಾರ್ಡ್ ನೀಡುವ ಸಂಬಂಧ ಅಧಿಕಾರಿಗಳ ಜತೆ ಚರ್ಚೆ ನಡೆಸಿದ್ದೇನೆ' ಎಂದು ಹೇಳಿದರು.

ಯಾರಿಗೆ ಅರ್ಹತೆ ಇಲ್ಲವೋ ಅವರ ಬಳಿ ಇದ್ದ ಬಿಪಿಎಲ್ ಕಾರ್ಡ್‌ಗಳನ್ನು ಪತ್ತೆ ಮಾಡಿ ಒಟ್ಟು 3.20 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡಿದ್ದೇವೆ. ಈಗ 4.1 ಕೋಟಿ ಬಿಪಿಎಲ್ ಕಾರ್ಡುದಾರರಿಗೆ ತಲಾ 12 ಕೆ.ಜಿ ಅಕ್ಕಿ, ಜೋಳ ಅಥವಾ ರಾಗಿಯನ್ನು ನೀಡಲಾಗುತ್ತಿದೆ. ಕೋವಿಡ್ ವೇಳೆ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ 'ಗರೀಬ್ ಕಲ್ಯಾಣ್' ಯೋಜನೆ ಸೆಪ್ಟೆಂಬರ್‌ನಲ್ಲಿ ಕೊನೆಗೊಳ್ಳುತ್ತದೆ. ಆ ಬಳಿಕ ರಾಜ್ಯ ಸರ್ಕಾರದಿಂದ ಈ ಹಿಂದೆ ನೀಡುತ್ತಿದ್ದ ಪ್ರಮಾಣದಷ್ಟೇ ಅಕ್ಕಿ, ಜೋಳ ಅಥವಾ ರಾಗಿ ವಿತರಿಸಲಾಗುವುದು ಎಂದರು.

ಗರೀಬ್ ಕಲ್ಯಾಣ್ ಯೋಜನೆ ನಿಲ್ಲಿಸಿದ ನಂತರ ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಲಾಗುತ್ತದೆ. ಅವರೇ ತೀರ್ಮಾನ ತೆಗೆದುಕೊಳ್ಳುತ್ತಾರೆ. ಮಾರ್ಚ್‌ನಲ್ಲೇ ಕೊನೆಗೊಳ್ಳಬೇಕಿದ್ದ ಈ ಯೋಜನೆಯು ಆಹಾರ ಧಾನ್ಯಗಳ ಸಂಗ್ರಹ ದಾಸ್ತಾನು ಸಾಕಷ್ಟು ಇದ್ದ ಕಾರಣ ಸೆಪ್ಟೆಂಬರ್‌ವರೆಗೆ ವಿಸ್ತರಿಸಲಾಗಿತ್ತು ಎಂದರು.

ಸರ್ಕಾರದ ವಿವಿಧ ಯೋಜನೆಗಳು ನೇರ ನಗದು ವರ್ಗಾವಣೆ ವ್ಯವಸ್ಥೆಗೆ ಬರುತ್ತಿದ್ದು, ಆಹಾರ ಇಲಾಖೆಯಲ್ಲೂ ಈ ವ್ಯವಸ್ಥೆ ಜಾರಿಗೆ ಬರಲಿದೆಯೇ ಎಂಬ ಪ್ರಶ್ನೆಗೆ, 'ಕೆಲವು ರಾಜ್ಯಗಳಲ್ಲಿ ಈ ವ್ಯವಸ್ಥೆ ಯಶಸ್ವಿಯಾಗಿಲ್ಲ. ನಮ್ಮಲ್ಲಿ ಆ ರೀತಿಯ ಚಿಂತನೆ ಇಲ್ಲ. ಕೇಂದ್ರ ಸರ್ಕಾರ ಸೂಚನೆ ಕೊಟ್ಟರೆ ಪರಿಶೀಲನೆ ನಡೆಸುತ್ತೇವೆ' ಎಂದು ಉತ್ತರಿಸಿದರು.

## ಉಡುಪಿ ಜಿಲ್ಲೆಗೆ ರಜತ ಮಹೋತ್ಸವ: ನಾಳೆಯಿಂದ ರಾಜ್ಯವ್ಯಾಪಿ ರಥಯಾತ್ರೆ

ಪ್ರಜಾವಾಣಿ ವಾರ್ತೆ

**ಉಡುಪಿ:** ಉಡುಪಿ ಜಿಲ್ಲೆ ರಚನೆಯಾಗಿ ಆಗಸ್ಟ್ 25ಕ್ಕೆ 25 ವರ್ಷ ತುಂಬುತ್ತಿರುವುದರಿಂದ ಜಿಲ್ಲಾಡಳಿತದಿಂದ ಆ.25ರಿಂದ 2023ರ ಜ.25ರವರೆಗೆ ಸರಣಿ ರಜತ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ.25ರಂದು ನಗರದ ಅಜ್ಜರಕಾಡಿನಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಕಾರ್ಯಕ್ರಮ ಉದ್ಘಾಟಿಸುವರು. ಅಂದು ಮಧ್ಯಾಹ್ನ ಬೋರ್ಡ್ ಹೈಸ್ಕೂಲ್‌ನಿಂದ ಜಾಥಾ ನಡೆಯಲಿದೆ. ಜಿಲ್ಲೆಯ ಬೆಳವಣಿಗೆಗೆ ಕಾರಣರಾದ ಅಂದಿನ ಹಾಗೂ ಇಂದಿನ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳನ್ನು ರಜತ ಮಹೋತ್ಸವದಲ್ಲಿ ಸನ್ಮಾನಿಸಲಾಗುತ್ತಿದೆ. ಜಿಲ್ಲೆಯ ಎಲ್ಲರೂ ರಜತ ಉತ್ಸವದಲ್ಲಿ ಪಾಲ್ಗೊಳ್ಳುವಂತೆ ಕಾರ್ಯಕ್ರಮ ರೂಪಿಸಲಾಗುತ್ತಿದೆ.



ಉಡುಪಿ ರಜತೋತ್ಸವ ಲಾಂಛನ

ಸಂಘ– ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸ್ಥಳೀಯ ದೇವಸ್ಥಾನಗಳ ಸಹ ಯೋಗದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 'ಭವಿಷ್ಯದ ಉಡುಪಿ' ಕಟ್ಟುವ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ. ರಜತೋತ್ಸವ ಲಾಂಛನ, ಹಾಡು, 25 ವರ್ಷಗಳ ಹಿಂದಿನ ಹಾಗೂ 25 ವರ್ಷಗಳ ನಂತರದ ಉಡುಪಿ ಪರಿಚಯಿಸುವ ಪುಸ್ತಕ ಬಿಡುಗಡೆ ಮಾಡಲಾಗುವುದು ಎಂದು ಸಚಿವ ಸುನಿಲ್ ಕುಮಾರ್ ತಿಳಿಸಿದ್ದಾರೆ.

## ಇಬ್ಬರು ಶಂಕಿತ ಉಗ್ರರ ಹತ್ಯೆ

**ಜಮ್ಮು:** ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ನೌಶೇರಾ ವಲಯದ ಗಡಿ ನಿಯಂತ್ರಣ ರೇಖೆಯ(ಎಲ್‌ಒಸಿ) ಬಳಿ ಒಳನುಸುಳಲು ಯತ್ನಿಸಿದ ಇಬ್ಬರು ಶಂಕಿತ ಉಗ್ರರನ್ನು ಯೋಧರು ಹೊಡೆದುರುಳಿಸಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಸೋಮವಾರ ಮತ್ತು ಮಂಗಳವಾರ ಮಧ್ಯರಾತ್ರಿ ಉಗ್ರರು ಒಳನುಸುಳಲು ಯತ್ನಿಸಿದ್ದಾರೆ ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ.

'ಈ ಪ್ರದೇಶವನ್ನು ಅತ್ಯಾಧುನಿಕ ಡ್ರೋನ್ (ಕ್ವಾಡ್‌ಕಾಪ್ಟರ್) ಮೂಲಕ ಪರಿಶೀಲನೆ ನಡೆಸಲಾಗಿದೆ. ಈ ವೇಳೆ ಎರಡು ಮೃತದೇಹಗಳು ಕಂಡುಬಂದಿವೆ' ಎಂದೂ ವಿವರಿಸಿದ್ದಾರೆ.

ನೌಶೇರಾದ ಪುಖಾರ್ಣಿ ಗ್ರಾಮದ ಬಳಿಯ ಎಲ್‌ಒಸಿ ಉದ್ದಕ್ಕೂ ಶಂಕಿತ ಉಗ್ರರ ಗುಂಪು ಒಳನುಸುಳಲು ಯತ್ನಿಸಿದೆ ಎಂದು ತಿಳಿದುಬಂದಿದೆ.

ಸೋಮವಾರ ರಾತ್ರಿ ಉಗ್ರನೊಬ್ಬ ನೆಲಬಾಂಬ್ ಮೇಲೆ ಕಾಲಿರಿಸಿದ ಪರಿಣಾಮ ಸ್ಫೋಟ ಸಂಭವಿಸಿದೆ.

**ಶಸ್ತ್ರಾಸ್ತ್ರ ಸಂಗ್ರಹ ಪತ್ತೆ (ನವದೆಹಲಿ ವರದಿ):** ಪಂಜಾಬ್‌ನ ಭಾರತ–ಪಾಕಿಸ್ತಾನ ಗಡಿ ಬಳಿಯ ಫಿರೋಜ್‌ಪುರ ವಲಯದಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರು ಮಂಗಳವಾರ ಶಸ್ತ್ರಾಸ್ತ್ರ ಸಂಗ್ರಹಪತ್ತೆಹಚ್ಚಿದ್ದಾರೆ.

ಈ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನದಿಂದ ಕಳ್ಳಸಾಗಣೆ ಮಾಡಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

### 'ಪ್ರತಿಭಟನೆ ಕೈಬಿಟ್ಟ ಕಾಂಗ್ರೆಸ್ ನಿರ್ಧಾರ ಸ್ವಾಗತಾರ್ಹ'

**ಮೈಸೂರು:** 'ಶಾಂತಿ ಸುವ್ಯವಸ್ಥೆ ದೃಷ್ಟಿಯಿಂದ ಕಾಂಗ್ರೆಸ್ ಕೊಡಗಿನಲ್ಲಿ ಪಾದಯಾತ್ರೆ ಕೈಬಿಟ್ಟಿರುವುದು ಸ್ವಾಗತಾರ್ಹ ನಿರ್ಧಾರ' ಎಂದು ಬಿ.ಎಸ್. ಯಡಿಯೂರಪ್ಪ ಅವರು ಹೇಳಿದರು

'ಕಾಂಗ್ರೆಸ್ ನಾಯಕರು ಒಳ್ಳೆಯ ತೀರ್ಮಾನ ತೆಗೆದುಕೊಂಡಿದ್ದಾರೆ. ಬಿಜೆಪಿ ಕೂಡ ಯಾವುದೇ ಕಾರ್ಯಕ್ರಮ ನಡೆಸುವುದಿಲ್ಲ. ಈಗಾಗಲೇ ಕಾರ್ಯಕರ್ತರಿಗೆ ಸೂಚಿಸಲಾಗಿದೆ' ಎಂದರು.

### ಅರಣ್ಯ ಇಲಾಖೆ ಒಂದರಲ್ಲೇ ಸಾವಿರಕ್ಕೂ ಹೆಚ್ಚು ಇಲಾಖಾ ವಿಚಾರಣೆ ಪ್ರಕರಣ ಬಾಕಿ

# ಇಲಾಖಾ ವಿಚಾರಣೆ: ರಕ್ಷಣೆಗೆ 'ವಿಳಂಬ' ಅಸ್ತ್ರ

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** 'ಗುರುತರ ಆರೋಪಗಳಲ್ಲಿ ವಿಚಾರಣೆ ಎದುರಿಸುತ್ತಿರುವ ಅಧಿಕಾರಿಗಳನ್ನು ರಕ್ಷಿಸಲು 'ವಿಳಂಬ' ಅಸ್ತ್ರವನ್ನು ಅರಣ್ಯ ಇಲಾಖೆ ಅನುಸರಿಸುತ್ತಿದೆ' ಎಂಬ ಆರೋಪ ಕೇಳಿಬಂದಿದೆ.

ವಿಚಾರಣಾ ಪ್ರಕ್ರಿಯೆಯನ್ನು ಮೂರ್ನಾಲ್ಕು ವರ್ಷ ವಿಳಂಬ ಮಾಡಿ, ಅವುಗಳ ಗಂಭೀರತೆ ಕಡಿಮೆಯಾದ ಬಳಿಕ ಮುಚ್ಚಿ ಹಾಕುವ ಪ್ರಯತ್ನಗಳು ಸದ್ದಿಲ್ಲದೆ ನಡೆಯುತ್ತಿವೆ' ಎಂದು ಇಲಾಖೆಯ ನಿವೃತ್ತಿ ಅಧಿಕಾರಿಗಳು ಆಪಾದಿಸಿದ್ದಾರೆ.

'ಇಲಾಖಾ ವಿಚಾರಣೆ ಎಂಬುದು ಅರಣ್ಯ ಇಲಾಖೆಯಲ್ಲಿ ನಪಮಾತ್ರಕ್ಕೆ ಎಂಬಂತಾಗಿದೆ. ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಉಳಿದುಕೊಂಡಿವೆ. ಈ ರೀತಿ ವಿಳಂಬ ಮಾಡುವ ಮೂಲಕ ಗುರುತರ ಆರೋಪದ ಪ್ರಕರಣಗಳಲ್ಲಿ ಅಧಿಕಾರಿಗಳಿಗೆ ಅನುಕೂಲ ಮಾಡಿಕೊಟ್ಟರೆ, ಕ್ಷುಲ್ಲಕ ಆರೋಪಗಳನ್ನು ಹೊತ್ತ ಅಧಿಕಾರಿಗಳಿಗೆ ಅನಗತ್ಯ ಕಿರುಕುಳವನ್ನೂ ನೀಡಲಾಗುತ್ತಿದೆ' ಎಂದು ಹೆಸರು ಹೇಳಲಿಚ್ಛಿಸದ ನಿವೃತ್ತ ಅಧಿಕಾರಿಯೊಬ್ಬರು ಹೇಳಿದರು.

> **ಮುಖ್ಯಾಂಶಗಳು**
> - ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬಾಕಿ
> - ಕ್ಷುಲ್ಲಕ ಆರೋಪಗಳನ್ನು ಹೊತ್ತ ಅಧಿಕಾರಿಗಳಿಗೆ ಅನಗತ್ಯ ಕಿರುಕುಳ

ಅರಣ್ಯ ಇಲಾಖೆಗೆ ಬೆಳಗಾವಿ ವಿಭಾಗದ ಭೀಮಗಡ ವನ್ಯಜೀವಿ ವಲಯದಲ್ಲಿ ಅರಣ್ಯ ಇಲಾಖೆ ಅನುಮತಿ ಪಡೆಯದೆ 5.70 ಕಿಲೋ ಮೀಟರ್ ವ್ಯಾಪ್ತಿಯಲ್ಲಿ 218 ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿತ್ತು. ಈ ಬಗ್ಗೆ ಮಾಹಿತಿ ಇದ್ದರೂ ಕ್ರಮ ಕೈಗೊಳ್ಳದೆ ಕರ್ತವ್ಯ ಲೋಪ ಎಸಗಿದ ಆರೋಪದಲ್ಲಿ ಅಂದಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸೇರಿ ಐವರ ವಿರುದ್ಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ) ಸರ್ಕಾರಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

2018ರ ಪ್ರಕರಣದ ಇಲಾಖಾ ವಿಚಾರಣೆಯನ್ನು 2022ರ ತನಕ ಬಾಕಿ ಉಳಿಸಿಕೊಳ್ಳಲಾಗಿತ್ತು. ಆ ವೇಳೆಗೆ ಇಬ್ಬರು ನಿವೃತ್ತಿ ಹೊಂದಿದ್ದು, ಅವರಲ್ಲಿ ಒಬ್ಬರು ನಿಧನ ಹೊಂದಿದ್ದಾರೆ. ನಾಲ್ಕು ವರ್ಷಗಳ ಬಳಿಕ ಎಲ್ಲರನ್ನು ದೋಷಮುಕ್ತಗೊಳಿಸಿ ಸರ್ಕಾರ ಆದೇಶಿಸಿದೆ.

'ಇಲಾಖಾ ವಿಚಾರಣೆಗೆ ಸರ್ಕಾರಕ್ಕೆ ಹೋದ ಪ್ರಸ್ತಾವನೆಗಳು ನಾಲ್ಕು ವರ್ಷವಾದರೂ ವಿಚಾರಣೆ ಪೂರ್ಣಗೊಳ್ಳುವುದಿಲ್ಲ. ಈ ರೀತಿ ವಿಳಂಬ ಮಾಡಿ ಲಂಚಕ್ಕಾಗಿ ಕಾಯಲಾಗುತ್ತದೆ. ಹಣ ಕೊಟ್ಟರೆ ಆರೋಪಿತರ ಪರವಾಗಿ ಆದೇಶಗಳನ್ನು ಹೊರಡಿಸಲಾಗುತ್ತದೆ. ಆರೋಪದಲ್ಲಿ ಹುರುಳಿಲ್ಲದ ಪ್ರಕರಣವಾಗಿದ್ದರೂ ಅನಗತ್ಯವಾಗಿ ಸತಾಯಿಸಲಾಗುತ್ತದೆ. ಆರೋಪ ಸತ್ಯ ಆಗಿದ್ದರೂ ಹಣ ಕೊಡಬೇಕು, ಸುಳ್ಳಾಗಿದ್ದರೂ ಹಣ ಕೊಡಬೇಕಾದ ಸ್ಥಿತಿ ಇದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಜಿಲ್ಲಾ ಪಂಚಾಯಿತಿ ಪ್ರಗತಿ ಪರಿಶೀಲನಾ ಸಭೆಗೆ ಹಾಜರಾಗಿಲ್ಲ ಎಂಬ ಆರೋಪದಲ್ಲಿ ಅಧಿಕಾರಿಯೊಬ್ಬರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿತ್ತು. ಹಾಜರಾಗಿದ್ದರು ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿಯೇ ಪತ್ರ ಬರೆದಿದ್ದು, ಆರೋಪದಲ್ಲಿ ಹುರುಳಿಲ್ಲ ಎಂಬುದು ಸಾಬೀತಾಯಿತು. ಈ ಪ್ರಕರಣದಲ್ಲಿ ದೋಷಮುಕ್ತಗೊಳಿಸಲು ಲಕ್ಷಗಟ್ಟಲೆ ಲಂಚ ಕೊಡಬೇಕಾಯಿತು' ಎಂದು ಅವರು ನೋವು ತೋಡಿಕೊಂಡರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

### ಬಟ್ಟೆಯೊಳಗೆ ಕಲ್ಲುಕಟ್ಟಿ ಎಸೆದವರ ವಿರುದ್ಧ ಕ್ರಮ ಇಲ್ಲ– ಸಿದ್ದರಾಮಯ್ಯ

# ‘ಮಡಿಕೇರಿ ಚಲೋ ಮುಂದೂಡಿಕೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜ್ಯ ಸರ್ಕಾರದ ನಿಷ್ಕ್ರಿಯತೆ, ಭದ್ರತಾ ವೈಫಲ್ಯ, ಬಿಜೆಪಿ ಶಾಸಕರ ಭ್ರಷ್ಟಾಚಾರದ ವಿರುದ್ಧ ಮಡಿಕೇರಿಯಲ್ಲಿ ಇದೇ 26ರಂದು ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆ-ಯನ್ನು ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿ ಮಾಡಿದ ಕಾರಣ ಮುಂದೂಡಲಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ವಿರೋಧ ಪಕ್ಷದ ನಾಯಕನಾಗಿ, ಮಾಜಿ ಮುಖ್ಯ-ಮಂತ್ರಿಯಾಗಿ ಕಾನೂನು ಉಲ್ಲಂಘಿಸುವ ತಪ್ಪು ಮಾಡಲ್ಲ. ನಮ್ಮ ಪಕ್ಷವೂ ಕಾನೂನು ಮೀರುವುದನ್ನು ಬಯಸುವುದಿಲ್ಲ. ಪಕ್ಷದ ಮುಖಂಡರೊಂದಿಗೆ ಚರ್ಚಿಸಿ, ಪ್ರತಿಭಟನೆ ಮುಂದೂಡಲು ನಿರ್ಧರಿಸಿದ್ದೇನೆ’ ಎಂದರು.

‘ಮಳೆಹಾನಿ ವೀಕ್ಷಿಸಲು ಕೊಡಗಿಗೆ ಹೋಗಿದ್ದಾಗ ತಿತಿಮತಿಯಲ್ಲಿ ನನಗೆ ಕಪ್ಪುಬಾವುಟ ಪ್ರದರ್ಶಿಸಿದರು. ಒಬ್ಬ ವ್ಯಕ್ತಿ ನನ್ನ ಕಾರಿನೊಳಗೆ ಕರಪತ್ರ ಹಾಕಿದ್ದ. ಮಡಿಕೇರಿಯಲ್ಲಿ ಮೊಟ್ಟೆ ಎಸೆದರು. ಆದರೆ, ಎಲ್ಲ ಕಡೆ ಪೊಲೀಸರು ನಿಂತು ನೋಡುತ್ತಿದ್ದರು. ಇದರಿಂದ ಬೇಸರಗೊಂಡು ಪ್ರತಿಭಟಿಸಿದ ನಮ್ಮ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಬೀಸಿದರು. ಆದರೆ, ಆರೆಸ್ಸೆಸ್, ಬಜರಂಗದಳ, ಬಿಜೆಪಿ ಕಾರ್ಯಕರ್ತರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ದೂರಿದರು.

‘ಕುಶಾಲನಗರ ಬಳಿಯ ಗುಡ್ಡೆ ಹೊಸಳ್ಳಿ, ಶನಿವಾರಸಂತೆಯಲ್ಲಿಯೂ ಪ್ರತಿಭಟನೆ ನಡೆಸಿದರು. ಒಂದು ಕಡೆ ಬಟ್ಟೆಯೊಳಗೆ ಕಲ್ಲುಕಟ್ಟಿ ಕಾರಿಗೆ ಎಸೆದರು. ಎರಡು ಕಡೆ ಮೊಟ್ಟೆ ಎಸೆದರು. ಆದರೂ ಪೊಲೀಸರಾಗಲಿ, ಜಿಲ್ಲಾಧಿಕಾರಿಯಾ-ಗಲಿ ಕ್ರಮ ತೆಗೆದುಕೊಂಡಿಲ್ಲ. ಮೊಟ್ಟೆ ಎಸೆದ ಸಂಪತ್‌ನನ್ನು ಶಾಸಕ ಅಪ್ಪಚ್ಚು ರಂಜನ್ ಠಾಣೆಯಿಂದ ಬಿಡಿಸಿಕೊಂಡು ಬಂದಿದ್ದಾರೆ. ಇದು ಪೂರ್ವಯೋಜಿತ, ಸರ್ಕಾರಿ ಪ್ರಾಯೋಜಿತ ಪ್ರತಿಭಟನೆಗಳು. ಹೀಗಾಗಿ, 26ರಂದು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೆವು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನಾವು ಪ್ರತಿಭಟನೆ ಮಾಡುತ್ತೇವೆಂದು ಘೋಷಿಸಿದ ಮರುದಿನ ಜಾಗೃತಿ ಸಮಾವೇಶ ಮಾಡುತ್ತೇವೆಂದು ದ್ವೇಷದಿಂದ ಬಿಜೆಪಿಯವರು ಹೊರಟಿದ್ದರು. ಪ್ರತಿಭಟನೆಗೆ ನಾವು ಅನುಮತಿ ನೀಡಿಲ್ಲವೆಂದು ಈಗ ಡಿಸಿ ಮತ್ತು ಎಸ್‌ಪಿ ಕೊಡಗಿನಲ್ಲಿ 144 ಸೆಕ್ಷನ್ ಜಾರಿ ಮಾಡಿದ್ದಾರೆ. ಸೆಕ್ಷನ್ ಜಾರಿ ಮಾಡಿರುವುದು. ಜಾಗೃತಿ ಸಮಾವೇಶ ಮಾಡುತ್ತೇವೆಂದು ಬಿಜೆಪಿಯವರು ಹೇಳಿರುವುದು ಬರೀ ನಾಟಕ’ ಎಂದರು.

## ‘ಜನರ ಮನಸ್ಸಿನಲ್ಲಿ ಹುಳಿ ಹಿಂಡುವುದು ಬಿಜೆಪಿ ಕೆಲಸ’

**ಬೆಂಗಳೂರು:** ‘ಮಾಂಸ ತಿನ್ನುವುದು, ಬಿಡುವುದು ಅವರವರ ವೈಯಕ್ತಿಕ ವಿಚಾರ. ಇದರಿಂದ ಸಮಾಜಕ್ಕೆ ಯಾವ ಉಪಯೋಗವೂ ಇಲ್ಲ. ಜನರ ಮನಸ್ಸಿನಲ್ಲಿ ಹುಳಿ ಹಿಂಡುವುದು,- ಸುಳ್ಳು ಹೇಳುವುದಷ್ಟೆ ಬಿಜೆಪಿಯವರ ಕೆಲಸ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಾನು ಅನೇಕ ಬಾರಿ ತಿರುಪತಿ, ಚಾಮುಂಡೇಶ್ವರಿ, ಮಹದೇಶ್ವರನ ಬೆಟ್ಟಕ್ಕೆ ಹೋಗಿದ್ದೇನೆ. ಊರಿನಲ್ಲಿ ರುವ ದೇವಸ್ಥಾನಕ್ಕೂ ಹೋಗಿದ್ದೇನೆ. ಆದರೆ, ಎಲ್ಲ ಕಡೆ ಇರುವ ದೇವರು ಒಬ್ಬನೇ ಎಂಬುದು ನನ್ನ ನಂಬಿಕೆ. ಎಷ್ಟೊ ದೇವರುಗಳಿಗೆ ಮಾಂಸದ ಎಡೆ ಇಡುತ್ತಾರೆ. ಅದನ್ನು ತಪ್ಪು ಎನ್ನಲು ಆಗುತ್ತಾ’ ಎಂದು ಪ್ರಶ್ನಿಸಿದರು.

‘ಹಂದಿ ಮಾಂಸ ತಿಂದು ದರ್ಗಾಕ್ಕೆ ಹೋಗಿ’ ಎಂಬ ಸಂಸದ ಪ್ರತಾಪ್ ಸಿಂಹ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ನಾನು ಜೀವನದಲ್ಲಿ ಹಂದಿ ಮಾಂಸ ತಿಂದೇ ಇಲ್ಲ. ತಿನ್ನುವವರಿಗೆ ಬೇಡ ಎಂದು ಹೇಳಲ್ಲ. ಬೇಕಾದರೆ ಪ್ರತಾಪ್ ಸಿಂಹನೇ ಹಂದಿ ಮಾಂಸ ತಿಂದು ಎಲ್ಲಿಗಾದರೂ ಹೋಗಲಿ, ನನ್ನ ತಕರಾರಿಲ್ಲ’ ಎಂದು ತಿರುಗೇಟು ನೀಡಿದರು.

### ಮೊಟ್ಟೆ ಎಸೆತ: ವಿಚಾರಣೆಗೆ ಸೂಚನೆ

ಮಡಿಕೇರಿ: ‘ಸಿದ್ದರಾಮಯ್ಯ ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೋಳಿಮೊಟ್ಟೆ ಎಸೆದ ಪ್ರಕರಣ ನಡೆಯಲು ಕಾರಣವಾದ ಲೋಪಗಳ ಕುರಿತು ವಿಚಾರಣೆ ನಡೆಸಲು ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಆದೇಶಿಸಿದ್ದಾರೆ.

ನಗರಕ್ಕೆ ಮಂಗಳವಾರ ಭೇಟಿ ನೀಡಿದ್ದ ಅವರು ಪರಿಸ್ಥಿತಿ ಪರಾಮರ್ಶಿಸಿ, ‘ಹೆಚ್ಚುವರಿ ಎಸ್.ಪಿ ದರ್ಜೆಯ ಅಧಿಕಾರಿಯಿಂದ ವಿಚಾರಣೆ ನಡೆಸಿ ಶೀಘ್ರವೇ ವರದಿ ಸಲ್ಲಿಸಬೇಕು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಅವರಿಗೆ ಸೂಚಿಸಿದರು.

‘ಕಾಂಗ್ರೆಸ್ ಅಧಿಕೃತವಾಗಿ ‘ಮಡಿಕೇರಿ ಚಲೋ’ ಮುಂದೂಡಿದ್ದರೂ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಆಯಕಟ್ಟಿನ ಸ್ಥಳಗಳಲ್ಲಿ ಚೆಕ್‌ಪೋಸ್ಟ್ ಹಾಕಿ ಕಟ್ಟೆಚ್ಚರ ವಹಿಸಬೇಕು’ ಎಂದೂ ಹೇಳಿದರು.

‘ಕೇರಳದಿಂದ ಸಮಾಜಘಾತುಕ ಶಕ್ತಿಗಳು ಜಿಲ್ಲೆಗೆ ನುಸುಳಿರುವ ಸಾಧ್ಯತೆ ಇದೆ ಎಂಬ ಗುಪ್ತಚರ ವರದಿ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿನ ಹೋಂ ಸ್ಟೇಗಳು, ರೆಸಾರ್ಟ್‌ಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

**ಜಿಲ್ಲಾಡಳಿತ ಬಿಜೆಪಿಯೊಂದಿಗೆ ಶಾಮೀಲಾಗಿ ಅನಗತ್ಯವಾಗಿ ನಿಷೇಧಾಜ್ಞೆ ಜಾರಿಗೊಳಿಸಿ ಹೋರಾಟವನ್ನು ಹತ್ತಿಕ್ಕಿದೆ. ಇದು ನಿಜಕ್ಕೂ ಆರೋಗ್ಯಕಾರಿ ಪ್ರಜಾಪ್ರಭುತ್ವದ ಲಕ್ಷಣವಲ್ಲ**

**ಡಾ.ಎಚ್.ಸಿ.ಮಹದೇವಪ್ಪ,** ಕಾಂಗ್ರೆಸ್ ಮುಖಂಡ

## ‘ಮಾಂಸ ತಿಂದು ದೇವಸ್ಥಾನಕ್ಕೆ ಹೋಗಿಲ್ಲ’

**ಬೆಂಗಳೂರು:** ‘ವಾಸ್ತವದಲ್ಲಿ ನಾನು ಕೊಡಗಿನಲ್ಲಿ ಮಾಂಸ ತಿಂದು ದೇವಸ್ಥಾನಕ್ಕೆ ಹೋಗಿಲ್ಲ. ಆ ದಿನ ಕಳಲೆಪಲ್ಯ ಮತ್ತು ಅಕ್ಕಿರೊಟ್ಟಿ ತಿಂದಿದ್ದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪಷ್ಟಪಡಿಸಿ-ದ್ದಾರೆ.


ಮಾಂಸಾಹಾರ ಸೇವನೆ ವಿಚಾರಕ್ಕೆ ಸಂಬಂಧಿಸಿದಂತೆ ಸರಣಿ ಟ್ವೀಟ್ ಮಾಡಿರುವ ಅವರು, ‘ಮಾಂಸಾಹಾರ ಮನುಷ್ಯನ ವೈಯಕ್ತಿಕ ವಿಚಾರ. ಯಾವುದಾದರೂ ಧಾರ್ಮಿಕ ಕೇಂದ್ರಗಳಲ್ಲಿ ಅಂತಹ ನಿರ್ಬಂಧಗಳಿದ್ದರೆ ಖಂಡಿತ ನಾವು ಅದನ್ನು ಪಾಲಿಸಬೇಕು. ನನಗೆ ತಿಳಿದಂತೆ ಎಲ್ಲಿಯೂ ಮೀನು-ಮಾಂಸ ತಿಂದು ದೇವಸ್ಥಾನಕ್ಕೆ ಬರಬಾರದು ಎಂಬ ನಿರ್ಬಂಧ ಇಲ್ಲ. ಹೀಗಿದ್ದಾಗ ಯಾಕೆ ಈ ವಿವಾದ’ ಎಂದು ಪ್ರಶ್ನಿಸಿದ್ದಾರೆ.

## ‘ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ’

**ದೊಡ್ಡಬಳ್ಳಾಪುರ:** ‘ನನ್ನ ಮೇಲೆ ಕೇವಲ ಮೊಟ್ಟೆ ದಾಳಿಯಾಗಲಿಲ್ಲ, ಕಲ್ಲು ದಾಳಿಯೂ ಆಗಿತ್ತು’ ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ಶುದ್ಧ ಸುಳ್ಳು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

‘ಪ್ರಕರಣದ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ಸಿದ್ದರಾಮಯ್ಯ ಅವರಿಗೆ ರಕ್ಷಣೆ ನೀಡಲಾಗಿದೆ. ವಿರೋಧ ಪಕ್ಷದ ನಾಯಕ ಸ್ಥಾನದ ಬಗ್ಗೆ ಇರುವ ಗೌರವದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಈ ಸರ್ಕಾರಕ್ಕೆ ಮೊಟ್ಟೆ ಎಸೆಯುವ ಕೆಲಸ ಮಾಡುವ ಅವಶ್ಯಕತೆ ಇಲ್ಲ’ ಎಂದರು.

‘ಈ ಹಿಂದೆ ರದ್ದಾಗಿದ್ದ ಜನೋತ್ಸ-ವವನ್ನು ಸೆಪ್ಟೆಂಬರ್ 8 ರಂದು ದೊಡ್ಡ-ಬಳ್ಳಾಪುರದಲ್ಲಿಯೇ ನಡೆಸಲಾಗುತ್ತಿದೆ. ಜನೋತ್ಸವ ಯಶಸ್ವಿಯಾದರೆ ಕೆಲವರಿಗೆ ಅದು ಕರಾಳ ದಿನವೇ ಆಗಿರುತ್ತದೆ. ಇದಕ್ಕೆಲ್ಲ ತಾವು ತಲೆ ಕೆಡಿಸಿಕೊಳ್ಳುವು-ದಿಲ್ಲ’ ಎಂದರು.




## ಮದರಸಾ ಶಿಕ್ಷಣಕ್ಕೆ ‘ಮಂಡಳಿ’

ಒಂದನೇ ಪುಟದಿಂದ

ಅವರ ಮಾತಿಗೆ ಧ್ವನಿಗೂಡಿಸುವ ಮತ್ತೊಬ್ಬ ಮುಖಂಡ ನಜೀರ್ ಅಹಮದ್, ‘ಮುಸ್ಲಿಮರ ವಿರುದ್ಧ ಉತ್ತರ ಪ್ರದೇಶದ ಮಾದರಿಯನ್ನು ರಾಜ್ಯದಲ್ಲೂ ಅನುಸರಿಸುವ ಪ್ರಯತ್ನಗಳು ನಡೆಯುತ್ತಿವೆ. ಅಲ್ಲಿನ ಮಂಡಳಿ ಮದರಸಾಗಳ ಆವರಣದಲ್ಲಿ ನರೇಂದ್ರ ಮೋದಿ ಅವರ ಭಾವಚಿತ್ರ ಕಡ್ಡಾಯಗೊಳಿಸಿ, ಈಚೆಗೆ ಆದೇಶ ಹೊರಡಿಸಿದೆ. ಇಂತಹ ಪ್ರಯತ್ನಗಳ ಮೂಲಕ ರಾಜಕೀಯ ಲಾಭ ಪಡೆಯಲು ನಮ್ಮ ಸಮುದಾಯ ಅವಕಾಶ ನೀಡುವುದಿಲ್ಲ’ ಎಂದರು.

## ಕೊಡಗನ್ನು ಕಾಶ್ಮೀರ ಮಾಡುವ ಯತ್ನ: ಎಚ್‌.ಡಿ. ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಕಾಶ್ಮೀರ ಎಂದೇ ಪ್ರಸಿದ್ಧಿ ಪಡೆದಿರುವ ಕೊಡಗು ಜಿಲ್ಲೆಯಲ್ಲಿ ಶಾಂತಿ ಕದಡಿ ಜಮ್ಮು ಮತ್ತು ಕಾಶ್ಮೀರದ ಸ್ಥಿತಿ ನಿರ್ಮಾಣ ಮಾಡಲು ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಪ್ರಯತ್ನಿಸುತ್ತಿವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಜೆಡಿಎಸ್ ಪ್ರಧಾನ ಕಚೇರಿಯಲ್ಲಿ ಕೊಡಗು ಜಿಲ್ಲೆಯ ಪಕ್ಷದ ಮುಖಂಡರೊಂದಿಗೆ ಮಂಗಳವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕರಾವಳಿಯ ರೀತಿಯಲ್ಲೇ ಕೊಡಗು ಜಿಲ್ಲೆಯಲ್ಲೂ ಸಾಮರಸ್ಯಕ್ಕೆ ಧಕ್ಕೆ ತರುವ ಕೆಲಸ ನಡೆಯುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಕ್ಷುಲ್ಲಕ ವಿಚಾರಗಳನ್ನು ಮುಂದಿಟ್ಟುಕೊಂಡು ಇಂತಹ ಪ್ರಯತ್ನ ಮಾಡುತ್ತಿವೆ’ ಎಂದರು.

ಬಳ್ಳಾರಿ ಪಾದಯಾತ್ರೆಯ ಮಾದರಿಯಲ್ಲಿ ಮಡಿಕೇರಿಗೆ ಪಾದಯಾತ್ರೆ ನಡೆಸಿ ಅಧಿಕಾರ ಹಿಡಿಯಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಅದಕ್ಕೆ ವಿರುದ್ಧವಾಗಿ ಜನಾಂದೋಲನ ನಡೆಸುವುದಾಗಿ ಬಿಜೆಪಿ ಹೇಳಿದೆ. ಇಂತಹ ಪ್ರಯತ್ನಗಳಿಂದ ಶಾಂತಿ ಮತ್ತು ಸೌಹಾರ್ದಕ್ಕೆ ಧಕ್ಕೆಯಾಗುತ್ತದೆ. ಯಾರೂ ಇಂತಹ ಕೆಲಸಗಳಿಗೆ ಬೆಂಬಲ ನೀಡಬಾರದು ಎಂದು ಹೇಳಿದರು.

‘ಈಗ ಕೊಡಗು ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಆದೇಶ ತೆರವಾದ ಬಳಿಕ ನಾನು ಖುದ್ದಾಗಿ ಅಲ್ಲಿಗೆ ತೆರಳಿ ಶಾಂತಿ ಸಭೆ ನಡೆಸುತ್ತೇನೆ’ ಎಂದರು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಇದ್ದರು.

## ಪ್ರತಿಭಟನೆ ನಡೆದಿದ್ದರೆ ಹೆಣ ಬೀಳುತ್ತಿತ್ತು: ಜಗ್ಗೇಶ್

**ತುಮಕೂರು:** ‘ಕೊಡಗಿನಲ್ಲಿ ಕಾಂ-ಗ್ರೆಸ್‌ನವರಿಗೆ ಪ್ರತಿಭಟನೆ ಮಾಡಲು ಅವಕಾಶ ಕೊಟ್ಟಿದ್ದರೆ ಅಲ್ಲಿ ಹೆಣ ಬೀಳುತಿತ್ತು. ಅದಕ್ಕೆ ಅವಕಾಶ ಕೊಡಲಿಲ್ಲ’ ಎಂದು ನಟ ಹಾಗೂ ರಾಜ್ಯಸಭಾ ಸದಸ್ಯ ಜಗ್ಗೇಶ್ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕೊಡಗಿನಲ್ಲಿ ಈವರೆಗೆ ಎಷ್ಟೊ ಕೊಲೆಗಳು ನಡೆದಿವೆ. ಕೇರಳ ಗಡಿದಾಟಿ ಬಂದು ಕೊಲೆ ಮಾಡುತ್ತಾರೆ. ಅಹಿತಕರ ಘಟನೆ ನಡೆಯಲು ಸಾಕಷ್ಟು ಅವಕಾಶಗಳಿವೆ’ ಎಂದರು.

**‘ಹಾಗೆ ಹೇಳಿಯೇ ಇಲ್ಲ’:** ಪ್ರತಿಭಟನೆಗೆ ಸಮಯಸಾಧಕರು ಕೇರಳ ಗಡಿದಾಟಿ ಬಂದು ಪಕ್ಷದ ಕಾರ್ಯಕರ್ತರ ಕೊಲೆ ಮಾಡುತ್ತಾರೆ. ನಿಮಗೂ ಗೊತ್ತಿದೆ ಎಂದಿದ್ದೇನೆ ಹೊರತು ಪ್ರತಿಭಟಿಸಿದರೆ ಹೆಣ ಬೀಳುತ್ತದೆ ಎಂದು ಹೇಳಿಲ್ಲ ಎಂದು ಜಗ್ಗೇಶ್ ಟ್ವೀಟ್ ಮಾಡಿದ್ದಾರೆ.

### ಸರ್ಕಾರದಿಂದ ಸಿಗದ ಸ್ಪಂದನೆ -ಬಸವ ಜಯಮೃತ್ಯುಂಜಯ ಸ್ವಾಮೀಜಿ ಟೀಕೆ

# 2ಎ ಮೀಸಲಾತಿ: ಧರಣಿಗೆ ತೀರ್ಮಾನ

ಪ್ರಜಾವಾಣಿ ವಾರ್ತೆ

**ಶಿಗ್ಗಾವಿ (ಹಾವೇರಿ):** ‘ಸಾವು ಒಪ್ಪಿಕೊಳ್ಳೋಣ ಆದರೆ, ಸೋಲು ಒಪ್ಪಲಾರೆವು’ ಎಂದು ಸ್ವಾತಂತ್ರ್ಯ ಹೋರಾಟದಲ್ಲಿ ಕಿತ್ತೂರು ಚನ್ನಮ್ಮ ಹೇಳಿದ್ದರು. ಅದೇ ತತ್ವದಡಿ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಹೋರಾಟದಲ್ಲಿ ಎಲ್ಲರೂ ಸಾಗೋಣ’ ಎಂದು ಕೂಡಲಸಂಗಮದ ಪಂಚಮ-ಸಾಲಿಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಕರೆ ನೀಡಿದರು.

ಪಟ್ಟಣದಲ್ಲಿ ಮಂಗಳವಾರ ಕಿತ್ತೂರು ರಾಣಿ ಚನ್ನಮ್ಮ ಮೂರ್ತಿಗೆ ಮಾಲಾರ್ಪಣೆ ಮಾಡಿದ ನಂತರ, 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ನಡೆದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

ಆ. 22ರಂದು ಮೀಸಲಾತಿ ಘೋಷಿಸುವರು ಎಂದು ಸಿ.ಎಂ ಮೇಲೆ ಅಪಾರ ನಿರೀಕ್ಷೆ ಇತ್ತು. ಆದರೆ, ಆಗಲಿಲ್ಲ. ಹೀಗಾಗಿ ಸೆ.26ರಂದು ಶಿಗ್ಗಾ-ವಿಯಲ್ಲಿರುವ ಸಿಎಂ ಮನೆ ಮುಂದೆ ಸತ್ಯಾಗ್ರಹ ನಡೆಸುತ್ತೇವೆ. ಕಿತ್ತೂರು ರಾಣಿ ಚನ್ನಮ್ಮನ ಜಯಂತಿ ದಿನವಾದ ಅ. 23ರಂದು ಬೆಂಗಳೂರಿನಲ್ಲಿ 25 ಲಕ್ಷಕ್ಕೂ ಹೆಚ್ಚಿನ ಜನರೊಂದಿಗೆ ಅಂತಿಮ ಹೋರಾಟ ಹಮ್ಮಿಕೊಳ್ಳುತ್ತೇವೆ’ ಎಂದು ಹೇಳಿದರು.



ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ, ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾವಿ ಪಟ್ಟಣದಲ್ಲಿ ಮಂಗಳವಾರ ಪ್ರತಿಭಟನಾ ಜಾಥಾ ನಡೆಯಿತು. ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಿಧಾನ ಪರಿಷತ್ ಮಾಜಿ ಸದಸ್ಯ ಸೋಮಣ್ಣ ಬೇವಿನಮರದ ಇದ್ದಾರೆ —ಪ್ರಜಾವಾಣಿ ಚಿತ್ರ

**ಕಪ್ಪು ಬಾವುಟ ಪ್ರದರ್ಶಿಸಿ:** ಮೀಸಲಾತಿ ಕೊಡದಂತೆ ಆಣೆ ಪ್ರಮಾಣದ ಮೂಲಕ ಕೆಲವರು ಬೊಮ್ಮಾಯಿ ಅವರಿಗೆ ಒತ್ತಡ ಹಾಕುತ್ತಿದ್ದಾರೆ ಎನ್ನಲಾಗುತ್ತಿದೆ. ರಾಜ್ಯದ ಯಾವುದೇ ಸ್ಥಳದಲ್ಲಿ ಸಭೆ, ಸಮಾರಂಭಕ್ಕೆ ಬರುವಲ್ಲಿ ಮುಖ್ಯಮಂತ್ರಿ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಬೇಕು ಎಂದರು.

**ಯತ್ನಾಳ ಅವರನ್ನು ಸಿ.ಎಂ ಮಾಡೋಣ:** ಹೋರಾಟ ಸಮಿತಿ ಮುಖಂಡ ವಿಜಯಾನಂದ ಕಾಶಪ್ಪನವರ ಮಾತನಾಡಿ, ‘ಅಂತಿಮ ಹೋರಾಟದಲ್ಲಿ ಮಾಡು ಇಲ್ಲವೇ ಮಡಿ ಎಂಬ ತತ್ವದಡಿ ಹೋರಾಟ ಮಾಡೋಣ ಎಂದು ಹೇಳಿದರು.

‘ಸರ್ಕಾರ ಮಣಿಯದಿದ್ದರೆ ಮೀಸಲಾತಿಗಾಗಿ ಹೋರಾಡುವ ಪಂಚಮಸಾಲಿ, ಕುರುಬ, ವಾಲ್ಮೀಕಿ, ಹಡಪದ, ಮಡಿವಾಳ ಸಮಾಜದ-ವರನ್ನು ಸೇರಿಸಿ ‘ಮೀಸಲಾತಿ ಪಕ್ಷ’ ಸ್ಥಾಪಿಸಿ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಸಿ.ಎಂ ಮಾಡೋಣ’ ಎಂದರು.

ಶಿಗ್ಗಾವಿಯಲ್ಲಿ ಬೆಳಿಗ್ಗೆ, ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಅವರು ಪ್ರತಿಭಟನೆ ಮಾಡದಂತೆ ಮನವೊಲಿಸಲು ಮಾಡಿದ ಪ್ರಯತ್ನ ವಿಫಲವಾಯಿತು.

**‘ಕೊಟ್ಟ ಮಾತಿನಂತೆ ನಡೆದುಕೊಳ್ಳದ ಮುಖ್ಯಮಂತ್ರಿ’:** ಸಿ.ಎಂ ಬೊಮ್ಮಾಯಿ ಅವರು ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಅ.23ರಂದು ಬೆಂಗಳೂರಿನಲ್ಲಿ ಅಂತಿಮ ಹೋರಾಟ ನಡೆಸುತ್ತೇವೆ. ಮತ್ತೆ ಮಂತ್ರಿ ಆಗಬೇಕು ಎನ್ನುವವರು ಆ ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಪಂಚಮಸಾಲಿ ಸಮುದಾಯದ ಜನಪ್ರತಿನಿಧಿಗಳಿಗೆ ಶಾಸಕ ಬಸನಗೌಡ ಪಾಟೀಲ ಎಚ್ಚರಿಸಿದರು.

### ತಿರುಪತಿ ಒಪ್ಪಂದ

‘ತಿರುಪತಿಯಲ್ಲಿ ಬಿಎಸ್‌ವೈ ಮತ್ತು ಬೊಮ್ಮಾಯಿ ಅವರ ನಡುವೆ ನಡೆದ ಮಾತುಕತೆಯಲ್ಲಿ ಬಿಎಸ್‌ವೈ ಅವರು ಯಾವುದೇ ಕಾರಣಕ್ಕೂ ಪಂಚಮಸಾಲಿಗಳಿಗೆ 2ಎ ಮೀಸಲಾತಿ ನೀಡಬಾರದು ಎಂದು ಹೇಳಿದ ಕಾರಣ ಬೊಮ್ಮಾಯಿ ವಿಳಂಬ ನೀತಿ ಅನುಸರಿಸುತ್ತಿದ್ದಾರೆ’ ಎಂದು ಶಾಸಕ ಬಸನಗೌಡ ಪಾಟೀಲ ಗಂಭೀರ ಆರೋಪ ಮಾಡಿದರು.

### ಎರಡು ವರ್ಷಗಳಾದರೂ ಪ್ರಾರಂಭವಾಗದ ಕಟ್ಟಡ ಕಾಮಗಾರಿ

# ನಾಲ್ಕು ರಂಗಮಂದಿರ: ಸ್ಥಳ ಮಾತ್ರ ಗುರುತು

• ವರುಣ ಹೆಗಡೆ


ರವೀಂದ್ರ ಕಲಾಕ್ಷೇತ್ರದ ಹೊರನೋಟ – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿಯೇ ನಗರದ ನಾಲ್ಕು ಕಡೆ ರಂಗಮಂದಿರ ನಿರ್ಮಿಸುವುದಾಗಿ ಸರ್ಕಾರ ಘೋಷಿಸಿ, ಎರಡು ವರ್ಷಗಳಾದರೂ ಕಟ್ಟಡ ನಿರ್ಮಾಣ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ.

ನಗರದ ಹೃದಯ ಭಾಗದಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕಗಳಿಗೆ ಆದ್ಯತೆ ನೀಡಲಾಗುತ್ತಿದೆಯಾದರೂ ರಂಗ ತಂಡಗಳು ಪ್ರದರ್ಶನ ನೀಡಲು ಎರಡು ಮೂರು ತಿಂಗಳು ಮುಂಚಿತವಾಗಿ ಕಾಯ್ದಿರಿಸಿ, ಕಾಯಬೇಕಾದ ಪರಿಸ್ಥಿತಿಯಿದೆ. ಅದು ಕೂಡ ಸರ್ಕಾರಿ ಕಾರ್ಯಕ್ರಮಗಳು ತುರ್ತಾಗಿ ನಿಗದಿಯಾದಲ್ಲಿ ಕಾಯ್ದಿರಿಸಿದ ದಿನಾಂಕವನ್ನು ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ, ಪ್ರದರ್ಶನದ ದಿನದ ವರೆಗೂ ರಂಗಮಂದಿರ ಸಿಗುವ ಖಚಿತತೆ ಇಲ್ಲದಂತಾಗಿದೆ. ಆದ್ದರಿಂದ ಕಲಾವಿದರು ಸೇರಿ ಸಾಂಸ್ಕೃತಿಕ ವಲಯದ ಪ್ರಮುಖರು ರಂಗಮಂದಿರಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ಆಗ್ರಹಿಸಿದ್ದರು.

2020ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಗರದ ನಾಲ್ಕು ಕಡೆ ರಂಗಮಂದಿರಗಳನ್ನು ಘೋಷಿಸಿದ್ದರು. ಇದಕ್ಕಾಗಿ ಬಜೆಟ್‌ನಲ್ಲಿ ₹ 60 ಕೋಟಿ ಮೀಸಲಿಡಲಾಗಿತ್ತು. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಎರಡೂವರೆ ಎಕರೆ, ದೇವನಹಳ್ಳಿಯ ಕಸಬಾ ಹೋಬಳಿ, ಕನ್ನಹಳ್ಳಿ ಬಳಿ ಐದು ಎಕರೆ, ಕೆಐಎಡಿಬಿ, ಕೆಎಚ್‌ಬಿಯಲ್ಲಿ ಸಾರ್ವಜನಿಕರಿಗೆ ಮೀಸಲಿಟ್ಟ ಸಿಎ ನಿವೇಶನವನ್ನು ರಂಗಮಂದಿರ ನಿರ್ಮಾಣಕ್ಕೆ ಗುರುತಿಸಲಾಗಿದೆ. ಆದರೆ, ಜಾಗ ಹಸ್ತಾಂತರ ಸೇರಿ ವಿವಿಧ ಪ್ರಕ್ರಿಯೆಗಳು ಪೂರ್ಣಗೊಳ್ಳದಿರುವುದರಿಂದ ರಂಗಮಂದಿರಗಳ ನಿರ್ಮಾಣ ಕಾಮಗಾರಿ ನನೆಗುದಿಗೆ ಬಿದ್ದಿದೆ.

> **ರವೀಂದ್ರ ಕಲಾಕ್ಷೇತ್ರ ಮಾದರಿಯಲ್ಲಿಯೇ ನಗರದ ನಾಲ್ಕು ಕಡೆ ರಂಗಮಂದಿರ ನಿರ್ಮಾಣ ಯೋಜನೆ ಪ್ರಗತಿಯಲ್ಲಿದೆ. ಜಾಗ ಹಸ್ತಾಂತರ ಪ್ರಕ್ರಿಯೆ ಬಳಿಕ ನಿರ್ಮಾಣ ಕಾಮಗಾರಿ ನಡೆಯಲಿದೆ.**
> **ಪ್ರಕಾಶ್ ಜಿ. ನಿಟ್ಟಾಲಿ**
> ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

**ಲಭ್ಯತೆ ಕಷ್ಟ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ. 2018ರ ಡಿಸೆಂಬರ್ ತಿಂಗಳಲ್ಲಿ ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅವಘಡಕ್ಕೆ ಒಳಗಾಗಿದ್ದ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯ, ಮೂರೂವರೆ ವರ್ಷಗಳ ಬಳಿಕ ಪ್ರದರ್ಶನಗಳಿಗೆ ವೇದಿಕೆ ಒದಗಿಸಿದೆ. ಕಳೆದ ಏಪ್ರಿಲ್ ತಿಂಗಳಿಂದ ಅಲ್ಲಿ ಪ್ರದರ್ಶನಗಳಿಗೆ ಅವಕಾಶ ಮಾಡಿಕೊಡಲಾಗಿದೆ. ರವೀಂದ್ರ ಕಲಾಕ್ಷೇತ್ರ, ನಯನ ಸಭಾಂಗಣ ಹಾಗೂ ಸಾಂಸ್ಕೃತಿಕ ಸಮುಚ್ಚಯಕ್ಕೆ ಬೇಡಿಕೆ ಹೆಚ್ಚಿದ್ದು, ಎರಡು ತಿಂಗಳು ಮೊದಲೇ ಕಾರ್ಯಕ್ರಮಗಳು ಕಾಯ್ದಿರಿಸಲ್ಪಡುತ್ತಿವೆ.

‘ರವೀಂದ್ರ ಕಲಾಕ್ಷೇತ್ರದಲ್ಲಿ ಸಣ್ಣ ಸಂಸ್ಥೆಗಳು ಕಾರ್ಯಕ್ರಮ ನೀಡುವುದು ಕಷ್ಟ. ಸರ್ಕಾರಿ ಜಯಂತಿಗಳು ಹಾಗೂ ಅಕಾಡೆಮಿ, ಪ್ರಾಧಿಕಾರಗಳ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ದಿಢೀರ್ ಆಗಿ ಸರ್ಕಾರಿ ಕಾರ್ಯಕ್ರಮ ನಿಗದಿಯಾದಲ್ಲಿ ಸಂಘ–ಸಂಸ್ಥೆಗಳು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳನ್ನು ರದ್ದುಗೊಳಿಸಬೇಕಾಗುತ್ತದೆ. ಇದರಿಂದ ಸಮಸ್ಯೆಯಾಗುತ್ತಿದೆ’ ಎಂದು ಇಲ್ಲಿನ ಕಲಾವಿದರೊಬ್ಬರು ಬೇಸರ ವ್ಯಕ್ತಪಡಿಸಿದರು.

## ‘ರಂಗಮಂದಿರ ಪ್ರಾಧಿಕಾರ’ ನನೆಗುದಿಗೆ

ರಂಗಮಂದಿರಗಳ ಕೊರತೆ ಹಾಗೂ ರಂಗಭೂಮಿಯ ಸಮಸ್ಯೆಗಳನ್ನು ನೀಗಿಸಲು ಕರ್ನಾಟಕ ನಾಟಕ ಅಕಾಡೆಮಿ ಈ ಹಿಂದೆ ‘ರಂಗ ಮಂದಿರ ಪ್ರಾಧಿಕಾರ’ ರಚಿಸುವ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿತ್ತು. ನಾಡಿನ ರಂಗಕರ್ಮಿಗಳು ಹಾಗೂ ಸಾಂಸ್ಕೃತಿಕ ವಲಯದ ತಜ್ಞರ ಸಲಹೆಗಳನ್ನು ಪಡೆದಿದ್ದ ಅಕಾಡೆಮಿ, ಪ್ರಾಧಿಕಾರ ರಚನೆಗೆ ಸಂಬಂಧಿಸಿದ ರೂಪುರೇಷೆಗಳನ್ನೂ ಸಿದ್ಧಪಡಿಸಿತ್ತು.

ಪ್ರತಿ ತಾಲ್ಲೂಕಿನಲ್ಲಿ 300 ಆಸನಗಳ ವ್ಯವಸ್ಥೆಯ ಸುಸಜ್ಜಿತ ರಂಗಮಂದಿರ ನಿರ್ಮಾಣ ಮಾಡಬೇಕು ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿತ್ತು. ರಂಗ ಮಂದಿರದ ನೀಲ ನಕ್ಷೆಯನ್ನೂ ರಚಿಸಿ, ಪ್ರತಿ ರಂಗಮಂದಿರಕ್ಕೆ ₹ 1.6 ಕೋಟಿ ವೆಚ್ಚವಾಗಲಿದೆ ಎಂದೂ ಅಂದಾಜಿಸಲಾಗಿತ್ತು. ಅಕಾಡೆಮಿಯ ಈ ಹಿಂದಿನ ಅಧ್ಯಕ್ಷ ಜೆ. ಲೋಕೇಶ್ ಅವರು ಮೈತ್ರಿ ಸರ್ಕಾರ ಹಾಗೂ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಈ ಪ್ರಸ್ತಾವನೆ ನನೆಗುದಿಗೆ ಬಿದ್ದಿದೆ.


**ಗಣೇಶ ಚತುರ್ಥಿ** ಗಣೇಶ ಹಬ್ಬದ ಪ್ರಯುಕ್ತ ಗೋದಾಮುಗಳಿಂದ ಅಂಗಡಿಗಳಿಗೆ ಲಾರಿಯಲ್ಲಿ ಗಣೇಶ ಮೂರ್ತಿಗಳನ್ನು ಸಾಗಿಸುತ್ತಿರುವಾಗ ನಗರದ ಆರ್.ವಿ.ರಸ್ತೆಯಲ್ಲಿ ಮಂಗಳವಾರ ಮಕ್ಕಳು ಕುತೂಹಲದಿಂದ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

### ಕಾರ್ಯಕ್ರಮಗಳ ಅನುಮತಿಗೆ ಏಕಗವಾಕ್ಷಿ: ಬಿಬಿಎಂಪಿ

# ಪಿಒಪಿ ಗಣೇಶ: ಕ್ರಿಮಿನಲ್ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಸಾಯನಿಕ ಬಣ್ಣ, ಥರ್ಮಕೋಲ್, ಪ್ಲಾಸ್ಟರ್ ಆಫ್ ಪ್ಯಾರಿಸ್ ವಸ್ತುಗಳಿಂದ ಗಣೇಶ ಮೂರ್ತಿ ತಯಾರಿಸುವವರಿಗೆ ದಂಡ ವಿಧಿಸಿ, ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

ಪಿಒಪಿ ಗಣೇಶ ಮೂರ್ತಿಗಳನ್ನು ತಯಾರಿಸುವ ಹಾಗೂ ಮಾರಾಟ ಮಾಡುವ ಪ್ರದೇಶಗಳಲ್ಲಿ ಅಧಿಕಾರಿಗಳು ತಪಾಸಣೆ ಮಾಡಬೇಕು. ಪೊಲೀಸ್, ಅಗ್ನಿಶಾಮಕ, ಬೆಸ್ಕಾಂ ಅಧಿಕಾರಿಗಳು ನೋಟಿಸ್ ನೀಡಬೇಕು. ಅವರ ಮೇಲೆ ಕಾನೂನು ಪ್ರಕಾರ ಮೊಕದ್ದಮೆ ದಾಖಲಿಸಬೇಕು. ಪಿಒಪಿ ಸೇರಿದಂತೆ ನಿಷೇಧಿತ ವಸ್ತುಗಳಿಂದ ನಿರ್ಮಿಸಲಾಗಿರುವ ಮೂರ್ತಿಗಳನ್ನು ನಿಯಮಾನುಸಾರ ವಿಲೇವಾರಿ ಮಾಡಬೇಕು ಎಂದು ಸೂಚಿಸಿದ್ದಾರೆ.

ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ನಾಗರಿಕರಲ್ಲಿ ಅರಿವು ಮೂಡಿಸಬೇಕು. ಪಿಒಪಿ ಗಣೇಶ ಮೂರ್ತಿ ಪ್ರತಿಷ್ಠಾಪಿಸದಂತೆ, ಪ್ಲಾಸ್ಟಿಕ್ ಕವರ್ ಬಳಸದಂತೆ ಹಾಗೂ ಫ್ಲೆಕ್ಸ್ ಹಾಕದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಪರಿಸರಸ್ನೇಹಿ ಗಣೇಶ ಮೂರ್ತಿಗಳ ವಿಸರ್ಜನೆಗೆ ನಾಗರಿಕರು ಮನೆಗಳಲ್ಲೇ ಬಕೆಟ್‌ಗಳನ್ನು ಬಳಸಿ, ಮಣ್ಣನ್ನು ಕೈತೋಟಗಳಿಗೆ ಬಳಸಬೇಕು. ದೊಡ್ಡ ಗಾತ್ರದ ಮೂರ್ತಿಗಳ ವಿಸರ್ಜನೆಗೆ ಸ್ಥಳಗಳನ್ನು ಪಾಲಿಕೆ ಗುರುತಿಸಿದೆ. ವಾರ್ಡ್ ಮಟ್ಟದಲ್ಲಿ ಆಯಾ ಸ್ಥಳದಲ್ಲೇ ವಿಸರ್ಜನೆ ಮಾಡಬೇಕು. ಮಾಲಿನ್ಯ ತಡೆಯಲು ತಾತ್ಕಾಲಿಕ ವಿಸರ್ಜನೆ ಸ್ಥಳಗಳನ್ನು ಸ್ಥಾಪಿಸಲಾಗುತ್ತದೆ. ಮಣ್ಣು, ಹೂ ಸೇರಿದಂತೆ ಸಂಗ್ರಹವಾಗುವ ತ್ಯಾಜ್ಯವನ್ನು ವಿಂಗಡಿಸಿ ರವಾನಿಸಲಾಗುತ್ತದೆ. ಪ್ಲಾಸ್ಟಿಕ್ ನಿಷೇಧ ಇರುವುದರಿಂದ ಯಾವುದೇ ರೀತಿಯ ಪ್ಲಾಸ್ಟಿಕ್ ಅಥವಾ ಬಳಕೆ ಕಂಡು ಬಂದರೆ ನಿಯಮಾನುಸಾರ ದಂಡ ವಿಧಿಸಲು ಆದೇಶಿಸಿದ್ದಾರೆ.

**ಏಕಗವಾಕ್ಷಿ:** ಗಣೇಶ ಹಬ್ಬದ ನಿಮಿತ್ತ ಉಪ ವಿಭಾಗ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಸಾರ್ವಜನಿಕವಾಗಿ ಮೂರ್ತಿಗಳ ಪ್ರತಿಷ್ಠಾಪನೆ ಹಾಗೂ ಕಾರ್ಯಕ್ರಮ ಆಯೋಜಿಸುವ ಸಂಬಂಧ, ಬಿಬಿಎಂಪಿ, ಬೆಸ್ಕಾಂ, ಪೊಲೀಸ್ ಹಾಗೂ ಅಗ್ನಿಶಾಮಕ ಇಲಾಖೆಗಳನ್ನು ಒಳಗೊಂಡಂತೆ 63 ಉಪ ವಿಭಾಗಗಳಲ್ಲಿ ಏಕಗವಾಕ್ಷಿ ಕೇಂದ್ರಗಳ ಮೂಲಕ ಪೂರ್ವಾನುಮತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಗಣೇಶ ಮೂರ್ತಿ ಪ್ರತಿಷ್ಠಾಪಿಸುವವರು ಅಗತ್ಯ ದಾಖಲೆಗಳನ್ನು ಅರ್ಜಿಯೊಂದಿಗೆ ಒದಗಿಸಿ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕಿ ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. ಸ್ಥಳವನ್ನು ಅಧಿಕಾರಿಗಳು ಖುದ್ದಾಗಿ ಪರಿಶೀಲಿಸಿ, ಗಣೇಶ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಅನುಮತಿ ನೀಡುವ ಕುರಿತಂತೆ ಯಾವುದೇ ರೀತಿಯ ನ್ಯೂನತೆಗಳಾಗದಂತೆ ಮೇಲುಸ್ತುವಾರಿ ವಹಿಸಲು ನೋಡಲ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

## ಭದ್ರತೆ ಹೆಚ್ಚಳ

**ಬೆಂಗಳೂರು:** ಗಣೇಶ ಹಬ್ಬವು ಆಗಸ್ಟ್ 31ರಂದು ನಡೆಯುತ್ತಿದ್ದು ರಾಜಧಾನಿಯಲ್ಲಿ ಭದ್ರತೆ ಹೆಚ್ಚಳಕ್ಕೆ ಪೊಲೀಸ್ ಇಲಾಖೆ ಮುಂದಾಗಿದೆ. ತಮ್ಮ ವ್ಯಾಪ್ತಿಯಲ್ಲಿ ಪೊಲೀಸ್ ಠಾಣೆಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಎಲ್ಲ ಇನ್‌ಸ್ಪೆಕ್ಟರ್‌ಗಳಿಗೆ ಗೃಹ ಇಲಾಖೆಯು ಸೂಚನೆ ನೀಡಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು ಹಾಗೂ ಗಸ್ತು ಹೆಚ್ಚಿಸುವಂತೆಯೂ ತಿಳಿಸಲಾಗಿದೆ.

### ಸುಸ್ಥಿರ ಅಭಿವೃದ್ಧಿ ಕೇಂದ್ರದ ‘ಪರಿಸರ ವರದಿ’ಯಲ್ಲಿ ಉಲ್ಲೇಖ

# ಟ್ರಾಫಿಕ್, ವಾಯುಮಾಲಿನ್ಯ ಸಮಸ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ವಾಯುಮಾಲಿನ್ಯ ಹಾಗೂ ಸಂಚಾರ ದಟ್ಟಣೆ ಸಮಸ್ಯೆ 2012ಕ್ಕೆ ಹೋಲಿಸಿದರೆ ಈಗ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎನ್ನುವುದು ಸುಸ್ಥಿರ ಅಭಿವೃದ್ಧಿ ಕೇಂದ್ರದ ‘ಪರಿಸರ ವರದಿ’ಯಿಂದ ತಿಳಿದುಬಂದಿದೆ.

ಕೇಂದ್ರವು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ವಿಜಯ್ ಮೋಹನ್ ರಾಜ್ ಅವರು ಈ ವರದಿ ಬಿಡುಗಡೆ ಮಾಡಿದರು. ಕೇಂದ್ರದ ಅಧ್ಯಕ್ಷ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಎ. ರವೀಂದ್ರ ಇದ್ದರು.

ನಗರವನ್ನು ಕೇಂದ್ರವಾಗಿರಿಸಿಕೊಂಡು 2005, 2012ರಲ್ಲಿ ಕೇಂದ್ರವು ಸಮೀಕ್ಷೆ ನಡೆಸಿತ್ತು. 2021ರಲ್ಲಿ ಮೂರನೇಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಗೆ ನಗರದ 2,244 ಮನೆಗಳು ಒಳಪಟ್ಟಿದ್ದವು. ಸಮೀಕ್ಷೆಯ ವರದಿಯನ್ನು ಕೇಂದ್ರವು ಸರ್ಕಾರಕ್ಕೆ ಸಲ್ಲಿಸಿದೆ.

ನಗರದಲ್ಲಿ 2019ರ ಮಾರ್ಚ್ ವೇಳೆಗೆ 80.5 ಲಕ್ಷ ವಾಹನಗಳಿದ್ದವು. 1976ರ ವೇಳೆಗೆ ಈ ಸಂಖ್ಯೆ ಲಕ್ಷದ ಗಡಿಯೊಳಗಿತ್ತು. ವಾಹನಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಇರುವ ವಾಹನಗಳಲ್ಲಿ ಶೇ 69.2 ರಷ್ಟು ದ್ವಿಚಕ್ರವಾಹನಗಳಾಗಿವೆ. ಶೇ 19ರಷ್ಟು ನಾಲ್ಕು ಚಕ್ರಗಳ ವಾಹನಗಳಾಗಿವೆ. ದ್ವಿಚಕ್ರ ವಾಹನಗಳ ಬಳಕೆದಾರರ ಸಂಖ್ಯೆ ಇಳಿಕೆಗೆ ಹಾಗೂ ಸಾರ್ವಜನಿಕ ಸಾರಿಗೆ ಬಳಕೆದಾರರ ಸಂಖ್ಯೆ ಏರಿಕೆಗೆ ಕಾರ್ಯತಂತ್ರ ರೂಪಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

> **ನಗರವು ಮೊದಲು ನಿವೃತ್ತರ ಸ್ವರ್ಗವಾಗಿತ್ತು. ಈಗ ಜಾಗತಿಕ ಮಟ್ಟದಲ್ಲಿ ಬೆಳೆದಿದೆ. ಆದರೆ, ರಸ್ತೆ ಪಕ್ಕದಲ್ಲಿನ ಗಿಡ–ಮರಗಳು ಮಾಯವಾಗುತ್ತಿವೆ. ಪರಿಸರ ಸಂರಕ್ಷಣೆ ಪರಿಸರ ದಿನಕ್ಕೆ ಸೀಮಿತವಾಗಬಾರದು.**
> **ವಿಜಯ್ ಮೋಹನ್ ರಾಜ್,** ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ

ನಮ್ಮ ಮೆಟ್ರೊ ಸೇವೆಯ ಬಗ್ಗೆ ಜನರು ತೃಪ್ತಿ ಹೊಂದಿದ್ದಾರೆ. ಆದರೆ. ಈ ಸೇವೆಯನ್ನು ಬಳಸುವವರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ. ಈ ಸೇವೆಗೆ ವೇಗ ನೀಡಿ, ಬಳಕೆದಾರರ ಪ್ರಮಾಣ ಹೆಚ್ಚಳ ಮಾಡಬೇಕು. ನಗರದ ಕೇಂದ್ರ ಸ್ಥಳಗಳಲ್ಲಿ ಕಚೇರಿಗಳು ಇರುವುದರಿಂದಲೂ ವಾಹನ ದಟ್ಟಣೆ ಉಂಟಾಗುತ್ತಿದೆ ಎಂದು ಉಲ್ಲೇಖಿಸಲಾಗಿದೆ.

ಬೆಂಗಳೂರು ದಕ್ಷಿಣ, ಪೂರ್ವ, ಬೊಮ್ಮನಹಳ್ಳಿ, ಆರ್.ಆರ್.ನಗರ ಮತ್ತು ಯಲಹಂಕ ವಲಯದ ನಿವಾಸಿಗಳು ಪೆಟ್ರೋಲ್‌ಗಿಂತ ಡೀಸೆಲ್‌ನ ನಾಲ್ಕು ಚಕ್ರಗಳ ವಾಹನಗಳನ್ನು ಹೆಚ್ಚಾಗಿ ಹೊಂದಿದ್ದಾರೆ. ಇದು ಕೂಡ ಮಾಲಿನ್ಯ ಪ್ರಮಾಣದ ಏರಿಕೆಗೆ ಕಾರಣವಾಗಿದೆ. ಸಮೀಕ್ಷೆ ಒಳಪಟ್ಟ ಪೂರ್ವ ವಲಯದ ನಿವಾಸಿಗಳಲ್ಲಿ ಶೇ 54 ರಷ್ಟು ಮಂದಿ ಬಸ್‌ಗಳ ಮೂಲಕವೇ ನಗರದಾದ್ಯಂತ ಸಂಚರಿಸುತ್ತಾರೆ. ದಾಸರಹಳ್ಳಿಯಲ್ಲಿ ಬಹುತೇಕ ನಿವಾಸಿಗಳಿಗೆ ಅರ್ಧ ಕಿ.ಮೀ. ದೂರದಲ್ಲಿಯೇ ಬಸ್ ನಿಲ್ದಾಣಗಳಿವೆ. ಆದರೆ, ಶೇ 87 ರಷ್ಟು ಮಂದಿ ಖಾಸಗಿ ವಾಹನಗಳನ್ನೇ ಅವಲಂಬಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.


ವಿಜಯ್ ಮೋಹನ್ ರಾಜ್ ಅವರು ‘ಪರಿಸರ ವರದಿ’ ಬಿಡುಗಡೆ ಮಾಡಿದರು. ಸಂಸ್ಥೆಯ ಅಧ್ಯಕ್ಷ ಎ. ರವೀಂದ್ರ ಇದ್ದಾರೆ –ಪ್ರಜಾವಾಣಿ ಚಿತ್ರ

## ಸಂಚಾರ ದಟ್ಟಣೆಯಿಂದ ಮಾಲಿನ್ಯ

ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಯಿಂದ ವಾಯು ಹಾಗೂ ಶಬ್ದ ಮಾಲಿನ್ಯದ ಪ್ರಮಾಣ ಏರಿಕೆಯಾಗುತ್ತಿದೆ. ಇನ್ನೊಂದೆಡೆ ಜನಸಂಖ್ಯೆ ಹೆಚ್ಚಳವಾಗುತ್ತಿದ್ದು, ಗಿಡ–ಮರಗಳ ಪ್ರದೇಶ ಕಡಿಮೆಯಾಗುತ್ತಿದೆ. ಕಟ್ಟಡಗಳ ನಿರ್ಮಾಣದಿಂದ ಹೊರಮೊಮ್ಮುವ ದೂಳು, ವಾಹನಗಳು ಹಾಗೂ ಕೈಗಾರಿಕೆಗಳು ಹೊರಸೂಸುವ ಹೊಗೆಯಿಂದ ಗಾಳಿಯ ಗುಣಮಟ್ಟ ಕೆಡುತ್ತಿದೆ. ಡಿಸೇಲ್ ವಾಹನಗಳ ಹೆಚ್ಚಳದಿಂದ ವಾಯು ಮಾಲಿನ್ಯ ಅಧಿಕಗೊಳ್ಳುತ್ತಿದೆ. ಹೆಚ್ಚಿನ ಕೈಗಾರಿಕೆಗಳಿರುವ ಪೀಣ್ಯ ಕೈಗಾರಿಕಾ ಪ್ರದೇಶದ ಸುತ್ತಮುತ್ತ ಗಾಳಿಯ ಗುಣಮಟ್ಟ ಕಳಪೆಯಾಗುತ್ತಿದೆ ಎಂದು ತಿಳಿಸಲಾಗಿದೆ.

## ಟ್ವಿಟರ್: ನಿಯಮ ಉಲ್ಲಂಘನೆ– ದೂರು

**ವಾಷಿಂಗ್ಟನ್ (ಎಪಿ):** ‘ಟ್ವಿಟರ್ ಸಂಸ್ಥೆಯು ಸೈಬರ್ ಸುರಕ್ಷತಾ ಕ್ರಮಗಳು ಹಾಗೂ ನಕಲಿ ಖಾತೆ ನಿರ್ವಹಣೆ ವಿಚಾರದಲ್ಲಿ ತಾನು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ನಿಯಂತ್ರಕರಿಗೆ ತಪ್ಪು ಮಾಹಿತಿ ನೀಡಿ ಅವುಗಳ ದಾರಿ ತಪ್ಪಿಸಿದೆ’ ಎಂದು ಟ್ವಿಟರ್‌ನ ಭದ್ರತಾ ವಿಭಾಗದ ಮಾಜಿ ಮುಖ್ಯಸ್ಥ ಪೀಟರ್ ಜಾಟ್ಕೊ ಆರೋಪಿಸಿದ್ದಾರೆ.

ಈ ಸಂಬಂಧ ಪೀಟರ್ ಅವರು-ಅಮೆರಿಕದ ಭದ್ರತಾ ಮತ್ತು ಷೇರು ವಿನಿಮಯ ಆಯೋಗ, ಫೆಡರಲ್ ಟ್ರೇಡ್ ಕಮಿಷನ್ (ಎಫ್‌ಟಿಸಿ) ಮತ್ತು ನ್ಯಾಯಾಂಗ ಇಲಾಖೆಗೆ ಹೋದ ತಿಂಗಳು ದೂರು ನೀಡಿದ್ದಾರೆ ಎಂದು ವಾಷಿಂಗ್ಟನ್ ಪೋಸ್ಟ್ ಹಾಗೂ ಸಿಎನ್‌ಎನ್ ಸುದ್ದಿಸಂಸ್ಥೆಗಳು ವರದಿ ಮಾಡಿವೆ.

ಸುರಕ್ಷತೆಗೆ ಸಂಬಂಧಿಸಿದಂತೆ ತಾನು ಪ್ರಬಲ ಕ್ರಮಗಳನ್ನು ಅನುಸರಿಸುತ್ತಿರುವುದಾಗಿ ಹೇಳಿರುವ ಟ್ವಿಟರ್ ಸಂಸ್ಥೆಯು, ಆ ಮೂಲಕ ಎಫ್‌ಟಿಸಿಯ ನಿಯಮಗಳನ್ನು ಉಲ್ಲಂಘಿಸಿದೆ ಎಂಬ ಆರೋಪವನ್ನೂ ಪೀಟರ್ ಮಾಡಿದ್ದಾರೆ. ಟ್ವಿಟರ್ ಎದುರಿಸುತ್ತಿರುವ ಈ ಸಮಸ್ಯೆಗಳನ್ನು ಮನಗಂಡ ಎಲಾನ್ ಮಸ್ಕ್ ಸಂಸ್ಥೆಯನ್ನು ಖರೀದಿಸುವ ಪ್ರಕ್ರಿಯೆಯಿಂದ ಹಿಂದೆ ಸರಿದರು ಎಂದೂ ಪೀಟರ್ ದೂರಿದ್ದಾರೆ.

# ಪಾದಚಾರಿ ಮಾರ್ಗ ಅತಿಕ್ರಮಣಕ್ಕೆ ದಂಡ

**ಬೆಂಗಳೂರು:** ಪಾದಚಾರಿ ಮಾರ್ಗದಲ್ಲಿ ತಳ್ಳುಗಾಡಿ ಹಾಗೂ ಅಂಗಡಿ ಹಾಕಿಕೊಂಡಿದ್ದ ಹಲವರಿಗೆ ಪಶ್ಚಿಮ ವಿಭಾಗದ ಸಂಚಾರ ಪೊಲೀಸರು ದಂಡ ವಿಧಿಸಿದ್ದಾರೆ.

ಪಾದಚಾರಿ ಮಾರ್ಗ ಅತಿಕ್ರಮಿಸಿ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟು ಮಾಡುತ್ತಿದ್ದರು. ಎರಡಕ್ಕಿಂತ ಹೆಚ್ಚು ಬಾರಿ ನಿಯಮ ಉಲ್ಲಂಘಿಸಿದ ನಾಲ್ವರಿಗೆ ದಂಡ ಹಾಕಲಾಗಿದೆ. ಜತೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದುಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದ್ದಾರೆ.

ಚಿಕ್ಕಪೇಟೆಯ ಎಚ್.ಎಸ್.ಲೋಕೇಶ್‌ಗೆ ₹ 1 ಲಕ್ಷ ಸ್ವತ್ತಿನ ಬಾಂಡ್, ವಾಜಿದ್ ಪಾಷಾಗೂ ₹ 1 ಲಕ್ಷ ಬಾಂಡ್ ಹಾಗೂ ಮಾಗಡಿ ರಸ್ತೆಯ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರಕಾಶ್‌ಗೆ ₹ 50 ಸಾವಿರ ಮೌಲ್ಯದ ವಾಹನ ಮುಟ್ಟುಗೋಲು ಹಾಕಿಕೊಳ್ಳುವ ಷರತ್ತುಬದ್ಧ ಮುಚ್ಚಳಿಕೆ ಮೇಲೆ ಬಿಡುಗಡೆ ಮಾಡಲಾಗಿದೆ. ಜಯನಗರದ ರಮೇಶ್‌ಕುಮಾರ್‌ಗೂ ₹ 50 ಸಾವಿರ ದಂಡದ ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

## ಮತದಾರರ ಕರಡು ಪಟ್ಟಿ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚನೆ

**ಬೆಂಗಳೂರು:** ಮತದಾರರ ಪಟ್ಟಿಯ ಕರಡನ್ನು ಅಂತಿಮ ಗೊಳಿಸಿ, ಪಾಲಿಕೆಯ ಅಂತರ್ಜಾಲ ತಾಣದ ಜತೆಗೆ ನೋಂದಾಯಿತ ರಾಜಕೀಯ ಪಕ್ಷಗಳು ಹಾಗೂ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳಿಗೆ ನೀಡುವಂತೆ ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಕರಡು ಪ್ರಕಟಿಸುವುದಕ್ಕೂ ಮುನ್ನ ಕಂದಾಯ ಅಧಿಕಾರಿ, ಸಹಾಯಕ ಕಂದಾಯ ಅಧಿಕಾರಿಗಳ ಜತೆ ಸಭೆ ನಡೆಸಿ ಸಮಸ್ಯೆ ಆಗದಂತೆ ಮತದಾರರ ಪಟ್ಟಿಯ ಕರಡನ್ನು ಅಂತಿಮಗೊಳಿಸಬೇಕು. ಆ.25 ರಂದು ಮತದಾರರ ಪಟ್ಟಿಯ ಕರಡು ಪ್ರಕಟಗೊಳಿಸಬೇಕಿದ್ದು, ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಂಡು ನಿಗದಿತ ವೇಳೆಗೆ ಪ್ರಕಟಿಸಲು ಹೇಳಿದರು. ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್ (ಕಸ ಸುರಿಯುವ ಸ್ಥಳ) ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ಸಂಬಂಧ ಮಾರ್ಷಲ್‌ಗಳು ರಾತ್ರಿ ವೇಳೆ ಗಸ್ತು ತಿರುಗಿ ರಸ್ತೆ ಬದಿ ಕಸ ಬಿಸಾಡುವವರಿಗೆ ದಂಡ ವಿಧಿಸಿ ಮತ್ತೊಮ್ಮೆ ರಸ್ತೆ ಬದಿ ಎಸೆಯದಂತೆ ಎಚ್ಚರಿಕೆ ನೀಡಬೇಕು. ಈ ಪೈಕಿ ಮೈಕ್ರೋ ಪ್ಲಾನ್ ಮಾಡಿಕೊಂಡು ಕಾರ್ಯನಿರ್ವಹಿಸಲು ಘನತ್ಯಾಜ್ಯ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆಯ ಸಹಾಯ ತಂತ್ರಾಂಶದಲ್ಲಿ ಬರುವ ದೂರುಗಳನ್ನು ತ್ವರಿತವಾಗಿ ಬಗೆಹರಿಸಲು ಮುಖ್ಯ ಆಯುಕ್ತರು ಸೂಚನೆ ನೀಡಿದರು. ನಗರದಲ್ಲಿ ರಸ್ತೆ ಬದಿ, ಪಾದಚಾರಿ ಮಾರ್ಗಗಳಲ್ಲಿ ಕಟ್ಟಡ/ ಕಾಮಗಾರಿ ನಿರ್ಮಾಣ ಸಾಮಗ್ರಿಗಳು ಇರುವುದರಿಂದ ಸಾರ್ವಜನಿಕರಿಗೆ ಸಾಕಷ್ಟು ಸಮಸ್ಯೆ ಆಗಲಿದೆ. ಆದ್ದರಿಂದ ಆಯಾ ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ ಕಟ್ಟಡ/ಕಾಮಗಾರಿ ನಿರ್ಮಾಣ ಸಾಮಗ್ರಿಗಳನ್ನು ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಪ್ರಮುಖ ರಸ್ತೆಗಳ ಬೀದಿ ಬದಿಗಳಲ್ಲಿ ವ್ಯಾಪಾರ ಮಾಡಲು ಅವಕಾಶ ನೀಡುವಂತಿಲ್ಲ. ಈ ಸಂಬಂಧ ಪಾದಚಾರಿ ಮಾರ್ಗಗಳಲ್ಲಿ ಶಾಶ್ವತ ಕಟ್ಟಡಗಳನ್ನು ನಿರ್ಮಿಸಿದ್ದರೆ ತೆರವುಗೊಳಿಸಬೇಕು ಎಂದರು. ವಲಯ ಆಯುಕ್ತ ಜಯರಾಮ ರಾಯಪುರ, ಜಂಟಿಆಯುಕ್ತ ಜಗದೀಶ್ ನಾಯಕ್, ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣಾ, ಉಪ ಆಯುಕ್ತ ಲಕ್ಷ್ಮೀದೇವಿ ಇದ್ದರು.

## ಬಿಬಿಎಂಪಿ ಚುನಾವಣೆ: ಬಿಜೆಪಿ ಸಭೆ


**ಬೆಂಗಳೂರು:** ಬಿಬಿಎಂಪಿ ಚುನಾವಣೆಯಲ್ಲಿ 160 ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಕಾರ್ಯತಂತ್ರದ ಕುರಿತು ಚರ್ಚಿಸಲಾಯಿತು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣ್ ಹೇಳಿದ್ದಾರೆ.

ಬೆಂಗಳೂರು ಉತ್ತರ, ದಕ್ಷಿಣ ಮತ್ತು ಬೆಂಗಳೂರು ಕೇಂದ್ರದ ಜಿಲ್ಲಾ ಪದಾಧಿಕಾರಿಗಳು, ಮಂಡಲ ಪದಾಧಿಕಾರಿಗಳು ಹಾಗೂ ಬೆಂಗಳೂರು ಮಹಾನಗರ ವ್ಯಾಪ್ತಿಯ ಪದಾಧಿಕಾರಿಗಳ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಸರ್ಕಾರದ ಸಾಧನೆ, ಅಭಿವೃದ್ಧಿ ಮತ್ತು ಸಂಘಟನಾತ್ಮಕವಾಗಿ ಬಿಬಿಎಂಪಿ ಚುನಾವಣೆಯನ್ನು ಎದುರಿ ಸಲು ಸಭೆಯಲ್ಲಿ ನಿರ್ಧರಿಸಲಾಗಿದೆ.ಕಾಂಗ್ರೆಸ್‌ನ ಜನವಿರೋಧಿ ನೀತಿ ಯಿಂದ ನಗರದಲ್ಲಿ ಅಭಿವೃದ್ಧಿ ಕುಂಠಿತ ವಾಗಿತ್ತು, ಬಿಜೆಪಿ ಅದನ್ನು ಸರಿಪಡಿಸಿದೆ ಎಂಬುದನ್ನು ಜನರಿಗೆ ತಿಳಿಸಲಾಗುವುದು. ಸರ್ಕಾರದಿಂದ ವಿವಿಧ ನಿಗಮ, ಮಂಡಳಿ ಮತ್ತು ಪ್ರಾಧಿಕಾರಕ್ಕೆ ನೇಮಕ ವಿಚಾರ ಕಾರ್ಯಕರ್ತರನ್ನು ನೇಮಕ ಮಾಡಬೇಕು ಎಂಬ ಚರ್ಚೆ ನಡೆದಿದ್ದು, ಈ ಬಗ್ಗೆ ಸರ್ಕಾರ ಸೂಕ್ತ ಸಂದರ್ಭದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದೆ ಎಂದು ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ರಾಜೇಶ್.ಜಿ.ವಿ ಹೇಳಿದ್ದಾಗಿ ಅಶ್ವತ್ಥನಾರಾಯಣ್ ತಿಳಿಸಿದರು.

ಸೆಪ್ಟೆಂಬರ್ 8 ರಂದು ದೊಡ್ಡಬಳ್ಳಾಪುರದಲ್ಲಿ ನಡೆಯುವ ಜನೋತ್ಸವವನ್ನು ಯಶಸ್ವಿಗೊಳಿಸಲು ಸಭೆಯಲ್ಲಿ ಚರ್ಚಿಸಲಾಯಿತು. ಅಲ್ಲದೆ, ಸೆ.11 ರಂದು ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ಬೆಂಗಳೂರಿನಲ್ಲಿ ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗುವುದು ಎಂದರು.





ಯುವತಿಗೆ ಅಮಲು ಪದಾರ್ಥ ನೀಡಿದ್ದ 'ನಕಲಿ ಸ್ವಾಮೀಜಿ'

# ದೈವಭಕ್ತಿ ದುರ್ಬಳಕೆ: ಅತ್ಯಾಚಾರ

ಪ್ರಜಾವಾಣಿ ವಾರ್ತೆ



ಆನಂದಮೂರ್ತಿ

ಬೆಂಗಳೂರು: 'ಜೀವಕ್ಕೆ ಅಪಾಯವಿದೆ' ಎಂದು ಹೇಳಿ ಯುವತಿಯನ್ನು ನಂಬಿಸಿ ಆಕೆಯ ಮೇಲೆ ನಿರಂತರ ಅತ್ಯಾಚಾರ ಎಸಗಿದ್ದ ಸ್ವಯಂ ಘೋಷಿತ ಸ್ವಾಮೀಜಿ ಆನಂದಮೂರ್ತಿ ಹಾಗೂ ಕೃತ್ಯಕ್ಕೆ ಕುಮ್ಮಕ್ಕು ನೀಡಿದ ಆತನ ಪತ್ನಿ ಲತಾ ವಿರುದ್ಧ ಕೆ.ಆರ್. ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'19 ವರ್ಷದ ಯುವತಿಗಿದ್ದ ದೈವ ಭಕ್ತಿಯನ್ನೇ ದುರ್ಬಳಕೆ ಮಾಡಿಕೊಂಡಿದ್ದ ಆರೋಪಿ, ಆಕೆಗೆ ದೋಷವಿದ್ದು ಪೂಜೆಯ ಮೂಲಕ ದೋಷ ನಿವಾರಿಸುತ್ತೇನೆ ಎಂದು ನಂಬಿಸಿ ಅತ್ಯಾಚಾರ ಎಸಗಿದ್ದಾನೆ ಎಂಬ ದೂರು ಬಂದಿದೆ. ತಾನು ಸ್ವಾಮೀಜಿ ಎಂದು ಸುಳ್ಳು ಹೇಳಿ ಆಕೆಗೆ ನಂಬಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಂತ್ರಸ್ತೆಯು, ಸ್ನೇಹಿತರೊಬ್ಬರ ಮನೆಯಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮಕ್ಕೆ ತೆರಳಿದ್ದ ವೇಳೆ ಆನಂದಮೂರ್ತಿಯ ಪರಿಚಯವಾಗಿತ್ತು. ಜೀವಕ್ಕೆ ತೊಂದರೆಯಿದ್ದು, ಅದನ್ನು ಸರಿಪಡಿಸುವುದಾಗಿ ಹೇಳಿ ನಂಬಿಸಿದ್ದ. ಕೆ.ಆರ್.ಪುರದ ಆತನ ಮನೆಗೆ ಕರೆಸಿಕೊಂಡು ಪೂಜೆ ಸಹ ನೆರವೇರಿಸಿದ್ದ. ಕುಡಿಯಲು ಪಾನೀಯ ನೀಡಿ ಅದರಲ್ಲಿ ಅಮಲು ಪದಾರ್ಥ ಬೆರೆಸಿ, ವಿವಸ್ತ್ರಗೊಳಿಸಿ ಅತ್ಯಾಚಾರ ಎಸಗಿದ್ದ. ಅದಕ್ಕೆ ಆತನ ಪತ್ನಿ ಲತಾ ಸಹಕಾರ ನೀಡಿದ್ದಳು. ಲತಾ ವಿಡಿಯೊ ಚಿತ್ರೀಕರಿಸಿದ್ದಳು. ಆಘಾತಕ್ಕೆ ಒಳಗಾದ ಸಂತ್ರಸ್ತೆ ಯಾರಿಗೂ ವಿಷಯ ತಿಳಿಸಿರಲಿಲ್ಲ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಚಿತ್ರೀಕರಿಸಿದ್ದ ವಿಡಿಯೊ ತೋರಿಸಿ ಪೊಲೀಸರಿಗೆ ಹಾಗೂ ಕುಟುಂಬಸ್ಥರಿಗೆ ವಿಷಯ ತಿಳಿಸದಂತೆ ಬೆದರಿಕೆ ಹಾಕಿದ್ದ. ದೂರು ನೀಡಿದರೆ ಕುಟುಂಬವನ್ನೇ ನಾಶ ಪಡಿಸುತ್ತೇನೆ ಎಂದು ಹೇಳಿದ್ದ. ಆರೋಪಿ ಇನ್ನಿಬ್ಬರ ಮೇಲೂ ಅತ್ಯಾಚಾರ ಎಸಗಿರುವ ದೂರು ಬಂದಿದೆ. ಪ್ರಕರಣ ತನಿಖೆ ನಡೆಯುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.'ಸಂತ್ರಸ್ತೆಯ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನೂ ಸುಲಿಗೆ ಮಾಡಿದ್ದಾನೆ' ಎಂದು ಪೋಷಕರು ದೂರಿದ್ದಾರೆ.

**ನಿಶ್ಚಿತಾರ್ಥವೂ ರದ್ದು:** 'ಸಂತ್ರಸ್ತೆಗೆ ನಿಶ್ಚಿತಾರ್ಥ ಮಾಡಲು ಕುಟುಂಬಸ್ಥರು ಸಿದ್ಧತೆ ಕೈಗೊಂಡಿದ್ದರು. ಈ ವಿಷಯ ತಿಳಿದ ಆರೋಪಿ ಹುಡುಗನ ಭೇಟಿ ಮಾಡಿ, ಆಕೆಯ ಅಶ್ಲೀಲ ವಿಡಿಯೊ ಹಾಗೂ ಫೋಟೊ ತೋರಿಸಿ ನಿಶ್ಚಿತಾರ್ಥವನ್ನು ರದ್ದು ಪಡಿಸಿದ್ದಾನೆ' ಎಂದು ಪೋಷಕರು ಅಳಲು ತೋಡಿಕೊಂಡಿದ್ದಾರೆ.

## ರಾಜ್ಯದ ವಿವಿಧೆಡೆ ಎರಡು ದಿನ ಮಳೆ

ಬೆಂಗಳೂರು: ಕರಾವಳಿಯ ಬಹುತೇಕ ಕಡೆ ಬುಧವಾರ ಹಾಗೂ ಗುರುವಾರ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಹಲವು ಕಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಯ ಒಂದೆರಡು ಕಡೆ ಎರಡು ದಿನಗಳು ಭಾರಿ ಮಳೆಯಾಗಲಿದೆ. ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 40 ಕಿ.ಮೀ. ಇಂದ 50 ಕಿ.ಮೀ. ಇರಲಿದೆ. ಈ ವೇಗ 60 ಕಿ.ಮೀ. ವರೆಗೂ ತಲುಪುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡಕವಿದ ವಾತಾವರಣ ಇರಲಿದ್ದು, ಕೆಲವೊಮ್ಮೆ ಮಳೆಯಾಗುವ ಸಾಧ್ಯತೆಯಿದೆ ಎಂದಿದೆ.



## ನೃತ್ಯರೂಪಕ

ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ರಾಜು ಕ್ಷತ್ರಿಯ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೀಣಾಮೂರ್ತಿ ವಿಜಯ್ ನಿರ್ದೇಶನದಲ್ಲಿ ಕಲಾವಿದರು 'ಅಲ್ಲೂರಿ ಸೀತಾರಾಮರಾಜು' ನೃತ್ಯ ರೂಪಕ ಪ್ರದರ್ಶನ ನೀಡಿದರು
–ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

# ಸಾಲ ವಾಪಸ್ ಕೇಳಿದ್ದಕ್ಕೆ ಕೊಲೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ವಾಪಸ್ ಕೇಳಲು ತೆರಳಿದಾಗ ನಡೆದ ಗಲಾಟೆಯಲ್ಲಿ ಕ್ರಿಕೆಟ್ ಬ್ಯಾಟ್‌ನಿಂದ ಹೊಡೆದು ವೆಂಕಟೇಶಪ್ಪ ಎಂಬುವವರನ್ನು ಕೊಲೆ ಮಾಡಿರುವ ಘಟನೆ ಮಾರತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮುನೇಕೊಳಲು ಬಳಿ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದೆ.

ಬಾಗೂರಿನ ಶಿವಪ್ಪ ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. 'ಮೃತ ವೆಂಕಟೇಶಪ್ಪ ಅವರು ಹೊಸಕೋಟೆಯ ನಂಜುಂಡರೆಡ್ಡಿ ಹಾಗೂ ಪ್ರಕಾಶ ಅವರಿಂದ ಶಿವಪ್ಪಗೆ ಸಾಲ ಕೊಡಿಸಿದ್ದರು. ಹಲವು ದಿನಗಳು ಕಳೆದರೂ ಶಿವಪ್ಪ ಸಾಲವನ್ನು ವಾಪಸ್ ನೀಡಿರಲಿಲ್ಲ. ಸಾಲ ನೀಡಿದವರು ಹಣ ಮರಳಿಸುವಂತೆ ವೆಂಕಟೇಶಪ್ಪ ಮೇಲೆ ಒತ್ತಡ ಹಾಕುತ್ತಿದ್ದರು. ಶಿವಪ್ಪ ಅವರನ್ನು ವಿಚಾರಿಸಲು ಅಪಾರ್ಟ್‌ಮೆಂಟ್‌ಗೆ ತೆರಳಿದಾಗ ನೆಲ ಮಹಡಿಯಲ್ಲಿ ಗಲಾಟೆ ನಡೆದಿದೆ. ಶಿವಪ್ಪ ಬ್ಯಾಟ್‌ನಿಂದ ವೆಂಕಟೇಶಪ್ಪಗೆ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಶೀಲ ಶಂಕಿಸಿ ಪತ್ನಿ ಕೊಲೆ

ಬೆಂಗಳೂರು: ಶೀಲ ಶಂಕಿಸಿ ಪತ್ನಿಯನ್ನು ಪತಿ ಕೊಲೆ ಮಾಡಿರುವ ಘಟನೆ ಕೆ.ಆರ್.ಪುರದ ಟಿ.ಸಿ.ಪಾಳ್ಯದಲ್ಲಿ ಮಂಗಳವಾರ ನಡೆದಿದೆ.

ಕೆ.ಆರ್.ಪುರದ ಟಿ.ಸಿ.ಪಾಳ್ಯ ನಿವಾಸಿ ನೈಸಿ ಫ್ಲೋರಾ(32) ಕೊಲೆಯಾದ ಮಹಿಳೆ. ಈಕೆಯ ಪತಿ ಜಾನ್ ಸುಪ್ರೀತ್ ಎಂಬಾತನನ್ನು (34) ಬಂಧಿಸಲಾಗಿದೆ.

ಜಾನ್ ಸುಪ್ರೀತ್ ನಗರದಲ್ಲಿ ಟೆಂಟ್ ಶಾಮಿಯಾನ ವ್ಯವಹಾರ ಮಾಡಿಕೊಂಡಿದ್ದ. 8 ವರ್ಷಗಳ ಹಿಂದೆ ನೈಸಿಯನ್ನು ಮದುವೆಯಾಗಿದ್ದ. ಟಿ.ಸಿಪಾಳ್ಯದಲ್ಲಿರುವ ಸ್ವಂತ ಮನೆಯಲ್ಲಿ ವಾಸವಾಗಿದ್ದರು. ಪತ್ನಿಯ ಶೀಲ ಶಂಕಿಸಿ ಮನೆಯಲ್ಲಿ ಜಾನ್ ಗಲಾಟೆ ಮಾಡುತ್ತಿದ್ದ. ಮಂಗಳವಾರ ಗಲಾಟೆ ನಡೆದು ಮಾರಕಾಸ್ತ್ರಗಳಿಂದ ಕೊಚ್ಚಿಕೊಲೆ ಮಾಡಿದ್ದಾನೆ ಎಂದು ಮೂಲಗಳು ತಿಳಿಸಿವೆ.

### ಸಂಕ್ಷಿಪ್ತ ಸುದ್ದಿ

## ಖಾಸಗಿ ವಿಮಾನ ಸಂಸ್ಥೆ ಮಾಲೀಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ಜಕ್ಕೂರು ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ರನ್ ವೇ 8ರಲ್ಲಿ ವಿಟಿ ಮೈಕ್ರೊಲೇಟ್ ವಿಮಾನವು (ಖಾಸಗಿ ಸಂಸ್ಥೆ) ಟೇಕಾಫ್ ವೇಳೆ ಎಂಜಿನ್‌ಆಫ್ ಆಗಿ ಅದರ ಗೇರ್ ಸಹ ಮುರಿದಿದ್ದು ಅವಘಡದ ಮಾಹಿತಿಯನ್ನು ಗೋಪ್ಯವಾಗಿಟ್ಟ ಸಂಸ್ಥೆಯ ಮಾಲೀಕರು ಹಾಗೂ ಪೈಲಟ್ ಸೇರಿ ನಾಲ್ವರ ವಿರುದ್ಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಕ್ರೊಲೇಟ್ ಮಾಲೀಕ ಬಿ.ಜಿ. ಕುಮಾರಸ್ವಾಮಿ, ಪೈಲಟ್ ಕ್ಯಾಪ್ಟನ್ ಅಮರನಾಥ್ ಬೈರಪ್ಪ, ವಿಮಾನ ನಿಯಂತ್ರಕ ಕ್ಯಾಪ್ಟನ್ ಶರತ್ಚಂದ್ರ, ಸಂಸ್ಥೆಯ ಪ್ರತಿನಿಧಿ ಬಿ.ಕೆ.ಸಿದ್ದಾರ್ಥ ವಿರುದ್ಧ ದೂರು ದಾಖಲಾಗಿದೆ.

'ವಿಮಾನವು ಮೂರು ಲ್ಯಾಂಡಿಂಗ್ ಆಗಿ ನಾಲ್ಕನೇ ಬಾರಿ ಲ್ಯಾಂಡಿಂಗ್ ವೇಳೆ ಅವಘಡ ನಡೆದಿದೆ. ಅವಘಡವಾದರೂ ಯಾರೊಬ್ಬರೂ ಘಟನೆಯ ವರದಿ ನೀಡಿಲ್ಲ. ವಿಮಾನದ ರೆಕ್ಕೆಗಳನ್ನು ಬಿಚ್ಚಿ ಕೊಂಡೊಯ್ಯಲಾಗಿದೆ. ಇದು ಅಕ್ರಮವಾಗಿದೆ. ಜತೆಗೆ, ವಿಮಾನ ನಿರ್ವಹಣೆಗೆಂದು ಜಕ್ಕೂರು ನಿಲ್ದಾಣದಿಂದ ವಿಮಾನವನ್ನು ಹೊರಕ್ಕೆ ಕೊಂಡೊಯ್ಯಲಾಗಿದೆ' ಎಂದು ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಕಾರ್ಯದರ್ಶಿ ದೂರು ನೀಡಿದ್ದಾರೆ.

## ಪಾಕ್‌ಪರ ಘೋಷಣೆ: ಇಬ್ಬರ ವಶ

ಬೆಂಗಳೂರು: ಕ್ಲಬ್‌ಹೌಸ್‌ನಲ್ಲಿ ಪಾಕಿಸ್ತಾನದ ಪರವಾಗಿ ಘೋಷಣೆ ಕೂಗಿ ಪೋಸ್ಟ್ ಹಾಕಿದ್ದ ಸಂಬಂಧ ಸಂಪಿಗೆಹಳ್ಳಿ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಬಳ್ಳಾರಿಯ ಸುರಭ್ ಹಾಗೂ ಬೆಂಗಳೂರಿನ ಸಹಕಾರ ನಗರದ ರಾಹುಲ್‌ನನ್ನು ವಶಕ್ಕೆ ಪಡೆಯಲಾಗಿದ್ದು ಉಳಿದ ಮೂವರಿಗೆ ಶೋಧ ಮುಂದುವರಿದಿದೆ. ಸುರಭ್ ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಕಂಪನಿಯೊಂದರಲ್ಲಿ ಟೆಕ್ಕಿಯಾಗಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪಾಕಿಸ್ತಾನ ಜಿಂದಾಬಾದ್' ಎಂಬ ಹೆಸರಿನ ಗ್ರೂಪ್ ರಚಿಸಿಕೊಂಡಿದ್ದ 10 ಯುವಕರು ಅಶ್ಲೀಲವಾಗಿ ಮಾತನಾಡಿ, ಪಾಕಿಸ್ತಾನದ ಪರ ಘೋಷಣೆ ಕೂಗಿದ್ದರು. ನಮ್ಮದು ಪಾಕಿಸ್ತಾನವೆಂದು ಹೇಳಿಕೊಂಡಿದ್ದರು. ಕ್ಲಬ್‌ಹೌಸ್ ಸಂವಾದದಲ್ಲಿ ಪಾಲ್ಗೊಂಡಿದ್ದ ಒಬ್ಬರು ಸ್ಕ್ರೀನ್‌ಶಾಟ್ ತೆಗೆದು ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಟ್ಟಿದ್ದರಿಂದ ಪ್ರಕರಣ ಬೆಳಕಿಗೆ ಬಂದಿತ್ತು' ಎಂದು ಮೂಲಗಳು ಹೇಳಿವೆ.




ಬೈಕ್ ಕಳವು ಆರೋಪಿಯೊಂದಿಗೆ ಕಾರ್ಯಾಚರಣೆ ನಡೆಸಿದ ಪೊಲೀಸ್ ತಂಡ

# ವಿಲಾಸಿ ಜೀವನಕ್ಕೆ ಬೈಕ್ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕದ್ದ ಬೈಕ್‌ಗಳನ್ನು ಮಾರಾಟ ಮಾಡಿ ಅದರಿಂದ ಬರುವ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಕಗ್ಗಲಿ ಹೊಸಹಳ್ಳಿಯ ಆರೋಪಿ ಮುನಿರಾಜು (45) ಎಂಬಾತನನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ ₹ 9 ಲಕ್ಷ ಮೌಲ್ಯದ ವಿವಿಧ ಕಂಪನಿಗಳ 10 ಬೈಕ್, ಒಂದು ಕಾರು ವಶಕ್ಕೆ ಪಡೆಯಲಾಗಿದೆ.

ಬೆಂಗಳೂರಿನ ಕೆ.ಆರ್.ಪುರ, ಹೆಣ್ಣೂರು, ಬಾಣಸವಾಡಿ, ಯಲಹಂಕ, ನ್ಯೂಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪೊಲೀಸ್ ಠಾಣೆ ಹಾಗೂ ಕೋಲಾರ ಜಿಲ್ಲೆಯ ಗಲ್‌ಪೇಟೆ ವ್ಯಾಪ್ತಿಯಲ್ಲಿ ಆರೋಪಿ ವಾಹನ ಕಳವು ಮಾಡಿದ್ದ. ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ಬೈಕ್‌ಗಳನ್ನು ಕಳವು ಮಾಡಿ ತನ್ನ ಊರಿನ ತೋಟದ ಮನೆಯ ಖಾಲಿ ಪ್ರದೇಶದಲ್ಲಿ ನಿಲ್ಲಿಸುತ್ತಿದ್ದ. ಅಲ್ಲಿಂದ ಮಧ್ಯವರ್ತಿಗಳಿಗೆ ಮಾರಾಟ ಮಾಡಿ ಅದರಿಂದ ಬರುವ ಹಣವನ್ನು ಮೋಜು, ಮಸ್ತಿಗೆ ಬಳಸುತ್ತಿದ್ದ ಎಂದು ತಿಳಿಸಿವೆ.

## ಸಚಿವರಿಂದ ಸಿನಿಮಾ ವೀಕ್ಷಣೆ– ಟೀಕೆ

ಬೆಂಗಳೂರು: 'ಅತಿವೃಷ್ಟಿಯಿಂದ ರೈತರು ಗೋಳಾಡುತ್ತಿದ್ದರೂ, ಭೇಟಿ ನೀಡಿ ರೈತರ ಕಷ್ಟ ಕೇಳದ ಕೃಷಿ ಸಚಿವ ಬಿ.ಸಿ. ಪಾಟೀಲ ಅವರು 'ಲೈಫ್ 360', 'ಗಾಳಿಪಟ-2', ಹೀಗೆ ದಿನಕ್ಕೊಂದು ಸಿನಿಮಾ ನೋಡಿಕೊಂಡು ಮಜವಾಗಿದ್ದಾರೆ. ಇಂಥವರ ಕೈಯಲ್ಲಿ ರಾಜ್ಯ ನರಳುತ್ತಿದೆ' ಎಂದು ರಾಜ್ಯ ಕಾಂಗ್ರೆಸ್ ಘಟಕ ಕುಟುಕಿದೆ.

ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ಸಚಿವರಿಗೆ ಜನರ ಬಗ್ಗೆ ಕನಿಷ್ಠ ಕಾಳಜಿ ಇಲ್ಲದಿರುವುದು ದುರಂತ' ಎಂದು ಟೀಕಿಸಿದೆ. 'ರೈತರ ಬದುಕು ಸೂತ್ರ ಹರಿದ ಗಾಳಿ ಪಟವಾಗಿದೆ. ಆದರೆ, ಬಿ.ಸಿ.ಪಾಟೀಲರಿಗೆ ಸಿನಿಮಾ ಮುಖ್ಯವಾಗಿದೆ ಎಂದು ವ್ಯಂಗ್ಯವಾಡಿದೆ.

# ಪ್ರೇಯಸಿ ಖಾತೆಗೆ ಬಿಬಿಎಂಪಿ ಹಣ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆದಾರರಿಗೆ ಪಾವತಿಸಬೇಕಿದ್ದ ಹಣವನ್ನು ತನ್ನ ಪ್ರೇಯಸಿಯ ಬ್ಯಾಂಕ್ ಖಾತೆಗೆ ಜಮೆ ಮಾಡಿದ್ದ ಬಿಬಿಎಂಪಿಯ ದ್ವಿತೀಯ ದರ್ಜೆ ಸಹಾಯಕ ಎಂ.ಕೆ. ಪ್ರಕಾಶ ಹಾಗೂ ಆತನ ಪ್ರೇಯಸಿಯನ್ನು ಅಮೃತಹಳ್ಳಿಯ ಪೊಲೀಸರು ಬಂಧಿಸಿದ್ದಾರೆ.

ಥಣಿಸಂದ್ರದ ಪರಿಶಿಷ್ಟ ಕಾಲೊನಿಯ ಎಂ.ಕೆ.ಪ್ರಕಾಶ ಹಾಗೂ ಯಲಹಂಕದ ನ್ಯೂಟೌನ್‌ನ ಕಾಂಚನಾ ಬಂಧಿತರು.

ಬ್ಯಾಟರಾಯನಪುರದಲ್ಲಿ ಎಸ್‌ಡಿಎ ಆಗಿ ಕೆಲಸ ಮಾಡುತ್ತಿದ್ದ ಪ್ರಕಾಶ್ ಬಿಬಿಎಂಪಿಯ ₹ 14.7 ಲಕ್ಷವನ್ನು ದುರುಪಯೋಗಪಡಿಸಿಕೊಂಡಿದ್ದ. ಪಾಲಿಕೆ ಎಂಜಿನಿಯರ್ ರಾಜೇಂದ್ರ ನಾಯಕ್ ಅವರು ದೂರು ನೀಡಿದ್ದರು.

'2021–22ನೇ ಸಾಲಿನ ಬಿಬಿಎಂಪಿ ಲೆಕ್ಕ ಪರಿಶೋಧನೆಯನ್ನು ಜುಲೈನಲ್ಲಿ ಆರಂಭಿಸಲಾಗಿತ್ತು. ಲೆಕ್ಕ ಪುಸ್ತಕ ಹಾಜರುಪಡಿಸಲು ಲೆಕ್ಕಶಾಖೆಯ ನಿರ್ವಾಹಕ ಎಂ.ಕೆ.ಪ್ರಕಾಶ್‌ಗೆ ಮೌಖಿಕ ಸೂಚನೆ ನೀಡಲಾಗಿತ್ತು. ಆದರೆ, ಲೆಕ್ಕ ಪುಸ್ತಕ ಹಾಜರುಪಡಿಸದೇ ಅನಧಿಕೃತ ರಜೆ ಮೇಲೆ ತೆರಳಿದ್ದ. ಅನುಮಾನಗೊಂಡು ಕೆನರಾ ಬ್ಯಾಂಕ್ ಪರಿಶೀಲನೆ ನಡೆಸಿದಾಗ ಕಾಂಚನಾ ಎಂಬುವರ ಖಾತೆಗೆ ಹಣ ವರ್ಗಾವಣೆ ಮಾಡಿರುವುದು ಕಂಡುಬಂದಿತ್ತು' ಎಂದು ಮೂಲಗಳು ತಿಳಿಸಿವೆ.

'ಕಾಮಗಾರಿ ನಡೆಸಿದ ಗುತ್ತಿಗೆದಾರರಿಗೆ ಮೇಲಧಿಕಾರಿ ಸಹಿ ಪಡೆದು ಹಣ ಬಿಡುಗಡೆ ಮಾಡಬೇಕಿತ್ತು. ಆದರೆ, ಆರ್‌ಟಿಜಿಎಸ್ ಹಾಗೂ ನೆಫ್ಟ್‌ನ ಕೆಲವು ಹಣಕಾಸಿನ ಚೆಕ್‌ಗಳನ್ನು ತಿದ್ದಿ ಬ್ಯೂಟಿಷಿಯನ್ ಕಾಂಚನಾ ಹಾಗೂ ತನ್ನ ಖಾತೆಗೆ ವರ್ಗಾವಣೆ ಮಾಡಿಕೊಳ್ಳುತ್ತಿದ್ದ. ಈ ಹಣವನ್ನು ಇಬ್ಬರೂ ವಿಲಾಸಿ ಜೀವನಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

# ಹುಬ್ಬಳ್ಳಿ, ಮಂಗಳೂರಿನಲ್ಲಿ ಮುಂದಿನ ತಿಂಗಳು 'ಬಿಯಾಂಡ್ ಬೆಂಗಳೂರು'

ಪ್ರಜಾವಾಣಿ ವಾರ್ತೆ

**ನವದೆಹಲಿ:** ಹುಬ್ಬಳ್ಳಿ, ಮೈಸೂರು ಹಾಗೂ ಮಂಗಳೂರಿನಲ್ಲಿ ನಡೆಯಲಿರುವ 'ಬಿಯಾಂಡ್ ಬೆಂಗಳೂರು' ಸಮಾವೇಶಗಳಿಗೆ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹಾಗೂ ಕೌಶಲಾಭಿವೃದ್ಧಿ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಐಟಿ-ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ರಾಜ್ಯ ಸರ್ಕಾರದ ಪರವಾಗಿ ಮಂಗಳವಾರ ಆಹ್ವಾನಿಸಿದರು.

ಸೆಪ್ಟೆಂಬರ್ 19, 20 ರಂದು ಮಂಗಳೂರಿನಲ್ಲಿ 'ಬಿಯಾಂಡ್ ಬೆಂಗಳೂರು' ಟೆಕ್ ಸಮಾವೇಶ ನಡೆಯಲಿದೆ.

ಹುಬ್ಬಳ್ಳಿಯಲ್ಲಿ ಸೆ.26ರಂದು ಮತ್ತು ಮೈಸೂರಿನಲ್ಲಿ ಅ. 19, 20ರಂದು ಈ ಸಮಾವೇಶ ನಡೆಯಲಿದೆ. ಇವುಗಳನ್ನು ಕ್ರಮವಾಗಿ ಪ್ರಲ್ಹಾದ ಜೋಶಿ ಮತ್ತು ರಾಜೀವ್ ಚಂದ್ರಶೇಖರ್ ಉದ್ಘಾಟಿಸಲಿದ್ದಾರೆ ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಬೆಂಗಳೂರು ನಗರದ ಆಚೆಗೂ ವಿವಿಧ ಭಾಗಗಳಲ್ಲಿ ಕೈಗಾರಿಕೆಗಳು ನೆಲೆಯೂರುವಂತೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದರ ಭಾಗವಾಗಿ, ನವೆಂಬರ್‌ನಲ್ಲಿ ನಡೆಯಲಿರುವ ಬೆಂಗಳೂರು ತಂತ್ರಜ್ಞಾನ ಸಮಾವೇಶಕ್ಕೂ (ಬಿಟಿಎಸ್) ಮುನ್ನ ಹುಬ್ಬಳ್ಳಿ, ಮೈಸೂರು ಮತ್ತು ಮಂಗಳೂರಿನಲ್ಲಿ 'ಬಿಯಾಂಡ್ ಬೆಂಗಳೂರು' ಸಮಾವೇಶಗಳನ್ನು ನಡೆಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಈ ಸಮಾವೇಶಗಳಲ್ಲಿ ಉದ್ಯಮಗಳ ಸ್ಥಾಪನೆ ಮತ್ತು ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ವಿಸ್ತೃತ ವಾಗಿ ಚರ್ಚಿಸಲಾಗುವುದು. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಉದ್ಯಮಿಗಳು ಮತ್ತು ಹೂಡಿಕೆದಾರರು ಭಾಗವಹಿಸಲಿದ್ದಾರೆ ಎಂದು ಅವರು ವಿವರಿಸಿದರು.


ಸಮಾವೇಶಕ್ಕೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಆಹ್ವಾನಿಸಿದರು. ತೋಟಗಾರಿಕಾ ಸಚಿವ ಮುನಿರತ್ನ ಇದ್ದರು

ಅರಣ್ಯ ಸಚಿವ ಉಮೇಶ ಕತ್ತಿ ಹೇಳಿಕೆ • ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಕೆ

# 'ಆನೆ, ಚಿರತೆ ಸಂಖ್ಯೆಯೂ ಹೆಚ್ಚಳ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಳವಾದಂತೆ ಆನೆ ಮತ್ತು ಚಿರತೆಗಳ ಸಂಖ್ಯೆಯೂ ಹೆಚ್ಚಳವಾಗಿದೆ. ಇಡೀ ದೇಶದಲ್ಲಿ ಈ ಮೂರೂ ವನ್ಯಜೀವಿಗಳ ಸಂಖ್ಯೆಯಲ್ಲಿ ನಮ್ಮ ರಾಜ್ಯ ನಂಬರ್ 1 ಆಗಲಿದೆ. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಲಾಗಿದೆ' ಎಂದು ಅರಣ್ಯ ಸಚಿವ ಉಮೇಶ ಕತ್ತಿ ತಿಳಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, 'ವಿವಿಧ ರಾಜ್ಯಗಳ ವರದಿಯನ್ನು ಪರಿಶೀಲಿಸಿದ ಬಳಿಕ ಕೇಂದ್ರ ಸರ್ಕಾರ ಈ ಸಂಬಂಧ ಘೋಷಣೆ ಹೊರಡಿಸಲಿದೆ. ಆ ಬಳಿಕವೇ ಅಧಿಕೃತ ಸಂಖ್ಯೆ ಸಿಗಲಿದೆ' ಎಂದರು.

'ಕಸ್ತೂರಿ ರಂಗನ್ ವರದಿಗೆ ರಾಜ್ಯ ಸರ್ಕಾರದ ವಿರೋಧವಿದೆ. ಮುಂದೆಯೂ ವಿರೋಧಿಸಲಿದೆ. ಪಶ್ಚಿಮಘಟ್ಟ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಈ ವರದಿಯಿಂದ ತೊಂದರೆ ಆಗುತ್ತದೆ ಎಂಬ ಅಭಿಪ್ರಾಯವಿದೆ. ಇತರ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಅರಣ್ಯ ಸಂಪತ್ತು ನಮ್ಮ ರಾಜ್ಯದಲ್ಲಿ ಸಮೃದ್ಧವಾಗಿದೆ. ಕೇರಳ, ಗೋವಾ, ಮಹಾರಾಷ್ಟ್ರ ರಾಜ್ಯಗಳಲ್ಲಿ ಅರಣ್ಯ ಪ್ರದೇಶ ನಮ್ಮ ರಾಜ್ಯದಲ್ಲಿ ಇದ್ದಷ್ಟಿಲ್ಲ' ಎಂದು ಹೇಳಿದರು.

**ಮಾನವ ಪ್ರಾಣಿ ಸಂಘರ್ಷ:** ಅರಣ್ಯ ಪ್ರದೇಶ ಅತಿಕ್ರಮಣ ಆಗಿರುವುದರಿಂದಲೇ ಪ್ರಾಣಿಗಳಿಗೆ ನೆಲೆ ಇಲ್ಲದಂತಾಗಿದೆ. ಮಲೆ ಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಕಾಡು ಹಂದಿಗಳ ಕಾಟ ಜಾಸ್ತಿ ಆಗಿದೆ ಎಂದು ಹೇಳುತ್ತಾರೆ. ಅಲ್ಲಿ ಜಾತ್ರೆ ನಡೆಯುವ ಸಂದರ್ಭದಲ್ಲಿ 10 ಲಕ್ಷದಿಂದ 15 ಲಕ್ಷ ಜನ ಸೇರುತ್ತಾರೆ. ಅರಣ್ಯದಲ್ಲಿ ಆಹಾರ ಪದಾರ್ಥಗಳನ್ನು ಎಲ್ಲೆಂದರಲ್ಲಿ ಬಿಸಾಕಿ ಹೋಗುವುದರಿಂದ ಅದನ್ನು ತಿನ್ನಲೆಂದು ಬರುವ ಹಂದಿಗಳು, ಆ ಬಳಿಕವೂ ಬರಲಾರಂಭಿಸಿವೆ ಎಂದು ಕತ್ತಿ ತಿಳಿಸಿದರು.

**ಬೆಳಗಾವಿಗೆ ಶಾರ್ಪ್ ಶೂಟರ್:** ಬೆಳಗಾವಿಯಲ್ಲಿ ಚಿರತೆಯನ್ನು ಹಿಡಿಯುವ ಸಂಬಂಧ ಆನೆಗಳನ್ನು ಮತ್ತು ಶಾರ್ಪ್ ಶೂಟರ್‌ಗಳನ್ನು ಕಳುಹಿಸಲಾಗಿದೆ. ಅಧಿಕಾರಿಗಳು 24X7 ನಿಗಾ ಇರಿಸಿದ್ದಾರೆ ಎಂದು ಕತ್ತಿ ತಿಳಿಸಿದರು.

ಹುಲಿ, ಆನೆ, ಚಿರತೆ ಸಂಖ್ಯೆ ವಿಚಾರದಲ್ಲಿ ರಾಜ್ಯವೇ ನಂಬರ್ ಒನ್ ಆಗುವ ಸಾಧ್ಯತೆ ಇದೆ. ರಾಜ್ಯ ಅರಣ್ಯ ಇಲಾಖೆ ಕೇಂದ್ರದ ಸಮಗ್ರ ವರದಿ ನಿರೀಕ್ಷೆಯಲ್ಲಿದೆ. ಅದು ಪ್ರಕಟವಾದರೆ ಸ್ಪಷ್ಟ ಚಿತ್ರಣ ಸಿಗಲಿದೆ. ಸದ್ಯದ ಮಾಹಿತಿ ಪ್ರಕಾರ ರಾಜ್ಯದಲ್ಲಿ 600 ಹುಲಿ, 1,800 ಚಿರತೆ, 6,800 ಆನೆಗಳಿವೆ. ಇದು ಬೇರೆಲ್ಲ ರಾಜ್ಯಗಳಿಗಿಂತಲೂ ಹೆಚ್ಚು ಎಂದು ಮೂಲಗಳು ಹೇಳಿವೆ.

### 3 ಲಕ್ಷ ಹೆಕ್ಟೇರ್ ಅರಣ್ಯ ವ್ಯಾಪ್ತಿ ಇಳಿಕೆ

'ಅರಣ್ಯ ಮತ್ತು ಕಂದಾಯ ಇಲಾಖೆಗಳು 10 ಲಕ್ಷ ಹೆಕ್ಟೇರ್ ಎಕರೆ ಪ್ರದೇಶದಲ್ಲಿ ಜಂಟಿ ಸಮೀಕ್ಷೆಯ ಬಳಿಕ 3.30 ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯವು ನಮ್ಮ ಇಲಾಖೆಗೆ ಸಿಕ್ಕಿದೆ. 6.60 ಲಕ್ಷ ಹೆಕ್ಟೇರ್ ಅರಣ್ಯವನ್ನು ಕಂದಾಯ ಇಲಾಖೆಗೆ ಬಿಟ್ಟುಕೊಟ್ಟದ್ದೇವೆ. ಇದರಿಂದಾಗಿ 45 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶದ ವ್ಯಾಪ್ತಿ 42 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಅರಣ್ಯದ ಕುರುಹು ಇಲ್ಲದ ಕಡೆಯಲ್ಲಿದ್ದ ಡೀಮ್ಡ್ ಅರಣ್ಯ ಪ್ರದೇಶವನ್ನು ಕಂದಾಯ ಇಲಾಖೆಗೆ ಬಿಟ್ಟುಕೊಡಲಾಗಿದೆ' ಎಂದು ಉಮೇಶ ಕತ್ತಿ ಹೇಳಿದರು.

## 'ಕೆಬಿಜೆಎನ್‌ಎಲ್: ಸ್ಥಳಾಂತರಿಸದಿದ್ದರೆ ಹೋರಾಟ'

**ಬೆಂಗಳೂರು:** ಕೃಷ್ಣ ಭಾಗ್ಯ ಜಲ ನಿಗಮದ (ಕೆಬಿಜೆಎನ್‌ಎಲ್) ಎಲ್ಲ ಕಚೇರಿಗಳನ್ನು ವಾರದೊಳಗೆ ಉತ್ತರ ಕರ್ನಾಟಕಕ್ಕೆ ಸ್ಥಳಾಂತರ ಮಾಡದಿದ್ದರೆ ಹೋರಾಟ ಆರಂಭಿಸಲಾಗುವುದು ಎಂದು ಉತ್ತರ ಕರ್ನಾಟಕ ರೈತರ ಅಭಿವೃದ್ಧಿ ಸಂಘದ ಅಧ್ಯಕ್ಷ ಯಾಸೀನ್ ಎನ್. ಜವಳಿ ಹೇಳಿದರು.

ಕೆಬಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರನ್ನು ಮಂಗಳವಾರ ಭೇಟಿ ಮಾಡಿ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಿಗಮದ ಎಲ್ಲ ಕಚೇರಿಗಳ ಸ್ಥಳಾಂತರಕ್ಕೆ ಮೇ 22ರಂದೇ ಆದೇಶ ಹೊರಡಿಸಲಾಗಿದೆ. ಆದರೆ, ಈವರೆಗೂ ಕ್ರಮ ಕೈಗೊಂಡಿಲ್ಲ. ವಾರದೊಳಗೆ ಈ ಪ್ರಕ್ರಿಯೆ ಪೂರ್ಣಗೊಳಿಸದೇ ಇದ್ದರೆ ಹೋರಾಟ ನಿಶ್ಚಿತ' ಎಂದರು.

ನಿಗಮದ ಪ್ರಧಾನ ಕಚೇರಿಯನ್ನು ಆಲಮಟ್ಟಿಗೆ ಸ್ಥಳಾಂತರಿಸಬೇಕು. ತಪ್ಪಿದರೆ ಆಲಮಟ್ಟಿಯಲ್ಲೇ ರೈತರೊಂದಿಗೆ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು ಎಂದು ಹೇಳಿದರು.

# ಜಾತಿಗಣತಿ: ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಎಚ್.ಕಾಂತರಾಜು ಅವಧಿಯಲ್ಲಿ ನಡೆಸಲಾಗಿರುವ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ವರದಿಯನ್ನು(ಜಾತಿಗಣತಿ) ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಿಸಬೇಕು' ಎಂದು ಕೋರಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯಿಂದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಹಿಂದೆ ಸರಿದಿದ್ದಾರೆ.

'ವರದಿ ಅನುಷ್ಠಾನಕ್ಕೆ ನಿರ್ದೇಶಿಸಬೇಕು' ಎಂದು ಕೋರಿ, 'ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಗೌರವಾಧ್ಯಕ್ಷ'ರೂ ಆದ ಚಲನಚಿತ್ರನಟ 'ಮುಖ್ಯಮಂತ್ರಿ' ಚಂದ್ರು ಸೇರಿದಂತೆ ಒಟ್ಟು 13 ವಿವಿಧ ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು ಸಲ್ಲಿಸಿರುವ ಈ ಅರ್ಜಿಯು, ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು.

ವಿಚಾರಣೆ ವೇಳೆ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರು, 'ಅರ್ಜಿಯ ಪ್ರತಿವಾದಿಯಲ್ಲಿ ಒಬ್ಬರಾದ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಹಾಲಿ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ನನಗೆ ಪರಿಚಯ ಇರುವ ಕಾರಣ ನಾನು ಈ ಅರ್ಜಿ ವಿಚಾರಣೆಯಿಂದ ಹಿಂದೆ ಸರಿಯುತ್ತಿದ್ದೇನೆ' ಎಂದು ತಿಳಿಸಿದರು.

ಇದನ್ನು ಪರಿಗಣಿಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ, ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರನ್ನು ಹೊರತುಪಡಿಸಿದ ವಿಭಾಗೀಯ ನ್ಯಾಯಪೀಠದ ಮುಂದೆ ಅರ್ಜಿ ವಿಚಾರಣೆಗೆ ನಿಗದಿಪಡಿಸುವಂತೆ ರಿಜಿಸ್ಟ್ರಾರ್ ಕಚೇರಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿದರು.

ಅರ್ಜಿದಾರರಲ್ಲಿ ತಿಗಳ ಕ್ಷತ್ರಿಯ ಮಹಾಸಭಾ, ಕರ್ನಾಟಕ ಪ್ರದೇಶ ಕುರುಬರ ಸಂಘ, ಕರ್ನಾಟಕ ರಾಜ್ಯ ಮಡಿವಾಳರ ಸಂಘ, ಸೂರ್ಯವಂಶ ಆರ್ಯ ಕ್ಷತ್ರಿಯ ಸಮಾಜ, ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ರಾಜ್ಯ ಸವಿತಾ ಕಲಾ ಸಂಘ, ಕರ್ನಾಟಕ ರಾಜ್ಯ ದೇವಾಂಗ ಸಂಘ, ಕರ್ನಾಟಕ ರಾಜ್ಯ ಕ್ಷತ್ರಿಯ ಸಂಘ, ಕರ್ನಾಟಕ ರಾಜ್ಯ ಸುಡುಗಾಡು ಸಿದ್ದ ಮಹಾ ಸಂಘ, ಅಲೆಮಾರಿ ಬುಡಕಟ್ಟು ಮಹಾಸಭಾಗಳು ಸೇರಿವೆ.

ನಿಮ್ಹಾನ್ಸ್ ಆವರಣ, ವಸತಿ ಸಂಕೀರ್ಣದಲ್ಲಿ ಬೀದಿ ನಾಯಿಗಳ ಹಾವಳಿ

# ಮಾರ್ಗಸೂಚಿಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಗರದ ನಿಮ್ಹಾನ್ಸ್ (ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ) ಆಸ್ಪತ್ರೆ ಮತ್ತು ಅದರ ವಸತಿ ಸಂಕೀರ್ಣದಲ್ಲಿ ಬೀದಿ ನಾಯಿಗಳ ಹಾವಳಿ ನಿಯಂತ್ರಿಸಲು ಎಲ್ಲ ಕ್ರಮ ಕೈಗೊಳ್ಳಲಾಗುವುದು' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ನಿಮ್ಹಾನ್ಸ್ ಹೈಕೋರ್ಟ್‌ಗೆ ತಿಳಿಸಿವೆ.

'ನಿಮ್ಹಾನ್ಸ್ ಸಂಕೀರ್ಣದಲ್ಲಿನ ಬೀದಿ ನಾಯಿಗಳ ಹಾವಳಿ ತಡೆಗೆ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ ಬೀದಿ ನಾಯಿ ಕಡಿತಕ್ಕೆ ತುತ್ತಾಗಿದ್ದ 9 ವರ್ಷದ ಬಾಲಕಿ ಜಿಷ್ಣು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಮತ್ತು ಪರಿಹಾರ ಕ್ರಮ ಕೈಗೊಳ್ಳುವ ಬಗ್ಗೆ ವಿವರಣೆ ಸಲ್ಲಿಸಿದರು. 'ನಿಮ್ಹಾನ್ಸ್ ಆವರಣದಲ್ಲಿ ಬೀದಿ ನಾಯಿಗಳ ಹಾವಳಿ ಕುರಿತು ಈಗಾಗಲೇ ದೂರು ಸ್ವೀಕರಿಸಲಾಗಿದೆ. ಸ್ಥಳಕ್ಕೆ ಖುದ್ದು ಭೇಟಿ ನೀಡಿ ನಾಯಿಗಳನ್ನು ಹಿಡಿಯಲು, ಅವುಗಳಿಗೆ ರೇಬಿಸ್ ಚುಚ್ಚುಮದ್ದು ನೀಡಲು ಮತ್ತು ಅವುಗಳ ಸಂತಾನಶಕ್ತಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

ಅಂತೆಯೇ ನಿಮ್ಹಾನ್ಸ್ ನಿರ್ದೇಶಕರು ಇದೇ ವೇಳೆ ಸಲ್ಲಿಸಿದ ಹೇಳಿಕೆಯಲ್ಲಿ, 'ವಸತಿ ಸಂಕೀರ್ಣದ ಆವರಣದಲ್ಲಿನ ಬೀದಿ ನಾಯಿಗಳ ಮೇಲೆ ನಿಗಾ ವಹಿಸಲಾಗಿದೆ. ಅವುಗಳ ಸಂತಾನಶಕ್ತಿ ನಿಯಂತ್ರಣ ಮತ್ತು ಲಸಿಕೆ ನೀಡುವ ಉಸ್ತುವಾರಿಗೆ 2021ರ ಅಕ್ಟೋಬರ್ 27ರಂದು ಸಮಿತಿ ರಚಿಸಲಾಗಿದೆ. ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಅಗತ್ಯವಾದ ಎಲ್ಲ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ತಿಳಿಸಲಾಗಿದೆ.

ಎರಡೂ ಹೇಳಿಕೆಗಳನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಪ್ರಾಣಿಗಳ ಜನನ ನಿಯಂತ್ರಣ ನಿಯಮ-2001ರ ಅನುಸಾರ ರೋಗಗ್ರಸ್ಥ ಅಥವಾ ಕಿವುಡ ಬೀದಿ ನಾಯಿಗಳನ್ನು ಸಾಯುವತನಕ ಐಸೋಲೇಷನ್ ಕೇಂದ್ರಗಳಲ್ಲಿ ಇರಿಸಬೇಕು. ಬೀದಿ ನಾಯಿ ಕಡಿತಕ್ಕೆ ತುತ್ತಾದವರಿಗೆ ಪರಿಹಾರ ನೀಡುವ ಸಂಬಂಧ ಸೂಕ್ತ ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು' ಎಂದು ಬಿಬಿಎಂಪಿಗೆ ನಿರ್ದೇಶನ ನೀಡಿ ಅರ್ಜಿ ವಿಲೇವಾರಿ ಮಾಡಿತು.

### ಧಾರವಾಡ ಜಿಲ್ಲಾಧಿಕಾರಿಗೆ ಹೈಕೋರ್ಟ್ ನೋಟಿಸ್

**ಬೆಂಗಳೂರು:** 'ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಉಣಕಲ್ ಕೆರೆ, ತೋಳನಕೆರೆ, ಕೆಲಗೇರಿ ಕೆರೆ, ಸಾಧನಕೇರಿ ಕೆರೆ, ಕೋಳಿ ಕೆರೆಗಳ ಒತ್ತುವರಿ ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಧಾರವಾಡ ಜಿಲ್ಲಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ 'ಕರ್ನಾಟಕ ರೈತ ಸೇನಾ' ಅಧ್ಯಕ್ಷ ವೀರೇಶ ಸೊರಬದಮಠ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆಯುಕ್ತ, ಧಾರವಾಡ ಉಪವಿಭಾಗಾಧಿಕಾರಿ, ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ. ಅರ್ಜಿದಾರರ ಪರ ವಕೀಲ ಗೌತಮ್ ಶ್ರೀಧರ್ ಭಾರದ್ವಾಜ್ ವಕಾಲತ್ತು ವಹಿಸಿದ್ದರು.

**ದೂರಿನಲ್ಲಿ ಏನಿದೆ?:** 'ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ಯೋಜನೆಯಡಿ ಹಲವು ಕೆರೆಗಳನ್ನು ಒತ್ತುವರಿ ಮಾಡಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪಿಯಲ್ಲಿ 35 ಕೆರೆಗಳ ಒತ್ತುವರಿಯಾಗಿದೆ. ಉಣಕಲ್ ಕೆರೆ, ತೋಳನಕೆರೆ, ಕೆಲಗೇರಿ ಕೆರೆ, ಸಾಧನಕೇರಿ ಕೆರೆ, ಕೋಳಿ ಕೆರೆಗಳನ್ನು ದೊಡ್ಡ ಪ್ರಮಾಣದಲ್ಲಿ ಒತ್ತುವರಿ ಮಾಡಲಾಗಿದೆ. ಈ ಸಂಬಂಧ 2020ರ ಫೆಬ್ರುವರಿ 17 ಮತ್ತು ಜೂನ್ 5ರಂದು ಸಂಬಂಧಿಸಿದ ಇಲಾಖೆಗಳು ಮತ್ತು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದರೂ ಕ್ರಮ ಜರುಗಿಸಿಲ್ಲ' ಎಂದು ಅರ್ಜಿದಾರರು ದೂರಿದ್ದಾರೆ.

**ನಿಧನ ವಾರ್ತೆ**


## ಸ್ನೇಕ್ ಲೋಕೇಶ್



**ನೆಲಮಂಗಲ:** ಪಟ್ಟಣದ ಮಾರುತಿ ಬಡಾವಣೆ ನಿವಾಸಿ ಉರಗ ರಕ್ಷಕ ಸ್ನೇಕ್ ಲೋಕೇಶ್(52) ಮಂಗಳವಾರ ನಿಧನರಾದರು.

ಇತ್ತೀಚೆಗೆ ದಾಬಸ್ ಪೇಟೆಯಲ್ಲಿ ಹಾವು ರಕ್ಷಣೆಗೆ ಹೋಗಿದ್ದಾಗ ಹಾವು ಕಚ್ಚಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಬೆಳಗಿನ ಜಾವ ಮೃತಪಟ್ಟಿದ್ದಾರೆ. ಸಂಜೆ ಪಟ್ಟಣದ ಬೇಲಿಮಠ ತಾಂತ್ರಿಕ ಕಾಲೇಜಿನ ಹಿಂಭಾಗದ ಹೊಸಮಠದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು. ಇವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಹಲವು ಹಾವುಗಳನ್ನು ರಕ್ಷಿಸಿದ್ದ ಇವರು, ಸ್ನೇಕ್ ಲೋಕಿ ಎಂದು ಖ್ಯಾತಿ ಪಡೆದಿದ್ದರು.

## ಎಂ.ಎಸ್. ರಾಜಶೇಖರಮೂರ್ತಿ



**ಬೆಂಗಳೂರು:** ಇಲ್ಲಿನ ಸರ್ಕಾರಿ ಕಲಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಎಂ.ಎಸ್. ರಾಜಶೇಖರ ಮೂರ್ತಿ(80) ಸೋಮವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ ಮತ್ತು ಮೂವರು ಪುತ್ರಿಯರಿದ್ದಾರೆ.

ಮಳವಳ್ಳಿಯವರಾದ ರಾಜಶೇಖರಮೂರ್ತಿ ಅವರ ಅಂತ್ಯಕ್ರಿಯೆ ಬನಶಂಕರಿ ಚಿತಾಗಾರದಲ್ಲಿ ಗುರುವಾರ ಮಧ್ಯಾಹ್ನ 11 ಗಂಟೆಗೆ ನೆರವೇರಲಿದೆ ಎಂದು ಅವರ ಕುಟುಂಬದವರು (ಸಂಪರ್ಕ: 9449089589) ತಿಳಿಸಿದ್ದಾರೆ.

# ಕೃಷಿ ಅರಣ್ಯ ಯೋಜನೆ: ಈಶಾ ಔಟ್‌ರೀಚ್ ಜತೆ ಒಪ್ಪಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾವೇರಿ ಜಲಾನಯನ ಪ್ರದೇಶದ ಒಂಬತ್ತು ಜಿಲ್ಲೆಗಳ ವ್ಯಾಪ್ತಿಯಲ್ಲಿ ಈಶಾ ಫೌಂಡೇಷನ್‌ನ ಕಾವೇರಿ ಕೂಗು ಹಾಗೂ ಸರ್ಕಾರದ ವಿವಿಧ ಕೃಷಿ ಅರಣ್ಯ ಯೋಜನೆಗಳ ಕುರಿತು ಜಂಟಿಯಾಗಿ ಪ್ರಚಾರ ನಡೆಸಲು ರಾಜ್ಯ ಸರ್ಕಾರ ಮತ್ತು ಈಶಾ ಔಟ್‌ರೀಚ್ ಒಪ್ಪಂದಕ್ಕೆ ಸಹಿ ಹಾಕಿವೆ.

ಕೊಡಗು, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೃಷಿ ಅರಣ್ಯ ಯೋಜನೆಗಳ ಕುರಿತು ರಾಜ್ಯ ಸರ್ಕಾರ ಹಾಗೂ ಈಶಾ ಔಟ್‌ರೀಚ್ ಸಹಭಾಗಿತ್ವದಲ್ಲಿ ಕೆಲಸ ಮಾಡಲಿವೆ. ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಮತ್ತು ಈಶಾ ಔಟ್‌ರೀಚ್ ಯೋಜನಾ ನಿರ್ದೇಶಕ ಅಂಬರೀಷ್ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದರು.

ಈ ಕುರಿತು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಈಶಾ ಫೌಂಡೇಷನ್‌ನ ಮುಖ್ಯಸ್ಥ ಸದ್ಗುರು, 'ಮರ ಆಧಾರಿತ ಕೃಷಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ಸರ್ಕಾರ ಬದ್ಧತೆ ತೋರಿದೆ. ಈ ಒಪ್ಪಂದವು ಕಾವೇರಿಯನ್ನು ಪುನರುಜ್ಜೀವನಗೊಳಿಸಲು, ಮಣ್ಣಿನ ಸಂರಕ್ಷಣೆ ಮತ್ತು ರೈತರಿಗೆ ನೆರವಾಗಲು ಈ ಯೋಜನೆ ಸಹಕಾರಿಯಾಗಲಿದೆ' ಎಂದಿದ್ದಾರೆ.


ಕೃಷಿ ಅರಣ್ಯ ಯೋಜನೆಗಳ ಪ್ರಚಾರಕ್ಕೆ ಸಂಬಂಧಿಸಿದ ಒಪ್ಪಂದದ ಪ್ರತಿಗಳನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಮತ್ತು ಈಶಾ ಔಟ್‌ರೀಚ್ ಯೋಜನಾಧಿಕಾರಿ ಅಂಬರೀಷ್ ವಿನಿಮಯ ಮಾಡಿಕೊಂಡರು

## 'ಎಲ್ಲ ಪಕ್ಷಗಳು ಉಚಿತ ಕೊಡುಗೆಗಳ ಪರ'

**ನವದೆಹಲಿ (ಪಿಟಿಐ):** ಬಿಜೆಪಿಯೂ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳ ಪರವಾಗಿವೆ ಎಂದು ಸುಪ್ರೀಂಕೋರ್ಟ್ ಮಂಗಳವಾರ ಹೇಳಿದೆ.

ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಸಿ.ಟಿ. ರವಿಕುಮಾರ್ ಅವರಿದ್ದ ನ್ಯಾಯಪೀಠ, ಈ ಕುರಿತು ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ವೇಳೆ ಈ ಮಾತು ಹೇಳಿತು.

'ಪ್ರತಿಯೊಬ್ಬರು ಉಚಿತ ಕೊಡುಗೆಗಳು ಬೇಕು ಎನ್ನುತ್ತಾರೆ. ಇದೇ ಕಾರಣಕ್ಕಾಗಿಯೇ, ಈ ವಿಷಯದ ಮೇಲೆ ವ್ಯಾಪಕ ಚರ್ಚೆ ನಡೆಯಲಿ ಎಂಬ ಪ್ರಯತ್ನ ಮಾಡಲಾಯಿತು. ಯಾವುದು ಉಚಿತ ಕೊಡುಗೆ, ಯಾವುದು ಕಲ್ಯಾಣ ಕಾರ್ಯಕ್ರಮ ಎಂಬುದನ್ನು ನಿರ್ಧರಿಸಲು ಸಮಿತಿಯೊಂದನ್ನು ರಚಿಸಲು ಕೋರ್ಟ್ ಮುಂದಾಯಿತು. ಆ ಮೂಲಕ ಸೂಕ್ತ ನಿರ್ಣಯ ಕೈಗೊಳ್ಳುವ ಪ್ರಯತ್ನ ನಮ್ಮದು' ಎಂದು ನ್ಯಾಯಪೀಠ ಹೇಳಿತು.

ಉಚಿತ ಕೊಡುಗೆಗಳು ಹಾಗೂ ಈ ವಿಷಯವಾಗಿ ನ್ಯಾಯಾಂಗದ ಹಸ್ತಕ್ಷೇಪ ಕುರಿತು ಹೇಳಿಕೆಗಳನ್ನು ನೀಡಿದ್ದಕ್ಕಾಗಿ ಡಿಎಂಕೆ ಪಕ್ಷ ಹಾಗೂ ಅದರ ಕೆಲ ಮುಖಂಡರಿಗೆ ನ್ಯಾಯಪೀಠ ಛೀಮಾರಿ ಹಾಕಿತು.

'ಸಮಾಜದಲ್ಲಿರುವ ನಿರ್ಲಕ್ಷ್ಯಕ್ಕೆ ಒಳಗಾದ ಜನರನ್ನು ಮೇಲೆತ್ತುವುದಕ್ಕಾಗಿ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ. ಇವುಗಳನ್ನು ಉಚಿತ ಕೊಡುಗೆಗಳು ಎನ್ನಲಾಗದು' ಎಂದು ಡಿಎಂಕೆ ಪರ ವಕೀಲ ಪಿ.ವಿಲ್ಸನ್ ಅವರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

# ಕಟೀಲು ಮೇಳ: ಕಾಲಮಿತಿ ಯಕ್ಷಗಾನ

**ಮೂಲ್ಕಿ (ದಕ್ಷಿಣ ಕನ್ನಡ):** ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದಿಂದ ನಡೆಯುವ ಆರೂ ಮೇಳಗಳ ಯಕ್ಷಗಾನ ಪ್ರದರ್ಶನವನ್ನು ಮುಂದಿನ ತಿರುಗಾಟದಿಂದ ಕಾಲಮಿತಿಗೆ ಬದಲಾಯಿಸಿ, ಆಡಳಿತ ಮಂಡಳಿ ನಿರ್ಣಯ ತೆಗೆದುಕೊಂಡಿದೆ.

ಮಂಗಳವಾರ ದೇವಳದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಂಡಿದ್ದು, ರಾತ್ರಿ ಗಂಟೆ 10.30ರಿಂದ 50 ಡೆಸಿಬಲ್‌ಗಿಂತ ಹೆಚ್ಚಿಗೆ ಧ್ವನಿವರ್ಧಕವನ್ನು ಬಳಸಬಾರದು ಎಂದು ಸರ್ಕಾರದಿಂದ ಈಗಾಗಲೇ ದೇವಸ್ಥಾನಗಳಿಗೆ ಸೂಚನೆ ಬಂದಿದೆ. ಹೀಗಾಗಿ ಸಂಜೆ 5 ಗಂಟೆಯಿಂದ ರಾತ್ರಿ 10.30ರತನಕ ಯಕ್ಷಗಾನ ನಡೆಸುವ ಬಗ್ಗೆ ನಿರ್ಣಯಿಸಲಾಗಿದೆ. ಯಕ್ಷಗಾನ ಪ್ರದರ್ಶನದ ಸ್ವರೂಪ ಚಿಂತನೆಗಳ ಸ್ಪಷ್ಟ ರೂಪ ಮುಂದಿನ ದಿನಗಳಲ್ಲಿ ನಡೆಯುವ ಸಭೆಗಳಲ್ಲಿ ಚರ್ಚಿಸಿ ನಿರ್ಧರಿಸಲಾಗುವುದು ಎಂದು ಕಟೀಲು ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಕೊಡೆತ್ತೂರುಗುತ್ತು ಸನತ್ ಕುಮಾರ ಶೆಟ್ಟಿ ಹಾಗೂ ಆನುವಂಶಿಕ ಮೊಕ್ತೇಸರ ವಾಸುದೇವ ಆಸ್ರಣ್ಣ ತಿಳಿಸಿದ್ದಾರೆ.

ದೇವರ ಎದುರು ಕಾಲಮಿತಿ ಯಕ್ಷಗಾನ ಬಗ್ಗೆ ಹೂಪ್ರಶ್ನೆ ಇಟ್ಟಾಗ ದೇವರ ಒಪ್ಪಿಗೆ ಬಂದಿದೆ ಎಂದರು.



## ಭರತನಾಟ್ಯ ರಂಗ ಪ್ರವೇಶ

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭರತನಾಟ್ಯ ಕಲಾವಿದೆ ವರ್ಷಿತಾ ಡಿ.ಆರ್. ಅವರು ರಂಗಪ್ರವೇಶ ಮಾಡಿದರು

# ಬಿಡದಿ ಬೈಪಾಸ್ ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

**ರಾಮನಗರ/ಬಿಡದಿ:** ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಹೊಸತಾಗಿ ನಿರ್ಮಿಸಲಾಗಿರುವ ಬಿಡದಿ ಬೈಪಾಸ್ ಮಂಗಳವಾರದಿಂದ ಏಕಮುಖ ಸಂಚಾರಕ್ಕೆ ಮುಕ್ತವಾಗಿದೆ. ರಾಮನಗರ-ಚನ್ನಪಟ್ಟಣ ಬೈಪಾಸ್ ಇದೇ 30ರಿಂದ ಸಂಚಾರಕ್ಕೆ ಲಭ್ಯವಾಗುವ ನಿರೀಕ್ಷೆ ಇದೆ.

ಈ ಕುರಿತು ಸಂಸದ ಪ್ರತಾಪ ಸಿಂಹ ಫೇಸ್‌ಬುಕ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ಬೈಪಾಸ್‌ನ ಒಂದು ಭಾಗದಲ್ಲಿ ಬೆಟ್ಟ ಕೊರೆಯುವ ಕಾಮಗಾರಿ ವಿಳಂಬ ಆದ ಕಾರಣಕ್ಕೆ ರಸ್ತೆಯನ್ನು ತಡವಾಗಿ ಉದ್ಘಾಟಿಸಲಾಗುತ್ತಿದೆ. ಸದ್ಯ ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ತೆರಳುವವರು ಈ ಬೈಪಾಸ್ ಬಳಸಬಹುದು. ಇನ್ನೆರಡು ದಿನದಲ್ಲಿ ಇನ್ನೊಂದು ಬದಿಯನ್ನೂ ಮುಕ್ತಗೊಳಿಸಲಾಗುತ್ತಿದೆ. ರಾಮನಗರ-ಚನ್ನಪಟ್ಟಣ ಬೈಪಾಸ್‌ನ 23 ಕಿ.ಮೀ. ಉದ್ದದ ಕಾಮಗಾರಿಗಳು ಅಂತಿಮ ಹಂತದಲ್ಲಿವೆ. ಅವೂ ಸಹ ಗೌರಿ ಹಬ್ಬದ ವೇಳೆಗೆ ತೆರೆದುಕೊಳ್ಳಲಿವೆ. ಸರ್ವೀಸ್ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ' ಎಂದು ತಿಳಿಸಿದ್ದಾರೆ.

'ದಸರಾ ಒಳಗೆ ಈ ಹೆದ್ದಾರಿಯನ್ನು ಉದ್ಘಾಟಿಸಬೇಕು ಎಂಬುದು ನಮ್ಮ ನಿರೀಕ್ಷೆಯಾಗಿತ್ತು. ಇನ್ನೂ ನಮಗೆ ಅವಕಾಶ ಇದ್ದು, ಪ್ರಯತ್ನ ನಡೆಸಲಿದ್ದೇವೆ. ಮದ್ದೂರು, ಮಂಡ್ಯ ಹಾಗೂ ಶ್ರೀರಂಗಪಟ್ಟಣ ಬೈಪಾಸ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು. ಇದಕ್ಕೆ ಇರುವ ಅಡೆತಡೆ ನಿವಾರಿಸುವ ಪ್ರಯತ್ನ ನಡೆದಿದೆ' ಎಂದು ವಿವರಿಸಿದ್ದಾರೆ.

'ಪ್ರತಿನಿತ್ಯವೂ ವಾಹನ ಸಂಚಾರ ದಟ್ಟಣೆ ಹೆಚ್ಚುತ್ತಿರುವುದರಿಂದ ಸಮಯಕ್ಕೆ ಸರಿಯಾಗಿ ನಿಗದಿತ ಸ್ಥಳ ತಲುಪಲು ಆಗುತ್ತಿರಲಿಲ್ಲ. ದಶಪಥ ನಿರ್ಮಿಸುತ್ತಿರುವುದು ಸಹಕಾರಿಯಾಗಿದೆ. ಚನ್ನಪಟ್ಟಣದವರೆಗೆ ಎರಡು ಕಡೆಯಿಂದ ಸಂಚರಿಸಲು ಅವಕಾಶ ಮಾಡಿಕೊಟ್ಟರೆ ಅನುಕೂಲವಾಗಲಿದೆ. ನಾಡಹಬ್ಬ ದಸರಾದೊಳಗೆ ಎರಡು ಕಡೆಯಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ಹೆದ್ದಾರಿ ಪ್ರಾಧಿಕಾರ ಕ್ರಮವಹಿಸಬೇಕು' ಎಂದು ಮದ್ದೂರು ಗ್ರಾಮದ ನರಸಿಂಹಯ್ಯ ಒತ್ತಾಯಿಸಿದರು.

## 'ಪದೇ ಪದೇ ಹಿಂದೂ ಧರ್ಮದ ಅವಹೇಳನ'

**ಬೆಂಗಳೂರು:** 'ದೇವಸ್ಥಾನಗಳಿಗೆ ಹೋಗುವಾಗ ಕೆಲವು ನೇಮ- ನಿಷ್ಠೆಗಳು ಮತ್ತು ಶ್ರದ್ಧೆ ಇರುತ್ತವೆ. ಅದನ್ನು ಎಲ್ಲ ಆಸ್ತಿಕ ಹಿಂದೂಗಳು ಪಾಲಿಸುತ್ತಾರೆ. ಅದರ ಬಗ್ಗೆ ಅರಿವೇ ಇಲ್ಲದ ಸಿದ್ದರಾಮಯ್ಯ ಅವರು ಹಿಂದೂ ಧರ್ಮ ಮತ್ತು ಧಾರ್ಮಿಕ ಶ್ರದ್ಧೆಯನ್ನು ಅವಹೇಳನ ಮಾಡುತ್ತಲೇ ಬಂದಿದ್ದಾರೆ' ಎಂದು ಕಂದಾಯ ಸಚಿವ ಆರ್.ಅಶೋಕ ಟೀಕಿಸಿದ್ದಾರೆ.

'ಮುಸ್ಲಿಮರು ರಮ್ಜಾನ್‌ನಲ್ಲಿ ಉಪವಾಸ ಮಾಡುತ್ತಾರೆ, ಕ್ರೈಸ್ತರು ಅವರ ಹಬ್ಬಗಳಲ್ಲಿ ಮತ್ತು ಚರ್ಚ್‌ಗಳಲ್ಲಿ ಕೆಲವು ನಿಯಮ ಪಾಲಿಸುತ್ತಾರೆ. ಸಿದ್ದರಾಮಯ್ಯ ಆ ಧರ್ಮಗಳ ಅನುಯಾಯಿಗಳ ನಿಯಮ ಮತ್ತು ಶ್ರದ್ಧೆಯನ್ನು ಪ್ರಶ್ನಿಸುತ್ತಾರೆಯೇ. ಉಪವಾಸ ಮಾಡಬೇಡಿ ಎಂದು ಹೇಳುತ್ತಾರೆಯೇ' ಎಂದು ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

ಒಂದೇ ಕುಟುಂಬದ ಮೂವರು ಮಕ್ಕಳ ಕರುಣಾಜನಕ ಸ್ಥಿತಿ

# ವಿಚಿತ್ರ ಕಾಯಿಲೆಯಿಂದ ಬಳಲುತ್ತಿರುವ ಹೆಣ್ಣುಮಕ್ಕಳು

• ಸಾಂತೇನಹಳ್ಳಿ ಸಂದೇಶ್ ಗೌಡ

ಪ್ರಜಾವಾಣಿ ವಿಶೇಷ

**ಹೊಳಲ್ಕೆರೆ:** ತಾಲ್ಲೂಕಿನ ಗುಂಡೇರಿ ಕಾವಲು ಗ್ರಾಮದಲ್ಲಿ ಒಂದೇ ಕುಟುಂಬದ ಮೂವರು ಹೆಣ್ಣುಮಕ್ಕಳು ಕತ್ತು ನಿಲ್ಲದ ವಿಚಿತ್ರ ಕಾಯಿಲೆಯಿಂದ ನರಳುತ್ತಿದ್ದಾರೆ.

ಗ್ರಾಮದ ಮಂಜಪ್ಪ-ಯಶೋದಾ ದಂಪತಿಯ ಪುತ್ರಿಯರಾದ ಧನಲಕ್ಷ್ಮಿ (21 ವರ್ಷ), ಅನಿತಾ (19), ರಕ್ಷಿತಾ (16) ಅವರು ಕತ್ತು ನಿಲ್ಲದ ಕಾಯಿಲೆಯಿಂದ ಬಳಲುತ್ತಿದ್ದಾರೆ. ಪೋಷಕರಿಗೆ ಇವರನ್ನು ಸಾಕುವುದೇ ದೊಡ್ಡ ಸವಾಲಾಗಿದೆ. ಮೂವರಿಗೂ ಹುಟ್ಟಿನಿಂದಲೇ ಈ ಸಮಸ್ಯೆ ಇದೆ. ಇಡೀ ಕುಟುಂಬ 21 ವರ್ಷಗಳಿಂದ ನರಕಯಾತನೆ ಅನುಭವಿಸುತ್ತಿದೆ. ಮೂವರೂ ಹೆಣ್ಣುಮಕ್ಕಳಿಗೆ ನಿತ್ಯ ಕರ್ಮಗಳಿಂದ ಹಿಡಿದು ಸ್ನಾನ, ಊಟ ಮಾಡಿಸಬೇಕು. ಕತ್ತು ನಿಲ್ಲದಿರುವುದರ ಜತೆಗೆ ಕೈಕಾಲುಗಳು ಸೆಟೆದುಕೊಳ್ಳುತ್ತಿದ್ದು, ಓಡಾಡಲೂ ಸಾಧ್ಯವಾಗುತ್ತಿಲ್ಲ. ಎದ್ದು ನಿಲ್ಲಲಷ್ಟೇ ಶಕ್ತವಾಗಿರುವ ಇವರನ್ನು ಕೈ ಹಿಡಿದು ಓಡಾಡಿಸಬೇಕು.

'ದೇವರು ಇಂತಹ ಕಷ್ಟವನ್ನು ಯಾರಿಗೂ ಕೊಡಬಾರದು. ಮೂವರು ಮಕ್ಕಳನ್ನೂ ದಾವಣಗೆರೆ, ಮಂಗಳೂರು ಆಸ್ಪತ್ರೆಗೆ ತೋರಿಸಿದ್ದೇನೆ. ಆಸ್ಪತ್ರೆ ಖರ್ಚಿಗಾಗಿ ಇದುವರೆಗೂ ಜನರಿಂದ ಸುಮಾರು ₹ 20 ಲಕ್ಷ ಕೈಗಡ ಸಾಲ ಪಡೆದುಕೊಂಡಿದ್ದೆವು. ₹ 6 ಲಕ್ಷ ಸಾಲ ತೀರಿಸುವುದು ಇನ್ನೂ ಬಾಕಿ ಇದೆ. ವೈದ್ಯರಿಗೂ ಈ ಕಾಯಿಲೆ ಬಗ್ಗೆ ಗೊತ್ತಿಲ್ಲ. ಈ ಕಾಯಿಲೆ ವಾಸಿ ಆಗುವುದಿಲ್ಲ. ಇವರು ಬದುಕಿರುವವರೆಗೆ ನೀವೇ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ' ಎಂದು ತಂದೆ ಮಂಜಪ್ಪ ನೋವು ತೋಡಿಕೊಳ್ಳುತ್ತಾರೆ.

'ನಮಗೆ ಜಮೀನು ಇಲ್ಲ. ಉತ್ತಮ ಮನೆಯೂ ಇಲ್ಲ. ಕೂಲಿ ಕೆಲಸ ಮಾಡಿ ಮಕ್ಕಳನ್ನು ಸಾಕಬೇಕು. ಮಂಗಳೂರಿನಲ್ಲಿ ವೈದ್ಯರು ಮಾತ್ರೆ ಬರೆದು ಕೊಟ್ಟಿದ್ದರು. ಆ ಮಾತ್ರೆ ನುಂಗಿದರೆ ಮಾತ್ರ ನಡುಕ ಸ್ವಲ್ಪ ಕಡಿಮೆ ಆಗುತ್ತದೆ. ಆಗ ಸ್ವಲ್ಪ ಊಟ ಮಾಡಿಸಬಹುದು. ಮಾತ್ರೆ ತರಲು ತಿಂಗಳಿಗೆ ₹ 5 ಸಾವಿರ ಬೇಕು. ನಮಗೆ ಸರ್ಕಾರ ಅಥವಾ ಬೇರೆ ಯಾರೂ ಸಹಾಯ ಮಾಡುತ್ತಿಲ್ಲ' ಎಂದು ಅವರು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

'ಮಕ್ಕಳ ನರಳಾಟ ನೋಡಲಾಗುವುದಿಲ್ಲ. ನಾನು ಮತ್ತು ನನ್ನ ಅತ್ತೆ ಮಕ್ಕಳನ್ನು ನೋಡಿಕೊಳ್ಳುತ್ತಿದ್ದೇವೆ. ಆದರೂ ಜೀವನಪೂರ್ತಿ ನೋಡಿಕೊಳ್ಳುವುದು ಸುಲಭದ ಮಾತಲ್ಲ' ಎನ್ನುತ್ತಾರೆ ತಾಯಿ ಯಶೋದಾ.

ತಂದೆ ಮಂಜಪ್ಪ ಅವರ ಸಂಪರ್ಕ ಸಂಖ್ಯೆ-7022689724


ಹೊಳಲ್ಕೆರೆ ತಾಲ್ಲೂಕಿನ ಗುಂಡೇರಿ ಕಾವಲ್ ಗ್ರಾಮದ ಮಂಜಪ್ಪ–ಯಶೋದಮ್ಮ ದಂಪತಿಯ ಮೂವರು ಪುತ್ರಿಯರು ಕತ್ತು ನಿಲ್ಲದ ವಿಚಿತ್ರ ಕಾಯಿಲೆಯಿಂದ ಬಳಲುತ್ತಿರುವುದು.

**ಸಂಕ್ಷಿಪ್ತ ಸುದ್ದಿ**

## ಸಾಹಿತ್ಯ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು 2022-23ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

2022ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಇದೇ 31 ಕೊನೆಯ ದಿನಾಂಕ. ಬಳಿಕ ಸೆ.15ರ ವರೆಗೆ ₹ 50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆಯನ್ನು ಪಡೆಯಬಹುದು. ಪರಿಷತ್ತಿನ ಹೆಸರಿಗೆ ₹ 30 ಮನಿಯಾರ್ಡರ್ ಮಾಡಿದರೆ ಅರ್ಜಿ ನಮೂನೆಯನ್ನು ಅಂಚೆ ಮೂಲಕ ಕಳುಹಿಸಲಾಗುವುದು ಎಂದು ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ತಿಳಿಸಿದ್ದಾರೆ.

ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕವೂ ಪಡೆದುಕೊಳ್ಳಬಹುದು. ಇವರು ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ. ಸಂಪರ್ಕಕ್ಕೆ: 080 26623584 ಅಥವಾ 26612991

## ಸಜ್ಜನ್‌ರಾವ್ ಪ್ರತಿಮೆ ಸ್ಥಾಪನೆಗೆ ಮನವಿ

**ಬೆಂಗಳೂರು:** ನಗರದ ವಿಶ್ವೇಶ್ವರಪುರ ಸಜ್ಜನ್‌ರಾವ್ ವೃತ್ತದ ನೈರುತ್ಯ ಭಾಗದಲ್ಲಿ ಸಜ್ಜನ್‌ರಾವ್ ಅವರ ಪ್ರತಿಮೆ ಸ್ಥಾಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಅವರು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ವಿಶ್ವೇಶ್ವರಪುರ ಬಡಾವಣೆ ರಚನೆಯಾಗಿ 100 ವರ್ಷಗಳು ಕಳೆದಿವೆ. ನಗರದ ಅಭಿವೃದ್ಧಿಗೆ ಸಜ್ಜನ್‌ರಾವ್ ಅವರ ಶ್ರಮ ಹಾಗೂ ಕೊಡುಗೆ ಇದೆ. 20ನೇ ಶತಮಾನದಲ್ಲಿ ದೇವಸ್ಥಾನ, ಛತ್ರ, ಆರೋಗ್ಯ ಕೇಂದ್ರ ಹಾಗೂ ಜನೋಪಯೋಗಿ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ ಎಂದು ಪಿ.ಆರ್. ರಮೇಶ್ ನೆನಪಿಸಿದ್ದಾರೆ.

ಸಜ್ಜನ್‌ರಾವ್ ಅವರ ಮೂರ್ತಿ ಸ್ಥಾಪಿಸಿ ಈ ಭಾಗದಲ್ಲಿ ಅವರ ಬಗ್ಗೆ ಜನರಿಗೆ ಅರಿವು ಹಾಗೂ ಮಾಹಿತಿಯನ್ನು ಒದಗಿಸಬೇಕು ಎಂದು ಕೋರಿದ್ದಾರೆ.

## 'ರೈತರ ಹೆಸರಿನಲ್ಲಿ ಸಾಲ ಪಡೆಯುವ ಅಧಿಕಾರಿಗಳು'

**ಬೆಂಗಳೂರು:** 'ಸಹಕಾರ ಸಂಘಗಳಲ್ಲಿ ರೈತರ ಹೆಸರಿನಲ್ಲಿ ಸಂಘದ ಕಾರ್ಯನಿರ್ವಹಣಾಧಿಕಾರಿಗಳು ಸಾಲ ಪಡೆದು ಮೋಜು ಮಾಡುತ್ತಿದ್ದಾರೆ. ಈ ಸಾಲದ ಬಗ್ಗೆ ರೈತರಿಗೆ ಮಾಹಿತಿಯೇ ಇರುವುದಿಲ್ಲ' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆರೋಪಿಸಿದೆ.

'ಸಹಕಾರ ಇಲಾಖೆಯಲ್ಲಿ ಅಕ್ರಮಗಳು ನಡೆಯುತ್ತಿದ್ದರೂ ಸರ್ಕಾರ ಗಮನ ಹರಿಸುತ್ತಿಲ್ಲ. ಸಹಕಾರ ಬ್ಯಾಂಕ್‌ಗಳು ಮತ್ತು ಸಂಸ್ಥೆಗಳು ದಿವಾಳಿಯಾಗುತ್ತಿವೆ' ಎಂದು ಪಕ್ಷದ ಸದಸ್ಯ ಮಂಜುನಾಥ ಹಿರೇಚೌಟಿ ಆರೋಪಿಸಿದರು.

'ಕೃಷಿ ಅಲ್ಪಾವಧಿ ಸಾಲಕ್ಕೆ ಸಂಪೂರ್ಣ ಬಡ್ಡಿ ಸಹಾಯಧನ ನೀಡುತ್ತಿದ್ದು, ಪ್ರತಿ ವರ್ಷ ಮರುಪಾವತಿಸಿ ಮುಂದಿನ ಆರ್ಥಿಕ ವರ್ಷದಲ್ಲಿ ಮರುಜಾರಿಗೊಳಿಸಬೇಕು. ಇಲ್ಲದಿದ್ದರೆ ನಬಾರ್ಡ್ ಸೂಚನೆಯಂತೆ ಶೇ 7ರಷ್ಟು ಬಡ್ಡಿ ಪಾವತಿಸಬೇಕು. ಬಡ್ಡಿ ಸಹಾಯಧನ ಪಡೆಯದಿದ್ದರೆ ಸರ್ಕಾರಕ್ಕೆ ಹಿಂತಿರುಗಿಸಬೇಕು. ಆದರೆ, ಅಧಿಕಾರಿಗಳು ಒಂದು ನಯಾಪೈಸೆಯೂ ಸರ್ಕಾರಕ್ಕೆ ಹಿಂತಿರುಗಿಸಿಲ್ಲ' ಎಂದರು.

## 'ನಮ್ಮ ಕ್ಲಿನಿಕ್: ತೆರಿಗೆ ಹಣ ಲೂಟಿ'

**ಬೆಂಗಳೂರು:** 'ರಾಜ್ಯ ಬಿಜೆಪಿ ಸರ್ಕಾರವು 'ನಮ್ಮ ಕ್ಲಿನಿಕ್' ಹೆಸರಿನಲ್ಲಿ ಜನರ ತೆರಿಗೆ ಹಣವನ್ನು ಲೂಟಿ ಮಾಡಲು ಮುಂದಾಗಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಆರೋಪಿಸಿದರು.


'ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳುಗಳು ಬಾಕಿ ಇರುವಾಗ ರಾಜ್ಯ ಬಿಜೆಪಿ ಸರ್ಕಾರವು 'ನಮ್ಮ ಕ್ಲಿನಿಕ್' ನಿರ್ಮಿಸುತ್ತಿದೆ. ನವದೆಹಲಿಯಲ್ಲಿ ಕೇವಲ ₹ 20 ಲಕ್ಷ ವೆಚ್ಚದಲ್ಲಿ ವ್ಯವಸ್ಥಿತವಾಗಿ 'ಮೊಹಲ್ಲಾ ಕ್ಲಿನಿಕ್'ಗಳನ್ನು ನಿರ್ಮಿಸಲಾಗಿದೆ. ರಾಜ್ಯದಲ್ಲಿ ಇದೇ ಮಾದರಿಯ ಕ್ಲಿನಿಕ್‌ಗಳ ನಿರ್ಮಾಣಕ್ಕೆ ತಲಾ ಒಂದು ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ಇಂದಿರಾ ಕ್ಯಾಂಟೀನ್‌ಗಳಂತೆ ಇವು ಕೂಡ ಪಾರದರ್ಶಕತೆಗೆ ವಿರುದ್ಧವಾಗಿ ಸಾಗುತ್ತಿವೆ' ಎಂದು ಮಂಗಳವಾರ ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಮೊಹಲ್ಲಾ ಕ್ಲಿನಿಕ್‌ಗಳ ಬಗ್ಗೆ ಕರ್ನಾಟಕದಲ್ಲೂ ಆಸಕ್ತಿ ಇದ್ದರೆ ಅಂತಹ ಕ್ಲಿನಿಕ್‌ಗಳನ್ನು ಕಡಿಮೆ ವೆಚ್ಚದಲ್ಲಿ ತೆರೆಯಲು ನಮ್ಮ ಪಕ್ಷ ರೂಪುರೇಷೆ ತಯಾರಿಸಿಕೊಡಲಿದೆ' ಎಂದು ಹೇಳಿದರು.

ಕಾಮಗಾರಿಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಒಪ್ಪಿಗೆ ಕಡ್ಡಾಯ: ಎನ್‌ಟಿಸಿಎ ನಿರ್ದೇಶನ

# ಹುಲಿ ಕಾರಿಡಾರ್‌ನಲ್ಲಿ ಹೆದ್ದಾರಿ ವಿಸ್ತರಣೆ

• ಮಂಜುನಾಥ ಹೆಬ್ಬಾರ್




ಪ್ರಜಾವಾಣಿ ವಿಶೇಷ

**ನವದೆಹಲಿ:** ಭಾರತಮಾಲಾ ಪರಿಯೋಜನಾ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎ) ಬೆಳಗಾವಿ- ಗೋವಾ ನಡುವೆ ಕೈಗೆತ್ತಿಕೊಂಡಿರುವ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್ 748 ಎಎ) ಮೇಲ್ದರ್ಜೆಗೆ ಏರಿಸುವ ಕಾಮಗಾರಿಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆ ಕಡ್ಡಾಯ ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ನಿರ್ದೇಶಿಸಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರಿಗೆ (ಈ ಯೋಜನೆಯ ಉಸ್ತುವಾರಿ ವಹಿಸಿರುವ ಯೋಜನಾ ನಿರ್ದೇಶಕರ ಕಚೇರಿ ಧಾರವಾಡದಲ್ಲಿದೆ) ಸೋಮವಾರ ಪತ್ರ ಬರೆದಿರುವ ಎನ್‌ಟಿಸಿಎ, 'ಈ ರಾಷ್ಟ್ರೀಯ ಹೆದ್ದಾರಿಯು ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ ಸಂರಕ್ಷಿತ ಪ್ರದೇಶ (ಕ್ಯಾಸಲ್‌ರಾಕ್), ಭೀಮಘಡ ವನ್ಯಜೀವಿ ಧಾಮ, ಮೊಲ್ಲೆಮ್ ರಾಷ್ಟ್ರೀಯ ಉದ್ಯಾನ, ಸಹ್ಯಾದಿ ಹುಲಿ ಸಂರಕ್ಷಿತ ಪ್ರದೇಶ, ರಾಧಾನಗರಿ ವನ್ಯಜೀವಿ ಧಾಮ, ತಿಲ್ಲಾರಿ ಅರಣ್ಯ ಪ್ರದೇಶ, ಮೇದೈ ವನ್ಯಜೀವಿಧಾಮ ಹಾಗೂ ಹುಲಿ ಕಾರಿಡಾರ್‌ನಲ್ಲಿ ಹಾದು ಹೋಗುತ್ತದೆ. ಹೀಗಾಗಿ, ಕಾಮಗಾರಿ ಆರಂಭಕ್ಕೆ ಮುನ್ನ ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಅನುಮೋದನೆ ಪಡೆಯಬೇಕು. ಇದಕ್ಕಾಗಿ ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಪರಿವೇಶ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕು' ಎಂದು ಸೂಚಿಸಿದೆ.

₹ 220 ಕೋಟಿ ವೆಚ್ಚದಲ್ಲಿ 69 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಪ್ರಕ್ರಿಯೆ ಆರಂಭಿಸಿತ್ತು. ಗುರುಗ್ರಾಮದ ಎನ್‌ಎಸ್‌ಸಿ ಪ್ರಾಜೆಕ್ಟ್ ಸಂಸ್ಥೆಗೆ ಕಾಮಗಾರಿಯ ಗುತ್ತಿಗೆಯನ್ನು ಈ ವರ್ಷದ ಮಾರ್ಚ್‌ನಲ್ಲಿ ವಹಿಸಲಾಗಿತ್ತು.

**ಮುಖ್ಯಾಂಶಗಳು**

- ₹220 ಕೋಟಿ ವೆಚ್ಚದಲ್ಲಿ 69 ಕಿ.ಮೀ ಹೆದ್ದಾರಿ ವಿಸ್ತರಣೆ
- 4.46 ಹೆಕ್ಟೇರ್ ಅರಣ್ಯೇತರ ಭೂಮಿ ಸ್ವಾಧೀನ ಎಂದಿದ್ದ ಎನ್‌ಎಚ್‌ಎ
- ಎನ್‌ಟಿಸಿಎಗೆ ದೂರು

**ಹುಲಿ ಕಾರಿಡಾರ್‌ನಲ್ಲಿ ಯಾವುದೇ ಅನುಮೋದನೆ ಪಡೆಯದೆ ಹೆದ್ದಾರಿ ವಿಸ್ತರಣೆ ಮಾಡಲು ಹೆದ್ದಾರಿ ಪ್ರಾಧಿಕಾರ ಯೋಜಿಸಿತ್ತು. ಇದಕ್ಕೆ ಈಗ ಕಡಿವಾಣ ಬಿದ್ದಿದೆ.**
**ಗಿರಿಧರ ಕುಲಕರ್ಣಿ,** ವನ್ಯಜೀವಿ ಕಾರ್ಯಕರ್ತ

ಹೆದ್ದಾರಿಯು ವನ್ಯಜೀವಿ ಧಾಮದೊಳಗೆ ಹಾದು ಹೋಗುತ್ತಿದ್ದು, ಪರಿಸರ ಅನುಮೋದನೆ ಪಡೆಯದೆ ಕಾಮಗಾರಿ ನಡೆಸಲಾಗುತ್ತಿದೆ ಎಂದು ವನ್ಯಜೀವಿ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಸಂಬಂಧ ಕರ್ನಾಟಕದ ವನ್ಯಜೀವಿ ಕಾರ್ಯಕರ್ತ ಗಿರಿಧರ್ ಕುಲಕರ್ಣಿ ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ಉತ್ತರ ನೀಡಿದ್ದ ಪ್ರಾಧಿಕಾರ, 'ಈ ಯೋಜನೆಗೆ ಪರಿಸರ ಅನುಮೋದನೆ ಪಡೆಯಬೇಕಿಲ್ಲ. 4.46 ಹೆಕ್ಟೇರ್‌ನಷ್ಟು ಅರಣ್ಯೇತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ' ಎಂದು ಪ್ರತಿಕ್ರಿಯಿಸಿತ್ತು.

**ಎನ್‌ಟಿಸಿಎಗೆ ದೂರು:** ಬಳಿಕ ವನ್ಯಜೀವಿ ಕಾರ್ಯಕರ್ತ ಗಿರಿಧರ್ ಕುಲಕರ್ಣಿ ಅವರು ಎನ್‌ಟಿಸಿಎ, ಕರ್ನಾಟಕ ಸರ್ಕಾರದ ಅರಣ್ಯ ಪಡೆಯ ಮುಖ್ಯಸ್ಥರು (ಪಿಸಿಸಿಎಫ್), ಪಿಸಿಸಿಎಫ್ (ವನ್ಯಜೀವಿ) ಅವರಿಗೆ ದೂರು ಸಲ್ಲಿಸಿದ್ದರು.

'ಈ ಹೆದ್ದಾರಿ ಬೆಳಗಾವಿ ಜಿಲ್ಲೆಯ ಪಿರನವಾಡಿ, ನಾವಗೆ, ಕಿನಯೆ, ಕುಸುಮಲ್ಲಿ, ಜಾಂಬೋಟಿ, ಕಲ್ಮನಿ, ಕಣಕುಂಬಿ ಮೂಲಕ ಗೋವಾ ರಾಜ್ಯಕ್ಕೆ ಸಂಪರ್ಕ ಕಲ್ಪಿಸುತ್ತದೆ. ಪರಿಸರ ಅನುಮೋದನೆ ಅಗತ್ಯ ಇಲ್ಲ ಎಂದು ಹೆದ್ದಾರಿ ಪ್ರಾಧಿಕಾರ ತಿಳಿಸಿದೆ. ಗುತ್ತಿಗೆ ವಹಿಸಿಕೊಂಡ ಸಂಸ್ಥೆಯು ಕಾಮಗಾರಿಯ ಸರ್ವೆ ಆರಂಭಿಸಿದೆ. ಈ ಹೆದ್ದಾರಿ ಹಾದುಹೋಗುವ ಪ್ರದೇಶಗಳಲ್ಲಿ ಹುಲಿಗಳು ಇವೆ ಎಂಬುದು ಹುಲಿಗಳ ಸಮೀಕ್ಷೆಯಲ್ಲಿ (2018ರ ಸಮೀಕ್ಷೆ) ಗೊತ್ತಾಗಿದೆ. ಅಲ್ಲದೆ, ಆನೆ, ಚಿರತೆ, ಹಾರ್ನ್‌ಬಿಲ್ ಸೇರಿ ಅನೇಕ ಪ್ರಭೇದಗಳಿವೆ. ಅಳಿವಿನಂಚಿನ ಕೆಲ ಪ್ರಾಣಿಗಳೂ ಇವೆ. ಹೆದ್ದಾರಿ ನಿರ್ಮಾಣದಿಂದ ಇವುಗಳಿಗೆ ತೊಂದರೆ ಆಗಲಿದೆ' ಎಂದು ಗಿರಿಧರ್ ದೂರಿನಲ್ಲಿ ತಿಳಿಸಿದ್ದರು.

'ಇದೇ ಭಾಗದಲ್ಲಿ ಕಳಸಾ- ಬಂಡೂರಿ ಯೋಜನೆಗಾಗಿ 49 ಹೆಕ್ಟೇರ್ ಅರಣ್ಯ ಭೂಮಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ನೀರಾವರಿ ನಿಗಮವು ಕರ್ನಾಟಕ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದೆ. ಒಂದು ವೇಳೆ, ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಯಾದರೆ ವನ್ಯಜೀವಿ ಧಾಮಗಳು ಮತ್ತಷ್ಟು ಛಿದ್ರ ಆಗಲಿವೆ' ಎಂದು ಅವರು ಹೇಳಿದ್ದರು.

# ಅಪಪ್ರಚಾರ ಅಕ್ಷಮ್ಯ: ಬಿಎಸ್‌ವೈ

ಸಾವರ್ಕರ್ ರಥಯಾತ್ರೆ • ವಿರೋಧಿಗಳ ವಿರುದ್ಧ ವಾಗ್ದಾಳಿ

ಪ್ರಜಾವಾಣಿ ವಾರ್ತೆ



ಮೈಸೂರಿನಲ್ಲಿ 'ಸಾವರ್ಕರ್ ರಥಯಾತ್ರೆ'ಗೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಕೇಸರಿ ಬಾವುಟ ತೋರಿ ಮಂಗಳವಾರ ಚಾಲನೆ ನೀಡಿದರು. ಸಚಿವರಾದ ಎಸ್.ಟಿ.ಸೋಮಶೇಖರ್, ಕೆ.ಸಿ.ನಾರಾಯಣಗೌಡ ಇದ್ದರು

**ಮೈಸೂರು:** 'ಚಿಲ್ಲರೆ ರಾಜಕಾರಣಕ್ಕಾಗಿ ಸ್ವಾತಂತ್ರ್ಯ ವೀರ ಸಾವರ್ಕರ್ ವಿರುದ್ಧದ ಅಪಪ್ರಚಾರ ಅಕ್ಷಮ್ಯ. ವಿರೋಧಿಸುವವರು ಮೊದಲು ಬಸವಣ್ಣನವರ ವಚನಗಳನ್ನು ಓದಿಕೊಳ್ಳಲಿ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನಗರದ ಅರಮನೆ ಸಮೀಪದ ಮಂಗಳವಾರ 'ಸಾವರ್ಕರ್ ರಥ ಯಾತ್ರೆ'ಗೆ ಚಾಲನೆ ನೀಡಿದ ಅವರು, 'ಇವನಾರವ ಎನ್ನದೇ ಸಾವರ್ಕರ್ ನಮ್ಮವ ಎಂದು ಎಲ್ಲರೂ ಹೇಳಬೇಕು' ಎಂದು ಅಭಿಪ್ರಾಯಪಟ್ಟರು.

'ಸ್ವಾತಂತ್ರ್ಯ ಹೋರಾಟದೊಂದಿಗೆ ಹಿಂದೂ ಧರ್ಮದ ಸುಧಾರಣೆ, ರಕ್ಷಣೆ ಮಾಡಿದ ಸಾವರ್ಕರ್ ಅವರನ್ನು ಇಂದಿರಾ ಗಾಂಧಿ, ರಾಮ ಮನೋಹರ ಲೋಹಿಯಾ, ಸರ್ವಪಲ್ಲಿ ರಾಧಾಕೃಷ್ಣನ್ ಸೇರಿದಂತೆ ಮಹಾನ್ ನಾಯಕರು ಹೊಗಳಿದ್ದಾರೆ' ಎಂದರು.

'ಭಾರತದ ಅಪ್ರತಿಮ ಸುಪುತ್ರ, ವೀರ ಸಾವರ್ಕರ್ ಎಂದು ಕರೆದಿದ್ದ ಇಂದಿರಾಗಾಂಧಿಯವರು, ಸಾವರ್ಕರ್ ಸ್ಮಾರಕ ನಿಧಿಗೆ ವೈಯಕ್ತಿಕವಾಗಿ ದೇಣಿಗೆ ನೀಡಿದ್ದರು. ಅಂಚೆ ಚೀಟಿ ಬಿಡುಗಡೆಗೊಳಿಸಿದ್ದರು. ಇಂದಿನ ಕಾಂಗ್ರೆಸಿಗರು ಸಾವರ್ಕರ್ ಬಗ್ಗೆ ಅರಿವಿಲ್ಲ. ಅದನ್ನೇ ಬಂಡವಾಳ ಮಾಡಿಕೊಂಡು ದಾರಿ ತಪ್ಪಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ನಾಯಕರ ಹೆಸರು ಪ್ರಸ್ತಾಪಿಸದೇ ಟೀಕಿಸಿದರು.

'ಭಾರತ ವಿಶ್ವಗುರುವಾಗುವತ್ತ ದಾಪುಗಾಲಿಡುತ್ತಿದೆ. ಜೊತೆಗೆ ಅನೇಕ ಸವಾಲುಗಳನ್ನೂ ಎದುರಿಸುತ್ತಿದೆ. ಈ ಪರ್ವ ಕಾಲದಲ್ಲಿ ಕೆಲವರು ದೇಶದ ಮೌಲ್ಯಗಳಿಗೆ ಮಸಿ ಬಳಿಯುತ್ತಿದ್ದಾರೆ' ಎಂದು ವಿಷಾದಿಸಿದರು.

'ಎಂಟು ದಿನಗಳ ರಥಯಾತ್ರೆಯು ಅಪ್ರತಿಮ ವೀರನ ಜೀವನ ಮೌಲ್ಯ, ದೇಶ ಪ್ರೇಮದ ಸಂದೇಶವನ್ನು ಸಾರಲಿದೆ. ಚಾರಿತ್ರಿಕ ತಪ್ಪುಗಳನ್ನು ಸರಿಪಡಿಸಲಿದೆ. ದೇಶದ್ರೋಹಿಗಳಿಗೂ ಎಚ್ಚರಿಕೆ ನೀಡಲಿದೆ' ಎಂದರು.

ರಥಯಾತ್ರೆಗೆ ಕೇಸರಿ ಬಾವುಟ ತೋರಿದರು. ಸಚಿವರಾದ ಕೆ.ಸಿ.ನಾರಾಯಣಗೌಡ, ಎಸ್.ಟಿ.ಸೋಮಶೇಖರ್, ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಯಶಸ್ವಿನಿ, ರಥಯಾತ್ರೆ ಸಂಚಾಲಕ ರಜತ್ ಇದ್ದರು.

**ಮೂರು ಜಿಲ್ಲೆಗಳಲ್ಲಿ ಸಂಚಾರ:** ವಿ.ಡಿ.ಸಾವರ್ಕರ್ ಅವರ ಸ್ವಾತಂತ್ರ್ಯ ಹೋರಾಟ, ತ್ಯಾಗವನ್ನು ಜನರಿಗೆ ಪರಿಚಯಿಸಲು ರಥಯಾತ್ರೆ ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಸಂಚರಿಸಲಿದೆ. 24ರಂದು ಎಚ್.ಡಿ.ಕೋಟೆ, ಸರಗೂರು, 25, 26ರಂದು ನಂಜನಗೂಡು, ಚಾಮರಾಜನಗರ ಜಿಲ್ಲೆ, 27ರಿಂದ 29ರವರೆಗೆ ಮಂಡ್ಯ ಜಿಲ್ಲೆಯಲ್ಲಿ ಯಾತ್ರೆ ನಡೆಯಲಿದೆ. 30ರಂದು ಮೈಸೂರಿನಲ್ಲಿ ಸಮಾರೋಪಗೊಳ್ಳಲಿದೆ.

**ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳ ಮಂಟಪದಲ್ಲಿ ಬಿಜೆಪಿಯವರು ಸಾವರ್ಕರ್ ಚಿತ್ರ ಹಾಕಿದರೆ, ನಾವೂ ಬಸವಣ್ಣ, ಅಂಬೇಡ್ಕರ್ ಭಾವಚಿತ್ರ ಅಳವಡಿಸುತ್ತೇವೆ**
**ಸತೀಶ ಜಾರಕಿಹೊಳಿ**
ಕೆಪಿಸಿಸಿ ಕಾರ್ಯಾಧ್ಯಕ್ಷ

**ಧರ್ಮ- ದೇಶದ ಪರಿಕಲ್ಪನೆ ಇಲ್ಲದವರು ಸಾವರ್ಕರ್ ಅವರ ಬಗ್ಗೆ ಟೀಕಿಸುತ್ತಾರೆ. ಸಿದ್ದರಾಮಯ್ಯ ಇದೇ ರೀತಿ ಮುಂದುವರಿದರೆ ಜನರು ಪಾಠ ಕಲಿಸಲಿದ್ದಾರೆ**
**ಬಿ.ಎಸ್.ಯಡಿಯೂರಪ್ಪ**
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

## 'ವಿಚಾರ ಭಾವನೆ, ನಂಬಿಕೆಯದ್ದು'

**ಮಂಗಳೂರು:** 'ಸಿದ್ದರಾಮಯ್ಯ ಅವರು ಸಮಾಜವಾದಿ ಚಿಂತನೆಯಿಂದ ಬಂದವರು. ದೇವರು- ದಿಂಡರು, ರಾಷ್ಟ್ರವನ್ನು ನಂಬದ ಅವರೊಬ್ಬ ನಾಸ್ತಿಕವಾದಿ ಕಾಂಗ್ರೆಸಿಗ. ಸಾವರ್ಕರ್ ಅವರ ರಾಷ್ಟ್ರಾಭಿಮಾನ ಪ್ರಶ್ನಿಸುತ್ತಾರೆ. ಅವರಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರಶ್ನಿಸಿದರು.

ಮಂಗಳವಾರ ಮಾತನಾಡಿದ ಅವರು, 'ಮಾಂಸ ತಿಂದು ದೇವಸ್ಥಾನಕ್ಕೆ ಹೋದರೆ ಏನು ತಪ್ಪು ಎನ್ನುವ ಮೂಲಕ ಸಿದ್ದರಾಮಯ್ಯ ತಮ್ಮ ಚಿಂತನೆ ಹೊರಹಾಕಿದ್ದಾರೆ. ಪ್ರಶ್ನೆ ಆಹಾರ, ಇದು ಭಾವನೆ ಮತ್ತು ನಂಬಿಕೆಯ ವಿಚಾರ' ಎಂದರು. 'ಸಾವರ್ಕರ್ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದ ಅವರಿಂದ ಗಮನ ಬೇರೆ ಕಡೆ ಸೆಳೆಯಲು ಈ ರೀತಿ ಮಾನಸಿಕತೆ ಪ್ರದರ್ಶಿಸುತ್ತಿದ್ದಾರೆ' ಎಂದು ಹೇಳಿದರು.

## 'ಸಿದ್ದರಾಮಯ್ಯರನ್ನು ಮುಟ್ಟಿದರೆ ಕ್ರಾಂತಿ'

**ಚಿತ್ರದುರ್ಗ:** 'ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದಿರುವುದಕ್ಕೆ ಜನ ತಕ್ಕ ಪಾಠ ಕಲಿಸಿದ್ದಾರೆ. ಅವರನ್ನು ಮುಟ್ಟಲು ಯತ್ನಿಸಿದರೆ ದೊಡ್ಡ ಕ್ರಾಂತಿ ನಡೆಯುವುದು ನಿಶ್ಚಿತ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಎಚ್ಚರಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಯಾವುದಕ್ಕೂ ಹೆದರುವುದಿಲ್ಲ. ಅವರನ್ನು ಮುಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಅವರು ಬೆರಳು ತೋರಿಸಿದರೆ ನೀವು (ಬಿಜೆಪಿ) ಮನೆ ಬಿಟ್ಟು ಹೊರಗೆ ಬರುವುದಿಲ್ಲ' ಎಂದು ಹೇಳಿದರು.

# ಗಣೇಶೋತ್ಸವ ಅನುಮತಿಗೆ ಏಕಗವಾಕ್ಷಿ ವ್ಯವಸ್ಥೆ

**ಬೆಂಗಳೂರು:** ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಅನುಮತಿ ನೀಡಲು ಕಂದಾಯ, ಲೋಕೋಪಯೋಗಿ, ಇಂಧನ, ಅಗ್ನಿಶಾಮಕ ಮತ್ತು ಪೊಲೀಸ್ ಇಲಾಖೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಜಂಟಿಯಾಗಿ ಏಕಗವಾಕ್ಷಿ ವ್ಯವಸ್ಥೆಯನ್ನು ಆರಂಭಿಸಬೇಕು ಎಂದು ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಸುತ್ತೋಲೆ ಹೊರಡಿಸಿದ್ದಾರೆ.

ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿ ವಾರ್ಡ್‌ಗೆ ತಲಾ ಒಂದು ಏಕಗವಾಕ್ಷಿ ವ್ಯವಸ್ಥೆಯನ್ನು ಆರಂಭಿಸಬೇಕು. ಕಾರ್ಯಕ್ರಮ ಆಯೋಜಕರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು. ಅಂತಹ ಅರ್ಜಿಗಳನ್ನು ಜಂಟಿ ತಪಾಸಣೆ ನಡೆಸಿ ಮೂರು ದಿನಗಳೊಳಗೆ ನಿಯಮಾನುಸಾರ ಪರವಾನಗಿ ನೀಡಬೇಕು ಎಂದು ಎಲ್ಲ ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಕಮಿಷನರ್‌ಗಳು ಹಾಗೂ ಜಿಲ್ಲಾ ಪೊಲೀಸ್ ಎಸ್‌ಪಿಗಳಿಗೆ ಸೂಚಿಸಿದ್ದಾರೆ.

ನ್ಯಾಯಾಲಯಗಳು ನೀಡುವ ನಿರ್ದೇಶನಗಳು ಮತ್ತು ಸರ್ಕಾರದ ವಿವಿಧ ಇಲಾಖೆಗಳ ಸೂಚನೆಗಳನ್ನು ಪಾಲಿಸುವುದಾಗಿ ಆಯೋಜಕರಿಂದ ಮುಚ್ಚಳಿಕೆ ಪಡೆಯಬೇಕು. ಸಾರ್ವಜನಿಕ ಸುರಕ್ಷತೆ ಮತ್ತು ಪರಿಸರ ಮಾಲಿನ್ಯ ಉಂಟಾಗದಂತೆ ಕಾರ್ಯಕ್ರಮ ನಡೆಸುವುದನ್ನು ಖಾತರಿಪಡಿಸಿಕೊಳ್ಳಬೇಕು. ಅಗತ್ಯವಿರುವ ಕಡೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಸೂಚನೆ ನೀಡಬೇಕು ಎಂದು ತಿಳಿಸಿದ್ದಾರೆ.

ಹೈ ಟೆನ್ಷನ್ ವಿದ್ಯುತ್ ಮಾರ್ಗಗಳು ಹಾದುಹೋಗಿರುವ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಅವಕಾಶ ನೀಡಬಾರದು. ಗಣೇಶೋತ್ಸವಕ್ಕೂ ಮೊದಲು ಸ್ಥಳೀಯ ನಾಗರಿಕ ಸಮಿತಿ, ಮೊಹಲ್ಲಾ ಸಮಿತಿ, ಕಾವಲು ಸಮಿತಿ ಮತ್ತು ಸಂಘ ಸಂಸ್ಥೆಗಳ ಮುಖ್ಯಸ್ಥರನ್ನು ಒಳಗೊಂಡಂತೆ ಕೋಮು ಸೌಹಾರ್ದ ಸಭೆಗಳನ್ನು ನಡೆಸಬೇಕು ಎಂದು ಸೂಚಿಸಿದ್ದಾರೆ.

## 'ರಾಜೀನಾಮೆ ಇನ್ನೂ ಅಂಗೀಕರಿಸಿಲ್ಲ'

ಪ್ರಜಾವಾಣಿ ವಾರ್ತೆ

**ಬಾಗಲಕೋಟೆ:** 'ರೈಲ್ವೆ ಪೊಲೀಸ್ ಎಡಿಜಿಪಿ ಹುದ್ದೆಗೆ 2021ರ ನ.16 ರಂದು ರಾಜೀನಾಮೆ ನೀಡಿದ್ದೆ. ಕೇಂದ್ರದಿಂದ ಅನುಮೋದನೆ ಬಂದರೂ ರಾಜ್ಯ ಸರ್ಕಾರ ರಾಜೀನಾಮೆ ಅಂಗೀಕರಿಸಿಲ್ಲ' ಎಂದು ಆಮ್ ಆದ್ಮಿ ಪಾರ್ಟಿ ರಾಜ್ಯ ಘಟಕದ ಉಪಾಧ್ಯಕ್ಷ ಭಾಸ್ಕರ್ ರಾವ್ ದೂರಿದರು.

ಮಂಗಳವಾರ ಮಾತನಾಡಿದ ಅವರು, 'ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಹಲವಾರು ಬಾರಿ ಮನವಿ ಮಾಡಿದ್ದೇನೆ. ಆದರೆ, ಪ್ರಯೋಜನವಾಗಿಲ್ಲ' ಎಂದರು.

'ಬಿಜೆಪಿಗೆ ಸೇರ್ಪಡೆಯಾಗುತ್ತೇನೆ ಎಂದು ಭಾವಿಸಿದ್ದರು. ಎಎಪಿ ಸೇರಿದ್ದರಿಂದ ಸಿಟ್ಟಾಗಿದ್ದಾರೆ. ಪಿಂಚಣಿ ಆರಂಭವಾಗಿಲ್ಲ. ಬೆದರಿಕೆ ತಂತ್ರವಾಗಿ ಬಳಸಲಾಗುತ್ತಿದೆ. ಸರ್ಕಾರದ ಕೆಲವು ವಿಷಯಗಳು ಗೊತ್ತಿತ್ತು. ಅವಶ್ಯಕತೆ ಬಿದ್ದರೆ ಆ ವಿಷಯಗಳನ್ನು ನನ್ನ ರಕ್ಷಣೆಗೆ ಬಳಸಿಕೊಳ್ಳುತ್ತೇನೆ' ಎಂದು ಹೇಳಿದರು.

# ಕೆಪಿಟಿಸಿಎಲ್ ಪರೀಕ್ಷಾ ಅಕ್ರಮ: ಮತ್ತೆ ಮೂವರು ವಶ

**ಬೆಳಗಾವಿ:** ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಆರೋಪದ ಮೇಲೆ, ಪೊಲೀಸರು ಮಂಗಳವಾರ ಮತ್ತೆ ಮೂವರನ್ನು ವಶಕ್ಕೆ ಪಡೆದಿದ್ದಾರೆ.

ಈ ಮೂವರೂ ಬೆಳಗಾವಿ ನಗರದವರೇ ಆಗಿದ್ದು, ಇಲ್ಲಿನ ಕೇಂದ್ರದಲ್ಲಿಯೇ ಪರೀಕ್ಷೆ ಬರೆದಿದ್ದಾರೆ. ಅವರ ತೀವ್ರ ವಿಚಾರಣೆ ನಡೆಸಿದ ಬಳಿಕ ಇನ್ನೂ ಎರಡು ತಂಡಗಳು ಹಾಗೂ ಹಲವು ಅಭ್ಯರ್ಥಿಗಳು ಇದರಲ್ಲಿ ಭಾಗಿಯಾದ ಬಗ್ಗೆ ಖಚಿತ ಮಾಹಿತಿ ದೊರೆತಿದೆ.

ಪ್ರಕರಣ ಸಂಬಂಧ ಈಗಾಗಲೇ ಪೊಲೀಸರು 9 ಮಂದಿ ಬಂಧಿಸಿದ್ದು, ನಾಲ್ವರು ತಲೆಮರೆಸಿಕೊಂಡಿದ್ದಾರೆ.

## 'ಬೇನಾಮಿ ಕಾಯ್ದೆ ತಿದ್ದುಪಡಿ ಪೂರ್ವಾನ್ವಯ ಇಲ್ಲ'

**ನವದೆಹಲಿ (ಪಿಟಿಐ):** ಬೇನಾಮಿ ವಹಿವಾಟುಗಳ ನಿಷೇಧ ಕಾಯ್ದೆ–1988ರ 3(2)ನೇ ಸೆಕ್ಷನ್ ಅಸಾಂವಿಧಾನಿಕ. ಜತೆಗೆ ಈ ಕಾಯ್ದೆಗೆ 2016ರಲ್ಲಿ ತರಲಾದ ತಿದ್ದುಪಡಿಗಳನ್ನು ಪೂರ್ವಾನ್ವಯ ಮಾಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಈ ಕಾಯ್ದೆಗೆ 2016ರಲ್ಲಿ ತರಲಾಗಿದ್ದ ತಿದ್ದುಪಡಿಗಳನ್ನು ಪೂರ್ವಾನ್ವಯ ಮಾಡುವಂತಿಲ್ಲ ಎಂದು ಕಲ್ಕತ್ತಾ ಹೈಕೋರ್ಟ್ ನೀಡಿದ್ದ ತೀರ್ಪಿನ ವಿರುದ್ಧ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು.

'1988ರ ಕಾಯ್ದೆಯ 3(2) ನೇ ಸೆಕ್ಷನ್ ಅಸ್ಪಷ್ಟ ಸ್ವೇಚ್ಛೆಯಿಂದ ಬಳಸಲು ಅವಕಾಶವಿದೆ. ಹೀಗಾಗಿ ಅದು ಅಸಾಂವಿಧಾನಿಕ. ಸಂವಿಧಾನದ 20(1)ನೇ ವಿಧಿಯ ಪ್ರಕಾರ, ಯಾವುದೇ ಕಾನೂನನ್ನು ಅಪರಾಧಗಳಿಗೆ ಪೂರ್ವಾನ್ವಯ ಮಾಡುವಂತಿಲ್ಲ. ಹೀಗಾಗಿ ಈ ಕಾಯ್ದೆಗೆ 2016ರಲ್ಲಿ ತರಲಾದ ತಿದ್ದುಪಡಿಗಳನ್ನು ಪೂರ್ವಾನ್ವಯ ಮಾಡುವುದೂ ಅಸಾಂವಿಧಾನಿಕ' ಎಂದು ಸಿಜೆಐ ಎನ್.ವಿ.ರಮಣ ಅವರಿದ್ದ ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರಿದ್ದ ಪೀಠವು ಹೇಳಿದೆ.

# ಎಎಪಿ ಬೆಳವಣಿಗೆಯಿಂದ ಬಿಜೆಪಿಗೆ ಭೀತಿ: ಕೇಜ್ರಿವಾಲ್

**ನವದೆಹಲಿ (ಪಿಟಿಐ):** ಗುಜರಾತ್‌ನಲ್ಲಿ ಎಎಪಿ ನೆಲೆ ವಿಸ್ತರಿಸಿಕೊಳ್ಳುತ್ತಿರುವುದನ್ನು ಕಂಡು ಬಿಜೆಪಿ ಭೀತಿಗೊಳಗಾಗಿದೆ. ಹಾಗಾಗಿ, ರಾಜ್ಯ ಘಟಕದ ಅಧ್ಯಕ್ಷ ಸಿ. ಆರ್. ಪಾಟೀಲ್ ಅವರ ಸ್ಥಾನಕ್ಕೆ ಶೀಘ್ರವೇ ಬೇರೊಬ್ಬರನ್ನು ನೇಮಿಸಲಿದೆ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಮಂಗಳವಾರ ಹೇಳಿದ್ದಾರೆ.

ಕೇಜ್ರಿವಾಲ್ ಮತ್ತು ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಎರಡು ದಿನಗಳ ಭೇಟಿಗಾಗಿ ಸೋಮವಾರ ಗುಜರಾತ್‌ಗೆ ಬಂದಿದ್ದಾರೆ. ದೆಹಲಿ ಅಬಕಾರಿ ನೀತಿ ಜಾರಿ ಪ್ರಕ್ರಿಯೆಯಲ್ಲಿ ಅಕ್ರಮವಾಗಿ ನಡೆದಿದೆ ಎಂದು ಆರೋಪಿಸಿ ಸಿಸೋಡಿಯಾ ವಿರುದ್ಧ ಸಿಬಿಐ ತನಿಖೆ ನಡೆಸುತ್ತಿದೆ.

ಗುಜರಾತ್‌ನಲ್ಲಿ ಎಎಪಿ ಮತ್ತು ಬಿಜೆಪಿ ನಡುವಣ ಸ್ಪರ್ಧೆಯು ಮಹಾಭಾರತದಂತಹ 'ಧರ್ಮಯುದ್ಧ' ಎಂದು ಕೇಜ್ರಿವಾಲ್ ಬಣ್ಣಿಸಿದ್ದಾರೆ. ಬಿಜೆಪಿಯ 'ಸೇನೆ'ಯಲ್ಲಿ ಸಿಬಿಐ, ಇ.ಡಿ.ಯಂತಹ ತನಿಖಾ ಸಂಸ್ಥೆಗಳಿವೆ. ಆದರೆ, ತಮಗೆ ಶ್ರೀಕೃಷ್ಣನ ಬೆಂಬಲವಿದೆ ಎಂದು ಅವರು ಹೇಳಿದ್ದಾರೆ. ಹಿಮ್ಮತ್‌ನಗರ ಮತ್ತು ಸಬರ್‌ಕಾಂತ ಜಿಲ್ಲೆಗಳಲ್ಲಿ ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿ ಕೇಜ್ರಿವಾಲ್ ಮಾತನಾಡಿದರು.

ಆದರೆ, ಕೇಜ್ರಿವಾಲ್ ಹೇಳಿಕೆಗಳಿಗೆ ಬಿಜೆಪಿ ತಿರುಗೇಟು ನೀಡಿದೆ. ಕೇಜ್ರಿವಾಲ್ ಅವರು ಹಗಲುಗನಸು ಕಾಣುವುದನ್ನು ನಿಲ್ಲಿಸಬೇಕು ಎಂದು ಗುಜರಾತ್ ಬಿಜೆಪಿ ಮಾಧ್ಯಮ ವಿಭಾಗದ ಸಂಚಾಲಕ ಯಜ್ಞೇಶ್ ದವೆ ಹೇಳಿದ್ದಾರೆ.

'ರಾಜಕಾರಣ ಮತ್ತು ಸಾರ್ವಜನಿಕ ಸೇವೆಯನ್ನು ಮೂಲಗಳ ಪ್ರಕಾರ ನಡೆಸಲಾಗದು. ನೀವು ಬಿಜೆಪಿ ಕುರಿತ ಚಿಂತೆಯನ್ನು ಬಿಟ್ಟು ನಿಮ್ಮ ಬಗ್ಗೆ ಮತ್ತು ನಿಮ್ಮ ಅಬಕಾರಿ ಸಚಿವರ ಬಗ್ಗೆ ಚಿಂತಿಸಿ' ಎಂದು ಗುಜರಾತ್ ಬಿಜೆಪಿ ವಕ್ತಾರ ರಾಜೇಂದ್ರ ತ್ರಿವೇದಿ ಹೇಳಿದ್ದಾರೆ.

### ಎಎಪಿ ಕಾರ್ಯಕರ್ತರು ಬಿಜೆಪಿಗೆ

ಎಎಪಿಯ ಹಲವು ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ದೆಹಲಿಯಲ್ಲಿ ಬಿಜೆಪಿಗೆ ಮಂಗಳವಾರ ಸೇರ್ಪಡೆಯಾದರು. ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಅವರು ಪಕ್ಷಕ್ಕೆ ಸೇರ್ಪಡೆಯಾದವರನ್ನು ಸ್ವಾಗತಿಸಿದರು.

ಮಯೂರ್ ವಿಹಾರ ಜಿಲ್ಲಾ ಎಎಪಿ ಘಟಕದ ಉಪಾಧ್ಯಕ್ಷ ಅನುಜ್ ಕುಮಾರ್ ಸಿಂಗ್, ಪಟಪರ್‌ಗಂಜ್ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ಜಿತೇಂದ್ರ ಶರ್ಮಾ, ಕಾರ್ಯಕರ್ತರಾದ ಅಂಜನಿ ಮಿಶ್ರಾ, ಕೃಷ್ಣ ಕುಮಾರ್, ಅಮರನಾಥ್ ಮತ್ತು ಡ್ಯಾನಿಶ್ ಖಾನ್ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ ಎಂದು ದೆಹಲಿ ಬಿಜೆಪಿ ಹೇಳಿದೆ.

### ಮುಖ್ಯಾಂಶಗಳು

- ಅಬಕಾರಿ ಹಗರಣ: ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿದ ಜಾರಿ ನಿರ್ದೇಶನಾಲಯ
- ನಿಯಮಗಳ ಉಲ್ಲಂಘನೆ ಮೇಲ್ನೋಟಕ್ಕೆ ಕಾಣಿಸುತ್ತದೆ ಎಂದು ಮುಖ್ಯಕಾರ್ಯದರ್ಶಿ ವರದಿ

ಎಎಪಿ ಸುಳ್ಳರ ಪಕ್ಷ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮಾದರಿಯು ಅದಕ್ಷತೆಯ ವಿಫಲವಾಗಿದೆ. ಸೋನಿಯಾ ಅವರು ಬಿಜೆಪಿ ಕುರಿತು ಹೇಳುತ್ತಿರುವುದೂ ಸುಳ್ಳು

**ಅನುರಾಗ್ ಠಾಕೂರ್,** ಕೇಂದ್ರ ಸಚಿವ

ಗುಜರಾತ್‌ನ ಯುವಜನರ ಉತ್ಸಾಹ ನೋಡಿದರೆ, ಮನೀಷ್ ಸಿಸೋಡಿಯಾ ಅವರ ಬಂಧನ 2–3 ದಿನಗಳಲ್ಲಿಯೇ ಆಗುವುದು ಅನಿವಾರ್ಯ

**ಅರವಿಂದ ಕೇಜ್ರಿವಾಲ್,** ಎಎಪಿ ಮುಖ್ಯಸ್ಥ

ವಿರೋಧ ಪಕ್ಷಗಳಿಗೆ ಎನ್‌ಸಿಪಿ ವರಿಷ್ಠ ಶರದ್ ಪವಾರ್ ಒತ್ತಾಯ

# ಭಿನ್ನಾಭಿಪ್ರಾಯ ಮರೆತು ಒಂದಾಗಿ

**ನವದೆಹಲಿ (ಪಿಟಿಐ):** 2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಸಲುವಾಗಿ ತಮ್ಮ ನಡುವಿನ ಎಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಬೇಕು ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ವಿರೋಧ ಪಕ್ಷಗಳನ್ನು ಮಂಗಳವಾರ ಒತ್ತಾಯಿಸಿದ್ದಾರೆ.

ಅಲ್ಲದೇ, ದೆಹಲಿ ಅಬಕಾರಿ ನೀತಿ–2021ರಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕೇಂದ್ರದ ತನಿಖಾ ಸಂಸ್ಥೆಗಳಿಂದ ದಾಳಿಗೆ ಒಳಗಾಗಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಜೊತೆಗೆ ನಿಲ್ಲದಿರುವ ಕಾಂಗ್ರೆಸ್‌ನ ನಡೆಯನ್ನು ಸಹ ಅವರು ಟೀಕಿಸಿದ್ದಾರೆ.

ಪಕ್ಷದ ಅಲ್ಪಸಂಖ್ಯಾತರ ಘಟಕದ ಸಭೆಯಲ್ಲಿ ಮಾತನಾಡಿದ ಅವರು, 'ಅರವಿಂದ ಕೇಜ್ರಿವಾಲ್ ಅವರೊಂದಿಗೆ ಕಾಂಗ್ರೆಸ್‌ಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ, ಆ ಪಕ್ಷದೊಂದಿಗೆ ನಿಲ್ಲಬೇಕಾದುದು ನಿಮ್ಮ ಕರ್ತವ್ಯ. ನಮ್ಮ ನಿಜವಾದ ಹೋರಾಟ ಬಿಜೆಪಿ ಹಾಗೂ ಕೋಮು ಶಕ್ತಿಗಳ ವಿರುದ್ಧ' ಎಂದರು.

'ಪ್ರಜ್ಞಾವಂತರಿ, ಪ್ರಗತಿಪರರಿ ಕೋಮುಶಕ್ತಿಗಳಿಗೆ ಲಾಭವಾಗುವಂತಹ ಯಾವುದೇ ನಡೆ ನಮ್ಮದಾಗಬಾರದು. ಪ್ರತಿಯೊಬ್ಬರೂ ಈ ಅಂಶವನ್ನು ನೆನಪಿನಲ್ಲಿಡಬೇಕು' ಎಂದು ಪವಾರ್ ಹೇಳಿದರು.

## ಕಾಂಗ್ರೆಸ್‌ನ 'ಭಾರತ ಒಗ್ಗೂಡಿಸಿ ಯಾತ್ರೆ' ಲೋಗೊ, ಟ್ಯಾಗ್‌ಲೈನ್ ಅನಾವರಣ

**ನವದೆಹಲಿ (ಪಿಟಿಐ):** ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಯಲಿರುವ 'ಭಾರತ್ ಜೋಡೋ ಯಾತ್ರೆ'ಯ (ಭಾರತ ಒಗ್ಗೂಡಿಸಿ ಯಾತ್ರೆ) ಲೋಗೊ, ಟ್ಯಾಗ್‌ಲೈನ್ ಮತ್ತು ವೆಬ್‌ಸೈಟ್ ಅನ್ನು ಕಾಂಗ್ರೆಸ್ ಪಕ್ಷವು ಮಂಗಳವಾರ ಅನಾವರಣಗೊಳಿಸಿದೆ.

ಯಾತ್ರೆಯ 'ಮಿಲೆ ಕದಂ, ಜುಡೆ ವತನ್' ಟ್ಯಾಗ್ ಲೈನ್ ಅನ್ನು ಯಾತ್ರೆಯ ಸಂಘಟನಾ ಸಮಿತಿ ಮುಖ್ಯಸ್ಥ, ಪಕ್ಷದ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅನಾವರಣಗೊಳಿಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೈರಾಮ್ ರಮೇಶ್, 'ಸೆಪ್ಟೆಂಬರ್ 7ರಂದು ಈ ಯಾತ್ರೆಯು ಆರಂಭವಾಗಲಿದೆ. ಸುಮಾರು ಐದು ತಿಂಗಳ ಕಾಲ, ದಕ್ಷಿಣದಿಂದ ಕಾಶ್ಮೀರದ ಕನ್ಯಾಕುಮಾರಿಯವರೆಗೆ 3,570 ಕಿ.ಮೀ ಯಾತ್ರೆ ನಡೆಯಲಿದೆ ಎಂದು ತಿಳಿಸಿದರು.

ದಿಗ್ವಿಜಯ್ ಸಿಂಗ್ ಅವರು 'ಈ ಭಾರತ್ ಜೋಡೋ ಯಾತ್ರೆಯಲ್ಲಿ ಎಲ್ಲಾ ಧರ್ಮ, ಜಾತಿ ಮತ್ತು ಸಮುದಾಯದ ಜನರು ಪಾಲ್ಗೊಳ್ಳಬೇಕೆಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಬಯಸಿದ್ದಾರೆ. ನಾವು ಯಾತ್ರೆಯನ್ನು ಸಾರ್ವಜನಿಕ ಚಳವಳಿಯಾಗಿಸಲು ಬಯಸಿದ್ದೇವೆ' ಎಂದರು.

ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಈ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಯಾತ್ರೆಯ ಭಾಗವಾಗಿ 12 ರಾಜ್ಯಗಳಲ್ಲಿ ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪಾದಯಾತ್ರೆ ನಡೆಯಲಿದೆ.

## ರಾಹುಲ್– ಗೆಹಲೋತ್ ಭೇಟಿ ಇಂದು

**ನವದೆಹಲಿ:** ಕಾಂಗ್ರೆಸ್‌ನ ಅಧ್ಯಕ್ಷ ಚುನಾವಣೆಯ ದಿನಾಂಕ ಘೋಷಣೆಗೆ 3– 4 ದಿನಗಳು ಬಾಕಿ ಇದ್ದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಭೇಟಿ ಆಗಲಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ರಾಹುಲ್ ಗಾಂಧಿ ಅವರು ಈ ಹಿಂದೆಯೇ ನಿರಾಕರಿಸಿದ್ದರು. ತಮ್ಮ ನಿರ್ಧಾರವನ್ನು ಬದಲಿಸಲು ಅವರು ಮತ್ತೆ ನಿರಾಕರಿಸಿದ್ದಾರೆ. ಹಾಗಾಗಿ ಗಾಂಧಿ ಕುಟುಂಬದ ಹೊರಗಿನವರು ಪಕ್ಷದ ಅಧ್ಯಕ್ಷರಾಗಬೇಕು ಅಥವಾ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೇ ಆ ಸ್ಥಾನದಲ್ಲಿ ಮುಂದುವರಿಯಬೇಕು. ಆದರೆ, ಹುದ್ದೆಯಲ್ಲಿ ಮುಂದುವರಿಯುವುದಿಲ್ಲ ಎಂದು ಸೋನಿಯಾ ಅವರು ಹಿರಿಯ ನಾಯಕರಿಗೆ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

# ಮುಸ್ಲಿಂ ಬಾಲಕಿಯ ಒಪ್ಪಿತ ವಿವಾಹಕ್ಕೆ ಪೋಕ್ಸೊ ಅನ್ವಯಿಸದು: ದೆಹಲಿ ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮುಸ್ಲಿಂ ಕಾನೂನು ಪ್ರಕಾರ ವಯಸ್ಕ ಹೆಣ್ಣು ತನ್ನ ಪೋಷಕರ ಒಪ್ಪಿಗೆ ಇಲ್ಲದೆ ಮದುವೆಯಾಗಬಹುದು. ಮದುವೆಯಾದ ಹೆಣ್ಣು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾಗಿದ್ದರೂ ತನ್ನ ಪತಿಯೊಂದಿಗೆ ವಾಸಿಸುವ ಹಕ್ಕು ಆಕೆಗೆ ಇದೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಮುಸ್ಲಿಂ ಬಾಲಕಿ ಮತ್ತು ಆಕೆಯ ಪತಿಗೆ ರಕ್ಷಣೆ ನೀಡುವಂತೆ ಸರ್ಕಾರಕ್ಕೆ ನಿರ್ದೇಶಿಸುವಾಗ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಇಂತಹ ಪ್ರಕರಣಗಳಲ್ಲಿ ಮದುವೆಯ ನಂತರ ಆಕೆಯೊಂದಿಗೆ ಪತಿ ಲೈಂಗಿಕ ಕ್ರಿಯೆ ನಡೆಸಿದ್ದರೆ ಅದು ಮಕ್ಕಳ ರಕ್ಷಣಾ ಕಾಯ್ದೆ ವ್ಯಾಪ್ತಿಗೆ ಬಾರದು ಎಂದು ನ್ಯಾಯಮೂರ್ತಿ ಜಸ್ಮೀತ್ ಸಿಂಗ್ ಅವರಿದ್ದ ಏಕ ಸದಸ್ಯ ಪೀಠ ಹೇಳಿದೆ.

ಈ ಪ್ರಕರಣವನ್ನು ಪೋಕ್ಸೊ ಕಾಯ್ದೆಯಡಿ ಪರಿಗಣಿಸಲು ಕೋರಿದ ಅರ್ಜಿ ವಿಚಾರಣೆ ವೇಳೆ ನ್ಯಾಯಪೀಠವು, ಈ ಜೋಡಿ ಪರಸ್ಪರ ಪ್ರೀತಿಸುತ್ತಿದ್ದು, ಮುಸ್ಲಿಂ ವೈಯಕ್ತಿಕ ಕಾನೂನಿನ ಪ್ರಕಾರ ವಿವಾಹವಾಗಿದ್ದು, ದೈಹಿಕ ಸಂಬಂಧ ಹೊಂದಿದೆ ಎಂದು ಹೇಳಿದೆ.

ಬಾಲಕಿ ಗರ್ಭಿಣಿಯಾಗಿದ್ದಾಳೆ ಆಕೆಯನ್ನು ಪತಿಯಿಂದ ಬೇರ್ಪಡಿಸಿದರೆ ಹುಟ್ಟಲಿರುವ ಮಗು ಮತ್ತು ಆಕೆಗೂ ಹೆಚ್ಚು ಆಘಾತವಾಗಲಿದೆ. ಇಲ್ಲಿ ಅರ್ಜಿದಾರರಿಗೆ ನೀಡುವ ರಕ್ಷಣೆಯನ್ನು ಬಲವಂತ ಹೇಳಲು ಸರ್ಕಾರದ ಗುರಿಯಾಗಬೇಕು.

ಬಾಲಕಿ ಒಪ್ಪಿತ ಮದುವೆಯಾಗಿದ್ದರೆ ಮತ್ತು ಆಕೆ ಸಂತೋಷವಾಗಿದ್ದರೆ, ಆಗ ವ್ಯಕ್ತಿಯ ಬದುಕಿನಲ್ಲಿ ಪ್ರವೇಶಿಸಲು ಮತ್ತು ದಂಪತಿ ಬೇರ್ಪಡಿಸಲು ಯಾರಿಗೂ ಅವಕಾಶವಿಲ್ಲ. ಒಂದು ವೇಳೆ ಇದಕ್ಕೆ ಅಸ್ತದ ನೀಡಿದರೆ, ವೈಯಕ್ತಿಕ ಬದುಕನ್ನು ಕಸಿದುಕೊಂಡಂತೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಬಾಲಕಿ (15 ವರ್ಷ, 5 ತಿಂಗಳು) ಮಾರ್ಚ್ 11ರಂದು ಬಿಹಾರದಲ್ಲಿ ತನ್ನ ಪ್ರೇಮಿ ಜತೆ ವಿವಾಹವಾಗಿದ್ದಳು. 'ಪೋಷಕರು ನಿರಂತರ ಹಲ್ಲೆ ನಡೆಸುತ್ತಿದ್ದರು. ಇದರಿಂದ ಬೇಸತ್ತು ತನ್ನ ಸ್ನೇಹಿತನೊಂದಿಗೆ ಓಡಿ ಹೋಗಿ ಮದುವೆಯಾಗಿರುವೆ' ಎಂದು ಹೇಳಿರುವ ಬಾಲಕಿ, ರಕ್ಷಣೆ ಕೋರಿದ್ದಳು.

# ಸಮಯ ಪಾಲಿಸದ ಸರ್ಕಾರ: ಗಡ್ಕರಿ

**ಮುಂಬೈ:** ಕೇಂದ್ರ ಸರ್ಕಾರವು ಸೂಕ್ತ ಸಮಯಕ್ಕೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಆರೋಪಿಸಿದ್ದಾರೆ.

ಅತ್ಯಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಬಿಜೆಪಿ ಸಂಸದೀಯ ಮಂಡಳಿಯಿಂದ ತಮ್ಮನ್ನು ಕೈಬಿಟ್ಟ ಬಳಿಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರವನ್ನು ಗಡ್ಕರಿ ಅವರು ಗುರಿಯಾಗಿಸಿದಂತೆ ತೋರುತ್ತಿದೆ.

ಸಿವಿಲ್ ಎಂಜಿನಿಯರ್ ಸಂಘಟನೆಯ ಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಗುಣಮಟ್ಟದಲ್ಲಿ ರಾಜಿಯಾಗದೆ, ಪರ್ಯಾಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ವೆಚ್ಚವನ್ನು ಕಡಿಮೆ ಮಾಡಬಹುದು. ನಿರ್ಮಾಣ ಕ್ಷೇತ್ರದಲ್ಲಿ ಸಮಯ ಮಹತ್ವದ ಪಾತ್ರ ವಹಿಸುತ್ತದೆ. ಸಮಯವೇ ದೊಡ್ಡ ಬಂಡವಾಳ. ಸಮಸ್ಯೆ ಎಂದರೆ, ಸರ್ಕಾರವು ಸಮಯಕ್ಕೆ ಸರಿಯಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿಲ್ಲ' ಎಂದು ಹೇಳಿದರು.

ಆರ್‌ಎಸ್‌ಎಸ್ ಕೇಂದ್ರ ಕಚೇರಿ ಇರುವ ನಾಗಪುರ ಮೂಲದವರಾದ ಗಡ್ಕರಿ ಅವರು ಈ ಹಿಂದೆ ನೀಡಿದ್ದ ಕೆಲವು ಹೇಳಿಕೆಗಳು ಬಿಜೆಪಿ ನಾಯಕರಿಗೆ ಇಷ್ಟವಾಗಿರಲಿಲ್ಲ.

# ಪ್ರಾಧ್ಯಾಪಕರ ಹುದ್ದೆ: ಪರಿಣತರ ನೇಮಿಸಿಕೊಳ್ಳಲು ಅನುಮತಿ

**ನವದೆಹಲಿ (ಪಿಟಿಐ):** ವಿಶ್ವವಿದ್ಯಾಲಯ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಮುಂದಿನ ದಿನಗಳಲ್ಲಿ ವಿಷಯ ತಜ್ಞರನ್ನು ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿಕೊಳ್ಳಬಹುದಾಗಿದೆ.

ಯುಜಿಸಿ 'ಐದಕ್ಕಾಗಿ 'ಪ್ರೊಫೆಸರ್ಸ್ ಆಫ್ ಪ್ರಾಕ್ಟೀಸ್' ಎಂಬ ಯೋಜನೆ ಸಿದ್ಧಪಡಿಸಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇದು ಕಾರ್ಯಗತಗೊಳ್ಳಲಿದೆ. ಕಳೆದ ವಾರ ನಡೆದ ಯುಜಿಸಿಯ 560ನೇ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಮುಂದಿನ ತಿಂಗಳು ಅಧಿಸೂಚನೆ ಹೊರಡಿಸುವ ಸಾಧ್ಯತೆ ಇದೆ.

'ಎಂಜಿನಿಯರಿಂಗ್, ವಿಜ್ಞಾನ, ಮಾಧ್ಯಮ, ಸಾಹಿತ್ಯ, ನವೋದ್ಯಮ, ಸಮಾಜವಿಜ್ಞಾನ, ಲಲಿತಕಲೆ, ನಾಗರಿಕ ಸೇವೆ, ಸಶಸ್ತ್ರ ಪಡೆ ಹಾಗೂ ಇತರ ಕ್ಷೇತ್ರಗಳ ಕೇ 10ವರ್ಷ ಪರಿಣತರನ್ನು ಬೋಧಕರನ್ನಾಗಿ ನೇಮಿಸಿಕೊಳ್ಳಬಹುದು.

## ಸೋನಾಲಿ ಪೋಗಾಟ್ ನಿಧನ




**ಪಣಜಿ (ಪಿಟಿಐ):** ಹರಿಯಾಣದ ಬಿಜೆಪಿ ನಾಯಕಿ, ನಟಿ, ಬಿಗ್‌ಬಾಸ್ ಖ್ಯಾತಿಯ ಸೋನಾಲಿ ಪೋಗಾಟ್ (42) ಹೃದಯಾಘಾತದಿಂದ ಗೋವಾದಲ್ಲಿ ನಿಧನರಾದರು. 'ಸೋನಾಲಿ ಗೋವಾ ಪ್ರವಾಸದಲ್ಲಿದ್ದರು.

ವಿಚಾರಣೆ ತ್ವರಿತವಾಗಿ ಕೈಗೆತ್ತಿಕೊಳ್ಳಲು ಮನವಿ

ಅಪರಾಧಿಗಳ ಬಿಡುಗಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಕೂಡ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ

## ಅತ್ಯಾಚಾರಿಗಳ ಬಿಡುಗಡೆ: ಅರ್ಜಿ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ 11 ಅಪರಾಧಿಗಳನ್ನು ಗುಜರಾತ್ ಸರ್ಕಾರವು ಬಿಡುಗಡೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ನೀಡಿದೆ.



ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಸಿ.ಟಿ. ರವಿಕುಮಾರ್ ಅವರ ಪೀಠವು, ಅಪರಾಧಿಗಳನ್ನು ಅವಧಿಪೂರ್ವ ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ನಡೆಯ ಕುರಿತು ತೀವ್ರ ವಿರೋಧ ವ್ಯಕ್ತವಾಗಿದೆ.

ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್ ಮತ್ತು ಸಾಮಾಜಿಕ ಕಾರ್ಯಕರ್ತೆ ರೂಪ್ ರೇಖಾ ರಾಣಿ ಅವರು 11 ಅಪರಾಧಿಗಳ ಅವಧಿಪೂರ್ವ ಬಿಡುಗಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ಪರವಾಗಿ ವಕೀಲರಾದ ಕಪಿಲ್ ಸಿಬಲ್ ಮತ್ತು ಅಪರ್ಣಾ ಭಟ್ ವಾದ ಮಂಡಿಸಿದರು. ಅರ್ಜಿಯ ವಿಚಾರಣೆಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಬೇಕು ಎಂದು ಮನವಿ ಮಾಡಿದರು.

'ನಾವು ಅವಧಿಪೂರ್ವ ಬಿಡುಗಡೆಯನ್ನು ಪ್ರಶ್ನಿಸುತ್ತಿದ್ದೇವೆ ಹೊರತು ಸುಪ್ರೀಂ ಕೋರ್ಟ್ ಆದೇಶವನ್ನಲ್ಲ. ನ್ಯಾಯಾಲಯವು ಸರಿಯಾಗಿಯೇ ಮಾಡಿದೆ. ಆದರೆ, ಗುಜರಾತ್ ಸರ್ಕಾರವು ಯಾವ ಆಧಾರದಲ್ಲಿ ಅತ್ಯಾಚಾರ ಅಪರಾಧಿಗಳನ್ನು ಬಿಡುಗಡೆ ಮಾಡಿತು ಎನ್ನುವುದಷ್ಟೆ ನಮ್ಮ ಪ್ರಶ್ನೆ' ಎಂದು ನ್ಯಾಯಾಲಯಕ್ಕೆ ವಕೀಲ ಕಪಿಲ್ ಸಿಬಲ್ ಹೇಳಿದರು.

# ಇಸ್ಲಾಂ ವಿರುದ್ಧ ಹೇಳಿಕೆ: ಬಿಜೆಪಿ ಶಾಸಕ ರಾಜಾಸಿಂಗ್ ಅಮಾನತು

ಹೈದರಾಬಾದ್ (ಪಿಟಿಐ): ಇಸ್ಲಾಂ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿ ಅಲ್ಪಸಂಖ್ಯಾತರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ ಆರೋಪದಡಿ ತೆಲಂಗಾಣದ ಬಿಜೆಪಿ ಶಾಸಕ ರಾಜಾ ಸಿಂಗ್ ಅವರನ್ನು ಪೊಲೀಸರು ಮಂಗಳವಾರ ಬೆಳಿಗ್ಗೆ ಬಂಧಿಸಿದ್ದು, ಸಂಜೆ ವೇಳೆಗೆ ನ್ಯಾಯಾಲಯ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ.

ವಿವಾದಿತ ಹಾಸ್ಯ ಕಲಾವಿದ ಮುನವ್ವರ್ ಫಾರೂಕಿ ಅವರನ್ನು ಟೀಕಿಸಿ, ಬಿಜೆಪಿಯ ಉಚ್ಚಾಟಿತ ನಾಯಕಿ ನೂಪುರ್ ಶರ್ಮಾ ಅವರನ್ನು ಅನುಕರಿಸಿ ಇಸ್ಲಾಂ ಧರ್ಮ ಮತ್ತು ಪ್ರವಾದಿ ವಿರುದ್ಧ ನೀಡಿರುವ ಹೇಳಿಕೆಯ ದೃಶ್ಯದ ತುಣುಕನ್ನು ಶಾಸಕ ಸಿಂಗ್ ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು.

ಮಂಗಳವಾರ ನಂದಂಪಲ್ಲಿ ಕೋರ್ಟ್ ಪ್ರದೇಶದಲ್ಲಿ ಬಂಧಿತ ಶಾಸಕರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಉದ್ರಿಕ್ತ ಪರಿಸ್ಥಿತಿ ಉಂಟಾಗಿ, ಸಿಂಗ್ ವಿರುದ್ಧ ಜನರ ಗುಂಪೊಂದು ಪ್ರತಿಭಟಿಸಲು ಯತ್ನಿಸಿತ್ತು. ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ, ಗುಂಪು ಚದುರಿಸಿದರು.

ಕಡು ಹಿಂದುತ್ವವಾದಿ ರಾಜಾ ಸಿಂಗ್ ಅವರು, ಪ್ರವಾದಿ ಮಹಮ್ಮದ್ ಕುರಿತು ನೀಡಿದ್ದ ಹೇಳಿಕೆಯು ವಿವಾದಕ್ಕೀಡಾಗುತ್ತಿದ್ದಂತೆ ಬಿಜೆಪಿ ಅವರನ್ನು ಪಕ್ಷದಿಂದ ಅಮಾನತು ಮಾಡಿದೆ. ಶಾಸಕರಿಗೆ ಕಾರಣ ಕೇಳಿ ನೋಟಿಸ್ ಕೂಡ ನೀಡಿದೆ.

ಶಾಸಕರ ಆಕ್ಷೇಪಾರ್ಹ ಹೇಳಿಕೆ ಖಂಡಿಸಿ ಮತ್ತು ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸೋಮವಾರ ರಾತ್ರಿಯೇ ಶಾಸಕರ ನಿವಾಸದ ಎದುರು ಮುಸ್ಲಿಂ ಸಮುದಾಯದವರು ಪ್ರತಿಭಟನೆ ನಡೆಸಿದ್ದರು. ಎಐಎಂಐಎಂನ ಹಲವು ಶಾಸಕರು, ಪಾಲಿಕೆ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡು, ರಾಜಾ ಸಿಂಗ್ ಬಂಧನಕ್ಕೆ ಪಟ್ಟುಹಿಡಿದಿದ್ದರು.

ಪ್ರವಾದಿ ಮುಹಮ್ಮದ್, ಇಸ್ಲಾಂ ನಿಂದಿಸಿ ಶಾಸಕರು ನೀಡಿರುವ ಹೇಳಿಕೆಯನ್ನು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ತೀವ್ರವಾಗಿ ಖಂಡಿಸಿದೆ.

ಹೈದರಾಬಾದ್ ಸೇರಿ ತೆಲಂಗಾಣದ ವಿವಿಧೆಡೆ ನಾಲ್ಕು ಪ್ರಕರಣಗಳು ಶಾಸಕರ ವಿರುದ್ಧ ದಾಖಲಾಗಿವೆ. ಧರ್ಮಗಳ ನಡುವೆ ದ್ವೇಷ ಮೂಡಿಸಿದ, ನಿರ್ದಿಷ್ಟ ಧರ್ಮದ ಅವಹೇಳನ ಮಾಡಿದ ಆರೋಪದಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

### 'ವಿಡಿಯೊ 2ನೇ ಭಾಗ ಬಿಡುಗಡೆ ಮಾಡುವೆ'

'ವಿಡಿಯೊ ಅನ್ನು ಯೂಟ್ಯೂಬ್‌ನಿಂದ ತೆಗೆದುಹಾಕಿದ್ದಾರೆ. ಕೂಡಲೇ ವಿಡಿಯೊದ 2ನೇ ಭಾಗ ಅಪ್‌ಲೋಡ್ ಮಾಡುವುದು ಖಚಿತ' ಎಂದು ರಾಜಾ ಸಿಂಗ್ ಪ್ರತಿಕ್ರಿಯಿಸಿದರು. 'ನಾನು ಇದನ್ನು ಧರ್ಮಕ್ಕಾಗಿ ಮಾಡಿರುವೆ. ಧರ್ಮಕ್ಕಾಗಿ ಸಾಯಲೂ ಸಿದ್ಧ. ರಾಮ, ಸೀತಾರನ್ನು ಟೀಕಿಸುವ ಮುನವ್ವರ್ ಫಾರೂಕಿ ಕಾರ್ಯಕ್ರಮಕ್ಕೆ ಅವಕಾಶ ನೀಡಬಾರದೆಂದು ಡಿಜಿಪಿ ಅವರಿಗೆ ಕೈಮುಗಿದು ಕೇಳುತ್ತೇನೆ' ಎಂದರು.


ಪೊಲೀಸರ ಬಂಧನದಲ್ಲಿ ರಾಜಾಸಿಂಗ್

ಮುಸಲ್ಮಾನರನ್ನು ಭಾವನಾತ್ಮಕ, ಮಾನಸಿಕವಾಗಿ ಶೋಷಿಸುವುದೇ ಬಿಜೆಪಿಯ ನೀತಿ. ನೂಪುರ್ ಶರ್ಮಾ ಪ್ರಕರಣದಿಂದ ಪಾಠ ಕಲಿತಿಲ್ಲ. ಇದು, ಅದರ ಮುಂದುವರಿದ ಭಾಗ

**ಅಸಾದುದ್ದೀನ್ ಓವೈಸಿ,** ಎಐಎಂಐಎಂ ಮುಖ್ಯಸ್ಥ, ಸಂಸದ

ಶಾಸಕ ರಾಜಾ ಸಿಂಗ್ ಪಕ್ಷದ ನಿಯಮಕ್ಕೆ ವಿರುದ್ಧವಾಗಿ ಹೇಳಿಕೆ ನೀಡಿದ್ದಾರೆ. ವಿಚಾರಣೆ ಕಾಯ್ದಿರಿಸಿ, ಅವರನ್ನು ಪಕ್ಷದಿಂದ ಅಮಾನತು ಗೊಳಿಸಲಾಗಿದೆ

**ಓಂ ಪಾಠಕ್,** ಬಿಜೆಪಿ ಕೇಂದ್ರೀಯ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ

ಸುದ್ದಿ 2 ನಿಮಿಷ

### ಉತ್ತರ ಪ್ರದೇಶ: ಸಮವಸ್ತ್ರ ಧರಿಸದ ದಲಿತ ಬಾಲಕಿಗೆ ಥಳಿತ

ಭದೋಹಿ, ಉತ್ತರ ಪ್ರದೇಶ (ಪಿಟಿಐ): ಸಮವಸ್ತ್ರ ಧರಿಸಿಲ್ಲ ಎಂಬ ಕಾರಣಕ್ಕೆ ಗ್ರಾಮದ ಮಾಜಿ ಪ್ರಧಾನರೊಬ್ಬರು ದಲಿತ ಸಮುದಾಯಕ್ಕೆ ಸೇರಿದ ಬಾಲಕಿಯನ್ನು ಥಳಿಸಿ ಶಾಲೆಯಿಂದ ಹೊರದಬ್ಬಿರುವ ಘಟನೆ ಇಲ್ಲಿ ನಡೆದಿದೆ.

'ಆರೋಪಿಯನ್ನು ಮನೋಜ್‌ಕುಮಾರ್ ದುಬೆ ಎಂದು ಗುರುತಿಸಲಾಗಿದೆ. ಈತ ಶಿಕ್ಷಕನೂ ಅಲ್ಲ, ಅಧಿಕಾರಿಯೂ ಅಲ್ಲ. ಹೀಗಿದ್ದರೂ ಪ್ರತಿದಿನ ಶಾಲೆಗೆ ಹೋಗಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದ' ಎಂದು ಚೌರಿ ಪೊಲೀಸ್ ಠಾಣೆಯ ಉಸ್ತುವಾರಿ ಗಿರಿಜಾ ಶಂಕರ್ ಯಾದವ್ ಮಂಗಳವಾರ ಹೇಳಿದ್ದಾರೆ.

'ಬಾಲಕಿಯು ಸರ್ಕಾರಿ ಶಾಲೆಯಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಸೋಮವಾರ ಆಕೆ ಸಮವಸ್ತ್ರ ಧರಿಸಿರಲಿಲ್ಲ. ಇದನ್ನು ಆರೋಪಿಯು ಪ್ರಶ್ನಿಸಿದ್ದ. ತನ್ನ ತಂದೆ ಸಮವಸ್ತ್ರ ತಂದುಕೊಟ್ಟಿಲ್ಲ. ತಂದುಕೊಟ್ಟ ಮೇಲೆ ಅದನ್ನು ಹಾಕಿಕೊಂಡು ಬರುತ್ತೇನೆ ಎಂದು ಬಾಲಕಿ ಪ್ರತಿಕ್ರಿಯಿಸಿದ್ದಳು. ಆಕೆಯ ಮಾತಿನಿಂದ ಕೆರಳಿದ್ದ ಆತ ಶಾಲೆಯ ಕೊಠಡಿಯಲ್ಲೇ ಹಲ್ಲೆ ನಡೆಸಿದ್ದ, ಜಾತಿ ನಿಂದನೆಯ ಮಾತುಗಳನ್ನೂ ಆಡಿದ್ದ' ಎಂದು ಅವರು ಮಾಹಿತಿ ನೀಡಿದ್ದಾರೆ.



'ಬಾಲಕಿಯ ತಾಯಿ ನೀಡಿರುವ ದೂರಿನ ಆಧಾರದಲ್ಲಿ ಆರೋಪಿ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಆರೋಪಿ ತಲೆಮರೆಸಿಕೊಂಡಿದ್ದಾನೆ. ಪತ್ತೆಕಾರ್ಯ ಕೈಗೊಂಡಿದ್ದೇವೆ' ಎಂದು ತಿಳಿಸಿದ್ದಾರೆ.

### 'ಆಜಾದ್ ಕಾಶ್ಮೀರ' ಹೇಳಿಕೆ: ಕೇರಳ ಶಾಸಕನ ವಿರುದ್ಧ ತನಿಖೆಗೆ ಆದೇಶ

ತಿರುವಲ್ಲ, ಕೇರಳ: ಜಮ್ಮು–ಕಾಶ್ಮೀರ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ ಮಾಜಿ ಸಚಿವ ಹಾಗೂ ಎಲ್‌ಡಿಎಫ್ ಶಾಸಕ ಕೆ.ಟಿ.ಜಲೀಲ್ ವಿರುದ್ಧ ತನಿಖೆ ನಡೆಸುವಂತೆ ತಿರುವಲ್ಲದ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

'ಶಾಸಕ ಜಲೀಲ್ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸುವಂತೆ ಕೀಳ್ವಾಯ್ಪುರ ಪೊಲೀಸ್ ಠಾಣಾಧಿಕಾರಿಗೆ ಕೋರ್ಟ್ ನಿರ್ದೇಶನ ನೀಡಿದೆ' ಎಂದು ಅರ್ಜಿದಾರರ ಪರ ವಕೀಲ ವಿ.ಜಿ.ಅರುಣ್ ತಿಳಿಸಿದ್ದಾರೆ.

'ಜಲೀಲ್ ಅವರು ದೇಶವಿರೋಧಿ ಹೇಳಿಕೆ ನೀಡಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಆರ್‌ಎಸ್‌ಎಸ್ ಮುಖಂಡ ಅರುಣ್ ಮೋಹನ್ ಅರ್ಜಿ ಸಲ್ಲಿಸಿದ್ದರು.

## ಸಚಿವ ಮನ್ಸೂರಿ ದೇಗುಲ ಪ್ರವೇಶ: ಬಿಜೆಪಿ ಆಕ್ರೋಶ

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಗಯಾದ ವಿಷ್ಣುಪದ ದೇವಾಲಯಕ್ಕೆ ಮಾಹಿತಿ ತಂತ್ರಜ್ಞಾನ ಸಚಿವ ಮೊಹಮ್ಮದ್ ಇಸ್ರೇಲ್ ಮನ್ಸೂರಿ ಅವರೊಂದಿಗೆ ಪ್ರವೇಶಿಸುವ ಮೂಲಕ ಹಿಂದೂಗಳ ಭಾವನೆಗಳಿಗೆ ಉದ್ದೇಶಪೂರ್ವಕವಾಗಿ ಅವಮಾನ ಮಾಡಿದ್ದಾರೆ ಎಂದು ಬಿಜೆಪಿ ಮಂಗಳವಾರ ಆರೋಪಿಸಿದೆ.

ನಿತೀಶ್ ಅವರು ಸೋಮವಾರ ಮನ್ಸೂರಿ ಅವರೊಂದಿಗೆ ದೇವಾಲಯಕ್ಕೆ ಭೇಟಿ ನೀಡಿದ್ದರು. ಬಳಿಕ ಮನ್ಸೂರಿ ಅವರು, 'ಗೌರವಾನ್ವಿತ ಮುಖ್ಯಮಂತ್ರಿಯೊಂದಿಗೆ ದೇವಸ್ಥಾನ ದರ್ಶನಕ್ಕೆ ಅವಕಾಶ ಸಿಕ್ಕಿದ್ದಕ್ಕೆ ಕೃತಜ್ಞನಾಗಿದ್ದೇನೆ' ಎಂದು ಹೇಳಿದ್ದರು. ಮನ್ಸೂರಿ ಅವರು ಗಯಾದ ಉಸ್ತುವಾರಿ ಸಚಿವರಾಗಿದ್ದಾರೆ.

'ಮುಖ್ಯಮಂತ್ರಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿರುವ ಬಿಹಾರದ ಬಿಜೆಪಿ ಅಧ್ಯಕ್ಷ ಸಂಜಯ್ ಜೈಸ್ವಾಲ್, 'ಸಹಿಷ್ಣುತೆಯ ಹೆಸರಿನಲ್ಲಿ ಹಿಂದೂಗಳು ಯಾವಾಗಲೂ ತಮ್ಮ ಧಾರ್ಮಿಕ ಭಾವನೆಗಳ ಜೊತೆಗೆ ಯಾಕೆ ರಾಜಿ ಮಾಡಿಕೊಳ್ಳಬೇಕು' ಎಂದಿದ್ದಾರೆ.

'ಮನ್ಸೂರಿ ಅವರ ದೇವಾಲಯ ಪ್ರವೇಶದ ಬಗ್ಗೆ ನಮಗೆ ತಿಳಿದಿರಲಿಲ್ಲ. ದೇವಾಲಯದ ಆವರಣದಲ್ಲಿ 'ಸನಾತನ ಧರ್ಮದಲ್ಲಿ ನಂಬಿಕೆ ಇರುವವರು ಮಾತ್ರ ಪ್ರವೇಶಿಸಬಹುದು' ಎಂಬ ಫಲಕವಿದೆ. 'ಇಂತಹದನ್ನು ತಪ್ಪಿಸಬೇಕು' ಎಂದು ದೇವಾಲಯದ ಆಡಳಿತ ಮಂಡಳಿಯವರು ತಿಳಿಸಿದ್ದಾರೆ.

## ಪಾದಯಾತ್ರೆ: ತೆಲಂಗಾಣ ಬಿಜೆಪಿ ಅಧ್ಯಕ್ಷ ಬಂಧನ

ಹೈದರಾಬಾದ್: ತೆಲಂಗಾಣದಲ್ಲಿ ಮುನುಗೋಡು ಕ್ಷೇತ್ರದ ಉಪಚುನಾವಣೆ ಸಮೀಪಿಸುತ್ತಿದ್ದಂತೆ ಆಡಳಿತಾರೂಢ ಟಿಆರ್‌ಎಸ್ ಹಾಗೂ ಬಿಜೆಪಿ ನಡುವೆ ತಿಕ್ಕಾಟ ಜೋರಾಗಿದೆ.

ರಾಜ್ಯದಲ್ಲಿ ಪಾದಯಾತ್ರೆ ಕೈಗೊಂಡಿದ್ದ ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷ ಬಂಡಿ ಸಂಜಯ್ ಅವರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಪ್ರಜಾಸಂಗ್ರಾಮ ಯಾತ್ರೆ ವೇಳೆ ಪ್ರಚೋದನಕಾರಿ ಹೇಳಿಕೆ ನೀಡುತ್ತಿರುವುದರಿಂದ, ಪಾದಯಾತ್ರೆಯನ್ನು ಕೂಡಲೇ ಸ್ಥಗಿತಗೊಳಿಸುವಂತೆ ಅವರಿಗೆ ನೋಟಿಸ್ ಕೂಡ ನೀಡಿದ್ದಾರೆ.

ರಾಜ್ಯ ಸರ್ಕಾರ ಹಾಗೂ ಪೊಲೀಸರ ಕ್ರಮವನ್ನು ಪ್ರಶ್ನಿಸಿ ಬಿಜೆಪಿ ನಿಯೋಗವು ರಾಜ್ಯಪಾಲರಿಗೆ ದೂರು ನೀಡಿದೆ.

'ಬಂಡಿ ಅವರನ್ನು ಅಕ್ರಮವಾಗಿ ಬಂಧಿಸಲಾಗಿದೆ. ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಯಾತ್ರೆಗೆ ಸಿಗುತ್ತಿರುವ ಜನಬೆಂಬಲದಿಂದ ವಿಚಲಿತರಾಗಿದ್ದಾರೆ. ಕೆಸಿಆರ್ ಅವರ ಭ್ರಷ್ಟ ಹಾಗೂ ಕುಟುಂಬ ಕೇಂದ್ರಿತ ಆಡಳಿತವನ್ನು ತೆಲಂಗಾಣದ ಜನ ಧಿಕ್ಕರಿಸುತ್ತಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಟ್ವೀಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

### ಶಿವಸೇನಾ ಬಿಕ್ಕಟ್ಟು: ಸಂವಿಧಾನ ಪೀಠಕ್ಕೆ

ನವದೆಹಲಿ: ಶಾಸಕರ ಪಕ್ಷಾಂತರ, ಪಕ್ಷ ವಿಲೀನ ಮತ್ತು ಶಾಸಕರ ಅನರ್ಹತೆಗೆ ಸಂಬಂಧಿಸಿ ಹಲವು ಸಾಂವಿಧಾನಿಕ ಪ್ರಶ್ನೆಗಳನ್ನು ಎತ್ತಿರುವ ಶಿವಸೇನಾ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದಲ್ಲಿ ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಇದ್ದ ತ್ರಿಸದಸ್ಯ ಪೀಠವು, ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠವು ಈ ಅರ್ಜಿಗಳನ್ನು ಇದೇ 25ರಿಂದ ವಿಚಾರಣೆ ನಡೆಸಲಿದ್ದು, ಅಲ್ಲಿಯವರೆಗೆ ಶಿಂಧೆ ಬಣದ ಅರ್ಜಿಗೆ ಸಂಬಂಧಿಸಿ ಯಾವುದೇ ಆದೇಶ ನೀಡದಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ.

ಏಕನಾಥ್ ಶಿಂಧೆ ಅವರು ತಮ್ಮದೇ ನಿಜವಾದ ಶಿವಸೇನಾ ಎಂದು ಹಕ್ಕು ಪ್ರತಿಪಾದಿಸುತ್ತಿದ್ದು, ಪಕ್ಷದ ಚಿಹ್ನೆ ಬಿಲ್ಲು ಮತ್ತು ಬಾಣದ ಸಂಕೇತವನ್ನು ತಮಗೆ ನೀಡಬೇಕೆಂದು ಕೋರಿದ್ದಾರೆ. ಉದ್ಧವ್ ಠಾಕ್ರೆ ಬಣದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದಿಸಿದರು.

### ಸ್ವದೇಶಿ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲಸೋರ್, ಒಡಿಶಾ (ಪಿಟಿಐ): ಕಡಿಮೆ ವ್ಯಾಪ್ತಿಯ ಮೇಲ್ಮೈ ವಾಯು ದಾಳಿಯ ಸ್ವದೇಶಿ ತಂತ್ರಜ್ಞಾನದ ಕ್ಷಿಪಣಿಯ (ವಿಎಲ್–ಎಸ್‌ಆರ್‌ಎಸ್‌ಎಎಂ) ಪರೀಕ್ಷೆ ಒಡಿಶಾದ ಕರಾವಳಿಯ ಚಾಂಡಿಪುರದ ಸಮಗ್ರ ಪರೀಕ್ಷಾ ಕೇಂದ್ರದಲ್ಲಿ (ಐಟಿಆರ್) ಮಂಗಳವಾರ ಯಶಸ್ವಿಯಾಗಿ ನಡೆಯಿತು.

ವಿಎಲ್–ಎಸ್‌ಆರ್‌ಎಸ್‌ಎಎಂ (ವರ್ಟಿಕಲ್ ಲಾಂಚ್ ಶಾರ್ಟ್ ರೇಂಜ್ ಸರ್ಫೇಸ್ ಟು ಏರ್ ಮಿಸೈಲ್ ಕ್ಷಿಪಣಿ) ಕ್ಷಿಪಣಿ ವ್ಯವಸ್ಥೆಯ ಪರೀಕ್ಷೆಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಭಾರತೀಯ ನೌಕಾಪಡೆ ಜಂಟಿಯಾಗಿ ನಡೆಸಿದ್ದವು.

ನೌಕಾಪಡೆಯ ಹಡಗಿನಿಂದ ಉಡಾಯಿಸಿದ ಈ ಕ್ಷಿಪಣಿಯು ಮಾನವ ರಹಿತ ಅತಿ ವೇಗದ ವೈಮಾನಿಕ ಗುರಿಯನ್ನು ಯಶಸ್ವಿಯಾಗಿ ಭೇದಿಸಿತು. ಈ ಕ್ಷಿಪಣಿ ವ್ಯವಸ್ಥೆಯನ್ನು ಡಿಆರ್‌ಡಿಒ ದೇಶೀಯವಾಗಿ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿದೆ. ಸ್ವದೇಶಿಯವಾಗಿ ಅಭಿವೃದ್ಧಿಪಡಿಸಿದ ರೇಡಿಯೊ ತರಂಗಾಂತರ ಅನ್ವೇಷಕ ಮತ್ತು ಅತ್ಯಂತ ಹೆಚ್ಚು ನಿಖರವಾದ ಗುರಿ ಪತ್ತೆಹಚ್ಚುವ ಉಪಕರಣಗಳನ್ನು ಈ ಕ್ಷಿಪಣಿ ಒಳಗೊಂಡಿದೆ.

### ₹300 ಕೋಟಿ ಹಣ ಅಕ್ರಮ ವರ್ಗಾವಣೆ ಪತ್ತೆಹಚ್ಚಿದ ಐ.ಟಿ

ನವದೆಹಲಿ (ಪಿಟಿಐ): 'ಸೆರಾಮಿಕ್ ಟೈಲ್ಸ್ ಉತ್ಪಾದಿಸುವ ಗುಜರಾತ್ ಮೂಲದ ಉದ್ಯಮ ಸಂಸ್ಥೆಯೊಂದರ ಮೇಲೆ ದಾಳಿ ನಡೆಸಿದ್ದ ಆದಾಯ ತೆರಿಗೆ ಇಲಾಖೆಯು ₹300 ಕೋಟಿಗೂ ಅಧಿಕ ಹಣ ಅಕ್ರಮವಾಗಿ ವರ್ಗಾವಣೆಯಾಗಿರುವುದನ್ನು ಪತ್ತೆ ಹಚ್ಚಿದೆ' ಎಂದು ಕೇಂದ್ರ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಮಂಗಳವಾರ ತಿಳಿಸಿದೆ.

'ಆಗಸ್ಟ್ 9ರಂದು ರಾಜ್‌ಕೋಟ್, ಮೊರ್ಬಿ, ಅಹಮದಾಬಾದ್, ರಾಯಪುರ, ಗುವಾಹಟಿ, ಗುರುಗ್ರಾಮ ಮತ್ತು ಕೋಲ್ಕತ್ತದಲ್ಲಿನ ಒಟ್ಟು 36 ಸ್ಥಳಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ಶೋಧ ಕಾರ್ಯ ಕೈಗೊಳ್ಳಲಾಗಿತ್ತು. ಈ ವೇಳೆ ಡಿಜಿಟಲ್ ದತ್ತಾಂಶ ಹಾಗೂ ಕೆಲ ದಾಖಲೆಗಳನ್ನು ಜಪ್ತಿ ಮಾಡಲಾಗಿತ್ತು. ಉದ್ಯಮ ಸಂಸ್ಥೆಯು ದೊಡ್ಡ ಮಟ್ಟದಲ್ಲಿ ತೆರಿಗೆ ವಂಚಿಸಿರುವುದು ಇವುಗಳ ಪರಿಶೀಲನೆಯಿಂದ ದೃಢಪಟ್ಟಿತ್ತು' ಎಂದು ಸಿಬಿಡಿಟಿ ಪ್ರಕಟಣೆ ತಿಳಿಸಿದೆ.

### ತಾಂತ್ರಿಕ ದೋಷ: ಐಎಎಫ್ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ

ಜೈಪುರ (ಪಿಟಿಐ): ಭಾರತೀಯ ವಾಯುಪಡೆಗೆ (ಐಎಎಫ್) ಸೇರಿದ ಹೆಲಿಕಾಪ್ಟರ್‌ವೊಂದು ರಾಜಸ್ಥಾನದ ಹನುಮಾನ್‌ಗಢ ಜಿಲ್ಲೆಯಲ್ಲಿ ಮಂಗಳವಾರ ತುರ್ತು ಭೂಸ್ಪರ್ಶ ಮಾಡಿದೆ.

'ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಮಂಗಳವಾರ ಮುಂಜಾನೆ ಅದನ್ನು ಜಮೀನಿನಲ್ಲಿ ಇಳಿಸಲಾಗಿದೆ. ಅದರಲ್ಲಿದ್ದ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಮಧ್ಯಪ್ರದೇಶದ ವಿದಿಶಾ ಜಿಲ್ಲೆಯಲ್ಲಿ ಸತತ ಸುರಿಯುತ್ತಿರುವ ಮಳೆಯಿಂದಾಗಿ ಜನವಸತಿ ಪ್ರದೇಶ ಜಲಾವೃತವಾಗಿರುವುದು
–ಪಿಟಿಐ ಚಿತ್ರ

# ಭಾರಿ ಮಳೆ: ಪ್ರವಾಹಕ್ಕೆ ಸಿಲುಕಿ ರಾಜಸ್ಥಾನದಲ್ಲಿ ಇಬ್ಬರ ಸಾವು


ಜೈಪುರ / ಕೋಟಾ / ಭೋಪಾಲ್ (ಪಿಟಿಐ): ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ರಾಜಸ್ಥಾನದಲ್ಲಿ ಪ್ರವಾಹಕ್ಕೆ ಸಿಲುಕಿ ಇಬ್ಬರು ಮೃತಪಟ್ಟಿದ್ದು, ಮತ್ತಿಬ್ಬರು ಕಣ್ಮರೆಯಾಗಿದ್ದಾರೆ.

ಬರಾನ್ ಜಿಲ್ಲೆಯ ಡಾಬರಿ ಕಾಕಾಜಿ ಗ್ರಾಮದ ಪ್ರೇಮ್‌ನಾರಾಯಣ್ ಸುಮನ್ (35) ಎಂಬುವರು ಸೋಮವಾರ ಸಂಜೆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಬುಂದಿ ಜಿಲ್ಲೆಯ ಸುವಾಸರಾ ಗ್ರಾಮದ ಸತ್ಯನಾರಾಯಣ್ ಪ್ರಜಾಪತ್ (50) ಎಂಬುವರು ಮಂಗಳವಾರ ಬೆಳಿಗ್ಗೆ ಅಣೆಕಟ್ಟೆಗೆ ಆಯತಪ್ಪಿ ಬಿದ್ದು ಅಸುನೀಗಿದ್ದಾರೆ.

ಬರಾನ್ ಜಿಲ್ಲೆಯ ಶೇಖಾಪುರ ಗ್ರಾಮದ ಯುವಕ ಏಕಾರಾಮ್, ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾನೆ. ಕೋಟಾ ಜಿಲ್ಲೆಯ ನಾಯಾಪುರ ಎಂಬಲ್ಲಿ ಕುಲದೀಪ್ ಚೌಹಾಣ್ ಎಂಬುವರು ಚಂಬಲ್ ನದಿಯಲ್ಲಿ ಆಯತಪ್ಪಿ ಬಿದ್ದು ಸಾವಿಗೀಡಾಗಿದ್ದಾರೆ.

ಝಾಲವಾಡ್ ಜಿಲ್ಲೆಯ ಗ್ರಾಮವೊಂದರಲ್ಲಿ ಮನೆ ಕುಸಿದು ಮೂವರು ಮಕ್ಕಳು ಹಾಗೂ ಅವರ ಪೋಷಕರು ಗಂಭೀರವಾಗಿ ಗಾಯಗೊಂಡಿದ್ದಾರೆ. ಜಾಲವಾಡ್, ಬರಾನ್ ಹಾಗೂ ಢೋಲ್‌ಪುರದಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದ್ದು, ಅಪಾಯದಲ್ಲಿದ್ದ 50 ಮಂದಿಯನ್ನು ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಮೂಲಕ ರಕ್ಷಿಸಲಾಗಿದೆ.

ಮಧ್ಯಪ್ರದೇಶದಲ್ಲೂ ಮಳೆ ಮುಂದುವರಿದಿದೆ. ವಿದಿಶಾ ಜಿಲ್ಲೆಯಲ್ಲಿ ಪ್ರವಾಹ ಸ್ಥಿತಿ ಸೃಷ್ಟಿಯಾಗಿದೆ. ರಕ್ಷಣಾ ಕಾರ್ಯಕ್ಕಾಗಿ ವಾಯುಪಡೆಯ ಎರಡು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ. ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್ ಅವರು ಪ್ರವಾಹಪೀಡಿತ ಜಿಲ್ಲೆಗಳಲ್ಲಿ ಮಂಗಳವಾರ ವೈಮಾನಿಕ ಸಮೀಕ್ಷೆ ನಡೆಸಿದ್ದಾರೆ.





ಹಕ್ಕಿಯನ್ನು ಕಂಡಾಗ 'ನಾನೂ ಏರುತೇರುತ ಹಾರಬೇಕು' ಎಂಬ ಆಸೆ ಮನುಷ್ಯನ ಮನಸ್ಸಿನಲ್ಲಿ ಬಲಿತು, ಮುಂದೊಂದು ದಿನ ವಿಮಾನದ ಸೃಷ್ಟಿಯಾಯಿತು...

## ಬಯೋಮಿಮಿಕ್ರಿ ಪ್ರಕೃತಿಯ ಪಾಠ

ಶರತ್ ಭಟ್ ಸೇರಾಜೆ

ಏನಾದರೂ ಆಗಲಿಕ್ಕೆ ಕಟ್ಟ ಕಡೆಯ ಕ್ಷಣದ ಒತ್ತಡ, ಗಡಿಬಿಡಿಗಿಂತ ಒಳ್ಳೆಯ ಪ್ರೇರಣೆ ಬೇರೆ ಯಾವುದೂ ಇಲ್ಲ ಎಂಬುದು ಎಲ್ಲವನ್ನೂ ಕೊನೆಯ ಗಳಿಗೆಯಲ್ಲಿಯೇ ಮಾಡುವ ಎಲ್ಲರ ಅನುಭವವೂ ಆಗಿದೆ. ಪ್ರೇರಣೆ ಎಂಬುದೇ ಅಂಥ ವಿಚಿತ್ರ ಜಾಯಮಾನದ 'ಪ್ರಾಣಿ'. ಎಂಜಿನಿಯರುಗಳಿಗೆ ಪರಿಪರಿಯ ಚಿತ್ರವಿಚಿತ್ರ ವಿನ್ಯಾಸಗಳ ರಚನೆಗೆ ಪ್ರೇರಣೆ ಎಲ್ಲೆಲ್ಲಿ ಸಿಗುತ್ತದೆ ಎಂಬುದು ಸಾಹಿತಿಗಳಿಗೆ ಕೃತಿರಚನೆಗೆ ಎಲ್ಲೆಲ್ಲಿಂದ ಪ್ರಭಾವ ಉಂಟಾಗುತ್ತದೆ ಎಂಬ ಪ್ರಶ್ನೆಯಂತೆಯೇ! ಸರಸ್ವತೀಪುತ್ರರಿಗೆ ಸಿಗುವಂತೆ ಎಂಜಿನಿಯರುಗಳಿಗೂ ಪ್ರೇರಣೆಯು ಎಲ್ಲಿಂದ ಬೇಕಾದರೂ ಅನಾಯಾಸವಾಗಿ ಸಿಕ್ಕಿಬಿಡಬಹುದು.

ಇಂತಹ ಸ್ಫೂರ್ತಿಯ ಸೆಲೆಗಳಲ್ಲಿ ಪ್ರಕೃತಿಯೂ ಒಂದು. ನಿಸರ್ಗಕ್ಕಿಂತ ದೊಡ್ಡ ಎಂಜಿನಿಯರನ್ನು, ಅದಕ್ಕಿಂತ ದೊಡ್ಡ ಗುರುವನ್ನು ಎಲ್ಲಿ ಹುಡುಕೋಣ! ನೆಗೆನೆಗೆದು ಓಡುವ ಚಿರತೆ, ಜಿಂಕೆಗಳು, ಸರಸರನೆ ಈಜುವ ಮೀನುಗಳು ನಮ್ಮ ಕಲ್ಪನೆಯನ್ನು ಕೆರಳಿಸುತ್ತಲೇ ಬಂದಿವೆ; ನಾವು ಅವುಗಳಂತಾಗಬೇಕು ಎನ್ನುವ ಉತ್ಕಟ ಅಭಿಲಾಷೆಯೂ ಚಿರತೆ, ಜಿಂಕೆಗಳಷ್ಟೇ ಹಳತು. ಪುರ್ರನೆ ಹಾರುವ, 'ನೆಲವನೊಲ್ಲದೆ ಚಿಗಿದು ಚಿಮ್ಮುತ ಮೇಲು ಮೇಲಕ್ಕೋಡುವ' ಹಕ್ಕಿಯನ್ನು ಕಂಡಾಗ ನಾನೂ ಏರುತೇರುತ ಹಾರಬೇಕು ಎಂಬ ಆಸೆ ಮನುಷ್ಯನ ಮನಸ್ಸಿನಲ್ಲಿ ಬಲಿತು, ಮುಂದೊಂದು ದಿನ ವಿಮಾನದ ಸೃಷ್ಟಿಯಾಯಿತು ಅನ್ನುವುದೂ ಮನುಷ್ಯನು ನಿಸರ್ಗದ ವಿಸ್ಮಯಗಳಿಂದ ಪ್ರಚೋದಿತನಾಗಿ ಕಾರ್ಯಪ್ರವೃತ್ತನಾದ ವಿದ್ಯಮಾನವೇ ಆಗಿದೆ. ಇಂಥ ವಿದ್ಯಮಾನಗಳಿಗೆ 'ಬಯೋಮಿಮಿಕ್ರಿ' ಎಂಬ ಹೆಸರಿಡಲಾಗಿದೆ. ಇದೇ ವಿಷಯದ ಬಗ್ಗೆ ಡಾ. ಕಿರಣ್ ವಿ. ಎಸ್. ಅವರು ಒಂದು ಪುಸ್ತಕವನ್ನೂ ಕನ್ನಡದಲ್ಲಿ ಬರೆದಿದ್ದಾರೆ.

ರಾಜಮಹಾರಾಜರನ್ನು ಸಿಂಹಕ್ಕೋ ಹುಲಿಗೋ ಆನೆಗೋ ಹೋಲಿಸುವುದು ವಾಡಿಕೆ. ಅವುಗಳಂತೆ ಬಲಶಾಲಿಯಾಗಬೇಕು ಎಂಬ ಹಾತೊರೆಯುವಿಕೆ ಪಂಪ ರನ್ನರ ಕಾಲದಿಂದಲೂ ಇದ್ದದ್ದೇ. ಆದರೆ ಸೊಳ್ಳೆಯಿಂದ ಸ್ಫೂರ್ತಿ ಪಡೆದ ಹಳಗನ್ನಡ ಕವಿಗಳ್ಯಾರೂ ನನ್ನ ಕಣ್ಣಿಗೆ ಬಿದ್ದಿಲ್ಲ; ಅದೇನಿದ್ದರೂ ವಿಜ್ಞಾನಿಗಳ ಖಾತೆಗೆ ಜಮಾ ಮಾಡಬಹುದಾದ ಶ್ಲಾಘನೆ. ಏಕೆಂದರೆ ನೋವಾಗದಂತೆ ತನ್ನ ಹೀರುನಳಿಕೆಗಳನ್ನು ನಮ್ಮ ಚರ್ಮಕ್ಕೆ ಹೊಗಿಸುವ ಸೊಳ್ಳೆಯ ಚಾಕಚಕ್ಯತೆಯಿಂದ ಸ್ಫೂರ್ತಿ ಸ್ವೀಕರಿಸಿ, ಬೇನೆಯಾಗದಂತೆ ತೂರಬಲ್ಲ ಚುಚ್ಚುಮದ್ದಿನ ಸೂಜಿಯನ್ನು ತಯಾರಿಸಿದ ವಿಜ್ಞಾನಿಗಳಿದ್ದಾರೆ! ಅಂಥ ಸೂಜಿಗೆ 'ಪೇನ್‌ಲೆಸ್ ಮೈಕ್ರೋನೀಡಲ್' (Painless Microneedle – ನೋವುರಹಿತ ಸೂಕ್ಷ್ಮಸೂಜಿ) ಎಂದು ಹೆಸರು.

ಮಿಂಚುಹುಳವಾದರೆ ಸೊಳ್ಳೆಯಷ್ಟು ಕ್ಷುಲ್ಲಕವಲ್ಲ; ಅದರ ತಂಟೆಗೆ ಕೆಲವು ಕವಿಗಳಾದರೂ ಹೋಗಿದ್ದಾರೆ. ಅದರ ಬೆಳಕು ತಂತ್ರಜ್ಞಾನಿಗಳಿಗೂ ದಾರಿದೀಪವಾದ ಉದಾಹರಣೆಯುಂಟು. ಮಾಮೂಲಿ ಬಲ್ಬುಗಳಿಗಿಂತ ಶೇ. 60 ಹೆಚ್ಚು ಬೆಳಕನ್ನು ಅಷ್ಟೇ ವಿದ್ಯುಚ್ಛಕ್ತಿ ಬಳಸಿ ಹೊರಸೂಸಬಲ್ಲ 'ಎಲ್‌ಇಡಿ' ಬಲ್ಬು ತಯಾರಿಸಿರುವ ತಂತ್ರಜ್ಞಾನಿಗಳಿಗೆ ಮಾದರಿಯಾದದ್ದು ಮಿಂಚುಹುಳದ ಸೊಡರುಗೂಡು. ಅದರ ಸೂಕ್ಷ್ಮರಚನೆಯ ವಿನ್ಯಾಸವನ್ನು ನಕಲು ಮಾಡಿ ತಯಾರಿಸಿದ ಬಲ್ಬು ವಿದ್ಯುತ್ತನ್ನು ಉಳಿಸಲು ಒಳ್ಳೆಯ ಉಪಾಯವೇ ಆಗಿದೆ.

ಇದನ್ನು ಬಿಡಿ, ಎಂಥ ಪ್ರತಿಭೆಯ ಕವಿಗಾದರೂ ಕೀಳರಿಮೆ ಹುಟ್ಟಿಸಬಲ್ಲಂಥ ಕಲ್ಪನೆ ಮರಕುಟಿಗ ಹಕ್ಕಿಯ ಅನುಕರಣ ಮಾಡಹೊರಟಿರುವ ವಿಜ್ಞಾನಿಗಳದ್ದು. ಅದೆಷ್ಟು ಸಲ ಪಟಪಟನೆ ಮೂತಿಯನ್ನು ಮರಕ್ಕೆ ಅದೆಷ್ಟು ವೇಗವಾಗಿ ಕುಟ್ಟಿದರೂ ಅದಕ್ಕೆ ಏನೂ ಆಗುವುದಿಲ್ಲವಲ್ಲ, ನೆತ್ತರು ತೊಟ್ಟಿಕ್ಕುವುದಿಲ್ಲವಲ್ಲ, 'ಅದ್ಯಾಕೆ?' ಅಂತ ತಲೆ ಚಚ್ಚಿಕೊಂಡು ವಿಜ್ಞಾನಿಗಳು ಅದರ ಅಂಗರಚನೆಯನ್ನು ಅಭ್ಯಾಸ ಮಾಡಿ, ಅದರಿಂದ ಕಲಿತ ಪಾಠವನ್ನು ಉಪಯೋಗಿಸಿ ಷಾಕ್ ಅಬ್ಸಾರ್ಬರ್‌ಗಳನ್ನು ತಯಾರಿಸಿದರೆ ಒಳ್ಳೆಯದಲ್ಲವೇ ಎಂಬ ನಿಟ್ಟಿನಲ್ಲಿ ಯೋಚನೆ ಮಾಡಿದ್ದಾರೆ. 'ವಿಜ್ಞಾನಿಗಳು ಮಾಡಿರೋದನ್ನ ತಿಳ್ಕೊಂಡ್ರೆ 'ಷಾಕ್ ಆಗ್ತೀರಾ' – ಎಂಬ ಶೀರ್ಷಿಕೆ ಕೊಡಬಹುದಾದ ಸುದ್ದಿ ಇದು!

ಜಪಾನಿನ ಬುಲೆಟ್ ಟ್ರೇನುಗಳು ಕಂಡಾಬಟ್ಟೆ ವೇಗದಲ್ಲಿ ಸುರಂಗಗಳಿಂದ ಹೊರ ಹೊರಟಾಗ ಸೋನಿಕ್ ಬೂಮ್ ಎಂಬ ದೊಡ್ಡ ಶಬ್ದ (ನಮ್ಮ ಮನೆಗಿಂತ ಸ್ವಲವೇ ಮೇಲೆ ವಿಮಾನ ಹಾರಿದರೆ



ಭಾರೀ ಸದ್ದಾಗುತ್ತದಲ್ಲ, ಅದೇ ತರಹದ್ದು ಇದು) ಹೊರಟು ಎಲ್ಲರಿಗೂ ಕಿರಿಕಿರಿಯಾಗುತ್ತಿತ್ತಂತೆ. ಅದಕ್ಕೆ ಪರಿಹಾರವನ್ನು ಅಲ್ಲಿನ ತಂತ್ರಜ್ಞರು ಕಂಡುಕೊಂಡದ್ದು ಮಿಂಚುಳ್ಳಿಯು ನೀರನ್ನು ಹೆಚ್ಚು ಕದಡದೆ, ಹೆಚ್ಚು ಸಪ್ಪಳ ಹೊರಡಿಸದೆ ನೀರಿಗೆ ಎರಗುವ ವಿಧಾನದಲ್ಲಿ. ಮಿಂಚುಳ್ಳಿಯನ್ನು ಅನುಕರಿಸಿ ರೂಪಿಸಿದ ಬುಲೆಟ್ ಟ್ರೇನುಗಳು ಅಲ್ಲಿ ಬಂದವು ಕೂಡ, ಮಿಂಚುಳ್ಳಿಯ ಸಪೂರವಾದ ಉದ್ದನೆಯ ಕೊಕ್ಕಿನ ಆಕೃತಿಯೂ ಗಾಳಿಯನ್ನು ಸೀಳಿ ವೇಗವಾಗಿ ಹೋಗಲು ಸಹಕಾರಿ, ಈ ವಿಷಯದಲ್ಲೂ ಜಪಾನಿನ ರೈಲುಗಳಿಗೆ ಮಿಂಚುಳ್ಳಿ ಮಾದರಿಯಾಯಿತಂತೆ.

ಇನ್ನು ಜೇಡರಬಲೆಯೂ ಸಮಸ್ಯೆಯೊಂದರ ಬಗೆಹರಿಕೆಗೆ ಒರತೆಯಾದ ಕಥೆಯನ್ನು ನೋಡೋಣ. ನಗರಗಳಲ್ಲಿ ಎಲ್ಲೆಂದರಲ್ಲಿ ತಲೆಯೆತ್ತಿರುವ ಗಾಜಿನ ಕಟ್ಟಡಗಳು ನೋಡುವುದಕ್ಕೇನೋ ಮನೋಹರವಾಗಿರುತ್ತವೆ. ಆದರೆ ಹಕ್ಕಿಗಳು ಅವುಗಳನ್ನು ಗುರುತಿಸಲಾಗದೆ, ಅವಕ್ಕೆ ಡಿಕ್ಕಿ ಹೊಡೆದು ಸಾಯುತ್ತವೆ. ಇದಕ್ಕೇನು ಮಾಡುವುದೆಂದು ತಲೆಕೆಡಿಸಿಕೊಂಡಾಗ, ಪರಿಹಾರವೂ ನಿಸರ್ಗದ ಮಡಿಲಲ್ಲಿಯೇ ಸಿಕ್ಕಿತು. ಸೃಷ್ಟಿಯಲ್ಲಿ ಎಲ್ಲಿಯೂ ಹಕ್ಕಿಗಳು ಜೇಡರಬಲೆಗೆ ಘರ್ಷಿಸುವುದಿಲ್ಲ, ಯಾಕೆ ಘರ್ಷಿಸುವುದಿಲ್ಲ ಅಂತ ಪರೀಕ್ಷೆ ಮಾಡಿ ನೋಡಿದಾಗ, ಅವುಗಳು 'ಅಲ್ಟ್ರೋವೈಲೇಟ್ ಸಿಲ್ಕ್' (Ultraviolet (UV) Silk) ಎಂಬ ಅಂಶವನ್ನು ಬಳಸಿ ಬಲೆಹೆಣೆಯುತ್ತವೆ ಎಂಬ ವಿಚಾರ ತಿಳಿಯಿತು. ಅವುಗಳು ಬೆಳಕನ್ನು ಪ್ರತಿಫಲನ ಮಾಡುವ ರೀತಿಯಿಂದಾಗಿ ಹಕ್ಕಿಗಳು ಅವುಗಳಿಗೆ ಗುದ್ದುವುದಿಲ್ಲ ಎಂಬುದೂ ಗಮನಕ್ಕೆ ಬಂತು. ಅಂತದ್ದೇ ಅತಿನೇರಳೆಯ ಪದರವನ್ನು ಗಾಜಿಗೆ ಲೇಪಿಸಿ 'ಬರ್ಡ್ ಪ್ರೊಟೆಕ್ಷನ್ ಗ್ಲಾಸ್' (Bird Protection Glass) ತಯಾರಿಸಿಯೇ ಬಿಡಲಾಯಿತು!

ಸೊಳ್ಳೆಯಂಥ ಕ್ಷುದ್ರ ಜಂತುವಾಯಿತು, ಮಿಂಚುಹುಳುವಾಯಿತು, ಜೇಡರಹುಳುವಾಯಿತು, ಮರಕುಟಿಗವಾಯಿತು, 'ಇನ್ಯಾವುದು ಬಾಕಿಯಿದೆ?' ಎಂದು ಕೇಳುತ್ತಾ ನೆಟಿಕೆ ಮುರಿಯುತ್ತಾ ಎದ್ದು ನಿಂತವರು 'ಅಕಟಕಟಾ' ಎನ್ನಬೇಕಾದ ಕಲ್ಪನಾ ವಿಲಾಸ ಮಿಕ್ ಪಿಯರ್ಸ್ ಎಂಬುವರದು. ಅವರು ವಿನ್ಯಾಸ ಮಾಡಿದ್ದು ಜಿಂಬಾಬ್ವೆಯಲ್ಲಿರುವ ಈಸ್ಟ್ ಗೇಟ್ ಸೆಂಟರ್ ಎಂಬ ಕಟ್ಟಡವನ್ನು (ಶಾಪಿಂಗ್ ಮಾಲು ಮತ್ತು ಆಫೀಸುಗಳಿರುವ ಜಾಗ). ಇದರ ವಿಶೇಷವೆಂದರೆ ಇಲ್ಲಿ ಉಳಿದ ಕಟ್ಟಡಗಳ ತರದ ಏರ್ ಕಂಡೀಷನಿಂಗ್ ಅನ್ನು ಬಳಸದೇ ಆ ಜಾಗವನ್ನು ತಣ್ಣಗೆ ಇಡಲಾಗಿದೆ. ಈ ಊಹೆಯ ಊಟೆ ಪುಟಿದದ್ದು ಗೆದ್ದಲು ಹುಳುಗಳ ಕಾರ್ಯವೈಖರಿಯ ನಮೂನೆಯಿಂದ! ಗೆದ್ದಲು ಹುಳುಗಳ ಹುತ್ತಗಳ ಒಳಹೊರಗೆ ಸುಳಿಯುವ ಗಾಳಿ ಬೆಳಕಿನ ಹರಿದಾಟದ ವ್ಯವಸ್ಥೆಯನ್ನು ಅಭ್ಯಾಸ ಮಾಡಿ, ಅಂತೆಯೇ ರೂಪರಚನೆಯನ್ನು ಹಮ್ಮಿಕೊಂಡು, ಪ್ರಕೃತಿಸಹಜವಾದ ಹವಾ ನಿಯಂತ್ರಣ ಪದ್ಧತಿಯನ್ನು ಇಲ್ಲಿ ರೂಪಿಸಲಾಗಿದೆಯಂತೆ.

ಕಲಿಯುವವರಿಗೆ ಬುವಿಯು ಹೇಗೂ ಕಲಿಸುತ್ತದೆ, ಎಷ್ಟೂ ಕಲಿಸುತ್ತದೆ.





## ಜಾನುವಾರುಗಳಿಗೂ ಸ್ಮಾರ್ಟ್ ಬ್ಯಾಂಡ್

ಕೃಷ್ಣ ಭಟ್

'ದನ ಕಾಯೋಕ್ಹೋಗು...' ಎಂಬುದನ್ನು ನಾವು ಇಂದು ಬೈಗುಳವನ್ನಾಗಿ ಬಳಸುತ್ತಿದ್ದೇವೆ. ಹಿಂದಿನ ಶತಮಾನದಲ್ಲಿ ಒಂದು ಕೆಲಸವಾಗಿದ್ದ ಇದು ಈಗ ಬೈಗುಳವಾಗಿ ಚಾಲ್ತಿಯಲ್ಲಿದೆ. ಆದರೆ, ಈ ಪದಕ್ಕೂ ಕೆಲಸಕ್ಕೂ ಇನ್ನು ಸ್ವಲ್ಪ ದಿನಗಳಲ್ಲಿ ಹೊಸ ಸ್ಟೇಟಸ್ ಬರಲಿದೆ! ಇದಕ್ಕೆ ಕಾರಣ ಟೆಕ್ನಾಲಜಿ ಅಂದರೆ ನೀವು ನಂಬಬೇಕು!

ನಮ್ಮಲ್ಲಿ ಗೋವುಗಳ ಉತ್ಪನ್ನದ ಉತ್ಪಾದನೆ, ತಯಾರಿಕೆ ವಿಚಾರದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆ ವ್ಯಾಪಕವಾಗಿದೆ. ಆದರೆ ಗೋವುಗಳ ನಿರ್ವಹಣೆ ವಿಚಾರದಲ್ಲಿ ತಂತ್ರಜ್ಞಾನಗಳ ಬಳಕೆ ಅತ್ಯಂತ ಸೀಮಿತ. ಯುರೋಪ್ ದೇಶಗಳಲ್ಲಿ ಗೋವುಗಳ ನಿರ್ವಹಣೆ ವಿಷಯದಲ್ಲಿಯೂ ತಂತ್ರಜ್ಞಾನ ತುಂಬಾ ಮುಂದುವರೆದಿದೆ. ನಮ್ಮಲ್ಲಿ ಕೈಯಲ್ಲಿ ಹಾಲು ಹಿಂಡುತ್ತಿದ್ದ ಕಾಲದಲ್ಲೇ ಅಲ್ಲಿ ಮಶಿನ್‌ಗಳು ಬಂದಿದ್ದವು. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನ್ಯೂಜಿಲೆಂಡ್‌ನ ಒಂದು ಸ್ಟಾರ್ಟಪ್ 'ಹಾಲ್ಟರ್' ಗೋವುಗಳಿಗಾಗಿ ಸ್ಮಾರ್ಟ್ ಕಾಲರ್ ಬ್ಯಾಂಡ್ ಅನ್ನು ಸಿದ್ಧಪಡಿಸಿದೆ! ಇದು ಗೋವಿನ ತಾಪಮಾನ, ಬೆದೆಗೆ ಬರುವ ಸಮಯ, ಗೋವುಗಳ ವರ್ತನೆ, ಸಾಮಾನ್ಯ ಆರೋಗ್ಯದ ಮಾಹಿತಿಯನ್ನು ದಾಖಲಿಸುತ್ತದೆ. ಇನ್ನು, ಈ ಬ್ಯಾಂಡ್ ಗೋವು ಇರುವ ಸ್ಥಳವನ್ನೂ ನಿಖರವಾಗಿ ತೋರಿಸುತ್ತದೆ. ಈ ಬ್ಯಾಂಡ್‌ಗೆ ಜಿಪಿಎಸ್ ಅಳವಡಿಸಲಾಗಿದ್ದು, 'ಗೋವು ಎಲ್ಲಿದೆ' ಎಂಬ ಮಾಹಿತಿ ನಿಖರವಾಗಿ ಸಿಗುತ್ತದೆ. ಇವೆಲ್ಲವನ್ನೂ ಸ್ಮಾರ್ಟ್‌ಫೋನ್‌ನಲ್ಲಿರುವ ಆ್ಯಪ್ ಬಳಸಿಕೊಂಡೇ ನೋಡಬಹುದು. ಇನ್ನು ದನ ಕಾಯುವವರೂ ಸ್ಮಾರ್ಟ್ ಆಗಬೇಕಾಗುತ್ತದೆ!




ಈ ಕಾಲರ್ ಬ್ಯಾಂಡ್‌ನಿಂದ ದನಗಳನ್ನು ಮೇಯಿಸುವಾಗ ಬೇಲಿ ಹಾಕುವ ಅಗತ್ಯವಿಲ್ಲ. ದನಗಳನ್ನು ಹೊರಗಡೆ ಬಿಟ್ಟರೂ ಅವುಗಳನ್ನು ಹುಡುಕಿ ಕರೆದುಕೊಂಡು ಬರುವುದು ಸುಲಭ. ಪ್ರೀತಿಯ ದನಗಳು ಕಳೆದು ಹೋದರೆ ಚಿಂತೆಯಿಲ್ಲ. ಅದಕ್ಕೊಂದು ಸ್ಮಾರ್ಟ್ ಬ್ಯಾಂಡ್ ಹಾಕಿ ಕಳುಹಿಸಿದರೆ, ಅದು ಎಲ್ಲಿದೆ ಎಂದು ಆ್ಯಪ್‌ನಲ್ಲಿ ನೋಡಿಕೊಂಡು ಹುಡುಕಿ ಕರೆದುಕೊಂಡು ಬರಬಹುದು.

ಈ ಬ್ಯಾಂಡ್‌ನ ಮತ್ತೊಂದು ವಿಶೇಷವೇನೆಂದರೆ, ಸೋಲಾರ್ ಮೂಲಕ ಚಾರ್ಜ್ ಆಗುತ್ತದೆ. ಬ್ಯಾಟರಿ ಖಾಲಿಯಾದಾಗ ಅದನ್ನು ತೆಗೆದು ಚಾರ್ಜ್‌ಗೆ ಹಾಕುವುದು ಒಂದು ಸಮಸ್ಯೆಯಾದ್ದರಿಂದ ಸೋಲಾರ್ ಸೆಲ್‌ಗಳನ್ನು ಅಳವಡಿಸಿ, ಅದರ ಮೂಲಕ ಬ್ಯಾಂಡ್‌ಗೆ ಬೇಕಾಗುವ ವಿದ್ಯುತ್ತನ್ನು ಒದಗಿಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇದು ನಿಜಕ್ಕೂ ಅನುಕೂಲಕರ ವಿಧಾನ. ಆದರೆ, ಇಲ್ಲೊಂದು ಮಹತ್ವದ ಸವಾಲಿದೆ. ಪ್ರತಿಯೊಂದು ಗೋವೂ ವಿಭಿನ್ನವಾದುದು. ಒಂದೊಂದು ಗೋವಿಗೂ ಆಹಾರ, ನಿದ್ರೆಯ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತದೆ. ಒಂದೇ ವಯಸ್ಸಿನ ಗೋವು ತಿಂದಷ್ಟೇ ಹುಲ್ಲನ್ನು ಇನ್ನೊಂದು ಗೋವು ತಿನ್ನುವುದಿಲ್ಲ. ಅದೆಲ್ಲವನ್ನೂ ಅರ್ಥ ಮಾಡಿಕೊಳ್ಳುವುದು ಈ ಸ್ಮಾರ್ಟ್ ಕಾಲರ್‌ನ ಸವಾಲು. ಅದಕ್ಕೆ 'ಹಾಲ್ಟರ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್' ಮತ್ತು 'ಮಶಿನ್ ಲರ್ನಿಂಗ್' ಮಾದರಿಗಳನ್ನೆಲ್ಲ ಅಳವಡಿಸಿದೆ. ಹೀಗಾಗಿ, ಈ ಕಾಲರ್ ಸುಲಭವಾಗಿ ಅದನ್ನೂ ಅರ್ಥಮಾಡಿಕೊಳ್ಳಬಲ್ಲದು.

ಇಂಥ ಬ್ಯಾಂಡ್‌ಗಳು ಪ್ರಾಣಿ ಪ್ರಿಯರಿಗೆ ಹೊಸದೇನಲ್ಲ. 2017ರ ಹೊತ್ತಿನಲ್ಲೇ ನಾಯಿಗಳಿಗೆ ಇಂಥ ಬ್ಯಾಂಡ್‌ಗಳು ಬಂದಿದ್ದವು. ಆರಂಭದಲ್ಲಿ ಸ್ಥಳವನ್ನು ನಿಖರವಾಗಿ ಹೇಳುವ ಬ್ಯಾಂಡ್‌ಗಳು ಬಂದಿದ್ದವು. ಆದರೆ, ಅದು ಅಷ್ಟೇನೂ ಜನಪ್ರಿಯವಾಗಿರಲಿಲ್ಲ. ನಂತರದಲ್ಲಿ ಶ್ವಾನಗಳ ಆರೋಗ್ಯ, ವರ್ತನೆ, ಎದೆಬಡಿತ ಸೇರಿದಂತೆ ಹಲವು ಸಂಗತಿಗಳನ್ನು ತಿಳಿಸುವ ಕಾಲರ್ ಬ್ಯಾಂಡ್‌ಗಳೂ ಬಂದಿವೆ. ಇವು ಹೆಚ್ಚು ಶ್ವಾನಪ್ರಿಯವಾಗುತ್ತಿವೆ. ಮನುಷ್ಯರ ಕೈಗೆ ಹಾಕುವ ಬ್ಯಾಂಡ್‌ಗಳ ಜೊತೆ ಜೊತೆಗೇ ನಾಯಿ ಕೊರಳಿಗೆ ತೊಡಿಸುವ ಬ್ಯಾಂಡ್‌ಗಳೂ ಸ್ಮಾರ್ಟ್ ಆಗುತ್ತಲೇ ಇದ್ದವು. ಈಗ ಈ ಸರದಿ ಜಾನುವಾರುಗಳದ್ದು.

ಈ ಬ್ಯಾಂಡ್‌ಗಳು ದೊಡ್ಡ ಮಟ್ಟದಲ್ಲಿ ಜಾನುವಾರುಗಳನ್ನು ನಿರ್ವಹಣೆ ಮಾಡುತ್ತಿರುವವರಿಗೆ ಅನುಕೂಲಕರ. ಜಾನುವಾರುಗಳನ್ನು ನಿರ್ವಹಣೆ ಮಾಡುವುದಕ್ಕೆ ಇದರಿಂದ ಜನರ ಸಂಖ್ಯೆ ಕಡಿಮೆ ಸಾಕಾಗುತ್ತದೆ ಮತ್ತು ಜಾನುವಾರುಗಳ ಆರೋಗ್ಯದ ಮೇಲೆ ನಿಗಾ ಇಡುವುದೂ ಸುಲಭವಾಗುತ್ತದೆ. ಈ ಬ್ಯಾಂಡ್‌ಗಳು ಜಾನುವಾರುಗಳ ವರ್ತನೆಯನ್ನು ಅರಿಯುವುದಕ್ಕೆ ಮಶಿನ್ ಲರ್ನಿಂಗ್ ಬಳಸುವುದರಿಂದ ಜಾನುವಾರುಗಳ ಆರೋಗ್ಯದಲ್ಲಿ ಯಾವುದೇ ಏರುಪೇರಾದರೆ ತಕ್ಷಣ ಎಚ್ಚರಿಕೆ ನೀಡಬಲ್ಲವು. ಮಶಿನ್ ಲರ್ನಿಂಗ್ ಇರುವುದರಿಂದ ಹುಸಿ ಅಲರ್ಟ್‌ಗಳ ಪ್ರಮಾಣವೂ ಕಡಿಮೆಯಾಗುತ್ತದೆ. ಈ ಹಾಲ್ಟರ್ ತನ್ನ ಕಾಲರ್ ಬ್ಯಾಂಡ್‌ಗಳನ್ನು ಮಾರಾಟ ಮಾಡುತ್ತಿಲ್ಲ. ಬದಲಿಗೆ ಚಂದಾದಾರಿಕೆ ಆಧಾರದಲ್ಲಿ ಒದಗಿಸುತ್ತಿದೆ. ಸದ್ಯ ನ್ಯೂಜಿಲೆಂಡ್‌ನಲ್ಲಿ ಮಾತ್ರ ಇದು ಸೇವೆ ದೊರೆಯುತ್ತಿದೆ. ಮುಂದಿನ ದಿನಗಳಲ್ಲಿ ಇದು ಇತರ ದೇಶಗಳಿಗೂ ವಿಸ್ತರಿಸಬಹುದು. ಅಷ್ಟೇ ಅಲ್ಲದೆ, ಇದೇ ಮಾದರಿಯನ್ನು ನಮ್ಮ ದೇಶದ ಕಂಪನಿಗಳೂ ಬಳಸಿಕೊಂಡು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬಹುದು.

## ವಿಜ್ಞಾನದ ವಿಸ್ಮಯಗಳು



ಉದಯ ಶಂಕರ ಪುರಾಣಿಕ

### ಸ್ಫೋಟಗೊಳ್ಳದ ಬ್ಯಾಟರಿ

ಮೊಬೈಲ್ ಫೋನ್, ಲ್ಯಾಪ್‌ಟಾಪ್ – ಹೀಗೆ ಹಲವಾರು ಉಪಕರಣಗಳಲ್ಲಿ ಲಿಥಿಯಮ್-ಇಯಾನ್ ಬ್ಯಾಟರಿಗಳನ್ನು ಬಳಸಲಾಗುತ್ತದೆ. ಕೆಲವೊಮ್ಮೆ ಬ್ಯಾಟರಿಗಳಿಗೆ ಬೆಂಕಿ ಹೊತ್ತಿಕೊಳ್ಳುವುದು, ಬ್ಯಾಟರಿ ಸ್ಫೋಟಿಸುವುದು ಮೊದಲಾದ ಅವಘಡಗಳು ನಡೆಯುತ್ತಿವೆ. ಹೀಗೆ ಬ್ಯಾಟರಿಗೆ ಬೆಂಕಿ ಹೊತ್ತುವುದು, ಸ್ಫೋಟಗಳನ್ನು ತಡೆಯಲು ಹೊಸ ರೀತಿಯ ಲಿಥಿಯಮ್-ಇಯಾನ್ ಬ್ಯಾಟರಿಯನ್ನು ಅಮೆರಿಕದ ಮೇರಿಲ್ಯಾಂಡ್ ವಿಶ್ವವಿದ್ಯಾಲಯ ಮತ್ತು ಅಮೆರಿಕಾ ರಕ್ಷಣಾ ಸಂಶೋಧನೆ ಪ್ರಯೋಗಾಲಯದ ತಂತ್ರಜ್ಞರು ಅಭಿವೃದ್ಧಿಪಡಿಸಿದ್ದಾರೆ.

ನೀರು ಮತ್ತು ಲವಣಗಳನ್ನು ಬಳಸಿ ಅಭಿವೃದ್ಧಿಪಡಿಸಲಾಗಿರುವ ಈ ಹೊಸ ಬ್ಯಾಟರಿಯನ್ನು ವಿವಿಧ ಸನ್ನಿವೇಶಗಳಲ್ಲಿ ಮತ್ತು ಉಪಕರಣಗಳಲ್ಲಿ ಪರೀಕ್ಷೆ ಮಾಡಲಾಗಿದೆ. ಎಲ್ಲಾ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ದೊರೆತಿದೆ. ಮುಂದುವರಿದ ಪರೀಕ್ಷೆಗಳನ್ನು ನಡೆಸಿ, ನಂತರ ಈ ಹೊಸ ಬ್ಯಾಟರಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಯೋಜನೆ ಇದೆ.

### ಪ್ರಕೃತಿ ವಿಕೋಪದಲ್ಲಿ ಸೋಲಾರ್ ವಿದ್ಯುತ್

ಮನೆಯ ಮೇಲೆ ಸೋಲಾರ್ ಫಲಕಗಳಿಂದ ವಿದ್ಯುತ್ ಉತ್ಪಾದಿಸಿ. ಇಂತಹ ವಿದ್ಯುತ್ತನ್ನು ಸರ್ಕಾರಿ ಸ್ವಾಮ್ಯದ ವಿದ್ಯುತ್ ಸಂಸ್ಥೆಗಳು ಖರೀದಿಸುತ್ತವೆ. ಇದು ನಿಮಗೆ ಆದಾಯ ಮೂಲವಾಗುತ್ತದೆ ಎನ್ನುವ ಯೋಜನೆಗಳನ್ನು ಜನಪ್ರಿಯಗೊಳಿಸಲು ಸರ್ಕಾರ ಪ್ರಯತ್ನ ಮಾಡುತ್ತಿದೆ. ಮನೆಯ ಮೇಲೆ ಅಳವಡಿಸಲಾಗಿರುವ ಸೋಲಾರ್ ಫಲಕಗಳಿಂದ ಉತ್ಪಾದಿಸಲಾಗುವ ವಿದ್ಯುತ್ತನ್ನು ವಿದ್ಯುತ್ ಸಂಸ್ಥೆಗಳ ವಿದ್ಯುತ್ ಜಾಲಕ್ಕೆ ಪೂರೈಸಲು ಸೋಲಾರ್ ಇನ್‌ವರ್ಟರ್‌ಗಳನ್ನು ಬಳಸಲಾಗುತ್ತದೆ. ವಿದ್ಯುತ್ ಜಾಲದಲ್ಲಿ ತಾಂತ್ರಿಕ ಸಮಸ್ಯೆಯಾದಾಗ, ಈ ಸೋಲಾರ್ ಇನ್‌ವರ್ಟರ್‌ನ ಸುರಕ್ಷತೆಯ ದೃಷ್ಟಿಯಿಂದ ಆಫ್ ಮಾಡಲಾಗುತ್ತದೆ. ಹೀಗಾಗಿ ವಿದ್ಯುತ್ ಕಡಿತದ ಸನ್ನಿವೇಶದಲ್ಲಿ ಮನೆಯ ಮೇಲಿನ ಸೋಲಾರ್ ಫಲಕಗಳು ಉತ್ಪಾದಿಸುವ ವಿದ್ಯುತ್ತನ್ನು ಮನೆಯವರಿಗೆ ಬಳಸಲು ಸಮಸ್ಯೆಯಾಗುತ್ತದೆ.

ಈ ಸಮಸ್ಯೆಯನ್ನು ಪರಿಹರಿಸಲು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ತಂತ್ರಜ್ಞರು ಕೆಲಸ ಮಾಡುತ್ತಿದ್ದಾರೆ. ಸ್ಯಾಂಡಿ ಹೆಸರಿನ ಚಂಡಮಾರುತ ಅಪ್ಪಳಿಸಿದಾಗ, ಸುಮಾರು 80 ಲಕ್ಷ ಜನರಿಗೆ ಸಮಸ್ಯೆಯಾಗಿತ್ತು. ಚಂಡಮಾರುತದಿಂದಾಗಿ ವಿದ್ಯುತ್ ಜಾಲಕ್ಕೆ ಅಪಾರ ಹಾನಿಯಾಗಿ ಲಕ್ಷಾಂತರ ಅಮೆರಿಕನ್ನರು ವಿದ್ಯುತ್ ಇಲ್ಲದೆ ಎರಡು ವಾರಗಳನ್ನು ಕಳೆಯಬೇಕಾಗಿತ್ತು. ಚಂಡಮಾರುತದಂತಹ ಪ್ರಕೃತಿ ವಿಕೋಪಗಳಿಂದಾಗಿ ವಿದ್ಯುತ್ ಜಾಲಕ್ಕೆ ಹಾನಿಯಾದಾಗ, ಸೋಲಾರ್ ವಿದ್ಯುತ್ತನ್ನು ಜನಸಾಮಾನ್ಯರಿಗೆ ಪೂರೈಸಲು ಹೊಸ ತಂತ್ರಾಂಶ ಆಧಾರಿತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರತಿಯೊಂದು ಮನೆಯಲ್ಲಿ ಸೋಲಾರ್ ವಿದ್ಯುತ್ ಸಂಗ್ರಹಿಸಿಡಲು ದುಬಾರಿ ಬೆಲೆಯ ಬ್ಯಾಟರಿಗಳನ್ನು ಬಳಸುವ ಬದಲು ಸೋಲಾರ್ ವಿದ್ಯುತ್ ಉತ್ಪಾದನೆ ವ್ಯವಸ್ಥೆ ಹೊಂದಿರುವ ಹಲವು ಮನೆಗಳಿಗೆ ಕೇಂದ್ರೀಕೃತ ವಿದ್ಯುತ್ ಸಂಗ್ರಹಣಾ ವ್ಯವಸ್ಥೆಯನ್ನು ಇಲ್ಲಿ ಬಳಸಲಾಗುತ್ತದೆ. ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಈ ಕೇಂದ್ರೀಕೃತ ವಿದ್ಯುತ್ ಸಂಗ್ರಹಣಾ ವ್ಯವಸ್ಥೆಯಲ್ಲಿ ಅತ್ಯಾಧುನಿಕ ಬ್ಯಾಟರಿ ವ್ಯವಸ್ಥೆಯಲ್ಲಿ ಸಂಗ್ರಹಿಸಿಡಲಾಗುವ ವಿದ್ಯುತ್ತನ್ನು ಪ್ರತಿಯೊಂದು ಮನೆಯ ಅಗತ್ಯಕ್ಕೆ ತಕ್ಕಂತೆ ವಿತರಿಸಲಾಗುತ್ತದೆ. ಎಷ್ಟು ವಿದ್ಯುತ್ ಲಭ್ಯವಿದೆ, ಯಾವ ಸಮಯದಲ್ಲಿ ಯಾವ ಮನೆಗೆ ವಿದ್ಯುತ್ ಪೂರೈಸಬೇಕು ಎಂದು ಲೆಕ್ಕ ಮಾಡುವ ತಂತ್ರಾಂಶವು ಈ ವ್ಯವಸ್ಥೆಯ ಹೃದಯದಂತಿದೆ.

ಪ್ರಾಯೋಗಿಕ ಪರೀಕ್ಷೆಗಳಲ್ಲಿ ಜನಸಾಮಾನ್ಯರಿಂದ ಈ ವ್ಯವಸ್ಥೆಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಮುಂಬರುವ ದಿನಗಳಲ್ಲಿ ಈ ವ್ಯವಸ್ಥೆಯನ್ನು ಹೆಚ್ಚು ಸುಧಾರಿಸಲು ಮತ್ತು ಜನಸಾಮಾನ್ಯರಿಗೆ ನೀಡಲು ಯೋಜನೆ ರೂಪಿಸಲಾಗಿದೆ.

### ತಲೆಯ ಪೆಟ್ಟಿನ ಪತ್ತೆಗೆ ಸ್ಮಾರ್ಟ್ ಫೋನ್

ಅಪಘಾತ, ಯುದ್ಧ, ಕ್ರೀಡೆ ಮೊದಲಾದ ಸಂದರ್ಭದಲ್ಲಿ ತಲೆಗೆ ಪೆಟ್ಟಾಗುವ ಸಂಭವವಿರುತ್ತದೆ. ಸ್ಮಾರ್ಟ್ ಫೋನ್ ಕ್ಯಾಮೆರಾ ಮತ್ತು ವಿಶೇಷ ತಂತ್ರಾಂಶವನ್ನು ಬಳಸಿ 'ತಲೆಗೆ ಎಂತಹ ಪೆಟ್ಟಾಗಿದೆ' ಎಂದು ತಿಳಿದುಕೊಳ್ಳಲು ಮತ್ತು ಸೂಕ್ತವಾದ ತುರ್ತು ಚಿಕಿತ್ಸೆ ನೀಡಲು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗೆ ಸಾಧ್ಯವೆಂದು ವಾಶಿಂಗ್ಟನ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಇವರು ಅಭಿವೃದ್ಧಿಪಡಿಸಿರುವ ವಿಶೇಷವಾದ ತಂತ್ರಾಂಶವನ್ನು ಸ್ಮಾರ್ಟ್ ಫೋನ್‌ನಲ್ಲಿ ಅಳವಡಿಸಿದರೆ ಸಾಕು. ಪೆಟ್ಟಾಗಿರುವ ವ್ಯಕ್ತಿಯ ಕಣ್ಣಿಗೆ ಸ್ಮಾರ್ಟ್ ಫೋನ್ ಕ್ಯಾಮೆರಾವನ್ನು ಕೇಂದ್ರೀಕರಿಸಿದಾಗ, ಈ ಕ್ಯಾಮೆರಾದ ಬೆಳಕಿಗೆ ಕಣ್ಣು ಸ್ಪಂದಿಸುವ ರೀತಿಯನ್ನು (ಪ್ಯುಪಿಲರಿ ಲೈಟ್ ರಿಫ್ಲೆಕ್ಸ್) 3 ಸೆಕೆಂಡ್ ಅವಧಿಯ ವಿಡಿಯೊ ಚಿತ್ರೀಕರಣ ಮಾಡಲಾಗುತ್ತದೆ. ಈ ವಿಡಿಯೊವನ್ನು ವಿಶ್ಲೇಷಣೆ ಮಾಡುವ ತಂತ್ರಾಂಶವು ನೀಡುವ ವರದಿಯಿಂದ ತಲೆಗೆ ಎಂತಹ ಪೆಟ್ಟಾಗಿದೆ ಎಂದು ಸುಲಭವಾಗಿ ವೈದ್ಯರು ನಿರ್ಧರಿಸಲು ಸಾಧ್ಯವಾಗುತ್ತದೆ. ಸ್ಮಾರ್ಟ್ ಫೋನ್ ಮತ್ತು ವಿಶೇಷ ತಂತ್ರಾಂಶ ಬಳಸಿ ಪ್ಯುಪಿಲರಿ ಲೈಟ್ ರಿಫ್ಲೆಕ್ಸ್ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸುವ ಈ ಹೊಸ ವಿಧಾನವು ಲಕ್ಷಾಂತರ ಜನರಿಗೆ ಉಪಯೋಗವಾಗಲಿದೆ. ಕೆಲವು ಆಸ್ಪತ್ರೆಗಳಲ್ಲಿ ಲಭ್ಯವಿರುವ ದುಬಾರಿ ಬೆಲೆಯ ಪ್ಯೂಪಿಲೋ ಮೀಟರ್ ಬಳಸಿ ಈಗ ಪ್ಯುಪಿಲರಿ ಲೈಟ್ ರಿಫ್ಲೆಕ್ಸ್ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗುತ್ತದೆ. ಇದರ ಬದಲು ಸ್ಮಾರ್ಟ್ ಫೋನ್ ಮತ್ತು ವಿಶೇಷ ತಂತ್ರಾಂಶವನ್ನು ಬಳಸಿಕೊಂಡ ಈ ಹೊಸ ವಿಧಾನದಿಂದ ದೊರೆಯುವ ವರದಿಯ ಗುಣಮಟ್ಟ ಮತ್ತು ನಿಖರತೆ ಕುರಿತು ತಜ್ಞವೈದ್ಯರು ಪ್ರಶಂಸಿದ್ದಾರೆ. ಈ ವಿಧಾನವನ್ನು ಸುಧಾರಿಸಲು ಮತ್ತು ಜನಸಾಮಾನ್ಯರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರೆಯುವಂತೆ ಮಾಡಲು ಕೆಲಸ ಮಾಡುತ್ತಿರುವ ವಿಜ್ಞಾನಿಗಳು ಮುಂಬರುವ ದಿನಗಳಲ್ಲಿ ಈ ವಿಶೇಷ ತಂತ್ರಾಂಶವನ್ನು ಸಾರ್ವಜನಿಕರಿಗೆ ನೀಡುವ ವಿಶ್ವಾಸವನ್ನು ಹೊಂದಿದ್ದಾರೆ.

### ಇ-ತ್ಯಾಜ್ಯಕ್ಕೊಂದು ಪರಿಹಾರ


ಟಿ.ವಿ, ಆಡಿಯೊ ಪ್ಲೇಯರ್, ಮೊಬೈಲ್ ಫೋನ್, ಕಂಪ್ಯೂಟರ್ – ಹೀಗೆ ಪ್ರತಿದಿನ ಸಂಗ್ರಹವಾಗುವ ಕೋಟ್ಯಂತರ ನಿರುಪಯುಕ್ತವಾದ ವಿದ್ಯುನ್ಮಾನ ಉಪಕರಣಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು ಸಮಸ್ಯೆಯಾಗುತ್ತಿದೆ. ಇ-ತ್ಯಾಜ್ಯ ಕುರಿತು ಜನಸಾಮಾನ್ಯರಲ್ಲಿ ಅರಿವಿನ ಕೊರತೆ ಮತ್ತು ಇ-ತ್ಯಾಜ್ಯ ನಿರ್ವಹಣೆಗಾಗಿ ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ಅತ್ಯಾಧುನಿಕ ಸಂಸ್ಕರಣಾ ಘಟಕಗಳು ಲಭ್ಯವಿಲ್ಲದಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ.

ವಿದ್ಯುನ್ಮಾನ ಉಪಕರಣ ನಿರುಪಯುಕ್ತವಾದಾಗ, ತಾನಾಗಿಯೇ ವಿನಾಶ ಹೊಂದಿದರೆ ಇ-ತ್ಯಾಜ್ಯ ಸಮಸ್ಯೆಗೆ ಒಂದು ಪರಿಹಾರ ನೀಡಿದಂತಾಗುತ್ತದೆ. ಇದಕ್ಕಾಗಿ ಹೌಸ್ಟನ್ ವಿಶ್ವವಿದ್ಯಾಲಯ ಮತ್ತು ಚೀನಾದ ವಿಜ್ಞಾನಿಗಳು ಹೊಸ ವಿಧಾನವೊಂದನ್ನು ಅಭಿವೃದ್ಧಿಪಡಿಸಿದ್ದಾರೆ. ಮೊದಲು ವಿದ್ಯುನ್ಮಾನ ಬಿಡಿಭಾಗಗಳಿಗೆ ವಿಶೇಷವಾದ ಲೇಪನವನ್ನು ಬಳಸಲಾಗುತ್ತದೆ. ವಿದ್ಯುನ್ಮಾನ ಉಪಕರಣ ನಿರುಪಯುಕ್ತವಾದಾಗ, ವಾತಾವರಣದಲ್ಲಿರುವ ತೇವಾಂಶವನ್ನು ಬಳಸಿ, ಈ ಲೇಪನವನ್ನು ಮತ್ತು ಬಿಡಿಭಾಗಗಳನ್ನು ನಾಶಪಡಿಸಲಾಗುತ್ತದೆ. ಇಲ್ಲಿ ಯಾವುದೇ ಆ್ಯಸಿಡ್ ಮತ್ತು ಹಾನಿಕಾರಕ ರಾಸಾಯನಿಕಗಳನ್ನು ಬಳಸಲಾಗುವುದಿಲ್ಲ; ಸುರಕ್ಷಿತವಾಗಿ ಈ ವಿಧಾನವನ್ನು ಬಳಸಬಹುದು ಎಂದು ವಿಜ್ಞಾನಿಗಳು ಹೇಳುತ್ತಾರೆ.

ನಿರುಪಯುಕ್ತ ವಿದ್ಯುನ್ಮಾನ ಉಪಕರಣಗಳಿಗೆ ಮಾತ್ರ ಈ ವಿಧಾನ ಸೀಮಿತವಾಗಿಲ್ಲ. ಸೈನಿಕರು ಸೆರೆ ಸಿಕ್ಕಾಗ ಅಥವಾ ಅವರ ಬಳಿ ಇರುವ ವಿದ್ಯುನ್ಮಾನ ಉಪಕರಣಗಳು ವೈರಿಗಳ ಪಾಲಾದಾಗ, ಈ ವಿಧಾನವನ್ನು ಬಳಸಿ ಆ ಉಪಕರಣಗಳನ್ನು ನಾಶಪಡಿಸಬಹುದು. ಇದೇ ರೀತಿ ಮಾನವನ ಆರೋಗ್ಯ ಸುಧಾರಿಸಲು ದೇಹದಲ್ಲಿ ಅಳವಡಿಸಲಾಗುವ ವಿದ್ಯುನ್ಮಾನ ಉಪಕರಣಗಳು, ತಮ್ಮ ಕೆಲಸ ಮುಗಿದ ನಂತರ ಅಲ್ಲೇ ನಾಶವಾಗಲು ಈ ವಿಧಾನವನ್ನು ಬಳಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in






❦ ಸುಭಾಷಿತ ❦

ನಿಲ್ಲುವುದೆ ಸಾವು; ಚಲಿಸುವುದೆ ಬಾಳು. -ಕುವೆಂಪು

# ಸಿಸೋಡಿಯಾ ಮೇಲೆ ಸಿಬಿಐ ಕ್ರಮ ದ್ವೇಷ ರಾಜಕಾರಣಕ್ಕೆ ಇನ್ನೊಂದು ನಿದರ್ಶನ

**ದೆಹಲಿಯ** ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಮತ್ತು ಇತರ ಕೆಲವರಿಗೆ ಸೇರಿದ ಸ್ಥಳಗಳಲ್ಲಿ ಸಿಬಿಐ ಇತ್ತೀಚೆಗೆ ಶೋಧ ನಡೆಸಿದ್ದು, ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿ ತನಿಖೆ ನಡೆಸುತ್ತಿದೆ. ಸಿಬಿಐ ತನಿಖೆಯ ಬಳಿಕ ಜಾರಿ ನಿರ್ದೇಶನಾಲಯವೂ (ಇ.ಡಿ.) ತನಿಖೆಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ. ಪಶ್ಚಿಮ ಬಂಗಾಳದ ಮಾಜಿ ಸಚಿವ ಪಾರ್ಥ ಚಟರ್ಜಿ ಅವರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಿದ್ದ ಸಿಬಿಐ, ಕೋಲ್ಕತ್ತದಿಂದ ಕೋಟ್ಯಂತರ ರೂಪಾಯಿಗಳನ್ನು ಇತ್ತೀಚೆಗೆ ವಶಕ್ಕೆ ಪಡೆದಿತ್ತು. ನೇಮಕಾತಿಯಲ್ಲಿ ಅಕ್ರಮ ಎಸಗಿದ್ದಾರೆ ಎಂಬ ಆರೋಪವನ್ನು ಪಾರ್ಥ ಎದುರಿಸುತ್ತಿದ್ದಾರೆ. ದೆಹಲಿಯಲ್ಲಿ ಹೊಸ ಅಬಕಾರಿ ನೀತಿ ಜಾರಿಗೊಳಿಸುವ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆಸಿದ್ದಾರೆ ಎಂಬ ಆರೋಪವನ್ನು ಸಿಸೋಡಿಯಾ ಎದುರಿಸುತ್ತಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿ, ಸಿಸೋಡಿಯಾ ಮತ್ತು ಇತರರಿಂದ ಹಣ ವಶಕ್ಕೆ ಪಡೆಯಲಾಗಿಲ್ಲ. ಆದರೆ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವರ ವಿರುದ್ಧ ಬಹುದೊಡ್ಡ ಅಭಿಯಾನವೇ ಆರಂಭವಾಗಿದೆ. ಕೇಂದ್ರದ ಆಡಳಿತಾರೂಢ ಬಿಜೆಪಿ ಮತ್ತು ಎಎಪಿ ನಡುವೆ ಲಂಗು ಲಗಾಮಿಲ್ಲದ ರೀತಿಯಲ್ಲಿ ಆರೋಪ-ಪ್ರತ್ಯಾರೋಪ ನಡೆದಿದೆ ಮತ್ತು ಈಗಲೂ ಅದು ಮುಂದುವರಿದಿದೆ. ದಿನದಿಂದ ದಿನಕ್ಕೆ ಹೆಚ್ಚಿನ ತೀವ್ರತೆ ಪಡೆದುಕೊಳ್ಳುತ್ತಿದೆ. ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರವು ಕಳೆದ ವರ್ಷ ಜಾರಿಗೆ ತಂದು, ಈ ವರ್ಷ ಹಿಂದಕ್ಕೆ ಪಡೆದ ಅಬಕಾರಿ ನೀತಿಯು ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದು ಬಿಜೆಪಿ ಆಪಾದಿಸಿದೆ. ಆದರೆ, ಕೇಂದ್ರದ ಏಜೆಂಟ್ ರೂಪದಲ್ಲಿ ಇರುವ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಈ ನೀತಿಯ ಜಾರಿ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸಿದ್ದರಿಂದಾಗಿ ಅದನ್ನು ಸರಿಯಾಗಿ ಜಾರಿ ಮಾಡಲು ಸಾಧ್ಯವಾಗಲಿಲ್ಲ ಎಂದು ಎಎಪಿ ಹೇಳಿದೆ.



**ವಿರೋಧ ಪಕ್ಷಗಳಲ್ಲಿರುವ ರಾಜಕಾರಣಿಗಳು ಮತ್ತು ಸರ್ಕಾರದ ಟೀಕಾಕಾರರ ವಿರುದ್ಧ ತನಿಖಾ ಸಂಸ್ಥೆಗಳ ದುರ್ಬಳಕೆ ಅತ್ಯಂತ ನಿರ್ಲಜ್ಜವಾದ ಕ್ರಮ**

ಸಿಸೋಡಿಯಾ ತಪ್ಪು ಮಾಡಿದ್ದಾರೆಯೇ ಇಲ್ಲವೇ ಎಂಬುದು ತನಿಖೆಯ ಬಳಿಕವಷ್ಟೇ ತಿಳಿಯಲಿದೆ. ಆದರೆ, ಕೇಂದ್ರದ ತನಿಖಾ ಸಂಸ್ಥೆಗಳು ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿ ಕೆಲಸ ಮಾಡುತ್ತಿವೆ ಎಂಬುದು ಬಹಳ ಸ್ಪಷ್ಟ. ಈ ಸಂಸ್ಥೆಗಳು ನಡೆಸುವ ಶೋಧ ಕಾರ್ಯಾಚರಣೆಗಳಿಗೆ ವ್ಯಾಪಕ ಪ್ರಚಾರ ಸಿಗುವಂತೆ ನೋಡಿಕೊಳ್ಳಲಾಗುತ್ತಿದೆ. ಹೀಗೆ ಶೋಧಕ್ಕೆ ಒಳಗಾಗುವ ವ್ಯಕ್ತಿಗಳು ಭ್ರಷ್ಟರು, ಅಪರಾಧಿಗಳು ಎಂದು ಬಿಂಬಿಸುವ ವ್ಯವಸ್ಥಿತ ಕಾರ್ಯಾಚರಣೆಯೂ ನಡೆಯುತ್ತಿದೆ. ಚುನಾಯಿತ ಸರ್ಕಾರವು ತನಗೆ ಸರಿ ಎನಿಸಿದ ನೀತಿಯನ್ನು ಅನುಸರಿಸುವ ಹಕ್ಕನ್ನು ಹೊಂದಿದೆ. ಸರ್ಕಾರದ ನೀತಿಯೊಂದನ್ನು ರಾಜಕೀಯವಾಗಿ ವಿರೋಧಿಸಬಹುದು. ಆದರೆ, ನೀತಿಯನ್ನೇ ಅಪರಾಧ ಎಂದು ಪರಿಗಣಿಸಿ ತನಿಖೆಗೆ ಒಳಪಡಿಸುವ ಮೂಲಕ ತೊಂದರೆ ಕೊಡುವುದು ರಾಜಕೀಯ ದ್ವೇಷ ಸಾಧನೆ ಎನಿಸಿಕೊಳ್ಳುತ್ತದೆ. ಅತ್ಯುತ್ತಮ ನೀತಿಯ ಅನುಷ್ಠಾನದಲ್ಲಿ ಕೂಡ ಭ್ರಷ್ಟಾಚಾರ ನಡೆಯಬಹುದು. ಹಾಗಾಗಿ, ಎಲ್ಲ ತನಿಖೆಗಳೂ ತಪ್ಪು ಎಂದು ಹೇಳುವುದಕ್ಕೂ ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಈವರೆಗೆ ನಡೆದುಕೊಂಡ ರೀತಿ ಮತ್ತು ತನಿಖೆಗಳ ಹಿನ್ನೆಲೆಯು ತನಿಖೆಯ ಉದ್ದೇಶದ ಬಗ್ಗೆಯೇ ಸಂದೇಹ ಮೂಡಿಸುತ್ತವೆ.

ವಿರೋಧ ಪಕ್ಷಗಳಲ್ಲಿರುವ ರಾಜಕಾರಣಿಗಳು ಮತ್ತು ಸರ್ಕಾರದ ಟೀಕಾಕಾರರ ವಿರುದ್ಧ ಸಿಬಿಐ, ಇ.ಡಿ. ಮೂಲಕ ತನಿಖೆ ಮಾಡಿಸುವುದು ಇತ್ತೀಚೆಗೆ ಹೆಚ್ಚಾಗಿದೆ. ಮಾದಕ ಪದಾರ್ಥ ನಿಯಂತ್ರಣ ಘಟಕವನ್ನೂ ಈ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ. ತನಿಖಾ ಸಂಸ್ಥೆಗಳ ದುರ್ಬಳಕೆ ಅತ್ಯಂತ ಸಾಮಾನ್ಯವೂ ನಿರ್ಲಜ್ಜ ರೀತಿಯದ್ದೂ ಆಗಿದೆ. ಸಮತೋಲನ ಕಾಯ್ದುಕೊಳ್ಳುವ ವ್ಯವಸ್ಥೆಗಳು ದುರ್ಬಲವಾದರೆ, ಸರ್ಕಾರದ ಇಂತಹ ಆಕ್ರಮಣಕಾರಿ ಕ್ರಮಗಳಿಂದಾಗುವ ಹಾನಿ ಹೆಚ್ಚುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪೊಲೀಸ್ ಬಲದಿಂದ ರಾಜಕಾರಣ ನಡೆಸಬಾರದು. ಸಿಸೋಡಿಯಾ ಮತ್ತು ಇತರರು ಪ್ರಾಮಾಣಿಕರೇ ಅಥವಾ ತಪ್ಪಿತಸ್ಥರೇ ಎಂಬುದನ್ನು ಬದಿಗಿಟ್ಟೇ ಮಾತನಾಡಿದರೂ ಸರ್ಕಾರ ಕೈಗೊಂಡಿರುವ ಕ್ರಮವು ಸೇಡಿನ ಕ್ರಮದಂತೆ ಕಾಣಿಸುತ್ತಿದೆಯೇ ಹೊರತು ತಪ್ಪಿನ ವಿರುದ್ಧ ವಿಶ್ವಾಸಾರ್ಹವಾದ ಕ್ರಮ ಎಂದು ಅನಿಸುವುದಿಲ್ಲ. ಎಎಪಿ ಒಡೆದು ಬಂದರೆ ಪ್ರಕರಣವನ್ನು ಕೈಬಿಡಲಾಗುವುದು ಎಂಬ ಸಂದೇಶ ಬಿಜೆಪಿಯಿಂದ ಬಂದಿದೆ ಎಂದು ಸಿಸೋಡಿಯಾ ಆರೋಪ ಮಾಡಿದ್ದಾರೆ. ಪಕ್ಷ ತೊರೆದರೆ ಎಎಪಿ ಶಾಸಕರಿಗೆ ತಲಾ ₹5 ಕೋಟಿ ನೀಡುವ ಆಮಿಷವನ್ನು ಬಿಜೆಪಿ ಒಡ್ಡಿದೆ ಎಂದು ಎಎಪಿ ಆರೋಪಿಸಿದೆ. ಈ ಆರೋಪದಲ್ಲಿ ಹುರುಳಿಲ್ಲ ಎಂದು ಹೇಳಲಾಗದು. ಏಕೆಂದರೆ, ಸಿಬಿಐ ಮತ್ತು ಇ.ಡಿ. ತನಿಖೆಗೆ ಒಳಗಾದ ವಿವಿಧ ಪಕ್ಷಗಳ ಮುಖಂಡರು ತಮ್ಮ ಮೂಲ ಪಕ್ಷವನ್ನು ಬಿಟ್ಟು ಬಿಜೆಪಿಗೆ ಹೋದ ಉದಾಹರಣೆಗಳು ನಮ್ಮ ಮುಂದೆ ಬಹಳಷ್ಟಿವೆ. ಎಎಪಿ ಹೇಳುತ್ತಿರುವ ಇನ್ನೊಂದು ವಿಚಾರವನ್ನೂ ತಳ್ಳಿಹಾಕುವಂತಿಲ್ಲ. ಗುಜರಾತ್‌ನಲ್ಲಿ ಎಎಪಿ ನೆಲೆ ವಿಸ್ತರಿಸಿಕೊಂಡಿದ್ದು, ಈ ವರ್ಷದ ಕೊನೆಗೆ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಸೋಲುವ ಭೀತಿ ಬಿಜೆಪಿಗೆ ಎದುರಾಗಿದೆ ಎಂದು ಎಎಪಿ ಹೇಳುತ್ತಿದೆ. ಎಎಪಿಯ ವಿರುದ್ಧ ಬಿಜೆಪಿ ಮುಖಂಡರು ಮಾಡುತ್ತಿರುವ ವಾಗ್ದಾಳಿ ಗಮನಿಸಿದರೆ ಇದು ಕೂಡ ತಳ್ಳಿಹಾಕುವಂತಹ ವಿಚಾರ ಅಲ್ಲ.

## ದಿನದ ಟ್ವೀಟ್

### ಬದ್ಧತೆ ತೋರಲಿ



**ರಾಷ್ಟ್ರೀಯ ಪಕ್ಷಗಳು ಅಧಿಕಾರ ಕೇಂದ್ರೀಕರಣಕ್ಕೆ ಗಟ್ಟಿಯಾದ ಬದ್ಧತೆಯನ್ನು ತೋರುತ್ತವೆ. ಪ್ರಾದೇಶಿಕ ಪಕ್ಷಗಳು ಸ್ಥಳೀಯರಿಗೆ ಉದ್ಯೋಗ, ವಿಕೇಂದ್ರೀಕರಣದ ವಿಚಾರದಲ್ಲಿ ಗಟ್ಟಿಯಾದ ಬದ್ಧತೆ ತೋರಬೇಕಿದೆ. ಈ ವಿಚಾರಗಳನ್ನು ಚುನಾವಣೆಯ ವಿಚಾರ ಮಾಡುವ ಕಡೆಗೆ ಗಮನಹರಿಸಬೇಕಿದೆ.**

**ಅರುಣ್ ಜಾವಗಲ್,** ಕನ್ನಡಪರ ಕಾರ್ಯಕರ್ತ

## ಕಿಡಿನುಡಿ



**ಕೊಡಗಿನಲ್ಲಿ ಇತಿಹಾಸ ಕೆದಕಿ ಕಚ್ಚಾಡುವುದು ಬೇಡ. ಹಿಂಸೆ ಯಾರಿಗೂ ಒಳ್ಳೆಯದಲ್ಲ. ದೇಶಕ್ಕೆ ಮಹಾವೀರರನ್ನು ಕೊಟ್ಟ ನೆಲದಲ್ಲಿ ಕ್ಷುಲ್ಲಕ ವಿಷಯಗಳ ವಿಜೃಂಭಣೆ ನಡೆಯುತ್ತಿದೆ. ಕಾಂಗ್ರೆಸ್, ಬಿಜೆಪಿಯು ರಾಜಕೀಯಕ್ಕಾಗಿ ಒಡಕು ಮೂಡಿಸುವ ಕೆಲಸದಲ್ಲಿ ತೊಡಗಿವೆ.**

**ಎಚ್.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಭಾನುವಾರ, 24-8-1997

**• ವೀರಪ್ಪನ್ ಶರಣಾಗತಿ ಒಂದೆರಡು ದಿನದಲ್ಲಿ**

**ಚೆನ್ನೈ, ಆಗಸ್ಟ್ 23 (ಯುಎನ್‌ಐ)**- ಕುಖ್ಯಾತ ದಂತಚೋರ ವೀರಪ್ಪನ್ ಸೋಮವಾರದ ನಂತರ ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಶರಣಾಗಲಿದ್ದಾನೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಎಲ್ಲಿ ಮತ್ತು ಯಾವಾಗ ಆತ ಶರಣಾಗುತ್ತಾನೆ ಎಂಬುದನ್ನು ಈಗ ವೀರಪ್ಪನ್ ಜತೆ ಮೂರನೇ ಸುತ್ತಿನ ಮಾತುಕತೆಗಾಗಿ ಕಾಡಿಗೆ ತೆರಳಿರುವ ಸಂಧಾನಕಾರ ಆರ್. ಆರ್. ಗೋಪಾಲ್ ಅವರು ಮರಳಿದ ನಂತರ ನಿರ್ಧರಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

**• ಡಾ. ಎಸ್.ಎನ್. ಹೆಗಡೆ ಮೈಸೂರು ವಿ.ವಿ ನೂತನ ಕುಲಪತಿ**

**ಬೆಂಗಳೂರು, ಆಗಸ್ಟ್ 23**- ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಮಂಗಳೂರು ವಿಶ್ವವಿದ್ಯಾಲಯದ ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಸುಭಾಷ್‌ಚಂದ್ರ ಎನ್. ಹೆಗಡೆ ಅವರನ್ನು ನೇಮಿಸಲಾಗಿದೆ.

ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ಡಾ. ಹೆಗಡೆ ಅವರ ನೇಮಕದ ಬಗ್ಗೆ ಇಂದು ಆದೇಶ ಹೊರಡಿಸಿದ್ದಾರೆ. ಇದರೊಂದಿಗೆ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ನೇಮಕದ ವಿಚಾರದಲ್ಲಿ ಎದ್ದಿದ್ದ ವಿವಾದಕ್ಕೆ ತೆರೆ ಎಳೆದಂತಾಗಿದೆ.

## 50 ವರ್ಷಗಳ ಹಿಂದೆ

ಗುರುವಾರ, 24-8-1972

**• ರೈತರು ಮತ್ತು ವರ್ತಕರ ಘೋಷಿತ ದಾಸ್ತಾನಿನ ಅರ್ಧಭಾಗ ಸರ್ಕಾರದ ವಶಕ್ಕೆ**

**ಬೆಂಗಳೂರು, ಆಗಸ್ಟ್ 23**- ವರ್ತಕರು ಹಾಗೂ ರೈತರ ಬಳಿಯಿರುವ ಘೋಷಿತ ದಾಸ್ತಾನಿನಲ್ಲಿ ಶೇ 50ರಷ್ಟನ್ನು ಸ್ವಾಧೀನಪಡಿಸಿಕೊಳ್ಳಲು ಆರಂಭಿಸಿರುವ ಸರ್ಕಾರ ಇಂದು ಆ ಧಾನ್ಯಕ್ಕೆ ಬೆಲೆ ನಿಗದಿ ಮಾಡಿತು.

ಇಂದು ನಡೆದ ಮಂತ್ರಿಮಂಡಲದ ತೀರ್ಮಾನದ ಪ್ರಕಾರ, ಹಾಗೆ ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಕ್ಕಿ ಹಾಗೂ ಜೋಳಕ್ಕೆ ಆಹಾರ ಕಾರ್ಪೊರೇಷನ್ ನೀಡುವ ಬೆಲೆಯನ್ನು ಕೊಡಲಾಗುವುದು.

ಆಗಸ್ಟ್ 1ರಿಂದ ಈ ರೀತಿ ದಾಸ್ತಾನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕಾರ್ಯವನ್ನು ಆರಂಭಿಸಲಾಗಿದೆ.

ಮಾರುಕಟ್ಟೆಯಲ್ಲಿ ಬೆಲೆ ಏರದಂತೆ ಮಾಡುವುದೇ ಸರ್ಕಾರದ ಈ ಕ್ರಮದ ಉದ್ದೇಶ.

**• ವಾಪಸಾದ ಬಳಿಕ ಶರಾವತಿ ವಿಚಾರಣೆ ಕುರಿತು ನಿರ್ಧಾರ**

**ಬೆಂಗಳೂರು, ಆಗಸ್ಟ್ 23**- ಮುಖ್ಯಮಂತ್ರಿಗಳ ದೆಹಲಿ ಭೇಟಿಯ ನಂತರ ಶರಾವತಿ ಯೋಜನೆ ಕುರಿತು ವಿಚಾರಣೆ ನಡೆಸುವ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಶರಾವತಿ ವಿದ್ಯುಜ್ಜನಕ ಯಂತ್ರಗಳಿಗೆ ಉಂಟಾಗಿರುವ ನಷ್ಟವನ್ನು ಪರಿಶೀಲಿಸಿ ನಿನ್ನೆ ನಗರಕ್ಕೆ ಹಿಂದಿರುಗಿದ ಮುಖ್ಯಮಂತ್ರಿಗಳು ಸಂಜೆ ದೆಹಲಿಗೆ ತೆರಳಿದ್ದು, 26 ಅಥವಾ 27ಕ್ಕೆ ನಗರಕ್ಕೆ ಹಿಂದಿರುಗುವರು.

ವಿನಯವಂತಿಕೆಯ ಕೊರತೆಯು ಸಮಾಜವನ್ನು ಪಾಳೆಗಾರಿಕೆಯ ಕಡೆಗೆ ಒಯ್ಯುತ್ತದೆ

# ಸಾರ್ವಜನಿಕ ನೈತಿಕತೆ: ಕಳೆದುಹೋಗುತ್ತಿರುವ ಪ್ರಜ್ಞೆ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**ಯಾರಿಗಾದರೂ** ಹಣ ಕೊಡಲು ಬಾಕಿ ಇದ್ದರೆ ತಲೆ ತಪ್ಪಿಸಿಕೊಂಡು ತಿರುಗಾಡಬೇಕಾಗುತ್ತದೆ ಎಂದು ಭಾವಿಸುವ ಕಾಲವೊಂದಿತ್ತು. ಆದರೆ, ಈಗಿನ ಜೀವನ ಸನ್ನಿವೇಶ ಬಹಳ ಬದಲಾಗಿದೆ. ತನಗೆ ಸಾಲ ಕೊಟ್ಟವನ ವ್ಯಕ್ತಿತ್ವದ ಬಗ್ಗೆ ಕೆಟ್ಟದ್ದನ್ನು ಹೇಳುತ್ತಾ, ಬಾಕಿಯನ್ನು ತಾನು ಕೊಡದೇ ಇರುವುದಕ್ಕೆ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಪರಿಪಾಟ ಬೆಳೆದಿದೆ. ಬರಬೇಕಾದ ಹಣವನ್ನು ಪಡೆಯುವ ಬದಲು ಕೊಟ್ಟ ಹಣ ಬಾರದಿದ್ದರೂ ಪರವಾಗಿಲ್ಲ, ಇವನು ತನ್ನ ಬಗ್ಗೆ ಏನೂ ಹೇಳದಿದ್ದರೆ ಸಾಕು ಎಂದು ಸಾಲ ಕೊಟ್ಟವನು ಯೋಚಿಸಬೇಕಾದ ಪರಿಸ್ಥಿತಿ ಬಂದಿದೆ. ಇದು ಸಮಾಜದ ಒಳರಚನೆಯಲ್ಲಿ ನಡೆಯುತ್ತಿರುವಂತಹುದು.

ಸಾರ್ವಜನಿಕ ಜೀವನದ ಮೇಲುಸ್ತರದಲ್ಲಿ ಇಂತಹ ಸಂಗತಿಗಳು ಕಾಣಿಸಿಕೊಳ್ಳುವುದಿಲ್ಲ. ಆದರೆ ಸಾರ್ವಜನಿಕ ಜೀವನದ ಮೇಲುಸ್ತರದಲ್ಲೇ ಕಾಣಿಸಿಕೊಳ್ಳುತ್ತಿರುವ ಹಲವು ಸಂಗತಿಗಳಿವೆ. ತನ್ನವನು ಎನ್ನುವ ಕಾರಣಕ್ಕೆ ಅವನ ಪರವಾಗಿ ವರ್ತಿಸಿದಾಗಲೂ ಮೇಲ್ನೋಟಕ್ಕಾದರೂ ಎಲ್ಲರ ದೃಷ್ಟಿಯಲ್ಲಿ ನಿಷ್ಪಕ್ಷಪಾತಿಯಂತೆ ಕಾಣಿಸಿಕೊಳ್ಳಬೇಕೆಂಬ ಪ್ರಜ್ಞೆ ತೀರಾ ಇತ್ತೀಚಿನವರೆಗೂ ಇತ್ತು. ಇದೇ ಜೀನ್ ಜಾಕ್ ರೂಸೋ ಕರೆಯುವ 'ಜನರಲ್ ವಿಲ್' ಅಥವಾ ಯಾಜ್ಞವಲ್ಕ್ಯ ಗುರುತಿಸುವ 'ಸಾರ್ವತ್ರಿಕ ಧೋರಣೆ'.

ಸಾರ್ವತ್ರಿಕ ಧೋರಣೆಯು ಎಷ್ಟು ಪ್ರಭಾವಿ ಎಂದರೆ, ಎಂತಹ ಭ್ರಷ್ಟನೇ ಇರಬಹುದು, ಆತ ಸಾರ್ವಜನಿಕ ವೇದಿಕೆಯಲ್ಲಿ ಭ್ರಷ್ಟಾಚಾರವನ್ನು ಸಮರ್ಥಿಸುವುದಿಲ್ಲ. ಭ್ರಷ್ಟಾಚಾರ ಕೆಟ್ಟದ್ದು ಎಂದೇ ಹೇಳುತ್ತಾನೆ. 'ನಾನು ಭ್ರಷ್ಟಾಚಾರ ಮಾಡುತ್ತೇನೆ, ನನ್ನಿಷ್ಟ, ನನ್ನ ಸಾಮರ್ಥ್ಯ' ಎಂದು ಸಾರ್ವಜನಿಕ ವೇದಿಕೆಯಲ್ಲೇ ಹೇಳುವ ಪರಿಸ್ಥಿತಿ ಬಂತೆಂದರೆ ಅದು ಸಮಾಜದ ಸಾರ್ವತ್ರಿಕ ಧೋರಣೆಯನ್ನೇ ಧಿಕ್ಕರಿಸಬಲ್ಲ, ಧಿಕ್ಕರಿಸಿಯೂ ದಕ್ಕಿಸಿಕೊಳ್ಳಬಲ್ಲ ಒಂದು ಪ್ರತಿಗಾಮಿ ಸಮಾಜದ ಕಡೆಗೆ ಸಾಗುವುದರ ಸ್ಪಷ್ಟ ಸೂಚನೆ. ಅಂತಹ ಸಮಾಜದಲ್ಲಿ ಕಾನೂನಿಗೆ ತೋರಿಕೆಯ ಮೌಲ್ಯವೂ ಇರುವುದಿಲ್ಲ. ಹಣ, ಅಧಿಕಾರ, ತೋಳ್ಬಲದಲ್ಲಿ ಸಮರ್ಥನಾದವನ ಆ ಕ್ಷಣದ ಬಯಕೆಯೇ ಶಾಸನದ ಕಿಮ್ಮತ್ತನ್ನು ಪಡೆಯುತ್ತದೆ. ಇದು ಮಧ್ಯಯುಗೀನ ಕಾಲದ ಪಾಳೆಗಾರಿಕೆಯ ಸಮಾಜಕ್ಕೆ ಒಯ್ಯುತ್ತದೆ. ಸಾರ್ವತ್ರಿಕ ನೈತಿಕತೆಯ ಪ್ರಜ್ಞೆಯನ್ನು ಧಿಕ್ಕರಿಸುವುದನ್ನು ಸಮಾಜ ಯಾವುದೇ ಕಾರಣಕ್ಕೆ ಮೌನವಾಗಿ ಸಹಿಸಿಕೊಂಡರೂ ಮಧ್ಯಯುಗೀನ ಅನಾಗರಿಕತೆಯ ಕಡೆಗೇ ಅದು ಸಾಗುತ್ತದೆ.

ಪ್ರಸ್ತುತ ಸಮಾಜದಲ್ಲಿ ಸಾರ್ವತ್ರಿಕ ಧೋರಣೆಯನ್ನು ಸಾರ್ವಜನಿಕವಾಗಿ ಧಿಕ್ಕರಿಸುವ ಪ್ರವೃತ್ತಿ ಒಂದೆಡೆ ಕಾಣಿಸುತ್ತಿದ್ದರೆ, ಇನ್ನೊಂದೆಡೆ, ಕನಿಷ್ಠ ಕಾಳಜಿ ಇಲ್ಲದೆ ಮೌಲ್ಯಗಳನ್ನೇ ಒಂದು ದುರಾಗ್ರಹದ ತಂತ್ರವಾಗಿ ಬಳಸುವುದು ಜಾರಿಗೆ ಬಂದಿದೆ. ಉದಾಹರಣೆಗೆ, ಭಾರತದ ಸ್ವಾತಂತ್ರ್ಯ ಹೋರಾಟ, ರಾಷ್ಟ್ರಧ್ವಜ, ರಾಷ್ಟ್ರಗೀತೆ ಮುಂತಾದ ಎಲ್ಲರಿಗೂ ಅನ್ವಯಿಸುವ ಸಂಗತಿಗಳು ವ್ಯಾಪಕವಾಗಿ ಚರ್ಚೆಗೆ ಒಳಗಾಗಿವೆ. ಆದರೆ ಈ ಎಲ್ಲವೂ ಪ್ರತಿಪಾದಿಸುವ ಆಶಯಗಳ ಕಡೆಗೆ ಯಾರದೂ ಗಮನವಿಲ್ಲ. ಉದಾಹರಣೆಗೆ, ಭಾರತದ ರಾಷ್ಟ್ರಪಕ್ಷಿ ನವಿಲು. ಆದರೆ ನವಿಲುಧಾಮವನ್ನು ಮಾಡುವ, ಅದರ ಬಗ್ಗೆ ಚರ್ಚಿಸುವ ಚಿಂತನೆ ಉಳಿದಿಲ್ಲ. ವನ್ಯ ಸಂಪತ್ತು ರಾಷ್ಟ್ರೀಯ ಸಂಪತ್ತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆಪದಲ್ಲಾದರೂ ಅರಣ್ಯ ಸಂರಕ್ಷಣೆ, ಖನಿಜಗಳ ಸಂರಕ್ಷಣೆಯಂತಹ ಆಲೋಚನೆಗಳೂ ಇಲ್ಲ. ಅವುಗಳ ಬಗ್ಗೆ ಚರ್ಚೆಯೂ ಇಲ್ಲ. ಅಂತಹ ಸಂಪತ್ತಿನ ಲೂಟಿ ಎಗ್ಗಿಲ್ಲದೆ ನಡೆಯುತ್ತಿರುವುದರ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಿಲ್ಲ. ನಮ್ಮ ಸಂಪತ್ತನ್ನು ನಾವು ರಕ್ಷಿಸಿಕೊಳ್ಳಬೇಕು ಎಂಬ ಜವಾಬ್ದಾರಿಯ ಅರಿವನ್ನು ತರಲಾರದ ಸ್ವಾತಂತ್ರ್ಯದ ಸಂಭ್ರಮಕ್ಕೆ ಯಾವ ಸಾರ್ವಜನಿಕ ಮಹತ್ವ ಉಳಿಯುತ್ತದೆ?

ಐದು ನಿಮಿಷ ಸಾರ್ವಜನಿಕವಾಗಿ ಮಾತನಾಡಿದರೂ ಸಾಕು ಕನಿಷ್ಠ ಹತ್ತು ಬಾರಿಯಾದರೂ ಎಲ್ಲರ ಕಲ್ಯಾಣವನ್ನು ಪ್ರಸ್ತಾಪಿಸುವವನು ಎಗ್ಗಿಲ್ಲದ ಖಾಸಗೀಕರಣಕ್ಕೆ ತುಂಬು ಬೆಂಬಲ ನೀಡುತ್ತಿರುತ್ತಾನೆ. ಖಾಸಗೀಕರಣ ಮತ್ತು ಬಂಡವಾಳವಾದವೂ ಅಭಿವೃದ್ಧಿಯ ಒಂದು ವಿಧಾನವೇ ಆಗಿದೆ. ಆದರೆ ಮನುಷ್ಯ ಒಳ್ಳೆಯವನಾಗಿದ್ದಾಗ ಬಂಡವಾಳವಾದದಲ್ಲೂ ಅದು ಅಭಿವೃದ್ಧಿಯ ಸಾಧನವಾಗುವುದು. ಒಳ್ಳೆಯವನಾಗಿಲ್ಲದೇ ಇದ್ದರೆ ಬಂಡವಾಳವಾದವು ಊಳಿಗಮಾನ್ಯ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತದೆ. ಅದೇ ಆಗುತ್ತಲೂ ಇದೆ. ಆದರೆ ಮನುಷ್ಯನ ಅರ್ಥಾತ್ ಬಂಡವಾಳಿಗರ ಒಳ್ಳೆಯತನ, ನೈತಿಕತೆ, ಸಾರ್ವಜನಿಕ ಜವಾಬ್ದಾರಿಗಳ ಚರ್ಚೆಯನ್ನೇ ಮಾಡದವನೂ ಎಲ್ಲರ ಕಲ್ಯಾಣದ ಬಗ್ಗೆ ಮಾತನಾಡಬಲ್ಲ!

ಈ ರೀತಿಯ ಸನ್ನಿವೇಶದ ನಿರ್ಮಾಣಕ್ಕೆ ಹಲವು ಹಿನ್ನೆಲೆಗಳಿವೆ. ಮೊದಲನೆಯದಾಗಿ, ಯಾವುದೇ ವಿಷಯವನ್ನು ರಾಜಕೀಯ ದೃಷ್ಟಿಕೋನದಿಂದಲೇ ವ್ಯಾಖ್ಯಾನಿಸುವುದು. ಪ್ರಜಾಪ್ರಭುತ್ವ ದೇಶದಲ್ಲಿ ರಾಜಕೀಯದ ಅರಿವು ಪೌರರಿಗೆ ಮೂಲಭೂತ ಅವಶ್ಯಕತೆಯಾಗಿದೆ. ಆದರೆ ಅದು ಎಂದಿಗೂ ಪಕ್ಷಬದ್ಧ ರಾಜಕೀಯ ಧೋರಣೆಯಾಗಬಾರದು. ಈ ವಿಚಾರದಲ್ಲಿ ಮಹಾತ್ಮ ಗಾಂಧಿ 'ಸ್ವಾತಂತ್ರ್ಯ ಬಂದದ್ದು ದೇಶಕ್ಕೆ; ಕಾಂಗ್ರೆಸ್ಸಿಗಲ್ಲ; ಸಚಿವ ಸಂಪುಟಕ್ಕೆ ಕಾಂಗ್ರೆಸ್ಸೇತರರನ್ನೂ ತೆಗೆದುಕೊಳ್ಳಿ' ಎಂಬ ನಿಷ್ಠುರ ನಿಲುವನ್ನು ಪ್ರಕಟಿಸಿದ್ದರು. ಆದರೆ ಪಕ್ಷಬದ್ಧ ರಾಜಕೀಯವು ಕೇರಳದಲ್ಲಿ ಎಡಪಕ್ಷಗಳಿಂದ ಮೊದಲು ಪ್ರಾರಂಭವಾಯಿತು. ಈಗ ಇಡೀ ದೇಶದಲ್ಲಿ ಇಂಥ ದೃಷ್ಟಿಕೋನವು ಬೆಳೆದಿದೆ. ಪಕ್ಷಬದ್ಧತೆಯ ಆಧಾರದಲ್ಲಿ ದೇಶದ ಸಮಸ್ತ ಪೌರರನ್ನೂ ರಾಜಕೀಯ ಧೋರಣೆಯಲ್ಲಿ ಎರಡಾಗಿ ವಿಭಜಿಸಿ ನೋಡಲಾಗುತ್ತಿದೆ.



ರಾಜಕೀಯವು ಜನರಿಗಾಗಿ ಇಲ್ಲ, ಜನರು ರಾಜಕೀಯಕ್ಕಾಗಿ ಇದ್ದಾರೆ ಎಂಬ ದೃಷ್ಟಿಕೋನವು ವರ್ತಮಾನದಲ್ಲಿ ವಿಚಾರವಂತ ವರ್ಗದಲ್ಲಿಯೂ ಬಂದಿದೆ. ಆದ್ದರಿಂದ ಭ್ರಷ್ಟಾಚಾರವನ್ನು ಸಮರ್ಥಿಸ ಕೂಡದು, ಬೆಲೆ ಏರಿಕೆಯಿಂದ ಜನರಿಗೆ ಕಷ್ಟವಾಗುತ್ತದೆ, ಜಾತಿ ದ್ವೇಷದ ಪ್ರತಿಪಾದನೆ ಸರಿಯಲ್ಲ ಎಂದು ಹೇಳಿದ ಕೂಡಲೇ, ಹೇಳಿದವನು ರಾಜಕೀಯವಾಗಿ ಯಾವ ಕಡೆ ಇದ್ದಾನೆ ಎಂಬ ಅರ್ಥದಲ್ಲಿ ಆತನನ್ನು ಪರಿಗಣಿಸಿ ನಾನಾ ರೀತಿಯ ವೈಚಾರಿಕ ಕಿರುಕುಳವನ್ನು ಕೊಡಲಾಗುತ್ತದೆ. ಹೇಳಿದ ವಿಚಾರದ ಆಶಯವನ್ನು ಗ್ರಹಿಸುವ ನಡೆಯು ಸಾರ್ವಜನಿಕ ಪ್ರಜ್ಞೆಯ ಮುಖ್ಯವಾಹಿನಿಯಿಂದ ಹೊರಟು ಹೋಗಿದೆ. ಸಾರ್ವತ್ರಿಕ ಧೋರಣೆ, ಸಾರ್ವಜನಿಕ ನೈತಿಕತೆ ಏನು ಎಂಬುದನ್ನು ಹೇಳುವುದಕ್ಕೇ ಬಿಡದಿದ್ದರೆ ಅದರ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ನಡೆಯುವುದಿಲ್ಲ. ಆಗ ಸಾರ್ವತ್ರಿಕ ಧೋರಣೆಯನ್ನು ಸಂರಕ್ಷಿಸಿಕೊಳ್ಳಲಾಗದು.

ಎರಡನೆಯದಾಗಿ, ಮಾರುಕಟ್ಟೆ ಆರ್ಥಿಕತೆಯು ಎಲ್ಲ ಕಡೆಯೂ ವ್ಯಾಪಿಸಿಕೊಂಡಿದ್ದು ಧರ್ಮ, ಮೌಲ್ಯ, ದೇಶಭಕ್ತಿ, ನಾಡ ಪ್ರೀತಿ, ಸಾಮಾಜಿಕ ಚಳವಳಿ, ಸಾಹಿತ್ಯ, ಕಲೆ, ಇತಿಹಾಸ- ಏನನ್ನು ಮಾತನಾಡಿದರೂ; ಮಾತು ಕೂಡ ಮಾರುಕಟ್ಟೆಯ ಸರಕಾಗಿ ಬದಲಾಗುತ್ತದೆ. ಈ ರೀತಿಯ ಸಮಾಜದಲ್ಲಿ ವಿಚಾರಗಳು ಅಗೋಚರ ಸರಕಾಗಿ ಮಾರಾಟವಾಗುತ್ತವೆ ಅಥವಾ ಜಾಹೀರಾತಾಗಿ ಬಳಕೆಯಾಗುತ್ತವೆ. ಆದ್ದರಿಂದ ಅವು ವೈಚಾರಿಕ ಪರಿಣಾಮವನ್ನು ಬೀರದೆ ಸಾರ್ವತ್ರಿಕ ಧೋರಣೆಯು ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ.

ಮೂರನೆಯದಾಗಿ, ಪ್ರಸ್ತುತ ಆರ್ಥಿಕ ಹಿನ್ನಡೆ ಆಗಿದ್ದರೂ ಜನರ ವೈಚಾರಿಕತೆಯನ್ನೇ ಪರಿವರ್ತಿಸುವಷ್ಟು ಬಲಿಷ್ಠವಾದ ಹಿನ್ನಡೆ ಆಗಿಲ್ಲ. ಹಣಕಾಸಿನ ಹೊಂದಾಣಿಕೆಗಳು ನಡೆಯುತ್ತವೆ. ಧನಬಲ, ಜನಬಲ, ಅಧಿಕಾರಬಲ ಇರುವ ತನಕ ವೈಚಾರಿಕ ಪಕ್ವತೆ ಇಲ್ಲದ ಜನರಲ್ಲಿ ವಿನಯ ಇರುವುದಿಲ್ಲ. ತನ್ನಲ್ಲಿರುವ ಶಕ್ತಿಯನ್ನು ಅರಗಿಸಿಕೊಳ್ಳುವಷ್ಟು ಜ್ಞಾನದ ಶಕ್ತಿ ಇಲ್ಲದ ಜನರಲ್ಲಿ 'ಶಕ್ತಿ'ಯು ದುರಹಂಕಾರ ಮತ್ತು ದಾರ್ಷ್ಟ್ಯವನ್ನು ಬೆಳೆಸುತ್ತದೆ. ಜೊತೆಗೆ ಶಿಕ್ಷಣವೂ ಜ್ಞಾನವನ್ನು ಸೃಷ್ಟಿಸಲು ಗಮನವನ್ನು ಕೊಡದೆ, ಹೆಚ್ಚಿನ ಅಂಕಗಳ ಮೂಲಕ ವಿದ್ಯಾರ್ಥಿಗಳನ್ನು ಮಾರುಕಟ್ಟೆ ಆರ್ಥಿಕತೆಯಲ್ಲಿ ಅಧಿಕ ಬೆಲೆಯ ಸರಕಾಗಿ ಚಲಾವಣೆಯಲ್ಲಿ ಇರುವಂತೆ ಮಾಡುವ ರೂಪವನ್ನು ಹೊಂದಿದೆ. ಇದರಿಂದಾಗಿ ಸಮಾಜದಲ್ಲಿ ವಿನಯವನ್ನು ಬೆಳೆಸುವ ಕೆಲಸವು ಕುಟುಂಬಗಳ ಗುಣ ಲಕ್ಷಣಗಳ ಮಟ್ಟದಲ್ಲಷ್ಟೇ ಉಳಿದಿದೆ.

ಜ್ಞಾನದ ಕೊರತೆ ಇದ್ದಾಗ ಜನರು ದುರಹಂಕಾರವನ್ನು ನಿಷ್ಠುರವಾದ ಎಂದು ತಪ್ಪಾಗಿ ಭಾವಿಸುತ್ತಾರೆ. ನಿಜವಾದ ನಿಷ್ಠುರವಾದಿ ಅತ್ಯಂತ ವಿನಯವಂತನಾಗಿರುತ್ತಾನೆ. ದುರಹಂಕಾರಿ ಎಂದೂ ವಿನಯವಂತನಾಗಿ ಇರುವುದಿಲ್ಲ. ಸಮಾಜದಲ್ಲಿ ಉಂಟಾಗಿರುವ ವಿನಯವಂತಿಕೆಯ ಕೊರತೆಯು ತಾನು ಮತ್ತು ತನ್ನವನು ಏನನ್ನು ಮಾಡಿದರೂ ಸರಿಯೇ ಎಂದು ಸಮರ್ಥಿಸಿಕೊಳ್ಳುವ ಅನಾರೋಗ್ಯಕರ ಸಮಾಜವನ್ನು ನಿರ್ಮಿಸುತ್ತದೆ. ಇದು ಸಮಾಜವನ್ನು ಪಾಳೆಗಾರಿಕೆಯ ಕಡೆಗೆ ಒಯ್ಯುತ್ತದೆ.

ಈ ಸವಾಲನ್ನು ಎದುರಿಸಬೇಕಾದರೆ, ಸಮಸ್ಯೆಯ ಅರಿವು ಉಳ್ಳವರು ಸಂಘಟಿತರಾಗಿ, ಒಂದು ಸಾಮಾಜಿಕ ಶಕ್ತಿಯಾಗಿ ವೈಚಾರಿಕ ಕಾರ್ಯಗಳನ್ನು ಮಾಡಬೇಕು. ಅದರ ಪರಿಣಾಮ ಸಮಾಜದ ಮೇಲೆ ಉಂಟಾಗುವಂತೆ ಆಗಬೇಕು.

## ಚುರುಮುರಿ



### ಮೊಟ್ಟೆ ಭಯ

• ಮಣ್ಣೆರಾಜು

**'ಶಾಸಕರ** ಭವನದಲ್ಲಿ ಮೊಟ್ಟೆ ಬ್ಯಾನ್ ಮಾಡಿದ್ದಾರಂತೆ, ಯಾಕೆ ಸಾರ್? ಶಾಸಕರು ಮೊಟ್ಟೆ ತಿನ್ನಬಾರದಂತಾ?' ಕೇಳಿದೆ.

'ಅಲ್ಲ, ಎಸೆದಾಡಬಾರದು ಅಂತ' ಅಂದರು ಶಾಸಕರು.

'ತಿನ್ನುವ ಮೊಟ್ಟೆಯನ್ನು ನೀವೇಕೆ ಎಸೆದಾಡ್ತೀರಿ?'

'ನಾವಲ್ಲಾರೀ, ಕಿಡಿಗೇಡಿಗಳು ಬಂದು ಮೊಟ್ಟೆ ಎಸೆದು ನಮ್ಮ ಬಟ್ಟೆ ಗಲೀಜು ಮಾಡಬಾರದು ಅಂತ...'

'ಬ್ಯಾನ್ ಮಾಡುವಷ್ಟು ಮೊಟ್ಟೆ ಮಾರಕವಲ್ಲ ಸಾರ್, ಮೊಟ್ಟೆ ಭಯ ಬಿಟ್ಟು ಧೈರ್ಯವಾಗಿರಿ'.

'ಹ್ಯಾಗ್ರೀ ಧೈರ್ಯವಾಗಿರೋದು? ಈಗ ಸಭೆ ಸಮಾರಂಭಗಳಿಗೆ ಹೋದಾಗ ಯಾರು, ಎಲ್ಲಿಂದ ಮೊಟ್ಟೆ ಎಸೆಯುತ್ತಾರೋ ಅನ್ನೋ ಭಯ ಕಾಡುತ್ತಿರುತ್ತದೆ ನನಗೆ. ಮೊಟ್ಟೆ ತಿಂದು ಪೌಷ್ಟಿಕತೆ ಹೆಚ್ಚಿಸಿಕೊಳ್ಳಿ ಅಂತ ಶಾಲೆಗಳಿಗೆ ಹೋಗಿ ನಾನೇ ಮಕ್ಕಳಿಗೆ ಹೇಳಿದ್ದೆ. ಮೊಟ್ಟೆಯನ್ನು ತಿನ್ನಲು ಬಳಸಿ, ಎಸೆದಾಡಬೇಡಿ ಎಂದು ಮಕ್ಕಳಲ್ಲಿ ವಿದ್ಯಾರ್ಥಿದೆಸೆಯಲ್ಲೇ ಅರಿವು ಮೂಡಿಸಬೇಕು ಕಣ್ರೀ'.

'ಹೌದು ಸಾರ್, ಹಾಗೇ ಮೊಟ್ಟೆಗಳ ದುರ್ಬಳಕೆ ವಿರುದ್ಧ ಸಾರ್ವಜನಿಕರಲ್ಲೂ ಜಾಗೃತಿ ಮೂಡಿಸಬೇಕು. ಮೊಟ್ಟೆ ಎಸೆಯುವುದು ಅಕ್ಷಮ್ಯ ಅಪರಾಧ ಅಂತ ಕಾನೂನು ರೂಪಿಸಬೇಕು. ತಿನ್ನುವ ಉದ್ದೇಶವಲ್ಲದೆ ಅನ್ಯ ಉದ್ದೇಶಕ್ಕೆ ಬಳಸದಂತೆ ಮೊಟ್ಟೆ ಕೊಳ್ಳುವವರ ಮೇಲೆ ಕಣ್ಣು ಇಡಬೇಕು'.

'ಸಾಮಾನ್ಯ ಕೋಳಿ ಇಡುವ ಮೊಟ್ಟೆ ರಾಜಕಾರಣಿಗಳ ನಿದ್ದೆಗೆಡಿಸಿದೆ. ಸಮಾಜದ ಶಾಂತಿ, ನೆಮ್ಮದಿ ಕೆಡಿಸಿಬಿಟ್ಟಿದೆ' ಶಾಸಕರು ನಿಟ್ಟುಸಿರುಬಿಟ್ಟರು.

'ಮೊಟ್ಟೆ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಸಾರ್'.

'ಶಾಶ್ವತ ಪರಿಹಾರ ಸಾಧ್ಯವೇನ್ರೀ?'

'ಸಾಧ್ಯ ಸಾರ್, ಎಲ್ಲಾ ಕೋಳಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿಸಿಬಿಟ್ಟರೆ ಮೊಟ್ಟೆಯೂ ಇರಲ್ಲ, ಸಮಸ್ಯೆನೂ ಇರಲ್ಲ, ಅಲ್ವಾ?' ಕೋಪಗೊಂಡ ಶಾಸಕರು ಕಾರು ಹತ್ತಿ ಹೊರಟರು.

## ಸಂಗತ

# ಆಯ್ಕೆಯ ಮಾದರಿ: ಮೆರೆಯಲಿ ವಿವೇಕ

### ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ನಮಗಿಂತ ತೀರಾ ಕೆಳಗಿರುವ ರಾಜ್ಯಗಳನ್ನೇ ನಾವು ಮಾದರಿಯಾಗಿ ಪರಿಗಣಿಸುವುದು ಎಷ್ಟು ಸರಿ?

• ಎಚ್.ಕೆ.ಶರತ್

**ತಮ್ಮ** ಅಭಿವೃದ್ಧಿ ಮಾದರಿಯನ್ನು ದೇಶದ ಮುಂದಿಡಲು ಕೆಲವು ರಾಜ್ಯಗಳು ಬಹಳಷ್ಟು ಉತ್ಸುಕವಾಗಿವೆ. ತಾವು ಅನುಸರಿಸುತ್ತಿರುವ ಆಡಳಿತ ಮಾದರಿಯೇ ಉತ್ತಮವಾದುದು ಎಂಬ ಅಭಿಪ್ರಾಯವನ್ನು ಜನರ ಮನಸ್ಸಿನಲ್ಲಿ ನೆಲೆಯೂರಿಸಲು ದೆಹಲಿ, ಉತ್ತರಪ್ರದೇಶ, ತೆಲಂಗಾಣದಂತಹ ರಾಜ್ಯ ಸರ್ಕಾರಗಳು ಪೈಪೋಟಿಗೆ ಇಳಿದಿವೆ. ಇದಕ್ಕಾಗಿ ಬಹಳಷ್ಟು ಸಂಪನ್ಮೂಲಗಳನ್ನೂ ವ್ಯಯಿಸುತ್ತಿವೆ.

ಹೀಗೆ ಕೆಲ ರಾಜ್ಯ ಸರ್ಕಾರಗಳು ತಮ್ಮದೇ ಮಾದರಿಗೆ ಪ್ರಚಾರ ನೀಡಲು ಕಾರ್ಯತಂತ್ರ ರೂಪಿಸುತ್ತಿದ್ದರೆ, ನಮ್ಮ ರಾಜ್ಯ ಸರ್ಕಾರಕ್ಕೆ ತಾನು ನೆಚ್ಚಿಕೊಂಡಿರುವ ಆಡಳಿತ ಮತ್ತು ಅಭಿವೃದ್ಧಿ ಮಾದರಿ ಕುರಿತು ವಿಶ್ವಾಸ ಇರುವಂತೆ ತೋರುತ್ತಿಲ್ಲ. ಹೀಗಾಗಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೆಲ ಸಚಿವರು ಆಗಾಗ 'ಉತ್ತರಪ್ರದೇಶ ಮಾದರಿ' ಅಥವಾ 'ಯೋಗಿ ಮಾದರಿ'ಯನ್ನು, ಅಪರೂಪಕ್ಕೆ ಒಮ್ಮೊಮ್ಮೆ 'ಗುಜರಾತ್ ಮಾದರಿ'ಯನ್ನು ರಾಜ್ಯದಲ್ಲೂ ಅನುಷ್ಠಾನಕ್ಕೆ ತರುವ ದಿಸೆಯಲ್ಲಿ ಚಿಂತಿಸಲಾಗುವುದು ಎಂದು ಹೇಳತೊಡಗಿದ್ದಾರೆ.

ಅಸಲಿಗೆ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವವರಿಗೆ ಮಾದರಿಯಾಗಬೇಕಿರುವುದು ಏನು? ಅವರು ಮೊದಲು ಪರಿಗಣಿಸಬೇಕಿರುವುದು ಸಂವಿಧಾನವು ಮುಂದಿಡುವ ಆಡಳಿತ ಮಾದರಿಯನ್ನಲ್ಲವೇ?

ಗುಣಮಟ್ಟ ನಿರ್ವಹಣೆ ವಿಷಯದಲ್ಲಿ ಇತರರನ್ನು ನೋಡಿ ಕಲಿಯಲು ಅನುಸರಿಸಬೇಕಿರುವ ಮಾನದಂಡಗಳನ್ನು 'ಪ್ರಮಾಣೀಕರಣ ನಿಗದಿ' (ಬೆಂಚ್‌ಮಾರ್ಕಿಂಗ್) ಎಂಬ ಪರಿಕಲ್ಪನೆ ಮನಗಾಣಿಸುತ್ತದೆ. ರಾಜ್ಯ ಸರ್ಕಾರದ ಆಡಳಿತ ಗುಣಮಟ್ಟ ಸುಧಾರಣೆಗೆ ನಿಜಕ್ಕೂ ಇಚ್ಛಾಶಕ್ತಿ ಇದ್ದಲ್ಲಿ, ಮುಖ್ಯಮಂತ್ರಿ ಹಾಗೂ ಸಚಿವರು 'ನಿರ್ದಿಷ್ಟ ಮಾದರಿ'ಯ ಆಯ್ಕೆಗೂ ಅನುಸರಿಸಬೇಕಿರುವುದು ಬೆಂಚ್‌ಮಾರ್ಕಿಂಗ್ ಮೂಲಭೂತ ನಿಯಮಗಳನ್ನೇ. ಬೆಂಚ್‌ಮಾರ್ಕಿಂಗ್ ಮಾಡಲು ಹೊರಡುವವರು ಮೊದಲಿಗೆ ಯಾರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಬೇಕು.

ನಮಗಿಂತ ಉತ್ತಮ ಗುಣಮಟ್ಟದ ಉತ್ಪನ್ನ ತಯಾರಿಸಲು, ಸೇವೆ ಒದಗಿಸಲು, ಆಡಳಿತ ನಿರ್ವಹಿಸಲು ಇತರರಿಗೆ ಹೇಗೆ ಸಾಧ್ಯವಾಗುತ್ತಿದೆ? ಅವರಲ್ಲಿ ಸಾಧ್ಯವಿರುವುದನ್ನು ನಮ್ಮಲ್ಲೂ ಸಾಧ್ಯವಾಗಿಸಲಿಕ್ಕೆ ಯಾವ ರೀತಿಯ ಬದಲಾವಣೆಗಳಿಗೆ ನಮ್ಮನ್ನು ಒಡ್ಡಿಕೊಳ್ಳಬೇಕು ಎಂಬ ಪ್ರಶ್ನೆಗಳಿಗೆ ಮೊದಲು ಉತ್ತರ ಕಂಡುಕೊಳ್ಳುವಂತೆ 'ಬೆಂಚ್‌ಮಾರ್ಕಿಂಗ್' ಪರಿಕಲ್ಪನೆ ಸೂಚಿಸುತ್ತದೆ. ಇದನ್ನೇ ಆಧರಿಸಿ 'ಆಡಳಿತ ಮಾದರಿ'ಗಳನ್ನು ಆಯ್ದುಕೊಳ್ಳಲು ನಮ್ಮ ರಾಜ್ಯ ಸರ್ಕಾರ ಮುಂದಾಗುವುದಾದರೆ, ಅದು ಮೊದಲಿಗೆ ಗಮನಿಸಬೇಕಿರುವುದು ನೀತಿ ಆಯೋಗ ಪ್ರಕಟಿಸುವ 'ಸುಸ್ಥಿರ ಅಭಿವೃದ್ಧಿ ಗುರಿ' ಸಾಧನೆಯಲ್ಲಿ ಯಾವೆಲ್ಲ ರಾಜ್ಯಗಳು ಮುಂದಿವೆ ಎಂಬುದನ್ನು.

ಸಾಮಾಜಿಕ, ಆರ್ಥಿಕ ಮತ್ತು ಪರಿಸರಕ್ಕೆ ಸಂಬಂಧಿಸಿದ ಮಾನದಂಡಗಳ ಆಧಾರದಲ್ಲಿ ತಯಾರಿಸುವ 'ಸುಸ್ಥಿರ ಅಭಿವೃದ್ಧಿ ಗುರಿ' ಸಾಧನೆ ಪಟ್ಟಿಯು ನೀತಿ ಆಯೋಗದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. 2020-21ರ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆ ಪಟ್ಟಿಯಲ್ಲಿ ಕರ್ನಾಟಕ 7ನೇ ಸ್ಥಾನದಲ್ಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರ ಸಂಪುಟದ ಸಚಿವರು ಜಪಿಸುತ್ತಿರುವ ಉತ್ತರ ಪ್ರದೇಶವು 25ನೇ ಸ್ಥಾನದಲ್ಲಿದ್ದರೆ, ಗುಜರಾತ್ 10ನೇ ಸ್ಥಾನದಲ್ಲಿದೆ. ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ನಮಗಿಂತ ತೀರಾ ಕೆಳಗಿರುವವರನ್ನೇ ನಾವು ಮಾದರಿಯಾಗಿ ಪರಿಗಣಿಸುವುದು ವಿವೇಚನೆಯುಳ್ಳವರು ಕೈಗೊಳ್ಳುವ ತೀರ್ಮಾನವೇ? ಉತ್ತರ ಪ್ರದೇಶ ಮಾದರಿಗಿಂತ ಕರ್ನಾಟಕ ಮಾದರಿಯೇ ಉತ್ತಮವಾಗಿದೆ ಎಂಬುದನ್ನು ಅಂಕಿಅಂಶಗಳೇ ಹೇಳುತ್ತಿರುವಾಗಲೂ, ನಮ್ಮನ್ನು ಆಳುವವರು ಏಕೆ ತಮ್ಮದೇ ಮಾದರಿಯನ್ನು ಮೂಲೆಗುಂಪಾಗಿಸಿ ಅಧಃಪತನದ ಮಾದರಿಯ ಹಿಂದೆ ಓಡಲು ಹವಣಿಸುತ್ತಿದ್ದಾರೆ?



ನಮ್ಮ ಗುರಿಯು ಸುಸ್ಥಿರ ಅಭಿವೃದ್ಧಿ ಹೊಂದುವುದಾಗಿದ್ದರೆ ನಾವು ಅನುಸರಿಸಬೇಕಿರುವುದು ಈ ಪಟ್ಟಿಯಲ್ಲಿ ಕರ್ನಾಟಕಕ್ಕಿಂತ ಮೇಲಿರುವ ಕೇರಳ, ತಮಿಳುನಾಡು, ಹಿಮಾಚಲ ಪ್ರದೇಶ, ಆಂಧ್ರಪ್ರದೇಶ, ಉತ್ತರಾಖಂಡ, ಗೋವಾ ಸರ್ಕಾರಗಳು ಅಳವಡಿಸಿಕೊಂಡಿರುವ ಮಾದರಿಗಳನ್ನು. ಉತ್ತರ ಪ್ರದೇಶ ಮಾದರಿಯ ಜಪ ಮಾಡುತ್ತಿರುವವರು ಎಂದಾದರೂ ಈ ರಾಜ್ಯಗಳ ಮಾದರಿ ಅನುಸರಿಸುವ ಮಾತನಾಡಿದ್ದಾರೆಯೇ?

ನಮ್ಮ ರಾಜ್ಯವನ್ನು ಆಳುವವರು ಯೋಗಿ ಆಡಳಿತ ಮಾದರಿಯಿಂದ ಕಲಿಯಲು ಹೊರಟಿರುವುದು ಏನನ್ನು? ಪೊಲೀಸರೇ ನ್ಯಾಯಾಧೀಶರ ಸ್ಥಾನದಲ್ಲಿ ನಿಂತು, ಆರೋಪ ಸಾಬೀತಾಗುವ ಮುನ್ನವೇ ಆರೋಪಿಗಳನ್ನು ಕೊಲ್ಲುವುದನ್ನೇ? ಈ ಅನುಮಾನ ಮೂಡಲು ಕಾರಣ, ಕಳೆದ ಎರಡು ವರ್ಷಗಳಲ್ಲಿ, ಪೊಲೀಸರ ವಶದಲ್ಲಿದ್ದಾಗಲೇ ಆರೋಪಿಗಳು ಸಾವನ್ನಪ್ಪಿರುವ ಅತ್ಯಧಿಕ ಪ್ರಕರಣಗಳು ಸಂಭವಿಸಿರುವುದು ಉತ್ತರಪ್ರದೇಶದಲ್ಲಿ. ಎರಡು ವರ್ಷಗಳಲ್ಲಿ ಅಲ್ಲಿ 952 ಮಂದಿ ಪೊಲೀಸ್ ವಶದಲ್ಲಿದ್ದಾಗ ಸತ್ತಿದ್ದರೆ, ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಸಂಭವಿಸಿರುವುದು 18 ಸಾವುಗಳು. ಈ ಸಂಖ್ಯೆಯೇ ಎಲ್ಲವನ್ನೂ ಹೇಳುವಂತಿದೆ.

ಬೇರೆಯವರೊಂದಿಗೆ ಹೋಲಿಸಿಕೊಳ್ಳುವ ಮುನ್ನ ತಮಗಿರುವ ಶಕ್ತಿ, ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಕುರಿತು ಅರಿಯಬೇಕಲ್ಲವೇ? ಜನಸಾಮಾನ್ಯರಲ್ಲೂ ಸಹಜವಾಗಿಯೇ ಬೇರೂರಿರುವ ವಿವೇಕ, ಯಾರನ್ನು ನೋಡಿ ಕಲಿ ಎಂದು ಹೇಳುತ್ತದೆ. ಹಾಳಾದವರನ್ನೋ ಅಥವಾ ಏಳಿಗೆ ಹೊಂದಿದವರನ್ನೋ? ನಮ್ಮನ್ನು ಆಳುವವರ ವಿವೇಕಕ್ಕೆ ಏನಾಗಿದೆ?

## ವಾಚಕರ ವಾಣಿ

### ಅರ್ಹರು ಹೆಚ್ಚು, ಕಡಿಮೆ ಹುದ್ದೆ

ಏಳು ವರ್ಷಗಳ ನಂತರ ಮತ್ತೆ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಆದರೆ ಖಾಲಿ ಇರುವ ಹುದ್ದೆಗಳ ಅನುಸಾರವಾಗಿ ನೇಮಕಾತಿ ನಡೆಯುತ್ತಿಲ್ಲ. ಪೂರ್ಣಕಾಲಿಕವಾಗಿ 9000ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇವೆ. ಆದರೆ ಪ್ರಸ್ತುತ ನೇಮಕಾತಿಯಲ್ಲಿ 1,242 ಹುದ್ದೆಗಳಿಗೆ ಮಾತ್ರ ನೇಮಕಾತಿ ನಡೆಯುತ್ತಿದೆ. ಇದು, ನೂತನ ಶಿಕ್ಷಣ ನೀತಿಗೆ ಪೂರಕವಾಗಿಲ್ಲ.

ಪ್ರತೀ ವಿಷಯದಲ್ಲಿ ಹುದ್ದೆಗಳ ಸಂಖ್ಯೆಯನ್ನು ಏರಿಸಬೇಕು. ಹಾಗೆ ಮಾಡಿದರೆ ವಯೋಮಿತಿ ಮೀರುವ ಅಂಚಿನಲ್ಲಿರುವ ಆಕಾಂಕ್ಷಿಗಳಿಗೆ ಆಸರೆಯಾಗುತ್ತದೆ. ಮತ್ತೆ ನೇಮಕಾತಿ ಪ್ರಕ್ರಿಯೆ ನಡೆಯಬೇಕಾದರೆ ಐದರಿಂದ ಆರು ವರ್ಷ ಬೇಕಾದೀತು. 2015ರ ನೇಮಕಾತಿಯಲ್ಲಿ ಅರ್ಹ ಅಭ್ಯರ್ಥಿಗಳು ಕಡಿಮೆ ಇದ್ದರು, ಹುದ್ದೆಗಳು ಹೆಚ್ಚು ಇದ್ದವು. ಆದರೆ ಪ್ರಸ್ತುತ ಅರ್ಹ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ಕಡಿಮೆ ಸಂಖ್ಯೆಯ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ.

**ನಿಂಗಪ್ಪ ಎಚ್. ಹಂದಿಗೂಡ,** ಹುಕ್ಕೇರಿ

### ರೈಲ್ವೆ ವೇಳಾಪಟ್ಟಿ ಪ್ರಕಟವಾಗಲಿ

ಕೊರೊನಾ ಕಾರಣದಿಂದ ಬಹುಕಾಲದಿಂದ ಸ್ಥಗಿತಗೊಂಡಿದ್ದ ಹಲವಾರು ರೈಲುಗಳ ಸೇವೆ ಪುನರಾರಂಭಗೊಂಡಿದೆ. ಆದರೆ ಈಗ ಸೇವೆಗೆ ಲಭ್ಯವಿರುವ ರೈಲುಗಳು ಯಾವುವು ಹಾಗೂ ಯಾವುದಾದರೂ ಹೊಸ ರೈಲುಗಳ ಸೇವೆ ಆರಂಭಗೊಂಡಿದೆಯೇ, ಹಾಗಿದ್ದರೆ ಅವು ಯಾವ ಮಾರ್ಗದಲ್ಲಿ ಚಲಿಸುತ್ತವೆ ಎಂಬ ಮಾಹಿತಿಯನ್ನು ಪ್ರಮುಖ ದಿನಪತ್ರಿಕೆಗಳ ಎಲ್ಲಾ ಆವೃತ್ತಿಗಳಲ್ಲೂ ಪ್ರಕಟಿಸಬೇಕು. ಇದರಿಂದ ಜನಸಾಮಾನ್ಯರಿಗೆ ಬಹಳ ಅನುಕೂಲವಾಗುತ್ತದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರ ಗಮನಕ್ಕೆ ಈ ಮಾಹಿತಿಗಳನ್ನು ತರುವುದರಲ್ಲಿ ಹೆಚ್ಚು ಪ್ರಯೋಜನವಿದೆ.

**ಇಂದಿರಾ ಶ್ರೀಧರ್,** ಮಳಲಕೆರೆ

### ಹೀಗೂ ಬೀಳಬಹುದು ಬೆಲೆ ಏರಿಕೆಯ ಬರೆ!

ದೇಶದ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿದ ಬಳಿಕ ಜನರಿಗೆ ಯಾವ ರೀತಿ ಬೆಲೆ ಹೆಚ್ಚಳದ ಬರೆ ಬೀಳುತ್ತದೆ ಎಂಬುದು ಈಗ ಒಂದೊಂದಾಗಿ ತಿಳಿಯತೊಡಗಿದೆ. ಮಂಗಳೂರು ವಿಮಾನ ನಿಲ್ದಾಣವನ್ನು ವಹಿಸಿಕೊಂಡಿರುವ ಅದಾನಿ ಸಮೂಹವು ದೇಶಿ ಪ್ರಯಾಣಿಕರು ತೆರಬೇಕಾಗಿರುವ ಬಳಕೆದಾರರ ಅಭಿವೃದ್ಧಿ ಶುಲ್ಕವನ್ನು ಇದೇ ಅಕ್ಟೋಬರ್‌ನಿಂದ ಈಗಿರುವ ₹ 150ರಿಂದ ₹ 250ಕ್ಕೆ ಏರಿಸುವ ಪ್ರಸ್ತಾವ ಮುಂದಿಟ್ಟಿದೆ. ಅದೇ ರೀತಿ ಅಂತರರಾಷ್ಟ್ರೀಯ ಯಾನಗಳಿಗೂ ಏರಿಕೆ ಅನ್ವಯವಾಗಲಿದೆ.

ಇದು ವಿಮಾನ ಪ್ರಯಾಣಿಕರಿಗೆ ಮಾತ್ರ, ಉಳಿದವರಿಗೆ ಇದರಿಂದ ಏನೂ ನಷ್ಟವಿಲ್ಲ ಎಂದು ಯಾರೂ ಭಾವಿಸಬೇಕಾಗಿಲ್ಲ. ವಿಮಾನದಲ್ಲಿ ಪ್ರಯಾಣಿಸುವ ಉದ್ಯಮಿಗಳು, ವ್ಯಾಪಾರಿಗಳು ತಾವು ತಯಾರಿಸುವ ಉತ್ಪನ್ನಗಳಿಗೆ, ಮಾರಾಟ ಮಾಡುವ ಸಾಮಾನುಗಳಿಗೆ ಈ ಬೆಲೆ ಹೆಚ್ಚಳವನ್ನು ಸೇರಿಸಿಯೇ ಸೇರಿಸುತ್ತಾರೆ. ಬೆಲೆ ಏರಿಕೆ ಉಂಟಾಗುವುದೇ ಹೀಗೆ.

**ಬಿ.ಎನ್.ಭರತ್,** ಬೆಂಗಳೂರು

### ದೇಗುಲ ಪ್ರವೇಶಕ್ಕೆ ಕಟ್ಟಲೆಯೇಕೆ?

ಸೃಷ್ಟಿಕರ್ತನ ದರ್ಶನ ಪಡೆಯಲು ಭಕ್ತನಿಗೆ ಅರ್ಹತೆಗಳಿರಬೇಕೇ? ದೇಹವೇ ಮಲ ಮೂತ್ರಗಳಿಂದ, ರೋಗ ರುಜಿನಗಳಿಂದ, ಮಾನಸಿಕ ದೌರ್ಬಲ್ಯಗಳಿಂದ ತುಂಬಿದ್ದರೂ ತನ್ನ ಇಚ್ಛಾನುಸಾರ ದೇಗುಲಕ್ಕೆ ಪ್ರವೇಶವಿರಬೇಕಾದರೆ, ಸಲ್ಲದ ಸಂಹಿತೆ ಸರಿಯೇ? ದೇಗುಲವನ್ನು ನಿರ್ಮಿಸಿದವನಿಗೆ, ದೇವನಿಗೆ ವಿಗ್ರಹ ರೂಪವನ್ನು ಕೊಟ್ಟವನಿಗೆ ದೇವಸ್ಥಾನಕ್ಕೆ ಪ್ರವೇಶಿಸಲು ಶಿಷ್ಟಾಚಾರ ಸರಿಯೇ? ಇದಕ್ಕೆ ಪವರ್ ಆಫ್ ಅಟಾರ್ನಿ ಪಡೆದವರು ಇದ್ದಾರೆಯೇ?

ದೇವರು ಸರ್ವಾಂತರ್ಯಾಮಿ, ನಿರಾಕಾರಿ ಎಂದು ಮಾನ್ಯವಾಗಿರುವಾಗ, ದೇವನನ್ನು ಗುತ್ತಿಗೆಗೆ ಪಡೆದು, ಅಧೀನದಲ್ಲಿ ಇಟ್ಟುಕೊಂಡಂತೆ ಪ್ರವೇಶವನ್ನು ನಿರ್ಧರಿಸಲು ಯಾರಿಗಾದರೂ ಪರವಾನಗಿ ಕೊಡಲಾಗಿದೆಯೇ? ಸೃಷ್ಟಿಕರ್ತ ಮತ್ತು ಪೂಜಾಗೃಹಗಳು ಕೆಲವು ವರ್ಗದವರ ಸ್ವತ್ತೇ? ಮಾಂಸ ಮಾರುವ ಅಂಗಡಿಗಳಲ್ಲಿ ದೇವರ ಚಿತ್ರವನ್ನು, ಮಾಂಸದ ಅಂಗಡಿಗೆ ದೇವರ ಹೆಸರನ್ನು ಇಡುತ್ತಿಲ್ಲವೇ? 'ನಾನು ಹಿಂದೂ' ಎಂದು ನಾಮಫಲಕ ಹಾಕಿಕೊಂಡಾಕ್ಷಣ ಅವರು 'ಹಿಂದೂ' ಬಗ್ಗೆ ಸರ್ವಜ್ಞರಂತೆ ವಿಶ್ಲೇಷಣೆ ಮಾಡುವುದಕ್ಕೆ ಅರ್ಹತೆ ಪಡೆಯುತ್ತಾರೆಯೇ? ದೇವರ ಆಹಾರ, ಜಾತಿ, ಲಿಂಗ, ಉಡುಗೆ, ಧರ್ಮ, ಭಾಷೆ, ಆಕಾರ, ಪೂಜೆ ಮತ್ತಿತರ ವಿಷಯಗಳನ್ನು ಅರಿತಿರುವ ಮಹಾತ್ಮರಾರು? ನನ್ನ ದೇವರನ್ನು ನಾನು ನಿರ್ಧರಿಸಿ, ನನಗೆ ಇಷ್ಟವಾದಂತೆ ಪೂಜಿಸಲು ನನಗೆ ಸ್ವಂತಿಕೆ ಇರಬೇಕಾದರೆ, ದೇವಸ್ಥಾನ ಪ್ರವೇಶಿಸಲು ಶಿಷ್ಟಾಚಾರವನ್ನು ಸೂಚಿಸುವ ದೈವಗ್ರಂಥ ಎಲ್ಲಿದೆ?

**ಕೆ.ಎನ್.ಭಗವಾನ್,** ಬೆಂಗಳೂರು

### ನೇಮಕಾತಿಯಲ್ಲಿ ಅಕ್ರಮ: ಸರಿಪಡಿಸುವ ಬಗೆ ಹೇಗೆ?

ಸರ್ಕಾರಿ ಹುದ್ದೆಗಳಿಗೆ ನಡೆಯುವ ನೇಮಕಾತಿ ಪರೀಕ್ಷೆಗಳಲ್ಲಿ ಆಗಿರುವ ಅಕ್ರಮಗಳು ಒಂದೊಂದಾಗಿ ಬಯಲಾಗುತ್ತಿರುವುದನ್ನು ನೋಡಿದರೆ ಭಯವಾಗುತ್ತದೆ. ಪಿಎಸ್‌ಐ ನೇಮಕಾತಿ ಅಕ್ರಮ ರಾಜ್ಯದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದೆ. ಅದರ ಬೆನ್ನಿಗೇ ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲೂ ಅಕ್ರಮಗಳು ನಡೆದಿರುವುದು ಬೆಳಕಿಗೆ ಬಂದಿವೆ. ಈ ಸಂಬಂಧ ಕೆಲವರು ಬಂಧನಕ್ಕೆ ಒಳಗಾಗಿರುವ ಸುದ್ದಿಯೂ ಹೊರಬಿದ್ದಿರುವುದು ನಿಜಕ್ಕೂ ಆಘಾತಕಾರಿ.

ನೇಮಕಾತಿಯನ್ನು ಪಾರದರ್ಶಕವಾಗಿ ನಡೆಸಲು ನಮಗೆ ಸಾಧ್ಯವಾಗದಿರುವುದು ಅತ್ಯಂತ ನಾಚಿಕೆಗೇಡು. ಲಂಚ ಕೊಟ್ಟು ಹುದ್ದೆ ಪಡೆಯುವ ಮಂದಿ ಆ ಬಳಿಕ ಲಂಚಕ್ಕಾಗಿ ಜನರನ್ನು ಯಾವ ಪರಿ ಕಾಡಿಸಬಹುದು? ನಮ್ಮ ನೇಮಕಾತಿ ವ್ಯವಸ್ಥೆ ಈ ಮಟ್ಟಿಗೆ ಕೆಡಬಾರದಿತ್ತು. ಇದನ್ನು ಸರಿಪಡಿಸುವವರು ಯಾರು? ಆ ಕ್ಷಣಕ್ಕೆ ಬಂಧನ, ತನಿಖೆ, ವಿಚಾರಣೆ ನಡೆಯುತ್ತದೆ. ನಂತರ ಎಲ್ಲವೂ ಸಾರ್ವಜನಿಕರ ನೆನಪಿನಿಂದ ಮರೆಯಾಗುತ್ತವೆ. ಇಷ್ಟೆಲ್ಲ ಹುಳುಕು ಹೊರಬಿದ್ದ ಮೇಲಾದರೂ ಸರ್ಕಾರ ಎಚ್ಚೆತ್ತುಕೊಳ್ಳುವುದೇ? ಕಡಿವಾಣ ಹಾಕಲು ಇಚ್ಛಾಶಕ್ತಿ ತೋರುವುದೇ?

**ಕೆ.ಎಸ್. ಪಲ್ಲವಿ,** ಬಾಗೇಪಲ್ಲಿ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಮಹಿಳೆಯರ ಬದುಕು ಕಸಿದ ತಾಲಿಬಾನ್

‘ಆಗ ಮನೆಯಿಂದ ಹೊರಗಡಿ ಇಟ್ಟಾಗ ರಸ್ತೆಯಲ್ಲಿ ಯಾರೋ ತಡೆಯುತ್ತಾರೆ ಎಂಬ ಭಯ ನನಗಿರಲಿಲ್ಲ. ತಡೆದು, ನನ್ನ ಹಿಜಾಬ್‌ನ ಬಣ್ಣವೇಕೆ ಕೆಂಪು ಅಥವಾ ಬಿಳಿ ಅಥವಾ ಕಪ್ಪಾಗಿದೆ ಎಂದು ಪ್ರಶ್ನಿಸುತ್ತಾರೆ ಎಂಬ ಆತಂಕವೂ ಇರಲಿಲ್ಲ. ನನ್ನ ಕೈಯಲ್ಲಿರುವ ಮೊಬೈಲ್ ಅನ್ನು ಯಾರೋ ಕಸಿದುಕೊಂಡು, ಅದರಲ್ಲಿ ಏನಿದೆ ಎಂದು ನೋಡುತ್ತಾರೆ ಎಂಬ ಕಳವಳವಂತೂ ಇರಲೇ ಇಲ್ಲ. ಈಗ ಅಂತಹ ಎಲ್ಲಾ ಭಯಗಳೂ ಕಾಡುತ್ತಿವೆ’- ಅಫ್ಗಾನಿಸ್ತಾನವನ್ನು ತಾಲಿಬಾನ್ ಮತ್ತೆ ತನ್ನ ತೆಕ್ಕೆಗೆ ತೆಗೆದುಕೊಂಡು ಆಗಸ್ಟ್ 15ಕ್ಕೆ ಒಂದು ವರ್ಷ ಕಳೆದಿದೆ. ಆ ನೆಪದಲ್ಲಿ ವಿಶ್ವ ಸಂಸ್ಥೆಯ ಪ್ರತಿನಿಧಿಗಳು ಅಫ್ಗಾನಿಸ್ತಾನದಲ್ಲಿ ಓಡಾಡಿ, ಅಲ್ಲಿನ ಮಹಿಳೆಯೊಬ್ಬರನ್ನು ಮಾತನಾಡಿಸಿದಾಗ ಬಂದ ಪ್ರತಿಕ್ರಿಯೆ ಇದು. ಹೀಗೆ ಮಾತನಾಡಿಸಿದ ಪ್ರತಿಯೊಬ್ಬ ಮಹಿಳೆಯ ಪ್ರತಿಕ್ರಿಯೆಯೂ ಇದೇ ರೀತಿಯದ್ದು. ತಾಲಿಬಾನ್ ಆಡಳಿತದಲ್ಲಿ ಅಫ್ಗಾನಿಸ್ತಾನದ ಮಹಿಳೆಯರ ಸ್ಥಿತಿಯಲ್ಲಿ ವ್ಯಾಪಕ ಬದಲಾವಣೆಯಾಗಿದೆ. ಆ ಬದಲಾವಣೆಗಳ ಸ್ವರೂಪ ಇಂತಿದೆ

ಪ್ರಜಾವಾಣಿ ವಾರ್ತೆ



ತಾಲಿಬಾನ್ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ, ಕಾಬೂಲ್‌ನ ಬ್ಯೂಟಿ ಪಾರ್ಲರ್‌ಗಳ ಪೋಸ್ಟರ್‌ಗಳಲ್ಲಿ ಇದ್ದ ಮಹಿಳಾ ರೂಪದರ್ಶಿಗಳ ಚಿತ್ರಕ್ಕೆ ಮಸಿ ಬಳಿಯಲಾಗಿತ್ತು —ಎಎಫ್‌ಪಿ ಚಿತ್ರ

ಅಫ್ಗಾನಿಸ್ತಾನದ ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ಥಿತಿಗತಿ ಕುರಿತು ಚರ್ಚಿಸಲು ತಾಲಿಬಾನ್, ಇದೇ ಜೂನ್ 30ರಂದು ಕಾಬೂಲ್‌ನಲ್ಲಿ ಒಂದು ಸಾರ್ವಜನಿಕ ಸಭೆ ಕರೆದಿತ್ತು. ಆ ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗಲು ಮೌಲ್ವಿಗಳು ಮತ್ತು ಧಾರ್ಮಿಕ ನಾಯಕರಿಗಷ್ಟೇ ಅವಕಾಶ ನೀಡಲಾಗಿತ್ತು. ಒಟ್ಟು 4,500 ಮಂದಿ ಭಾಗಿಯಾಗಿದ್ದ ಆ ಕಾರ್ಯಕ್ರಮದಲ್ಲಿ ಒಬ್ಬ ಮಹಿಳೆಯೂ ಇರಲಿಲ್ಲ. ‘ತಮ್ಮ ತಂದೆ, ಪತಿ ಮತ್ತು ಗಂಡುಮಕ್ಕಳ ಮೂಲಕ ಮಹಿಳೆಯರು ಈ ಸಭೆಯಲ್ಲಿ ಭಾಗಿಯಾಗಿದ್ದಾರೆ. ಮಹಿಳೆಯರನ್ನು ಅವರ ಪುರುಷರು ಪ್ರತಿನಿಧಿಸುತ್ತಾರೆ’ ಎಂದು ಆ ಸಭೆಯಲ್ಲಿ ಘೋಷಿಸಲಾಯಿತು. ಈ ಸ್ವರೂಪದ ಧೋರಣೆ ಆ ಸಭೆಗೆ ಸೀಮಿತವಾದುದಲ್ಲ. ಈಗ ಅಫ್ಗಾನಿಸ್ತಾನದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಸ್ಥಿತಿ ಇದೇ ರೀತಿ ಇದೆ.

‘ಮಹಿಳೆಯರಿಗೆ ಪ್ರತ್ಯೇಕ ಅಸ್ತಿತ್ವವೇ ಇಲ್ಲ ಎಂಬಂತೆ ತಾಲಿಬಾನ್ ಆಡಳಿತ ನಿರ್ವಹಿಸುತ್ತಿದೆ. ಒಂದು ವರ್ಷದಲ್ಲಿ ಸಾರ್ವಜನಿಕ ರಂಗದ ಎಲ್ಲಾ ವಲಯಗಳಿಂದಲೂ ಮಹಿಳೆಯರನ್ನು ಹೊರಗಟ್ಟಲಾಗಿದೆ. ಸಾರ್ವಜನಿಕವಾಗಿ ಮಹಿಳೆಯರನ್ನು ಬಹಿಷ್ಕರಿಸಲಾಗಿದೆ’ ಎಂದು ವಿಶ್ವ ಸಂಸ್ಥೆಯ ‘ಜೆಂಡರ್ ಅಲರ್ಟ್’ ವರದಿಯಲ್ಲಿ ಹೇಳಲಾಗಿದೆ.

ಚುನಾಯಿತ ಸರ್ಕಾರವನ್ನು ಹೊರದಬ್ಬಿ, 20 ವರ್ಷಗಳ ನಂತರ 2021ರ ಆಗಸ್ಟ್ 15ರಂದು ಅಫ್ಗಾನಿಸ್ತಾನವನ್ನು ತಾಲಿಬಾನ್ ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ತಾಲಿಬಾನ್ ಆಡಳಿತ ಇಲ್ಲದೇ ಇದ್ದ ಅವಧಿಯಲ್ಲಿ ಅಫ್ಗಾನಿಸ್ತಾನದ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಗಣನೀಯ ಪ್ರಮಾಣದಲ್ಲಿ ವೃದ್ಧಿಸಿತ್ತು. ತಾಲಿಬಾನ್ ಆಡಳಿತ ಬಂದ ನಂತರ ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತದೆ ಎಂಬ ಆತಂಕ ಎದುರಾಗಿತ್ತು. ‘ಆತಂಕ ಪಡುವ ಅಗತ್ಯವಿಲ್ಲ’ ಎಂದು ತಾಲಿಬಾನ್ ಆಗ ಹೇಳಿತ್ತು. ಆದರೆ, ಸಾರ್ವಜನಿಕ ಜೀವನದಿಂದ ಮಹಿಳೆಯರನ್ನು ತಾಲಿಬಾನ್ ಈಗ ಸಂಪೂರ್ಣವಾಗಿ ಹೊರಗಿಟ್ಟಿದೆ.

ಅಫ್ಗಾನಿಸ್ತಾನದಲ್ಲಿ ಮತ್ತೆ ಸರ್ಕಾರ ರಚಿಸಿದಾಗ ತಾಲಿಬಾನ್ ಮಾಡಿದ ಮೊದಲ ಕೆಲಸವೆಂದರೆ, ಮಹಿಳೆಯರನ್ನು ರಾಜಕೀಯದಿಂದ ಹೊರಗಿಟ್ಟದ್ದು. ನಂತರದ ದಿನಗಳಲ್ಲಿ ಒಂದೊಂದೇ ಕ್ಷೇತ್ರದಿಂದ ಮಹಿಳೆಯರನ್ನು ಹೊರಗಿಡುವ ಕೆಲಸವನ್ನು ತಾಲಿಬಾನ್ ಆರಂಭಿಸಿತು. 2021ರ ಸೆಪ್ಟೆಂಬರ್‌ನಲ್ಲಿ ದೇಶದ ಮಹಿಳಾ ಸಚಿವಾಲಯವನ್ನು ತಾಲಿಬಾನ್ ಸರ್ಕಾರ ರದ್ದುಪಡಿಸಿತು. ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರು ಒಂಟಿಯಾಗಿ ಓಡಾಡಬಾರದು. ಅವರು ಮಾಲ್, ಸೂಪರ್ ಮಾರ್ಕೆಟ್‌ನಂತಹ ಸಾರ್ವಜನಿಕ ಸ್ಥಳಗಳಿಗೆ ಭೇಟಿ ನೀಡುವಾಗ ಅವರ ತಂದೆ ಅಥವಾ ಗಂಡ ಅಥವಾ ಮಗ ಜತೆಗಿರಬೇಕು ಎಂದು ಫತ್ವಾ ಹೊರಡಿಸಲಾಯಿತು. ಈ ಸ್ವರೂಪದ ಹುಕುಂಗಳಿಂದ ತೀರಾ ಹೊಡೆತ ಬಿದ್ದದ್ದು ಮಹಿಳಾ ಯಜಮಾನಿಕೆಯ ಕುಟುಂಬಗಳಿಗೆ ಮತ್ತು ಒಂಟಿ ಮಹಿಳೆಯರಿಗೆ. ಅಂತಹವರು ಹೊರಗೆ ಬಾರದೇ ಇರುವಂತಹ ಸ್ಥಿತಿ ಇದೆ. ದೇಶದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಸ್ಥಿತಿ ಇದೇ ರೀತಿ ಇದೆ. ಇದು ಅತ್ಯಂತ ಕಳವಳಕಾರಿ ಸಂಗತಿ ಎಂದು ವಿಶ್ವ ಸಂಸ್ಥೆಯು ತನ್ನ ವರದಿಯಲ್ಲಿ ವಿಶ್ಲೇಷಿಸಿದೆ.


## ಮಾಧ್ಯಮದಲ್ಲಿ ಮಹಿಳೆ ಅಪ್ರಸ್ತುತ

ಅಫ್ಗಾನಿಸ್ತಾನದ ನಿರ್ಬಂಧಿತ ಸನ್ನಿವೇಶವು ಮಾಧ್ಯಮಗಳನ್ನೂ ಬಿಟ್ಟಿಲ್ಲ. ತಾಲಿಬಾನ್ ಆಡಳಿತ ಶುರುವಾದ ಬಳಿಕ, ಮುಕ್ತ ಅಭಿಪ್ರಾಯ ಹಂಚಿಕೊಳ್ಳುವ ಮಾಧ್ಯಮಗಳ ಸ್ವಾತಂತ್ರ್ಯಕ್ಕೆ ನಿರ್ಬಂಧಗಳನ್ನು ಹೇರಲಾಯಿತು. 2021ರ ನವೆಂಬರ್‌ನಲ್ಲಿ ಹೊರಡಿಸಿದ್ದ ಆದೇಶದಲ್ಲಿ, ಮನರಂಜನೆ, ಸಂಗೀತ ಕಾರ್ಯಕ್ರಮಗಳಿಗೆ ನಿರ್ಬಂಧ ತರಲಾಯಿತು. ಆರು ತಿಂಗಳು ಕಳೆಯುವಷ್ಟರಲ್ಲಿ ಸಾವಿರಾರು ಪತ್ರಕರ್ತರು ಕೆಲಸ ಕಳೆದುಕೊಂಡರು. ನೂರಾರು ಮಾಧ್ಯಮಗಳು ಬಂದ್ ಆದವು.

ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರ ದನಿಯನ್ನೂ ಹತ್ತಿಕ್ಕಲಾಯಿತು. ಸುದ್ದಿವಾಹಿನಿ ಕಾರ್ಯಕ್ರಮ ಪ್ರಸಾರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಬಹುತೇಕ ನಿರ್ಬಂಧಿಸಲಾಯಿತು. ಪತ್ರಕರ್ತೆಯರು ಮುಖಗವಸು ಇಲ್ಲದೇ ಟಿ.ವಿಯಲ್ಲಿ ಕಾಣಿಸಿಕೊಳ್ಳುವಂತಿಲ್ಲ ಎಂದು ತಾಲಿಬಾನ್ ಆದೇಶ ಹೊರಡಿಸಿತು. ಹೀಗಾಗಿ ಬಹುತೇಕ ಪತ್ರಕರ್ತೆಯರು ಮತ್ತು ಮಾಧ್ಯಮದ ಮಹಿಳಾ ಸಿಬ್ಬಂದಿ ಮನೆಯಲ್ಲಿ ನಾಲ್ಕುಗೋಡೆಗಳ ಮಧ್ಯೆ ಬಂದಿಯಾಗಿದ್ದಾರೆ.

ಮಾಧ್ಯಮಗಳಲ್ಲಿ ಮಹಿಳೆಯರ ಅಸ್ತಿತ್ವವೇ ಇಲ್ಲದಂತಾಗುವುದು ತಾಲಿಬಾನ್‌ನ ಈ ನಿರ್ಧಾರಗಳ ದೀರ್ಘಾವಧಿ ಪರಿಣಾಮಗಳಲ್ಲೊಂದು. ಇದರ ಫಲವಾಗಿ, ಲಿಂಗ ಸಮಾನತೆ ಮತ್ತು ಮಹಿಳಾ ಸ್ವಾತಂತ್ರ್ಯ ಕುರಿತಾದ ವಿಷಯಗಳೇ ಅಪ್ರಸ್ತುತ ಎನಿಸಿಕೊಳ್ಳಲಿದೆ ಎಂದು ವರದಿಯಲ್ಲಿ ಅಭಿಪ್ರಾಯಪಡಲಾಗಿದೆ.


ಈ ಹೊತ್ತಿನಲ್ಲಿ ತಾಲಿಬಾನ್ ಮಹಿಳೆಯರ ದನಿಗೆ ಸಾಮಾಜಿಕ ಮಾಧ್ಯಮಗಳು ಉಸಿರು ನೀಡಿವೆ. ಒಂದಿಷ್ಟು ಮಹಿಳೆಯರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಹತಾಶೆ, ಪ್ರತಿಭಟನೆ, ಹಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಮಹಿಳೆಯರ ಪರ ಸಾರ್ವಜನಿಕವಾಗಿ ವಕಾಲತ್ತು ವಹಿಸಿಕೊಳ್ಳುವವರಿಗೆ ಈ ತಾಣಗಳು ವೇದಿಕೆಯಾಗಿವೆ. ಆಂತರಿಕ ವಿದ್ಯಮಾನಗಳನ್ನು ಮಹಿಳಾ ಕಾರ್ಯಕರ್ತರು ಇಲ್ಲಿ ದಾಖಲಿಸುತ್ತಿದ್ದಾರೆ. ಅಫ್ಗಾನಿಸ್ತಾನದಲ್ಲಿ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿಗಾಗಿ ಹಂಬಲಿಸುತ್ತಿರುವ ಮಹಿಳೆಯರಿಗೆ ಬೆಳ್ಳಿರೇಖೆಯಾಗಿ ತೋರಿರುವುದು ಇದೊಂದೇ.



43% — ಅಫ್ಗಾನಿಸ್ತಾನದಲ್ಲಿ 2021 ಡಿಸೆಂಬರ್ ವೇಳೆಗೆ ಬಾಗಿಲು ಹಾಕಿದ ಮಾಧ್ಯಮ ಸಂಸ್ಥೆಗಳ ಪ್ರಮಾಣ

84% — ಕಿರುಕುಳದ ಕಾರಣ, ಮಾಧ್ಯಮ ಸಂಸ್ಥೆಗಳಲ್ಲಿ ಕೆಲಸ ತೊರೆದ ಮಹಿಳಾ ಸಿಬ್ಬಂದಿಯ ಪ್ರಮಾಣ

**ಪತ್ರಕರ್ತೆಯರ ಸಂಖ್ಯೆ ಕುಸಿತ**




## ಹಕ್ಕುಗಳ ದಮನ

ಮಹಿಳೆಯರಿಗೆ ತಾಲಿಬಾನ್ ಹಕ್ಕುಗಳನ್ನು ನಿರಾಕರಿಸಿದೆ. ಇಂತಹ ಹಕ್ಕುಗಳ ರಕ್ಷಣೆಗೆ ಇದ್ದ ಸರ್ಕಾರಿ ಕಣ್ಗಾವಲು ಸಂಸ್ಥೆಗಳನ್ನೂ ತಾಲಿಬಾನ್ ರದ್ದುಪಡಿಸಿದೆ. 2022ರ ಮೇ ತಿಂಗಳಿನಲ್ಲಿ ದೇಶದ ‘ಮಾನವ ಹಕ್ಕುಗಳ ರಕ್ಷಣಾ ಆಯೋಗ’ವನ್ನು ತಾಲಿಬಾನ್ ಸರ್ಕಾರ ವಜಾ ಮಾಡಿದೆ.

ಜತೆಗೆ ಮಹಿಳಾ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿದ್ದ ಸ್ವಯಂಸೇವಾ ಸಂಸ್ಥೆಗಳಲ್ಲಿ (ಎನ್‌ಜಿಒ) ಹೆಚ್ಚಿನವು ಈಗ ನಿಷ್ಕ್ರಿಯವಾಗಿವೆ. ಕಾಬೂಲ್ ಅನ್ನು ತಾಲಿಬಾನ್ ಅತಿಕ್ರಮಿಸಿಕೊಳ್ಳುವ ಮುನ್ನವೇ ಮಹಿಳಾ ಹಕ್ಕುಗಳ ಹೋರಾಟಗಾರರಲ್ಲಿ ಹಲವರು ಅಫ್ಗಾನಿಸ್ತಾನವನ್ನು ತೊರೆದಿದ್ದರು. ಹೀಗಾಗಿ ತಾಲಿಬಾನ್ ಆಡಳಿತ ಜಾರಿಯಾದ ನಂತರ ಅಂತಹ ಹೋರಾಟಗಾರರ ದೊಡ್ಡ ನಿರ್ವಾತ ನಿರ್ಮಾಣವಾಗಿದೆ.

2021ರಲ್ಲಿ ಅಫ್ಗಾನಿಸ್ತಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎನ್‌ಜಿಒಗಳಲ್ಲಿ ಶೇ 77ರಷ್ಟು ಎನ್‌ಜಿಒಗಳು ಈಗ ಸಂಪೂರ್ಣ ನಿಷ್ಕ್ರಿಯವಾಗಿವೆ. ಉಳಿದ ಎನ್‌ಜಿಒಗಳಿಗೆ ಹಣಕಾಸಿನ ನೆರವನ್ನು ಸ್ಥಗಿತಗೊಳಿಸಲಾಗಿದೆ. ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ತಾಲಿಬಾನ್‌ನ ಈ ಕ್ರಮಗಳ ವಿರುದ್ಧ ಸಾರ್ವಜನಿಕರು ಆರಂಭದ ದಿನಗಳಿಂದಲೂ ಪ್ರತಿಭಟನೆ ನಡೆಸಿದ್ದಾರೆ. ಪತ್ರಕರ್ತರೂ ಪ್ರತಿಭಟನೆಯಲ್ಲಿ ಜತೆಯಾಗಿದ್ದರು. ಆದರೆ, 2021ರ ಸೆಪ್ಟೆಂಬರ್ 1ರಿಂದ ಅಂತಹ ಪ್ರತಿಭಟನೆ ನಡೆಸುವುದನ್ನು ತಾಲಿಬಾನ್ ನಿಷೇಧಿಸಿದೆ. ತಾಲಿಬಾನ್ ಆಡಳಿತಕ್ಕೆ ಒಂದು ವರ್ಷ ತುಂಬಿದ ಸಂದರ್ಭದಲ್ಲಿ ಪ್ರತಿಭಟನೆಗೆ ಮುಂದಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗಿದೆ.

ಆಧಾರ: ವಿಶ್ವ ಸಂಸ್ಥೆಯ ‘ಜೆಂಡರ್ ಅಲರ್ಟ್–1’ ಮತ್ತು ‘ಜೆಂಡರ್ ಅಲರ್ಟ್–2’ ವರದಿಗಳು

## ಮಹಿಳೆಯರಿಗೆ ಉದ್ಯೋಗವಿಲ್ಲ




‘ಎಲ್ಲಾ ಸರ್ಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಸರ್ಕಾರಿ ಇಲಾಖೆಗಳಲ್ಲಿ ಮಹಿಳಾ ಉದ್ಯೋಗಿಗಳ ಬದಲಾಗಿ ಅವರ ಸೋದರ, ಗಂಡ ಅಥವಾ ಗಂಡು ಮಕ್ಕಳಿಗೆ ನೌಕರಿ ನೀಡಲಾಗಿದೆ. ಮಹಿಳೆಯರು ಮಾತ್ರ ನಿರ್ವಹಿಸುವಂತಹ ಕೆಲಸಗಳಲ್ಲಿ ಮಾತ್ರ ಮಹಿಳಾ ಉದ್ಯೋಗಿಗಳನ್ನು ಉಳಿಸಿಕೊಳ್ಳಲಾಗಿದೆ. ಶಾಲೆಗಳು, ಆಸ್ಪತ್ರೆಗಳು ಮತ್ತು ಮಹಿಳಾ ಶೌಚಾಲಯ ಇರುವ ಸ್ಥಳಗಳಲ್ಲಿ ಮಾತ್ರ ಮಹಿಳೆಯರಿಗೆ ಉದ್ಯೋಗವಕಾಶವಿದೆ’ ಎಂದು ವಿಶ್ವ ಸಂಸ್ಥೆಯ ವರದಿಯಲ್ಲಿ ವಿಶ್ಲೇಷಿಸಲಾಗಿದೆ.

## ಹೆಣ್ಣುಮಕ್ಕಳ ಶಿಕ್ಷಣದ ಕನಸು ಕಮರುತ್ತಿದೆ...

‘ಒಂದು ವರ್ಷದಿಂದ ನನ್ನ ಇಬ್ಬರು ಹೆಣ್ಣುಮಕ್ಕಳು ಶಾಲೆಗೆ ಹೋಗಲಾರದೇ ಮನೆಯಲ್ಲಿದ್ದಾರೆ. ಅವರ ಭವಿಷ್ಯಕ್ಕೆ ಮಂಕು ಕವಿದಿದೆ’ ಎಂದು ಹೇಳುವ ಅಫ್ಗನ್ ಮಹಿಳೆಯ ಮಾತುಗಳಲ್ಲಿ ಭವಿಷ್ಯ ಏನೆಂದು ತೋಚದ ಆತಂಕ ಮನೆಮಾಡಿದೆ. ಹೆಣ್ಣುಮಕ್ಕಳು ಶಾಲೆಗೆ ಹೋಗಲು ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರ ಬಿಡುತ್ತಿಲ್ಲ. ಶಾಲೆಗೆ ಹೋಗುವ ಹುಡುಗರನ್ನು ನೋಡುವ ಅವರ ಸಹಪಾಠಿ ವಿದ್ಯಾರ್ಥಿನಿಯರು, ತಮ್ಮ ಕನಸುಗಳನ್ನು ತಮ್ಮೊಳಗೆ ಸಾಯಿಸುತ್ತಿದ್ದಾರೆ.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಫ್ಗಾನಿಸ್ತಾನದಲ್ಲಿ ಅವಕಾಶವಿಲ್ಲ ಎಂದು ತಾಲಿಬಾನ್ ಷರಾ ಬರೆದಿದೆ. ಅಧಿಕಾರಕ್ಕೆ ಬಂದ ಹೊಸತರಲ್ಲಿ ಶಿಕ್ಷಣವನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, 2022ರ ಮಾರ್ಚ್ 23ರಂದು ಹೊಸ ಆದೇಶ ಹೊರಡಿಸಿದ ತಾಲಿಬಾನ್, ಬಾಲಕಿಯರಿಗೆ ಪ್ರೌಢಶಾಲೆಗಳಿಗೆ ಮರು ಪ್ರವೇಶ ನೀಡುವ ಆಲೋಚನೆ ಇಲ್ಲ ಎಂದು ಸ್ಪಷ್ಟಪಡಿಸಿತು. ಅಂದರೆ, ಒಂದು ವರ್ಷದ ಅವಧಿಯಲ್ಲಿ ಪರಿಸ್ಥಿತಿಯಲ್ಲಿ ಏನೂ ಬದಲಾಗಲಿಲ್ಲ. ಈ ನಿರ್ಧಾರದಿಂದ ನೇರವಾಗಿ ಮತ್ತು ವ್ಯವಸ್ಥಿತವಾಗಿ ಲಕ್ಷಾಂತರ ಹೆಣ್ಣುಮಕ್ಕಳನ್ನು ಶಿಕ್ಷಣದಿಂದ ಹೊರಗಿಟ್ಟಂತೆ ಆಗಿದೆ. ಕೆಲವು ಜಿಲ್ಲೆಗಳಲ್ಲಿ ಬಾಲಕಿಯರು ಪ್ರೌಢಶಿಕ್ಷಣ ಪಡೆಯುತ್ತಿದ್ದಾರೆ. ಅದರೆ ಅದು ಸಮಗ್ರವಾಗಿ ಹಾಗೂ ದೇಶದ ಎಲ್ಲರಿಗೂ ಸಿಗುತ್ತಿಲ್ಲ. ಅಗತ್ಯ ಸಂಖ್ಯೆಯಲ್ಲಿ ಶಿಕ್ಷಕಿಯರು ಇಲ್ಲದಿರುವುದೂ ಮಹಿಳಾ ಶಿಕ್ಷಣಕ್ಕೆ ತೊಡಕಾಗಿದೆ. ಶಾಲಾ ನಿರ್ಬಂಧದಿಂದಾಗಿ, ಮನೆಯಲ್ಲೇ ಉಳಿದಿರುವ ಬಾಲಕಿಯರಿಗೆ ನಿಂದನೆ, ಬಾಲ್ಯ ವಿವಾಹ ಹಾಗೂ ಒತ್ತಾಯದ ಮದುವೆಯಂತಹ ಕಷ್ಟಗಳ ಸರಮಾಲೆಯೇ ಇದೆ.

ಶಾಲಾ ಶಿಕ್ಷಣಕ್ಕೆ ಹೋಲಿಸಿದರೆ, ವಿಶ್ವವಿದ್ಯಾಲಯ ಮಟ್ಟದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಅಷ್ಟೊಂದು ಅಡ್ಡಿಗಳಿಲ್ಲ. ಆದರೆ, ಲಿಂಗದ ಆಧಾರದಲ್ಲಿ ತರಗತಿಗಳನ್ನು ಪ್ರತ್ಯೇಕಿಸಲಾಗಿದೆ. ಯಾವ ರೀತಿಯ ಬಟ್ಟೆ ಧರಿಸಬೇಕು ಎಂಬ ನಿಯಮಗಳನ್ನು ರೂಪಿಸಲಾಗಿದೆ. ಆದರೆ ಮನೆಯಿಂದ ಹೊರಹೋಗುವ ಮಹಿಳೆಯರಿಗೆ ಕಠಿಣ ಸ್ವರೂಪದ ನಿಯಮಗಳು ಜಾರಿಯಲ್ಲಿದ್ದು, ಬಹಳಷ್ಟು ಮಹಿಳೆಯರು ಕಾಲೇಜು ಶಿಕ್ಷಣ ಪಡೆಯಲು ಇವು ಅಡ್ಡಿಯಾಗಿವೆ. ಕಾಲೇಜು ವಾತಾವರಣ ಪ್ರತಿಕೂಲವಾಗಿದ್ದು, ಪ್ರವೇಶಾತಿ ಪಡೆಯಲು ಹಿಂದೇಟು ಹಾಕುವವರೇ ಹೆಚ್ಚು.

**11 ಲಕ್ಷ** — 2021ರಲ್ಲಿ ಪ್ರೌಢಶಾಲೆಗೆ ಹೋಗುತ್ತಿದ್ದ ಬಾಲಕಿಯರ ಸಂಖ್ಯೆ

**2.5 ಲಕ್ಷ** — 2022ರಲ್ಲಿ ಶಾಲೆಗೆ ಹೋಗುತ್ತಿರುವ ಬಾಲಕಿಯರ ಸಂಖ್ಯೆ

**8.5 ಲಕ್ಷ** — 2022ರಲ್ಲಿ ಶಾಲೆಯಿಂದ ಹೊರಗುಳಿದ ಬಾಲಕಿಯರ ಸಂಖ್ಯೆ


**ಕಲಿಕೆಯ ಹಂಬಲ:** ಅಫ್ಗಾನಿಸ್ತಾನದ ರಹಸ್ಯ ಶಾಲೆಯೊಂದರಲ್ಲಿ ಶಿಕ್ಷಣ ಪಡೆಯುತ್ತಿರುವ ಹೆಣ್ಣುಮಕ್ಕಳು —ಎಎಫ್‌ಪಿ ಚಿತ್ರ

## ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲೂ ಅಕ್ರಮ ನಡೆದಿದ್ದು, ಇದರಲ್ಲೂ ಪ್ರಭಾವಿಗಳ ಕೈವಾಡ ಇರಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ




## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 207

### ಶಿವನ ಮಣಿಸಿದ ಪಾರ್ವತಿ


ಪಾರ್ವತಿಯು ಶಂಕರನಿಗೆ ಹೇಳುತ್ತಾಳೆ: ‘ಓ ಯೋಗಿಯೇ, ತಪಃಶಕ್ತಿ ಎಂದರೆ ಅದು ಏಕಾಗ್ರತಾಭಾವ. ಅದು ಜ್ಞಾನದ ಶಕ್ತಿ. ಆ ಶಕ್ತಿಯಿಂದಲೇ ನಿನಗೆ ತಪಸ್ಸು ಮಾಡಲು ಬುದ್ಧಿ ಉಂಟಾಗಿ, ತಪವನ್ನೂ ಆಚರಿಸುತ್ತಿರುವೆ. ಆ ತಪಃಶಕ್ತಿಯೇ ಪ್ರಕೃತಿ. ಕರ್ಮಗಳೆಲ್ಲದಕ್ಕೂ ಆದಿಕಾರಣವಾದ ಪ್ರಕೃತಿಯಿಂದಲೇ ಜಗತ್ತು ಜನಿಸುವುದು, ರಕ್ಷಿಸಲ್ಪಡುವುದು, ಕೊನೆಯಲ್ಲಿ ನಾಶವಾಗುವುದು. ಓ ಭಗವಂತ, ನೀನಾರು, ಆ ಪ್ರಕೃತಿ ಯಾರು, ಎಂದು ವಿಚಾರ ಮಾಡಿ ನೋಡು. ಪ್ರಕೃತಿ ಇಲ್ಲದಿದ್ದರೆ ನಿನಗೆ ಲಿಂಗರೂಪ ಹೇಗೆ ಬರುತ್ತಿತ್ತು? ಆ ಪ್ರಕೃತಿಯ ಮಹಿಮೆಯಿಂದಲೇ ನೀನು ಜನಗಳಿಂದ ಪೂಜಿಸಲ್ಪಡುತ್ತಲಿರುವೆ.’

ಶಂಕರ ಮಂದಹಾಸವನ್ನು ಬೀರುತ್ತಾ, ‘ಮಹಾತಪಸ್ಸಿನಿಂದ ನಾನು ಪ್ರಕೃತಿಯನ್ನು ನಾಶಮಾಡುವ ಶಕ್ತಿವಂತನಾಗಿದ್ದೇನೆ. ತಪಃಶಕ್ತಿಯಿಂದಲೇ ನಾನು ಪ್ರಕೃತಿಯಿಂದ ಬಿಡುಗಡೆ ಹೊಂದಿ ಸುಖವಾಗಿದ್ದೇನೆ. ನನ್ನಂತೆ ಪ್ರತಿಯೊಬ್ಬ ಜ್ಞಾನಿ ಸಹ ಪ್ರಕೃತಿ ಸಂಬಂಧವನ್ನು ತ್ಯಜಿಸಿ, ಲೋಕಾಚಾರವನ್ನು ಬಿಟ್ಟು ನಿರ್ವಿಕಾರವಾಗಿ ಇರಬೇಕು’ ಎಂದ.

ಶಿವನ ಮಾತನ್ನು ಕೇಳಿ ಪಾರ್ವತಿ ನಗುತ್ತಾ, ‘ಶಂಕರ, ನೀನೀಗ ಮಾತನಾಡಿದುದು ಪ್ರಕೃತಿಯ ಸ್ವಭಾವವಲ್ಲವೇ? ಹೀಗಿರಲು ನೀನು ಪ್ರಕೃತಿಯನ್ನು ಹೇಗೆ ಬಿಟ್ಟಿರುವೆ? ಜಗತ್ತೆಲ್ಲವೂ ಪ್ರಕೃತಿಯ ಬಂಧನದಲ್ಲಿಯೇ ಇರುವುದು ಎಂಬುದು ಇದರಿಂದ ನಿಚ್ಚಳವಾಗುವುದಲ್ಲವೆ? ಪ್ರಕೃತಿಯಿಂದ ಹೊರತಾದವನು ಮಾತನಾಡಲೂ ಬಾರದು, ಯಾವ ಕಾರ್ಯವನ್ನು ಮಾಡಬಾರದು. ಮಾತು ಮತ್ತು ಕಾರ್ಯಗಳೆಲ್ಲವೂ ಪ್ರಕೃತಿಯ ಸಂಬಂಧವಾದುವುಗಳಲ್ಲವೆ? ಕೇಳುವುದು, ತಿನ್ನುವುದು, ನೋಡುವುದು, ಮಾಡುವುದು, ಇವೆಲ್ಲವೂ ಪ್ರಕೃತಿಯ ಕಾರ್ಯಗಳು. ಇದು ಹಗಲಿನಷ್ಟೇ ಸತ್ಯ. ನೀನು ಪ್ರಕೃತಿಯನ್ನು ಬಿಟ್ಟವನಾದರೆ ಈ ಗಿರಿಯಲ್ಲಿ ತಪವನ್ನೇಕೆ ಆಚರಿಸುತ್ತಲಿರುವೆ? ನೀನು ಪ್ರಕೃತಿಯಿಂದ ಬಂಧಿಸಲ್ಪಟ್ಟು ನಿನ್ನ ಸ್ವರೂಪವನ್ನು ತಿಳಿಯದವನಾಗಿರುವುದರಿಂದಲೇ ತಪಸ್ಸಿಗೆ ಕುಳಿತಿರುವೆ. ಹಾಗಲ್ಲದಿದ್ದರೆ, ನಿನಗೆ ಏಕಾಂತ, ಏಕಾಂಗಿತನದ ಹಂಗೇಕೆ? ಸ್ವರೂಪಜ್ಞಾನವು ನಿನಗಿದ್ದರೆ ತಪವನ್ನೇಕೆ ನೀನು ಆಚರಿಸಬೇಕು? ನಿನ್ನೊಂದಿಗೆ ಹೆಚ್ಚು ವಾದ ಮಾಡುವುದರಿಂದ ಪ್ರಯೋಜನವಿಲ್ಲ. ಪ್ರತ್ಯಕ್ಷವಾಗಿ ಕಾಣುವ ವಿಷಯದಲ್ಲಿ ವಿವಾದದ ಮಾತೇ ಉದ್ಭವಿಸುವುದಿಲ್ಲ. ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳೆಲ್ಲವೂ ಪ್ರಕೃತಿಮಯವಾದುವುಗಳು. ಹೀಗಾಗಿ ಕಣ್ಣಿಗೆ ನೇರವಾಗಿ ಕಾಣುವ ಪ್ರಕೃತಿ ವಿಚಾರದಲ್ಲಿ ಎರಡನೇ ಮಾತೇ ಇರುವುದಿಲ್ಲ. ಆದ್ದರಿಂದ ಇನ್ನು ಹೆಚ್ಚಾಗಿ ಇದರ ಬಗ್ಗೆ ಹೇಳುವಂಥದ್ದೇನೂ ಇಲ್ಲ. ಏಕೆಂದರೆ, ಪ್ರಕೃತಿಯೇ ನಾನಾಗಿರುವೆ. ನೀನು ಪುರುಷನಾಗಿರುವೆ. ನನ್ನ ಅನುಗ್ರಹದಿಂದಲೇ ನೀನು ಸಗುಣನು, ರೂಪವುಳ್ಳವನೂ ಆಗಿರುವೆ. ನಾನಿಲ್ಲದಿದ್ದರೇ ನೀನು ಏನನ್ನೂ ಮಾಡಲಾರೆ. ಏನೂ ಆಗಲಾರೆ. ನಾನಿಲ್ಲದಿದ್ದರೆ ನೀನು ಈಶ್ವರನೇ ಆಗುವುದಿಲ್ಲ. ಹೀಗೆ ಪರಾಧೀನನಾಗಿ ಕೆಲಸ ಮಾಡುವ ನೀನು, ನಿರ್ವಿಕಾರಿ ಹೇಗೆ ಆಗುವೆ? ಮಾಯೆಯಿಂದ ಹೇಗೆ ಬಿಡಲ್ಪಟ್ಟಿರುವೆ? ನೀನು ಪ್ರಕೃತಿಯಿಂದ ಬಿಡಲ್ಪಟ್ಟವನಾದರೆ, ಸ್ತ್ರೀಯಾದ ನನಗೆ ಹೆದರಬೇಕಾಗಿಲ್ಲ. ನಿನ್ನ ಸಮೀಪದಲ್ಲಿ ನಾನಿದ್ದರೆ, ನಿರ್ಲಿಪ್ತನಾದ ನಿನಗಾಗುವ ತೊಂದರೆಯೇನು?’ ಎಂದು ಸಾಂಖ್ಯಶಾಸ್ತ್ರಕ್ಕೆ ಅನುಸಾರವಾಗಿ ವಾದಿಸಿದಳು.

ಗಿರಿಜೆ ಮಾತುಗಳನ್ನು ಕೇಳಿ ವೇದಾಂತಮತವನ್ನು ಅನುಸರಿಸಿ ನಡೆವ ಶಂಕರ ಹೇಳಿದ, ‘ಎಲೈ ಗಿರಿಜೆ, ಸಾಂಖ್ಯಶಾಸ್ತ್ರದಂತೆ ನೀನು ಹೀಗೆ ಹೇಳುವವಳಾದರೆ, ನಿತ್ಯವೂ ನನ್ನ ಪರಿಶುದ್ಧವಾದ ಸೇವೆಯನ್ನು ಮಾಡು. ಆದರೆ ವೇದಾಂತಶಾಸ್ತ್ರದಲ್ಲಿ ಹೇಳುವಂತೆ ನಾನು ಶುದ್ಧ ಬ್ರಹ್ಮ. ಮಾಯೆಯಿಂದಷ್ಟೆ ಈಶ್ವರನಾಗಿರುವೆ. ಮಾಯೆಯು ಸದಾ ನನ್ನ ಅಧೀನವಾಗಿರುವುದು’ ಎಂದು ತನ್ನ ಬಳಿ ಪಾರ್ವತಿ ಸೇವೆ ಸಲ್ಲಿಸಲು ಸಮ್ಮತಿಸಿದ.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಆಗಸ್ಟ್ 24, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಶ್ರಾವಣ ಕೃಷ್ಣದ್ವಾದಶಿ ಗಂ. 08-31 ನಕ್ಷತ್ರ: ಪುನರ್ವಸು ಗಂ. 13-39 ಯೋಗ: ವ್ಯತೀಪಾತ ಗಂ. 25-24, ಕರಣ: ತೈತಿಲ ಗಂ. 08-31, ಸಿಂಹ ಮಾಸದ 07 ನೇ ದಿನ. ರಾಹುಕಾಲ : ಮಧ್ಯಾಹ್ನ 12:00 –01:30 ಸೂರ್ಯೋದಯ : 06-22 ಸೂರ್ಯಾಸ್ತ : 06-44 ಮುಸ್ಲಿಂ ದಿನಾಂಕ : 25 ಮೊಹರಮ್ ದಿನ ವಿಶೇಷ : ಪರ್ಯೂಷಣ ಪರ್ವಾರಂಭ (ಜೈನ್), ಪಕ್ಷ ಪ್ರದೋಷ

ಅದೃಷ್ಟ ಸಂಖ್ಯೆ : 3, 7

**ಮೇಷ:** ಅದೃಷ್ಟ ಇಮ್ಮಡಿಗೊಳ್ಳಲಿದೆ. ಎಲ್ಲಾ ರೀತಿಯ ದವಸ ದಾನ್ಯ ಹಾಗೂ ಮಸಾಲೆ ಪದಾರ್ಥಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ಅಧಿಕ ಮಟ್ಟದ ವ್ಯಾಪಾರ ಇರಲಿದೆ. ಶ್ರೀ ಸಿದ್ಧಿವಿನಾಯಕನಿಗೆ ಸೇವೆ ಮಾಡುವುದರಿಂದ ಶುಭ.

**ವೃಷಭ:** ತಾವು ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ. ಒಟ್ಟಾರೆ ಯಾವುದೇ ಬದಲಾವಣೆ ಇದ್ದರೂ ಇಂದು ಸೂಕ್ತವಾದ ಕಾಲ. ಮಕ್ಕಳ ಸಂಗೀತ , ಚಿತ್ರಕಲೆಯ ಅಭಿರುಚಿಗೆ ಪ್ರೋತ್ಸಾಹ ಸಿಗುವುದು.

**ಮಿಥುನ:** ಎಲ್ಲವನ್ನು ಸ್ವಂತವಾಗಿಯೇ ಮಾಡಬಲ್ಲೆನೆಂಬ ನಿಮ್ಮ ಹುಮ್ಮಸ್ಸು ನಷ್ಟಕ್ಕೆ ಕಾರಣವಾಗುತ್ತದೆ. ವ್ಯವಹಾರದಲ್ಲಿ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ತಂದುಕೊಳ್ಳುವುದು ಅನಿವಾರ್ಯವಾಗಲಿದೆ.

**ಕರ್ಕಾಟಕ:** ಈ ದಿನ ವ್ಯವಸ್ಥಿತವಾಗಿ ನಿಮ್ಮ ದಿನಚರಿ ರೂಪಿಸಿಕೊಂಡರೆ ಕೆಲಸ ಅಂತಿಮ ಹಂತಕ್ಕೆ ತಲುಪಲು ಸಾಧ್ಯವಾಗುತ್ತದೆ. ಆಹಾರ ಪದಾರ್ಥದ ವ್ಯಾಪಾರ ಮಾಡುವವರು ಶುದ್ಧತೆಯ ಬಗ್ಗೆ ಹೆಚ್ಚಿನ ಗಮನ ನೀಡಿ.

**ಸಿಂಹ:** ವಾಹನ, ಯಂತ್ರೋಪಕರಣಗಳ ವಿಚಾರದಲ್ಲಿ ಧನವ್ಯಯ ಸಂಭವಿಸುವುದು. ಅನ್ಯರಿಗೆ ಸಹಾಯ ಮಾಡುವಾಗ ಯಾವುದೇ ಪ್ರತಿಫಲವನ್ನು ಅಪೇಕ್ಷಿಸಬೇಡಿ. ನ್ಯಾಯಾಂಗ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಪ್ರಗತಿ .

**ಕನ್ಯಾ:** ಉದಯೋನ್ಮುಖ ತಾರೆಯರಿಗೆ ಹೆಚ್ಚಿನ ಅವಕಾಶಗಳಿಂದ ಲಾಭ ಬರಲಿದೆ. ಹೊಸ ವಾಹನ ಅಥವಾ ಮನೆ ಖರೀದಿಯ ಯೋಗವಿದೆ. ಸಂಶೋಧನಾಕಾರರಿಗೆ ಅನುಭವವನ್ನು ಹಂಚಿಕೊಳ್ಳಲು ಮಾಧ್ಯಮಗಳು ಸಹಕರಿಸಲಿದೆ.

**ತುಲಾ:** ಸದಾಕಾಲ ಕಾರ್ಯ ಪ್ರವೃತ್ತರಾಗಿ ದುಡಿಯುವ ನಿಮಗೆ ಈ ದಿನ ಉತ್ತಮ ಫಲಗಳು ಅನುಭವಕ್ಕೆ ಬರಲಿದೆ. ಆರ್ಥಿಕತೆಯಲ್ಲಿ ಅಗೌರವವಾಗುವ ಸನ್ನಿವೇಶ ಎದುರಾಗಿ ಕೊನೆಯ ಕ್ಷಣದಲ್ಲಿ ಹಣಕಾಸಿನ ಹೊಂದಿಕೆಯಾಗುವುದು.

**ವೃಶ್ಚಿಕ:** ಸಹಚರರ ಕೆಲವೊಂದು ವಿಚಾರಗಳು ನಿಮ್ಮ ಮಾನಸಿಕ ಸ್ಥಿತಿಯನ್ನು ಕೆಡಿಸಲಿವೆ. ವಿನಾಕಾರಣ ಪರಿಶ್ರಮದಿಂದ ಫಲ ಸಿಗಲಿಲ್ಲವೆಂದು ಬೇಸರಪಟ್ಟುಕೊಳ್ಳುವ ಅಗತ್ಯವಿಲ್ಲ. ಈ ಪರಿಶ್ರಮ ಮುಂದಿನ ದಿನಕ್ಕೆ ಅಡಿಪಾಯವಾಗಲಿದೆ.

**ಧನು:** ಹೂವಿನ ಬೆಳೆಗಾರರಿಗೆ ವಾತಾವರಣದಲ್ಲಿನ ಬದಲಾವಣೆಯಿಂದ ಸಣ್ಣಪುಟ್ಟ ತೊಂದರೆಗಳು ಸಂಭವಿಸಬಹುದು. ಇಂದು ಗುರಿಯನ್ನು ಸಾಧಿಸುವ ಬಗ್ಗೆ ಮಾತ್ರ ಗಮನವಿರಲಿ. ಒಳ್ಳೆಯ ಪಾಲುದಾರರೊಬ್ಬರು ದೊರೆಯಲಿದ್ದಾರೆ.

**ಮಕರ:** ಕೈಮಗ್ಗ ವಸ್ತ್ರದ ರಫ್ತು ಮಾರಾಟಗಾರರಿಗೆ ಲಾಭ ಸಿಗುವುದು. ಮನೆಯ ವಿಷಯಗಳತ್ತ ಹಾಗೂ ದೈನಂದಿನ ಆಗುಹೋಗಿನ ಬಗ್ಗೆ ಹೆಚ್ಚಿನ ಗಮನಹರಿಸ ಬೇಕಾಗುವುದು. ಹಣಕಾಸಿನ ವಿಷಯದಲ್ಲಿ ಅಸ್ಥಿರತೆ ಎದುರಾಗುವುದು.

**ಕುಂಭ:** ತಂದೆಯ ಅನಾರೋಗ್ಯವು ನಿಮ್ಮ ದಿನಚರಿಯಲ್ಲಿ ಕೆಲವೊಂದು ಬದಲಾವಣೆಗೆ ಕಾರಣವಾಗುವುದು. ಕುಟುಂಬದಲ್ಲಿ ಅಶಾಂತಿಯ ವಾತಾವರಣ ಇರಲಿದೆ.

ಮೀನ: ಕುಟುಂಬದ ಸದಸ್ಯರೊಂದಿಗೆ ಯಾತ್ರೆಯ ಯೋಚನೆ ಬರಲಿದೆ. ಸ್ವತಂತ್ರವಾಗಿ ಮಾಡುವ ವ್ಯವಹಾರದಲ್ಲಿ ಯಶಸ್ಸು ಲಭಿಸುವುದು. ವಿದೇಶಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಅನಿರೀಕ್ಷಿತ ಕೆಲಸ ಕೈ ಸೇರಲಿದೆ.

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಈಶಕೃಪೆ

ವಾಸನೆ ವಿವೇಚನೆಗಳೆರಡಕಂ ಸಂಘರ್ಷೆ |
ಪ್ರಾಚೀನಕಂ ಪೌರುಷಕ್ಕಮಿರುವಂತೆ ||
ಆಶಾವಿನಾಶಮುಂ, ಧೀಶಕ್ತಿಯುದ್ಭವಮುಮ್ |
ಈಶಪ್ರಸಾದದಿಂದ – ಮಂಕುತಿಮ್ಮ || 700 ||

**ಪದ-ಅರ್ಥ:** ವಿವೇಚನೆಗಳೆರಡಕಂ = ವಿವೇಚನೆಗಳು + ಎರಡಕಂ(ಎರಡಕ್ಕೂ), ಸಂಘರ್ಷೆ = -ತಿಕ್ಕಾಟ, ಘರ್ಷಣೆ, ಪ್ರಾಚೀನಕಂ = ಪ್ರಾಚೀನಕ್ಕೆ, ಹಳೆಯದಕ್ಕೆ, ಪೌರುಷಕ್ಕಮಿರುವಂತೆ = ಪೌರುಷಕ್ಕಂ(ಪೌರುಷಕ್ಕೆ) + ಇರುವಂತೆ, ಆಶಾವಿನಾಶಮುಂ = ಆಶಾ + ವಿನಾಶಮುಂ (ವಿನಾಶವು), ಧೀಶಕ್ತಿಯುದ್ಭವಮುಮ್ = ಧೀಶಕ್ತಿ(ವಿವೇಕದ ಶಕ್ತಿ) + ಉದ್ಭವಂಮುಮ್(ಉದ್ಭವ).

**ವಾಚ್ಯಾರ್ಥ:** ವಾಸನೆಗಳಿಗೂ, ವಿವೇಚನೆಗೂ ಸಂಘರ್ಷ; ಹಳೆಯದಕ್ಕೂ, ಪೌರುಷಕ್ಕೂ ಸಂಘರ್ಷ ನಡೆದೇ ಇರುತ್ತದೆ. ಆಶೆಯ ನಾಶ ಮತ್ತು ವಿವೇಕಶಕ್ತಿಯ ಉದಯವಾಗುವುದು ಭಗವಂತನ ಕೃಪೆಯಿಂದ.

**ವಿವರಣೆ:** ಅಂಗುಲಿಮಾಲನಿಗೆ ಬುದ್ಧನ ದರ್ಶನ, ಆಶೀರ್ವಾದ ದೊರೆತ ಮೇಲೆ ಅವನ ಬದುಕಿನಲ್ಲೊಂದು ಬಹುದೊಡ್ಡ ಸಂಘರ್ಷ ತಲೆಯೆತ್ತಿ ನಿಂತಿತು. ಹಿಂದಿನ ಅಪರಾಧಗಳ ಸರಮಾಲೆಯ ವಾಸನೆ, ಅಪರಾಧಿ ಭಾವ, ಅವನನ್ನು ಬಿಗಿದಿದೆ. ಬುದ್ಧನ ಅನಂತ ಪ್ರೇಮ ಅವನಲ್ಲಿ ಸರಿ, ತಪ್ಪುಗಳ ವಿವೇಚನೆಯನ್ನು ಮೂಡಿಸಿದೆ. ಇದುವರೆಗೂ ನಡೆದ ಬಂದ ದಾರಿಯನ್ನು, ಜೀವನ ವಿಧಾನವನ್ನು ಬಿಟ್ಟುಬಿಡುವುದು ಸುಲಭವೆ? ಮಹಾಂತ ತೋರಿದ ಹೊಸ ಹಾದಿಯಲ್ಲಿ ನಡೆಯಲು ಸಾಧ್ಯವಾದೀತೆ? ಇದು ವಾಸನೆ ಮತ್ತು ವಿವೇಚನೆಗಳ ನಡುವಿನ ಸಂಘರ್ಷ. ಇದು ಅಂಗುಲಿಮಾಲನಿಗೆ ಮಾತ್ರವಲ್ಲ, ನಮ್ಮೆಲ್ಲರ ಬದುಕಿನಲ್ಲಿ ಬರುವಂಥದ್ದು. ಹಿಂದೆ ಬದುಕಿದ ರೀತಿ, ಮುಂದೆ ಮಾಡಬಹುದಾದ ಕಾರ್ಯಯೋಜನೆಗಳ ನಡುವೆ ತಿಕ್ಕಾಟ ಅನಿವಾರ್ಯವಾದದ್ದು.

ನಮಗೆ ಹಿಂದಿನಿಂದ ಬಂದದ್ದು, ದೊರೆತದ್ದು, ಪ್ರಾಚೀನ. ಅದು ಸಂಪ್ರದಾಯವೂ ಆಗುತ್ತದೆ. ತಾನು ಪಡೆದದ್ದನ್ನು ಹಾಗೆಯೇ ರಕ್ಷಿಸಿಕೊಂಡು ಹೋಗುವ ಬುದ್ಧಿ, ಸಂಪ್ರದಾಯವನ್ನು ಚಿರಂಜೀವಿಯಾಗಿಸುತ್ತದೆ. ಸಂಪ್ರದಾಯ ಕೇವಲ ಅಂಧಭಾರವಾದಾಗ, ಅದು ನಮ್ಮನ್ನು ಅಳಿಸುತ್ತದೆ, ಹಾಗಿಲ್ಲದಾಗ ಅದು ನಮ್ಮನ್ನು ಉಳಿಸುತ್ತದೆ. ಹೀಗಿರುವಾಗ, ಪ್ರತಿಯೊಬ್ಬ ವ್ಯಕ್ತಿಯಲ್ಲಿರುವ ಸ್ವತಂತ್ರ ಪ್ರತಿಭೆ ಸಂಪ್ರದಾಯಬದ್ಧವಾಗದೆ ಅದರಾಚೆ ಸಿಡಿದು ಬೆಳೆಯುತ್ತದೆ. ಪ್ರತಿಭಟನೆ ತೋರಿ ತನ್ನ ಅಸ್ತಿತ್ವವನ್ನು ಸಾಧಿಸುತ್ತದೆ. ಅದು ಪೌರುಷ. ಹೀಗೆ ವಾಸನೆ ಮತ್ತು ವಿವೇಚನೆ, ಸಂಪ್ರದಾಯ ಮತ್ತು ಪೌರುಷ, ಇವುಗಳ ಸಂಘರ್ಷದ ಫಲಿತಾಂಶವಾದ ಸಾಮರಸ್ಯವೆ ಪರಂಪರೆ.

ಪ್ರಾಚೀನವನ್ನು ಅರ್ವಾಚೀನದಲ್ಲಿ ಒಂದು ಪ್ರತ್ಯೇಕ ಮುಟ್ಟಲಾಗದ ಮೂಲೆಯನ್ನಾಗಿಸದೆ, ಅದನ್ನು ಬಳಸುವ, ಬಳಸಿ ಅರಗಿಸಿಕೊಳ್ಳುವ ಪ್ರತಿಭೆಯ ಪ್ರಯತ್ನದ ಫಲವೆ ಪರಂಪರೆ. ಹೀಗೆ ಪ್ರಾಚೀನವನ್ನು ಪಾಲಿಸುತ್ತಲೇ ಪೌರುಷವನ್ನು ಮೆರೆಯಲು ಸಾಧ್ಯವಾಗುವುದು ಭಗವಂತನ ಕೃಪೆಯಿಂದ ಎನ್ನುತ್ತದೆ ಕಗ್ಗ. ಇದು ಬದುಕಿನ ಕರ್ಮದ ದಾರಿ. ಇನ್ನು ಮುಕ್ತಿಯ ದಾರಿಗೂ ಎರಡು ಊರುಗೋಲುಗಳು ಬೇಕು.

ಒಂದು ಆಶಾನಾಶ. ಎಲ್ಲಿಯವರೆಗೆ ನಮ್ಮಲ್ಲಿ ಆಸೆಯ ಮೊಳಕೆ ಇದೆಯೋ, ಅಲ್ಲಿಯವರೆಗೆ ಬಂಧನ ತಪ್ಪದು. ಅದರ ಬಿಡುಗಡೆಗೆ ವಿವೇಕ ಜಾಗ್ರತವಾಗಬೇಕು. ಆ ಧೀಶಕ್ತಿಯ ವೃದ್ಧಿಯಾದಂತೆ ನಮ್ಮ ಆಸೆಗಳ ಕುಡಿ ಮುರುಟಿಕೊಳ್ಳುತ್ತದೆ, ಬಿಡುಗಡೆ ಸಾಧ್ಯವಾಗುತ್ತದೆ. ಆದರೆ ಆಶಾನಾಶ ಮತ್ತು ಅದಕ್ಕೆ ಕಾರಣವಾದ ಧೀಶಕ್ತಿಯ ವೃದ್ಧಿ ಎರಡೂ ದೊರೆಯುವುದು ಈಶ ಕೃಪೆಯಿಂದ.

## ಪದಬಂಧ 5059


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಮೈನಾ ಹಕ್ಕಿಯನ್ನು ಹೀಗೂ ಕರೆವರು (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ಏನೇನೂ ಫಲವಿಲ್ಲದಿರುವಿಕೆ (3)
6.ಕೆಲವರು ಮಾಡುವ ಕಾರ್ಯ (3)
8.ಐಶ್ವರ್ಯ ಈ ರೀತಿ ಬಂದಿದೆ (3)
9.ಸೂರ್ಯನ ಸಾರಥಿ (3)
10.ಚಿನ್ನ ಇಲ್ಲಿದೆ (3)
12.ಕೊತ್ತಂಬರಿ ಬೀಜವಿದು (3)
14.ಕವಳದ ನಂತರ ತಂದಿರುವ ವೀಳ್ಯದೆಲೆ ಕಟ್ಟು (4)
15.ಮರವನ್ನು ಕತ್ತರಿಸುವ ಸಾಧನ (4)

**ಮೇಲಿಂದ ಕೆಳಕ್ಕೆ**

1.ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2.ಕವಿತೆಯನ್ನು ಬರೆಯುವವನು (2)
3.ಬಾಲಕನಿಗೆ ಬೆಳೆದ ಲಾಂಗೂಲ (2)
4.ತೊಂದರೆ ಹೀಗೆ ಬಂದಿದೆ (3)
7.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
8.ಸಂಖ್ಯೆಯನ್ನು ಸೂಚಿಸುವ ಪದ (5)
9.ಎಂಟು ಭಾಗಗಳುಳ್ಳದ್ದು (3)
11.ಗುಡಿಯ ಮೇಲಿರುವ ಗೋಪುರದ ತುದಿ (3)
12.ಹಳೆಗೆಳೆಯನಲ್ಲಿ ವೈರ ಕಾಣುತ್ತಿದೆಯಲ್ಲಾ? (2)
13.ಜಗಲಿಯಲ್ಲೇ ಕಾಣುತ್ತಿರುವ ಲೋಕ (2)




### 5058ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಛಾಯಾಗ್ರಾಹಿ 3.ಪರಿತ್ಯಾಗ 5.ಷಿಕಾರಿ 6.ಪಾಠಿ 7.ನೆಪ 9.ರವಿ 11.ವಾರ 12.ಮಾತೃಕೆ 14.ಸುಶಿಕ್ಷಿತ 15.ಕಶೇರುಕ

**ಮೇಲಿಂದ ಕೆಳಕ್ಕೆ:** 1.ಛಾಪಾಖಾನೆ 2.ಹಿತೈಷಿ 3.ಪರಾರಿ 4.ಗರತಿ 6.ಪಾಲುದಾರ 8.ಪರಿಕರ 10.ವಿತರಕ 11.ವಾರಸು 12.ಮಾವುತ 13.ಕೆಡುಕ

## ಸುಡೊಕು 5445


| | | | | | | | | |
|---|---|---|---|---|---|---|---|---|
| 9 | | 7 | | | | | | |
| | 6 | | 4 | | 9 | 8 | | 7 |
| 5 | | 8 | | | | | 6 | |
| | | 6 | 5 | | | 7 | | 9 |
| 7 | | | | 6 | 1 | | | |
| | 5 | | 8 | | | 3 | | 6 |
| 8 | | | 3 | | | 4 | | 2 |
| | 9 | | | 8 | | | | |
| 6 | | 4 | | 9 | | 1 | | 3 |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5444 ಸುಡೊಕು

| | | | | | | | | |
|---|---|---|---|---|---|---|---|---|
| 7 | 1 | 5 | 9 | 4 | 6 | 3 | 2 | 8 |
| 3 | 4 | 6 | 5 | 8 | 2 | 7 | 9 | 1 |
| 2 | 8 | 9 | 3 | 7 | 1 | 5 | 6 | 4 |
| 9 | 6 | 4 | 1 | 3 | 7 | 8 | 5 | 2 |
| 5 | 2 | 8 | 4 | 6 | 9 | 1 | 3 | 7 |
| 1 | 3 | 7 | 8 | 2 | 5 | 9 | 4 | 6 |
| 4 | 9 | 3 | 2 | 1 | 8 | 6 | 7 | 5 |
| 6 | 5 | 1 | 7 | 9 | 4 | 2 | 8 | 3 |
| 8 | 7 | 2 | 6 | 5 | 3 | 4 | 1 | 9 |

### ಷೇರುಪೇಟೆ ವಹಿವಾಟು 257




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,490 |
| ಇಂದಿನ ಅಂತ್ಯ | 17,577 |
| ▲ | 86 |
| ದಿನದ ಗರಿಷ್ಠ | 17,625 |

### ವಿನಿಮಯ ದರ

| | |
|---|---|
| $ ಡಾಲರ್ | 79.83 |
| £ ಪೌಂಡ್ | 93.96 |
| € ಯುರೊ | 79.3 |
| ¥ ಯೆನ್ (100ಕ್ಕೆ) | 58.54 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹445 |
| 12 ಮೊಟ್ಟೆಗೆ | ₹60 |
| ಮೈಸೂರು | |
| 100 ಮೊಟ್ಟೆಗೆ | ₹447 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1660 (1660) |
| ಸೋಯಾ (ರಿಫೈನ್ಡ್) | ₹1255 (1255) |
| ಸೂರ್ಯಕಾಂತಿ (ರಿಫೈನ್ಡ್) | ₹1500 (1500) |
| ಪಾಮೋಲಿನ್ | ₹1100(1130) |

### ರಾಮನಗರ ರೇಷ್ಮೆಗೂಡು ಧಾರಣೆ

| | |
|---|---|
| ಮಿಶ್ರತಳಿ (ಸಿ.ಬಿ) | ₹382-681 |
| ದ್ವಿತಳಿ (ಬಿ.ವಿ) | ₹422-821 |

### ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹157 |
| ಆರ್‌ಎಸ್‌ಎಸ್-5 | ₹148 |
| ಗುಡ್ ಲಾಟ್ | ₹140 |

### ಕೊಬ್ಬರಿ ಧಾರಣೆ

| | |
|---|---|
| ಅರಸೀಕೆರೆ | ₹12000-13625 |

## ರಸ್ತೆ ನಿರ್ಮಾಣಕ್ಕೆ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದ ನಾಲ್ಕು ಯೋಜನೆಗಳಿಗೆ ಹಣ ಸಂಗ್ರಹಿಸಲು ಕೇಂದ್ರ ಸರ್ಕಾರವು ಮುಂದಿನ ತಿಂಗಳು ಬಂಡವಾಳ ಮಾರುಕಟ್ಟೆಯ ಮೊರೆ ಹೋಗಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ತಿಳಿಸಿದ್ದಾರೆ.



## ₹55 ಸಾವಿರದ ಗಡಿ ತಲುಪಿದ ಅಡಿಕೆ ಧಾರಣೆ

# ‘ರಾಶಿ ಇಡಿ’: ಬಂಪರ್ ಬೆಲೆ

● ರವಿ ಕೆಳಂಗಡಿ

ಕಳಸ: ಕೆಂಪು ಅಡಿಕೆ ಬೆಲೆ ಎರಡು ವಾರಗಳಿಂದ ಏರು ಹಾದಿಯಲ್ಲಿದ್ದು, ‘ರಾಶಿ ಇಡಿ’ ಮಾದರಿಗೆ ಕ್ವಿಂಟಲ್‌ಗೆ ₹ 55 ಸಾವಿರ ಧಾರಣೆ ಬಂದಿದೆ. ಇದು ಈ ವರ್ಷದ ಗರಿಷ್ಠ ಮಟ್ಟವಾಗಿದೆ.

ಅಡಿಕೆ ಮಾರಾಟ ಮಾಡದೆ ಉಳಿಸಿಕೊಂಡಿರುವ ಬೆಳೆಗಾರರ ಪಾಲಿಗಿದು ಬಂಪರ್ ಬೆಲೆ. ಶಿವಮೊಗ್ಗ ಮಾರುಕಟ್ಟೆಯಲ್ಲಿ ಹಸಿ ಅಥವಾ ಸರಕು ಮಾದರಿ ಅಡಿಕೆಗೆ ಕ್ವಿಂಟಲ್‌ಗೆ ₹63 ಸಾವಿರದಿಂದ ₹80 ಸಾವಿರದವರೆಗೆ ಮಾರಾಟವಾಗಿದೆ.

ಬೆಟ್ಟೆ ಅಡಿಕೆ ಕ್ವಿಂಟಲ್‌ಗೆ ₹56 ಸಾವಿರ, ರಾಶಿ ಇಡಿ ಅಡಿಕೆಗೆ ₹54 ಸಾವಿರ ಬೆಲೆ ಇದೆ. ಗೊರಬಲು ಅಡಿಕೆ ಕೂಡ ₹40 ಸಾವಿರಕ್ಕೆ ಮಾರಾಟ ಆಗುತ್ತಿದೆ. ಸ್ಥಳೀಯ ವ್ಯಾಪಾರಿಗಳು ಮಂಗಳವಾರ ರಾಶಿ ಇಡಿ ಅಡಿಕೆಯನ್ನು ಕ್ವಿಂಟಲ್‌ಗೆ ₹55,500 ದರದಲ್ಲಿ ಖರೀದಿಸಿದರು.

ಅಡಿಕೆಯನ್ನು ಮಾರಾಟ ಮಾಡದೆ ಉಳಿಸಿಕೊಂಡಿರುವ ಬೆಳೆಗಾರರ ಸಂಖ್ಯೆ ಶೇ 10ಕ್ಕಿಂತಲೂ ಕಡಿಮೆ ಇದ್ದು, ಬೆಲೆ ಏರಿಕೆ ಲಾಭ ಹೆಚ್ಚಿನವರಿಗೆ ಲಭಿಸುತ್ತಿಲ್ಲ. ಶೇ 50ಕ್ಕಿಂತ ಹೆಚ್ಚಿನ ಅಡಿಕೆ ಬೆಳೆಗಾರರು ಕಳೆದ ಹಂಗಾಮಿನಲ್ಲಿ ಸಂಸ್ಕರಣೆಯ ಕಿರಿಕಿರಿ ಬೇಡ ಎಂದು ಹಸಿ ಅಡಿಕೆಯನ್ನೇ ಮಾರಾಟ ಮಾಡಿದ್ದರು.

ಅಡಿಕೆ ಸಂಸ್ಕರಣೆ ಮಾಡಿ ಉಳಿಸಿಕೊಂಡಿದ್ದ ಬೆಳೆಗಾರರು, ಹಣಕಾಸಿನ ಮುಗ್ಗಟ್ಟಿನ ಕಾರಣಕ್ಕೆ ಮಳೆಗಾಲ ಆರಂಭವಾಗುವ ಮುನ್ನವೇ ಬಹುತೇಕ ಅಡಿಕೆ ಮಾರಾಟ ಮಾಡಿದ್ದಾರೆ. ಅನುಕೂಲಸ್ಥ ಬೆಳೆಗಾರರು ಮಾತ್ರ ಅಡಿಕೆಯನ್ನು ಮಾರದೆ ಉಳಿಸಿಕೊಂಡಿದ್ದಾರೆ.

### ಆವಕ ಕಡಿಮೆ, ಬೆಲೆ ಏರಿಕೆ

‘ಈಗಿನ ಅಡಿಕೆ ಬೆಲೆ ಏರಿಕೆಗೆ ನಿರ್ದಿಷ್ಟ ಕಾರಣವೇ ಇಲ್ಲ’ ಎಂಬುದು ಮಾರುಕಟ್ಟೆ ತಜ್ಞರ ಅಭಿಪ್ರಾಯ. ಕಳೆದ ಅಕ್ಟೋಬರ್‌ನಲ್ಲಿ ರಾಶಿ ಇಡಿ ಮಾದರಿಗೆ ಕ್ವಿಂಟಲ್‌ಗೆ ₹60 ಸಾವಿರ ಬೆಲೆ ಬಂದಿತ್ತು. ಆಗ ಉತ್ತರ ಭಾರತದ ವ್ಯಾಪಾರಿಯೊಬ್ಬರು ಗರಿಷ್ಠ ಬೆಲೆಗೆ ನೂರಾರು ಟನ್ ಅಡಿಕೆ ಖರೀದಿಸಿದ್ದರು.

‘ಚನ್ನಗಿರಿ, ತುಮಕೂರು ಪ್ರದೇಶದ ಅಡಿಕೆ ಸಂಸ್ಕರಣೆ ಈಗಷ್ಟೇ ಆರಂಭ ಆಗುತ್ತಿದೆ. ಮಾರುಕಟ್ಟೆಗೆ ಹೊಸ ಅಡಿಕೆ ಆವಕವಾಗುತ್ತಿಲ್ಲ. ಇದೂ ಕೂಡ ಬೆಲೆ ಏರಿಕೆಗೆ ಕಾರಣ ಇರಬಹುದು’ ಎಂಬ ಅಭಿಪ್ರಾಯವು ಇದೆ.

**ಸದ್ಯ ಅಡಿಕೆ ಆವಕ ಕಡಿಮೆ ಇದೆ. ಆದರೆ, ಮಾರುಕಟ್ಟೆ ವೇಗ ಗಮನಿಸಿದರೆ ಬೆಲೆ ಹೆಚ್ಚಬಹುದು ಅನಿಸುತ್ತದೆ.**
**ರಘುನಂದನ,** ಅಡಿಕೆ ವ್ಯಾಪಾರಿ

# ಕ್ವಿಂಟಲ್ ತೊಗರಿ ₹ 8275!

ಕಲಬುರಗಿ: ಅತಿವೃಷ್ಟಿ ಮತ್ತು ಬೆಳೆ ಹಾನಿಯಿಂದ ಜಿಲ್ಲೆಯಲ್ಲಿ ತೊಗರಿ ಆವಕ ಕಡಿಮೆಯಾಗಿದ್ದು, ಅದರ ಬೆಲೆ ಪ್ರತಿ ಕ್ವಿಂಟಲ್‌ಗೆ ₹ 8275ಕ್ಕೆ ಏರಿಕೆಯಾಗಿದೆ.

ಕಲಬುರಗಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ಮಂಗಳವಾರ 940 ಕ್ವಿಂಟಲ್ ತೊಗರಿ ಮಾರಾಟವಾಗಿದೆ. ಸರಾಸರಿ ದರ ₹ 8000 ಆಸುಪಾಸಿನಲ್ಲಿದೆ.

ಸರ್ಕಾರ ಕಳೆದ ವರ್ಷ ಒಂದು ಕ್ವಿಂಟಲ್ ತೊಗರಿಗೆ ₹ 6300 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದರೆ, ಈ ವರ್ಷ ₹ 6600 ನಿಗದಿಪಡಿಸಿದೆ. ಆದರೆ, ಮುಕ್ತ ಮಾರುಕಟ್ಟೆಯಲ್ಲಿ ತೊಗರಿ ಕ್ವಿಂಟಲ್‌ಗೆ ₹ 8000ಕ್ಕೂ ಹೆಚ್ಚಿನ ದರಕ್ಕೆ ಮಾರಾಟ ಆಗುತ್ತಿದೆ.

‘ಮಾರುಕಟ್ಟೆಗೆ ತೊಗರಿ ಆವಕ ಕಡಿಮೆಯಾದ ಕಾರಣ ಬೇಡಿಕೆ ಹೆಚ್ಚಿದೆ. 6 ತಿಂಗಳಿನಿಂದ ದರ ₹ 200, ₹ 300ರಂತೆ ಹೆಚ್ಚಾಗುತ್ತಿದೆ’ ಎಂದು ಕಲಬುರಗಿ ಎಪಿಎಂಸಿ ಕಾರ್ಯದರ್ಶಿ ಶೈಲಜಾ ಬಾಗೇವಾಡಿ ‘ಪ್ರಜಾವಾಣಿ’ಗೆ ತಿಳಿಸಿದರು. ‘ಸಂಸ್ಕರಿಸಿದ ಪಟಕಾ ತೊಗರಿ ಬೇಳೆ ಪ್ರತಿ ಕ್ವಿಂಟಲ್‌ಗೆ ₹ 10,715ಕ್ಕೆ ಮಾರಾಟ ಆಗುತ್ತಿದೆ. ಆದರೆ, ಮಾರುಕಟ್ಟೆಯಲ್ಲಿ ಬೇಡಿಕೆಗೆ ತಕ್ಕಷ್ಟು ತೊಗರಿ ಸಿಗುತ್ತಿಲ್ಲ’ ಎಂದು ಗುಲಬರ್ಗಾ ದಾಲ್ ಮಿಲ್ಲರ್ಸ್ ಅಸೋಸಿಯೇಶನ್ ಅಧ್ಯಕ್ಷ ಶಿವಶರಣಪ್ಪ ನಿಗ್ಗುಡಗಿ ತಿಳಿಸಿದರು.

## ಪ್ರಶ್ನೋತ್ತರ



**ಪ್ರಮೋದ ಶ್ರೀಕಾಂತ ದೈತೋಟ**
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ಬಸವರಾಜ್,** ಶಿವಮೊಗ್ಗ

● **ಪ್ರಶ್ನೆ:** ನಾನು ಮಾಜಿ ಸೈನಿಕ. ಒಂದು ವರ್ಷದ ಹಿಂದೆ ನಿವೃತ್ತಿ ಆಗಿದೆ. ನನ್ನ ವಯಸ್ಸು 37 ವರ್ಷ. ನಾಲ್ಕು ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ₹ 18 ಲಕ್ಷ ಹೂಡಿಕೆ ಮಾಡಿದ್ದೆ. ₹ 23 ಲಕ್ಷ ಆಗಿದ್ದು ಈಗ ₹ 18 ಲಕ್ಷಕ್ಕೆ ಬಂದಿದೆ. ಯಾವುದಾದರೂ ಅತ್ಯುತ್ತಮ ಹೂಡಿಕೆ ಯೋಜನೆ ತಿಳಿಸಿ. ಮ್ಯೂಚುವಲ್ ಫಂಡ್‌ನಲ್ಲಿ ಬಹಳ ಬೇಗ ಲಾಭ ಕೊಡುವ ಯೋಜನೆ ತಿಳಿಸಿ.

**ಉತ್ತರ:** ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯೂ ಇತರ ಹೂಡಿಕೆಗಳಂತೆ ಒಂದು ಮುಖ್ಯ ಹೂಡಿಕೆ ವಿಧಾನ. ಇಲ್ಲಿ ನಿಮ್ಮ ಹಣವನ್ನು ಆಯಾ ಫಂಡ್ ಹೌಸ್‌ಗಳು ನಿರ್ವಹಿಸುವುದರಿಂದ, ಅವು ಹೂಡಿಕೆದಾರರಿಗೆ ತಿಳಿಸುವ ಆರ್ಥಿಕ ಅಪಾಯಗಳನ್ನು ಪರಿಗಣಿಸಿ ಹೂಡಿಕೆದಾರರು ನಿರ್ಧಾರ ಕೈಗೊಳ್ಳಬೇಕು. ಇಲ್ಲಿ ಅಲ್ಪಾವಧಿಯಲ್ಲಿ ಹಣ ದ್ವಿಗುಣ ಮಾಡುವ ಪೂರ್ವ ನಿರ್ಧರಿತ ಸೂತ್ರ ಇಲ್ಲ. ಮ್ಯೂಚುವಲ್ ಫಂಡ್‌ಗಳು ಬಹುತೇಕವಾಗಿ ಷೇರು ಮಾರುಕಟ್ಟೆಯನ್ನು ಅವಲಂಬಿಸಿದೆ. ಹೀಗಾಗಿ ಅನೇಕ ವಿಚಾರಗಳ ಆಧಾರದಲ್ಲಿ ಹೂಡಿಕೆದಾರನ ಲಾಭ, ನಷ್ಟ ನಿರ್ಧಾರವಾಗುತ್ತದೆ.

ಹೂಡಿಕೆಯು ಅನುಭವವನ್ನು ಬಯಸುತ್ತದೆ. ಕೆಲವು ಸಾಮಾನ್ಯ ವ್ಯಾವಹಾರಿಕ ಅಂಶಗಳನ್ನು ಗಮನದಲ್ಲಿಟ್ಟು ಹೂಡಿಕೆ ಮುಂದುವರಿಸಿ.

1) ಲಾಭ ಅಥವಾ ನಷ್ಟ ತಡೆಯುವ ನಿಮ್ಮ ಸಾಮರ್ಥ್ಯವನ್ನು ಮೊದಲೇ ತೀರ್ಮಾನಿಸಿ. ಅದರಂತೆ ನಿಮ್ಮ ಹೂಡಿಕೆಯನ್ನು ಮುಂದುವರಿಸಿ ಅಥವಾ ಮೊಟಕುಗೊಳಿಸಿ. ವ್ಯವಹಾರ ದಕ್ಷತೆ ರೂಢಿಸಿ ಹಾಗೂ ಸ್ವನಿಯಂತ್ರಣ ಹಾಕಿಕೊಳ್ಳಿ.
2) ನಿಮ್ಮ ಬ್ರೋಕರ್/ಹೂಡಿಕೆ ಮಾರ್ಗದರ್ಶಕರೊಂದಿಗೆ ಪ್ರತಿ ಹೂಡಿಕೆಗೂ ಮುನ್ನ ಆರ್ಥಿಕ ಅಪಾಯ ಅಥವಾ ಆಯಾ ಹೂಡಿಕೆಯ ಒಟ್ಟಾರೆ ಲಾಭ-ನಷ್ಟದ ಅನುಪಾತ ಚರ್ಚಿಸಿ. ಬೇರೆ ಬೇರೆ ವರ್ಗದ ಹೂಡಿಕೆಗಳು ಒಂದೇ ತೆರನಾದ ಲಾಭ ನೀಡುವುದಿಲ್ಲ. ಯಾವುದೇ ಹೂಡಿಕೆಗೆ ಮುನ್ನ ಆಯಾ ಕ್ಷೇತ್ರದ ಬಗ್ಗೆ ಮಾಹಿತಿ ಹೊಂದಿದವರಾಗಿ.
3) ಕೆಲವೊಮ್ಮೆ ನಿರೀಕ್ಷಿತ ಅವಧಿಯಲ್ಲಿ ಊಹಿಸಿದಂತೆ ಲಾಭ ಬರದಿದ್ದಾಗ ನಿಮ್ಮ ಪರ್ಯಾಯ ಯೋಜನೆಯನ್ನು ಮೊದಲೇ ನಿರ್ಧಾರ ಮಾಡಿಟ್ಟುಕೊಳ್ಳಿ. ಮಾರುಕಟ್ಟೆ ಏರಿಳಿತವನ್ನು ನಾವು ಎಷ್ಟು ಸೂಕ್ಷ್ಮವಾಗಿ ಅರ್ಥೈಸುತ್ತೇವೆ ಎನ್ನುವುದು ಮುಖ್ಯ. ಒಂದಿಷ್ಟು ದಿನ ನಮ್ಮನ್ನು ನಡುಗಿಸಿ, ನಮ್ಮಲ್ಲಿದ್ದ ಒಂದಿಷ್ಟು ಬಂಡವಾಳವನ್ನು ಮಾರುಕಟ್ಟೆಗೆ ಸುರಿಯುವಂತೆ ಮಾಡಿ ಮತ್ತೆ ಎಲ್ಲರೂ ತೆಪ್ಪಗಾದಾಗ ಹೊಸ ದಾಖಲೆ ಸೂಚ್ಯಂಕ ಬರೆಯುವತ್ತ ಮಾರುಕಟ್ಟೆ ಸಾಗುತ್ತದೆ. ಹೀಗಾಗಿ ನಮ್ಮ ದೃಷ್ಟಿ ಯಾವ ಹೂಡಿಕೆ ಕ್ಷೇತ್ರ ಆಯ್ಕೆ ಮಾಡಿದರೆ ಲಾಭವಾದೀತು ಎನ್ನುವ ಬಗ್ಗೆ ಇರಬೇಕು.
4) ನೀವು ದೊಡ್ಡ ಮೊತ್ತವನ್ನು ಕೆಲವೇ ಕೆಲವು ಫಂಡ್‌ಗಳಲ್ಲಿ ಹೂಡಿಕೆ ಮಾಡಿದ್ದರೆ, ಅದರಲ್ಲಿ ಒಂದಿಷ್ಟು ಮೊತ್ತವನ್ನು ಇತರ ಉತ್ತಮ ಫಂಡ್‌ಗಳ ಕಡೆ ತಿರುಗಿಸಿ.

ನಿಮ್ಮ ಹೂಡಿಕೆ ಸಣ್ಣ ಮೊತ್ತವಲ್ಲದ ಕಾರಣ ಅನುಭವಿ ಹೂಡಿಕೆ ಸಲಹೆಗಾರರಲ್ಲಿ ನಿಮ್ಮ ಪೋರ್ಟ್‌ಫೋಲಿಯೊ ತೋರಿಸಿ ಸಲಹೆ ಪಡೆದುಕೊಳ್ಳಿ.

**ಹೆಸರು,** ಊರು ಬೇಡ

● **ಪ್ರಶ್ನೆ:** ನಾನು ಜುಲೈ 31ರ ಮೊದಲು ಆದಾಯ ತೆರಿಗೆ ವಿವರ ಸಲ್ಲಿಸಿಲ್ಲ. ಈಗ ಸಲ್ಲಿಸುವುದಾಗಿದರೆ ದಂಡ ಪಾವತಿ ಮಾಡಬೇಕು ಎಂದು ಹೇಳಲಾಗುತ್ತಿದೆ. ಈಗ ವಿವರ ಸಲ್ಲಿಸುವ ಬದಲು, ಮುಂದಿನ ಹಣಕಾಸು ವರ್ಷದಲ್ಲಿ ವಿವರ ಸಲ್ಲಿಸಲೇ? ಹಿಂದಿನ ಎರಡು ವರ್ಷಗಳ ವಿವರಗಳನ್ನು ತಿದ್ದುಪಡಿ ಮಾಡಿ ಸಲ್ಲಿಸಲು ಅವಕಾಶ ಇದೆ ಎಂದು ಬಜೆಟ್‌ನಲ್ಲಿ ಓದಿದ್ದ ನೆನಪು. ಈ ಸೌಲಭ್ಯವು ನನಗೆ ಅನ್ವಯವಾಗುತ್ತದೆಯೆ?

**ಉತ್ತರ:** ಆದಾಯ ತೆರಿಗೆಯ ವಿವರ ಪ್ರತಿ ವರ್ಷಕ್ಕೆ ಸಂಬಂಧಿಸಿದ್ದಾಗಿದ್ದು ಆಯಾ ವರ್ಷದ ಆದಾಯಕ್ಕೆ ಪ್ರತ್ಯೇಕವಾದ ವಿವರ ಸಲ್ಲಿಸಬೇಕಾಗುತ್ತದೆ. ಹೀಗಾಗಿ ಒಂದಕ್ಕಿಂತ ಹೆಚ್ಚಿನ ವರ್ಷಗಳ ಆದಾಯವನ್ನು ಒಟ್ಟಾಗಿ ಸಲ್ಲಿಸಲು ಸಾಧ್ಯವಿಲ್ಲ. ಆದಾಯ ತೆರಿಗೆ ನಿಯಮ 139(1)ರಂತೆ ಪ್ರತಿ ವರ್ಷದ ಜುಲೈ 31 ನಿಶ್ಚಿತ ಗಡುವು ಆಗಿದ್ದು ಇದರೊಳಗೆ ವಿವರ ಸಲ್ಲಿಕೆಯಾಗದಿದ್ದರೆ, ನಂತರ ಸಲ್ಲಿಸುವ ವಿವರಗಳಿಗೆ ದಂಡ ಪಾವತಿಸಬೇಕಾಗುತ್ತದೆ.

ನಿಗದಿತ ಸಮಯದೊಳಗೆ ತೆರಿಗೆ ವಿವರ ಸಲ್ಲಿಸಲು ಆಗದಿದ್ದ ಸಂದರ್ಭದಲ್ಲಿ ತಡವಾದ ವಿವರ ಸಲ್ಲಿಸಲು ಕಾನೂನಿನ ಪ್ರಕಾರ ಅವಕಾಶವಿದೆ. ಆದಾಯ ₹ 5 ಲಕ್ಷಕ್ಕಿಂತ ಅಧಿಕವಿದ್ದರೆ ದಂಡದ ಮೊತ್ತ ₹ 5,000. ಕಡಿಮೆ ಆದಾಯವಿದ್ದರೆ ದಂಡದ ಮೊತ್ತ ₹ 1,000. ಆದರೆ ಈ ರೀತಿ ತಡವಾಗಿ ವಿವರ ಸಲ್ಲಿಸಲು ಸಮಯ ಮಿತಿ ಇದೆ. ತೆರಿಗೆ ವಿವರ ಸಲ್ಲಿಸುವ ಆರ್ಥಿಕ ವರ್ಷ ಅಂತ್ಯವಾದ ಒಂಬತ್ತು ತಿಂಗಳೊಳಗಾಗಿ ಸಲ್ಲಿಕೆಯಾಗಬೇಕು. ಹೀಗಾಗಿ ನಿಮಗೆ ಎರಡು ವರ್ಷದ ವಿವರ ಒಟ್ಟಿಗೆ ಸಲ್ಲಿಸುವ ಅವಕಾಶ ಬರುವುದಿಲ್ಲ. ಒಂದು ವೇಳೆ ತೆರಿಗೆ ನಿಮ್ಮ ಕಡೆಯಿಂದ ಪಾವತಿಸುವುದು ಬಾಕಿ ಇದ್ದರೆ, ಅದಕ್ಕೆ ಬಡ್ಡಿ ಪಾವತಿಸಬೇಕಾಗಿರುತ್ತದೆ.

ಇನ್ನು ನೀವು ಕೇಳಿರುವ ಎರಡು ವರ್ಷಗಳ ತೆರಿಗೆ ವಿವರ ತಿದ್ದುಪಡಿ ಮಾಡಿ ಸಲ್ಲಿಸುವ ವಿಚಾರ. ನೀವು ಮೂಲತಃ ವಿವರ ಸಲ್ಲಿಸದ ಕಾರಣ ಇಲ್ಲಿ ತಿದ್ದುಪಡಿಯ ಪ್ರಶ್ನೆ ಇಲ್ಲ. ಮೇಲೆ ಉಲ್ಲೇಖಿಸಿರುವ ಸಮಯಾವಕಾಶವೂ ಕಳೆದ ಮೇಲೆ, ನಿಮಗೆ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬಂದ ನಂತರವಷ್ಟೇ ಅದಕ್ಕೆ ಪ್ರತ್ಯುತ್ತರವಾಗಿ ರಿಟರ್ನ್ಸ್ ಸಲ್ಲಿಸುವ ಅವಕಾಶವಿರುತ್ತದೆ. ಮಾತ್ರವಲ್ಲ, ಈ ರೀತಿಯ ತಿದ್ದುಪಡಿ ಅವಕಾಶ ಹೆಚ್ಚುವರಿಯಾಗಿ ಘೋಷಿಸಿರುವ ಆದಾಯದ ಮೇಲೆ ನಿಗದಿತ ಪ್ರಮಾಣದ ತೆರಿಗೆಗಿಂತ ಹೆಚ್ಚಿನ ಮೊತ್ತ ಪಾವತಿ ಮಾಡಿದಾಗಲಷ್ಟೇ ಸಾಧ್ಯ. ತೆರಿಗೆ ರಿಫಂಡ್ ಅಥವಾ ತೆರಿಗೆ ಪ್ರಮಾಣ ತಗ್ಗಿಸುವ ಉದ್ದೇಶವಿಟ್ಟು ವಿವರ ತಿದ್ದುಪಡಿ ಮಾಡುವುದಕ್ಕೆ ಈ ಅವಕಾಶ ಬಳಸುವಂತಿಲ್ಲ. ಪ್ರಮಾದವಶಾತ್ ಆದ ತಪ್ಪಿನಿಂದ ಆದಾಯ ಕಡಿಮೆ ಘೋಷಣೆಯಾಗಿದ್ದರೆ, ಅಂತಹ ತಪ್ಪುಗಳನ್ನು ಸ್ವ ಇಚ್ಛೆಯಿಂದ ಸರಿಮಾಡುವುದಕ್ಕಷ್ಟೇ ಇಲ್ಲಿ ಅವಕಾಶ ಕಲ್ಪಿಸಲಾಗಿದೆ.

### ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

## ಸ್ವಿಸ್ ಬ್ಯಾಂಕ್‌ನಲ್ಲಿ ಹಣ: ಅನಿಲ್ ಅಂಬಾನಿಗೆ ನೋಟಿಸ್

ನವದೆಹಲಿ (ಪಿಟಿಐ): ಎರಡು ಸ್ವಿಸ್ ಬ್ಯಾಂಕ್ ಖಾತೆಗಳಲ್ಲಿ ಹೊಂದಿರುವ ₹ 814 ಕೋಟಿಗಿಂತ ಹೆಚ್ಚಿನ ಮೊತ್ತಕ್ಕೆ ಸಂಬಂಧಿಸಿದ ₹ 420 ಕೋಟಿ ತೆರಿಗೆ ವಂಚಿಸಿದ ಆರೋಪದ ಅಡಿಯಲ್ಲಿ ಉದ್ಯಮಿ ಅನಿಲ್ ಅಂಬಾನಿ ಅವರ ವಿರುದ್ಧ ಕ್ರಮ ಜರುಗಿಸಲು ಆದಾಯ ತೆರಿಗೆ ಇಲಾಖೆ ಮುಂದಾಗಿದೆ.

ಅನಿಲ್ ಅಂಬಾನಿ ಅವರು ಉದ್ದೇಶಪೂರ್ವಕವಾಗಿ ತೆರಿಗೆ ವಂಚಿಸಿದ್ದಾರೆ, ವಿದೇಶದ ಬ್ಯಾಂಕ್ ಖಾತೆ ವಿವರಗಳನ್ನು ಉದ್ದೇಶಪೂರ್ವಕವಾಗಿ ಬಹಿರಂಗಪಡಿಸಿಲ್ಲ ಎಂದು ಇಲಾಖೆ ಆರೋಪಿಸಿದೆ. ಈ ವಿಚಾರವಾಗಿ ಆಗಸ್ಟ್ ಆರಂಭದಲ್ಲಿ ಅನಿಲ್ ಅಂಬಾನಿ ಅವರಿಗೆ ನೋಟಿಸ್ ಕೂಡ ಜಾರಿ ಮಾಡಲಾಗಿದೆ.

ಕಪ್ಪು ಹಣ (ಅಘೋಷಿತ ವಿದೇಶಿ ಆದಾಯ ಮತ್ತು ಆಸ್ತಿ) ತೆರಿಗೆ ಹೇರಿಕೆ ಕಾಯ್ದೆ – 2015ರ ಸೆಕ್ಷನ್ 50 ಮತ್ತು 51ರ ಅಡಿಯಲ್ಲಿ ಅನಿಲ್ ವಿರುದ್ಧ ಕ್ರಮ ಜರುಗಿಸಬಹುದು ಎಂದು ಇಲಾಖೆ ಹೇಳಿದೆ. ಈ ಕಾನೂನಿನ ಅಡಿಯಲ್ಲಿ ಗರಿಷ್ಠ 10 ವರ್ಷ ಜೈಲು ಶಿಕ್ಷೆ, ದಂಡ ವಿಧಿಸಲು ಅವಕಾಶವಿದೆ. ಆರೋಪಗಳ ಕುರಿತು ಆಗಸ್ಟ್ 31ರೊಳಗೆ ಉತ್ತರ ನೀಡಬೇಕು ಎಂದು ಇಲಾಖೆ ಹೇಳಿದೆ. ಈ ಕುರಿತು ಪ್ರತಿಕ್ರಿಯೆಗೆ ಸುದ್ದಿಸಂಸ್ಥೆ ಕಳುಹಿಸಿದ ಇ–ಮೇಲ್‌ಗೆ ಅನಿಲ್ ಕಚೇರಿಯು ಪ್ರತಿಕ್ರಿಯೆ ನೀಡಿಲ್ಲ.

# ‘ಹೆಚ್ಚು ಸಾಲ’ದಲ್ಲಿ ಅದಾನಿ ಸಮೂಹ

ಒಂದನೇ ಪುಟದಿಂದ...

1980ರ ದಶಕದಲ್ಲಿ ಸರಕುಗಳ ವರ್ತಕ ಆಗಿ ಆರಂಭವಾದ ಅದಾನಿ ಸಮೂಹವು ಈಗ ಗಣಿಗಾರಿಕೆ, ಬಂದರು, ವಿದ್ಯುತ್ ಉತ್ಪಾದನೆ, ವಿಮಾನ ನಿಲ್ದಾಣ ನಿರ್ವಹಣೆ, ದತ್ತಾಂಶ ಕೇಂದ್ರ, ರಕ್ಷಣೆಯಂತಹ ಕ್ಷೇತ್ರಗಳಲ್ಲಿಯೂ ಚಾಚಿಕೊಂಡಿದೆ. ಈಚೆಗೆ ಕಂಪನಿಯು ಸಿಮೆಂಟ್ ಉತ್ಪಾದನೆ ವಲಯವನ್ನೂ ಪ್ರವೇಶಿಸಿದೆ. ಸಮೂಹದ ಬಹುತೇಕ ವಿಸ್ತರಣಾ ಚಟುವಟಿಕೆಗಳು ಸಾಲವಾಗಿ ಪಡೆದ ಹಣವನ್ನು ಬಳಕೆ ಮಾಡಿಕೊಂಡಿವೆ.

‘ಅದಾನಿ ಸಮೂಹವು ಹೊಸ ಮತ್ತು ನೇರವಾಗಿ ಸಂಬಂಧ ಇಲ್ಲದ ವಹಿವಾಟುಗಳಿಗೆ ವಿಸ್ತರಿಸಿಕೊಳ್ಳುತ್ತಿದೆ. ಈ ವಹಿವಾಟುಗಳು ಹೆಚ್ಚಿನ ಬಂಡವಾಳ ಬಯಸುತ್ತವೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ಸಮೂಹದ ವಿಸ್ತರಣಾ ಚಟುವಟಿಕೆಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿರುವುದಾಗಿ ವರದಿಯು ತಿಳಿಸಿದೆ. ಅದಾನಿ ಸಮೂಹವು ದೇಶದ ಮೂರನೆಯ ಅತಿದೊಡ್ಡ ಉದ್ಯಮ ಸಮೂಹ. ಸಮೂಹದ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 15.97 ಲಕ್ಷ ಕೋಟಿಗಿಂತ ಹೆಚ್ಚು.

ಈಚಿನ ವರ್ಷಗಳಲ್ಲಿ ಅದಾನಿ ಸಮೂಹವು ಹಾಲಿ ವಹಿವಾಟುಗಳನ್ನು ವಿಸ್ತರಿಸುವ ಹಾಗೂ ಹೊಸ ಉದ್ದಿಮೆಗಳನ್ನು ಸ್ಥಾಪಿಸುವ ಕೆಲಸವನ್ನು ತೀವ್ರವಾಗಿ ಮಾಡುತ್ತಿದೆ. ‘ನಾವು, ಇತರ ಹೂಡಿಕೆದಾರರು ಸಮೂಹದ ತೀವ್ರಗತಿಯ ಬೆಳವಣಿಗೆ ಮತ್ತು ಸಾಲದ ಮಟ್ಟದ ಬಗ್ಗೆ ಕಳವಳ ಹೊಂದಿದ್ದೇವೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ತಾಮ್ರ ಸಂಸ್ಕರಣೆ, ಪೆಟ್ರೊಕೆಮಿಕಲ್ಸ್, ದೂರಸಂಪರ್ಕ, ಅಲ್ಯುಮಿನಿಯಂ ಉತ್ಪಾದನೆಯಂತಹ ಪೂರ್ವ ಅನುಭವ ಇಲ್ಲದ ವಹಿವಾಟುಗಳಲ್ಲಿಯೂ ಸಮೂಹವು ವಿಸ್ತರಣೆ ನಡೆಸುತ್ತಿದೆ. ಈ ವಹಿವಾಟುಗಳು ಆರಂಭಿಕ ವರ್ಷಗಳಲ್ಲಿ ಲಾಭ ತಂದುಕೊಡುವುದಿಲ್ಲವಾದ ಕಾರಣ, ಇಲ್ಲಿ ಸಾಲವನ್ನು ಮರುಪಾವತಿ ಮಾಡುವ ಸಾಮರ್ಥ್ಯ ತಕ್ಷಣಕ್ಕೆ ಬರುವುದಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಸಮೂಹದ ಆಡಳಿತದ ಬಗ್ಗೆ ಉಲ್ಲೇಖಿಸಿರುವ ವರದಿಯು, ಎಲ್ಲ ಕಂಪನಿಗಳ ಆಡಳಿತ ಮಂಡಳಿಗಳಲ್ಲಿಯೂ ಪ್ರವರ್ತಕರ ಕುಟುಂಬದ ಸದಸ್ಯರು ಇದ್ದಾರೆ ಎಂದಿದೆ. ಗೌತಮ್ ಅದಾನಿ ಅವರು ಸಮೂಹದ, ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ ಆರೂ ಕಂಪನಿಗಳ ಅಧ್ಯಕ್ಷ ಸ್ಥಾನದಲ್ಲಿದ್ದಾರೆ. ಅವರ ಕುಟುಂಬದ ಸದಸ್ಯರೂ ಆಡಳಿತ ಮಂಡಳಿಯಲ್ಲಿ ಇದ್ದಾರೆ. ಸಹೋದರ ರಾಜೇಶ್ ಅದಾನಿ, ಮಗ ಕರಣ್ ಅದಾನಿ ಬೇರೆ ಬೇರೆ ಆಡಳಿತ ಮಂಡಳಿಗಳಲ್ಲಿ ಇದ್ದಾರೆ.

‘ಗೌತಮ್ ಅದಾನಿ ಅವರು ಹೊಂದಿರುವ ಔದ್ಯಮಿಕ ದೂರದೃಷ್ಟಿಯು ಪ್ರಶಂಸೆಗೆ ಅರ್ಹವಾಗಿದೆ. ಆದರೆ ಅವರ ಅನುಪಸ್ಥಿತಿಯಲ್ಲಿ ಸಮೂಹದ ಕಂಪನಿಗಳಲ್ಲಿನ ಹಿರಿಯ ಶ್ರೇಣಿಯ ಆಡಳಿತ ನಿರ್ವಹಣೆಯ ಸಾಮರ್ಥ್ಯವು ಸಾಕಾಗಲಿಕ್ಕಿಲ್ಲ’ ಎಂದು ಕ್ರೆಡಿಟ್‌ಸೈಟ್ಸ್ ತಿಳಿಸಿದೆ.

### ಎನ್‌ಡಿಟಿವಿ ಸ್ವಾಧೀನಕ್ಕೆ ಸಜ್ಜಾದ ಅದಾನಿ

**ಒಂದನೇ ಪುಟದಿಂದ...**

ಇದಾದ ನಂತರ ಅದಾನಿ ಸಮೂಹವು, ಎನ್‌ಡಿಟಿವಿಯ ಇನ್ನೂ ಶೇ 26ರಷ್ಟು ಷೇರುಗಳನ್ನು ಒಟ್ಟು ₹ 493 ಕೋಟಿಗೆ ಮುಕ್ತವಾಗಿ ಖರೀದಿಸುವ ಪ್ರಕಟಣೆ ಹೊರಡಿಸಿದೆ. ಸಮೂಹದ ಮಾಧ್ಯಮ ಕಂಪನಿಯಾಗಿರುವ ಎಎಂಎನ್‌ಎಲ್, ಕಳೆದ ವರ್ಷ ಕ್ವಿಂಟಿಲಿಯನ್ ಬ್ಯುಸಿನೆಸ್ ಮೀಡಿಯಾ ಪ್ರೈ.ಲಿ. ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿತ್ತು. ಎನ್‌ಡಿಟಿವಿ ಕಂಪನಿಯು ಮೂರು ಸುದ್ದಿವಾಹಿನಿಗಳನ್ನು ಮುನ್ನಡೆಸುತ್ತಿದೆ. ‘ನಮ್ಮ ಒಪ್ಪಿಗೆ ಇಲ್ಲದೆ ವಿಸಿಪಿಎಲ್ ಸಾಲವನ್ನು ಷೇರುಗಳನ್ನಾಗಿ ಪರಿವರ್ತಿಸಿಕೊಂಡಿದೆ’ ಎಂದು ಎನ್‌ಡಿಟಿವಿ ಹೇಳಿದೆ.

### ಮುಂಬೈ ಧಾರಣೆ

**ಶೇಂಗಾ**

23-8-2022

| | |
|---|---|
| ಜಾವಾ 70/80(ಹೊಸ) | 11300-11350 |
| ಜಾವಾ 80/90(ಹೊಸ) | 10700-10750 |
| ದಪ್ಪ ಮಧ್ಯಪ್ರದೇಶ(ಹೊಸ) | 10000-10050 |
| ದಪ್ಪ ಗುಜರಾತ್(ಹೊಸ) | 10700-10750 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1670(1670) |
| ಒಂದು ವಾರದ ಡೆಲಿವರಿ | 1665(1665) |
| ಸೋಯಾ ಕಚ್ಚಾ | 1205(1210) |
| ಪಾಮ್ ವಾರದ ಡೆಲಿವರಿ | 1098(1128) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1450(1450) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
51300(51250)
ಬೆಳ್ಳಿ ಕೆ.ಜಿ 55200(55150)

ಆವರಣದಲ್ಲಿ ಹಿಂದಿನ ದಿನದ ಧಾರಣೆ



## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 400- 420 |
| ನಡುಗೋಲು | 450-480 |
| ರಾಶಿ | 500- 520 |
| ರಾಶಿ ಉತ್ತಮ | 550-600 |
| ಜರಡಿ | 600 - 650 |
| ಹೆರಕಿದ್ದು | 1,000-1,100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1,000 |
| ಹಸಿರು ಅತಿ ಉತ್ತಮ | 1,150-1,250 |
| ಕಾಳು ಮೆಣಸು | 490 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-47500 |
| ಹಳತು | 46000-56000 |
| **ಚನ್ನಗಿರಿ** | |
| ರಾಶಿ | 51000-53399 |
| **ಕಾರ್ಕಳ** | |
| ಹೊಸತು | 40000-47500 |
| ಹಳತು | 46000-56000 |
| **ಸಾಗರ** | |
| ಬಿಳಿಗೋಟು | 32699-33699 |
| ಚಾಲಿ | 38939-41103 |
| ಕೋಕ | 35299-37809 |
| ಕೆಂಪುಗೋಟು | 37899-38699 |
| ರಾಶಿ | 47009-53127 |
| ಸಿಪ್ಪೆಗೋಟು | 22599-23599 |
| **ಸಿದ್ದಾಪುರ** | |
| ಬಿಳಿಗೋಟು | 30889-34599 |
| ಚಾಲಿ | 38199-44019 |
| ಕೋಕ | 26699-34899 |
| ಕೆಂಪುಗೋಟು | 32311-44969 |
| ರಾಶಿ | 48899-51299 |
| ತಟ್ಟಿಬೆಟ್ಟೆ | 45089-50309 |
| **ಶಿರಸಿ** | |
| ಬೆಟ್ಟೆ | 25099-48655 |
| ಬಿಳಿಗೋಟು | 26899-35906 |
| ಚಾಲಿ | 35099-45111 |
| ರಾಶಿ | 47499-52489 |
| **ತುಮಕೂರು** | |
| ರಾಶಿ | 49500-53500 |
| **ಯಲ್ಲಾಪುರ** | |
| ಬಿಳಿಗೋಟು | 27018-35299 |
| ಚಾಲಿ | 38499-44000 |
| ಕೋಕ | 19018-32969 |
| ಕೆಂಪುಗೋಟು | 31000-35889 |
| ರಾಶಿ | 50090-56669 |
| ತಟ್ಟಿಬೆಟ್ಟೆ | 39199-49899 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 16700 | 15700 | 16000 | 214.70 ಸೆಂಟ್ಸ್ |
| ಎಸಿ | 9100 | 8200 | 8900 | |
| ಆರ್‌ಪಿ | 9900 | 9500 | 9750 | ಲಂಡನ್ |
| ಆರ್‌ಸಿ | 4800 | 4500 | 4700 | 2215 ಡಾಲರ್ಸ್ |

# ಮೂವರು ಅಧಿಕಾರಿಗಳ ವಜಾ

**ಒಂದನೇ ಪುಟದಿಂದ...**

‘ಘಟನೆಗೆ ಮೂವರು ಅಧಿಕಾರಿಗಳೇ ಹೊಣೆ. ಹೀಗಾಗಿ ಕೇಂದ್ರ ಸರ್ಕಾರವು ತಕ್ಷಣದಿಂದಲೇ ಜಾರಿಯಾಗುವಂತೆ ಇವರನ್ನು ಸೇವೆಯಿಂದ ವಜಾಗೊಳಿಸಿದೆ. ವಜಾ ಆದೇಶದ ಪತ್ರವನ್ನು ಮೂವರಿಗೂ ಮಂಗಳವಾರವೇ ರವಾನಿಸಲಾಗಿದೆ’ ಎಂದು ಐಎಎಫ್ ಪ್ರಕಟಣೆ ತಿಳಿಸಿದೆ.

‘ಘಟನೆಯ ಕುರಿತು ತನಿಖಾ ಸಮಿತಿಯೊಂದನ್ನು ರಚಿಸಲಾಗಿತ್ತು. ಘಟನೆಗೆ ಯಾರು ಹೊಣೆ ಎಂಬುದರ ಕುರಿತೂ ತನಿಖೆ ನಡೆಸಲು ಹೇಳಲಾಗಿತ್ತು. ಈ ಮೂವರು ಅಧಿಕಾರಿಗಳು ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಸರಿಯಾಗಿ ಅನುಸರಿಸದಿರುವುದರಿಂದ ಕ್ಷಿಪಣಿಯು ಆಕಸ್ಮಿಕವಾಗಿ ಉಡಾವಣೆಯಾಗಿರುವುದಾಗಿ ಸಮಿತಿ ವರದಿ ನೀಡಿದೆ’ ಎಂದು ಹೇಳಿದೆ.

ಮಾರ್ಚ್ 9ರಂದು ರಾತ್ರಿ 7 ಗಂಟೆ ಸುಮಾರಿಗೆ ಅಂಬಾಲಾದಿಂದ ಉಡಾವಣೆಯಾಗಿದ್ದ ಕ್ಷಿಪಣಿಯು ಸುಮಾರು ಏಳು ನಿಮಿಷ ಹಾರಾಟ ನಡೆಸಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮಿಯಾನ್ ಚುನ್ನು ನಗರದಲ್ಲಿ ಬಿದ್ದಿತ್ತು.

# ರಾಮದೇವ್‌ಗೆ ‘ಸುಪ್ರೀಂ’ ತರಾಟೆ

ನವದೆಹಲಿ: ಕೋವಿಡ್–19 ಪಿಡುಗಿನ ಸಂದರ್ಭದಲ್ಲಿ ಅಲೋಪಥಿ ಚಿಕಿತ್ಸಾಪದ್ಧತಿ ಹಾಗೂ ಈ ಪದ್ಧತಿಯ ವೈದ್ಯರಿಗೆ ಅವಮಾನಿಸುವ ರೀತಿಯಲ್ಲಿ ಜಾಹೀರಾತುಗಳನ್ನು ಪ್ರಕಟಿಸಿದ್ದಕ್ಕಾಗಿ ಯೋಗ ಗುರು ಬಾಬಾ ರಾಮದೇವ್ ಅವರನ್ನು ಸುಪ್ರೀಂಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿತು.

‘ಅಲೋಪಥಿಯಂತಹ ಆಧುನಿಕ ಚಿಕಿತ್ಸಾಪದ್ಧತಿಯನ್ನು ಟೀಕಿಸುವ ವೇಳೆ ಸಂಯಮ ಇರಲಿ’ ಎಂದು ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ನ್ಯಾಯಪೀಠ, ರಾಮದೇವ್ ಅವರಿಗೆ ಸೂಚಿಸಿತು.

# ಫೈನಲ್‌ಗೆ ಬೆಂಗಳೂರು ಬ್ಲಾಸ್ಟರ್ಸ್

## ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಮಯಂಕ್ ಶತಕ ವೈಭವ, ರೋಹನ್ ಹೋರಾಟ ವ್ಯರ್ಥ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ಮಯಂಕ್ ಅಗರವಾಲ್ ಭರ್ಜರಿ ಶತಕದ ಮೂಲಕ ಮಿಂಚಿದರು. ಅದರ ಫಲವಾಗಿ ಬೆಂಗಳೂರು ಬ್ಲಾಸ್ಟರ್ಸ್ ತಂಡ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು.

'ಕ್ವಾಲಿಫೈಯರ್1' ಪಂದ್ಯದಲ್ಲಿ ಬ್ಲಾಸ್ಟರ್ಸ್ 44 ರನ್‌ಗಳಿಂದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 3 ಕ್ಕೆ 227 ರನ್ ಪೇರಿಸಿತು. 61 ಎಸೆತಗಳಲ್ಲಿ 9 ಬೌಂಡರಿ ಮತ್ತು 6 ಸಿಕ್ಸರ್ ನೆರವಿನಿಂದ 112 ರನ್ ಗಳಿಸಿದ ಮಯಂಕ್ ತಂಡದ ಉತ್ತಮ ಮೊತ್ತಕ್ಕೆ ಕಾರಣರಾದರು.

ಮಯಂಕ್ ಮತ್ತು ಎಲ್.ಆರ್. ಚೇತನ್ (80 ರನ್, 48 ಎ., 4X5, 6X5) ಮೊದಲ ವಿಕೆಟ್‌ಗೆ 162 ರನ್‌ಗಳನ್ನು ಸೇರಿಸಿದರು.

ಸವಾಲಿನ ಗುರಿ ಬೆನ್ನಟ್ಟಿದ ಮಿಸ್ಟಿಕ್ಸ್ 18.2 ಓವರ್‌ಗಳಲ್ಲಿ 183 ರನ್‌ಗಳಿಗೆ ಆಲೌಟಾಯಿತು. ರೋಹನ್ ಪಾಟೀಲ್ ಅಬ್ಬರದ ಶತಕ (108 ರನ್, 49 ಎ., 4X10, 6X7) ವ್ಯರ್ಥವಾಯಿತು.

ಮಿಸ್ಟಿಕ್ಸ್ ತಂಡ ಸೋತರೂ ಫೈನಲ್ ಪ್ರವೇಶಿಸಲು ಇನ್ನೊಂದು ಅವಕಾಶವಿದೆ.



ಮೈಸೂರು ವಾರಿಯರ್ಸ್ ಗೆಲುವಿಗೆ ಕಾಣಿಕೆ ನೀಡಿದ ಬ್ಯಾಟರ್ ನಿಹಾಲ್ ಉಲ್ಲಾಳ –ಪ್ರಜಾವಾಣಿ ಚಿತ್ರ/ ರಂಜು ಪಿ




ಶತಕ ಗಳಿಸಿದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಮಯಂಕ್ ಅಗರವಾಲ್ ಸಂಭ್ರಮಿಸಿದರು

ಗುರುವಾರ ನಡೆಯಲಿರುವ 'ಕ್ವಾಲಿಫೈಯರ್ 2' ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಎದುರಿಸಲಿದೆ. ಗೆಲ್ಲುವ ತಂಡ ಫೈನಲ್ ಪ್ರವೇಶಿಸಲಿದೆ.

**ಕ್ವಾಲಿಫೈಯರ್‌ಗೆ ವಾರಿಯರ್ಸ್:** ದಿನದ ಮೊದಲ ಪಂದ್ಯದಲ್ಲಿ (ಎಲಿಮಿನೇಟರ್) ಮೈಸೂರು ವಾರಿಯರ್ಸ್ ತಂಡ 5 ವಿಕೆಟ್‌ಗಳಿಂದ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಜಯಿಸಿತು.

ಉತ್ತಮ ಬ್ಯಾಟರ್‌ಗಳ ಪಡೆ ಹೊಂದಿರುವ ಹುಬ್ಬಳ್ಳಿಯನ್ನು ಶ್ರೇಯಸ್ ಗೋಪಾಲ್ (33ಕ್ಕೆ3) ಕಾಡಿದರು. ಇದರಿಂದಾಗಿ ಲವನೀತ್ ಸಿಸೋಡಿಯಾ ಬಳಗವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 164 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಮೈಸೂರು ತಂಡದ ಆರಂಭಿಕ ಬ್ಯಾಟರ್ ನಿಹಾಲ್ ಉಲ್ಲಾಳ (ಔಟಾಗದೆ 77; 58ಎ, 4X6, 6X3) ಹಾಗೂ ಶ್ರೇಯಸ್ (32; 19ಎ, 4X1, 6X2) ಆಟದಿಂದಾಗಿ 19.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 166 ರನ್ ಗಳಿಸಿ ಜಯಿಸಿತು.

**ಸಂಕ್ಷಿಪ್ತ ಸ್ಕೋರ್:** ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 3 ಕ್ಕೆ 227 (ಎಲ್.ಆರ್.ಚೇತನ್ 80, ಮಯಂಕ್ ಅಗರವಾಲ್ 112, ಅನಿರುದ್ಧ ಜೋಶಿ 20, ವಿದ್ವತ್ ಕಾವೇರಪ್ಪ 48ಕ್ಕೆ 2) ಗುಲ್ಬರ್ಗಾ ಮಿಸ್ಟಿಕ್ಸ್: 18.2 ಓವರ್‌ಗಳಲ್ಲಿ 183 (ರೋಹನ್ ಪಾಟೀಲ್ 108, ಎಂ.ಎಸ್.ಭಾಂಡಗೆ 26, ರೋನಿತ್ ಮೋರೆ 41ಕ್ಕೆ 3, ಜೆ.ಸುಚಿತ್ 29ಕ್ಕೆ 2) **ಫಲಿತಾಂಶ:** ಬೆಂಗಳೂರು ಬ್ಲಾಸ್ಟರ್ಸ್‌ಗೆ 44 ರನ್ ಗೆಲುವು, ಫೈನಲ್ ಪ್ರವೇಶ

**ಹುಬ್ಬಳ್ಳಿ ಟೈಗರ್ಸ್:** 20 ಓವರ್‌ಗಳಲ್ಲಿ 7ಕ್ಕೆ 164 (ಲವನೀತ್ ಸಿಸೋಡಿಯಾ 33, ಮೊಹಮ್ಮದ್ ತಾಹ 27, ಸ್ವಪ್ನಿಲ್ ಯಳವೆ ಔಟಾಗದೆ 30, ಎಂ.ಜಿ. ನವೀನ್ 32, ಶ್ರೇಯಸ್ ಗೋಪಾಲ್ 33ಕ್ಕೆ3) ಮೈಸೂರು ವಾರಿಯರ್ಸ್: 19.1 ಓವರ್‌ಗಳಲ್ಲಿ 5ಕ್ಕೆ 166 (ನಿಹಾಲ್ ಉಲ್ಲಾಳ ಔಟಾಗದೆ 77, ಕರುಣ್ ನಾಯರ್ 23, ಪವನ್ ದೇಶಪಾಂಡೆ 24, ಶ್ರೇಯಸ್ ಗೋಪಾಲ್ 32, ಆನಂದ ದೊಡ್ಡಮನಿ 27ಕ್ಕೆ4) ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 5 ವಿಕೆಟ್‌ಗಳ ಜಯ

**ಗುರುವಾರದ ಪಂದ್ಯ (ಕ್ವಾಲಿ ಫೈಯರ್–2):** ಗುಲ್ಬರ್ಗಾ ಮಿಸ್ಟಿಕ್ಸ್– ಮೈಸೂರು ವಾರಿಯರ್ಸ್ (ಸಂಜೆ 7)

## ವಿಶ್ವ ಬ್ಯಾಡ್ಮಿಂಟನ್: ಅಶ್ವಿನಿ – ಶಿಖಾ ಗೌತಮ್‌ಗೆ ಗೆಲುವು

# ಪ್ರೀಕ್ವಾರ್ಟರ್‌ಗೆ ಸೈನಾ ನೆಹ್ವಾಲ್

**ಟೋಕಿಯೊ (ಪಿಟಿಐ):** ಅನುಭವಿ ಆಟಗಾರ್ತಿ ಸೈನಾ ನೆಹ್ವಾಲ್ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 21–19, 21–9 ರಲ್ಲಿ ಹಾಂಗ್‌ಕಾಂಗ್‌ನ ಚುಂಗ್ ಎಂಗನ್ ಯಿ ಅವರನ್ನು ಪರಾಭವಗೊಳಿಸಿದರು. ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ, 38 ನಿಮಿಷಗಳಲ್ಲಿ ಗೆದ್ದರು.

ಸೈನಾ ಅವರು ಎರಡನೇ ಸುತ್ತಿನಲ್ಲಿ ಜಪಾನ್‌ನ ನೊಜೊಮಿ ಒಕುಹರ ಅವರನ್ನು ಎದುರಿಸಬೇಕಿತ್ತು. ಆದರೆ ಗಾಯದ ಕಾರಣ ನೊಜೊಮಿ ಹಿಂದೆ ಸರಿದರು. 'ಬೈ' ಪಡೆದ ಸೈನಾ ಪ್ರೀಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು.

ಚುಂಗ್ ವಿರುದ್ಧದ ಪಂದ್ಯದ ಮೊದಲ ಗೇಮ್‌ನಲ್ಲಿ 4–7 ರಲ್ಲಿ ಹಿನ್ನಡೆಯಲ್ಲಿದ್ದ ಸೈನಾ, ಮರುಹೋರಾಟ ನಡೆಸಿ 12–11 ರಲ್ಲಿ ಮುನ್ನಡೆ ಪಡೆದರು. ಆ ಬಳಿಕ ಇಬ್ಬರ ನಡುವೆ ತುರುಸಿನ ಪೈಪೋಟಿ ನಡೆಯಿತು. 19–19 ರಲ್ಲಿ ಸಮಬಲ ಕಂಡುಬಂತು. ಈ ವೇಳೆ ಶಿಸ್ತಿನ ಆಟವಾಡಿದ ಸೈನಾ ಎರಡು ಪಾಯಿಂಟ್ಸ್ ಕಲೆಹಾಕಿ ಗೇಮ್ ಗೆದ್ದುಕೊಂಡರು.

ಎರಡನೇ ಗೇಮ್‌ನಲ್ಲಿ ಭಾರತದ ಆಟಗಾರ್ತಿ ಸೊಗಸಾದ ಆಟವಾಡಿದರು. ಆರಂಭದಲ್ಲೇ 11–6 ರಲ್ಲಿ ಮುನ್ನಡೆ ಪಡೆದು ಎದುರಾಳಿಯ ಮೇಲೆ ಒತ್ತಡ ಹೇರಿದರು. ಅದೇ ಮೇಲುಗೈಯನ್ನು ಕಾಪಾಡಿಕೊಂಡು ಪಂದ್ಯ ಜಯಿಸಿದರು.



ಸೈನಾ ನೆಹ್ವಾಲ್ ಆಟದ ವೈಖರಿ –ಎಪಿ ಚಿತ್ರ

**ತ್ರಿಶಾ– ಗಾಯತ್ರಿ ಶುಭಾರಂಭ:** ಭಾರತದ ತ್ರಿಶಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಶುಭಾರಂಭ ಮಾಡಿದರು. ಮೊದಲ ಸುತ್ತಿನಲ್ಲಿ ಅವರು 21–11, 21–13 ರಲ್ಲಿ ಮಲೇಷ್ಯಾದ ಯೀನ್ ಯುವಾನ್ ಲೊ ಮತ್ತು ವಲೇರಿ ಸಿಯೊ ಅವರನ್ನು ಮಣಿಸಿದರು.

ಕೆ.ಅಶ್ವಿನಿ ಭಟ್ ಮತ್ತು ಶಿಖಾ ಗೌತಮ್ ಅವರೂ ಎರಡನೇ ಸುತ್ತಿಗೆ ಮುನ್ನಡೆದರು. ಮಂಗಳವಾರ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ಭಾರತದ ಜೋಡಿ 21–8, 21–14 ರಲ್ಲಿ ಇಟಲಿಯ ಮಾರ್ಟಿನಾ ಕೊರ್ಸಿನಿ–ಜುಡಿತ್ ಮಯೆರ್ ಎದುರು ಜಯಿಸಿತು.

ಮಿಶ್ರ ಡಬಲ್ಸ್‌ನಲ್ಲಿ ವೆಂಕಟ್ ಗೌರವ್ ಪ್ರಸಾದ್– ಜೂಹಿ ದೇವಾಂಗನ್ ಜೋಡಿ 10–21, 21–23 ರಲ್ಲಿ ಇಂಗ್ಲೆಂಡ್‌ನ ಗ್ರೆಗೊರಿ ಮಯರ್ಸ್– ಜೆನ್ನಿ ಮೂರ್ ಎದುರು ಪರಾಭವಗೊಂಡಿತು.

ತನಿಷಾ ಕ್ರಾಸ್ಟೊ ಮತ್ತು ಇಶಾನ್ ಭಟ್ನಾಗರ್ ಅವರೂ ನಿರಾಸೆ ಅನುಭವಿಸಿದರು. ಥಾಯ್ಲೆಂಡ್‌ನ ಸುಪಕ್ ಜೊಮ್ಕೊ– ಸುಪಿಸರ ಪೆವ್‌ಸಂಪ್ರನ್ ಅವರು 21–14, 21–17 ರಲ್ಲಿ ಭಾರತದ ಜೋಡಿಯನ್ನು ಮಣಿಸಿತು.

ಪುರುಷರ ಡಬಲ್ಸ್‌ನಲ್ಲಿ ಕೃಷ್ಣ ಪ್ರಸಾದ್ ಗರಗ ಮತ್ತು ವಿಷ್ಣುವರ್ಧನ್ ಪಂಜಲ ಅವರ ಸವಾಲಿಗೆ ತೆರೆಬಿತ್ತು.

## ನಾಳೆಯಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಶುರು

# ಸೆ.2 ರಂದು ಎಐಎಫ್‌ಎಫ್ ಚುನಾವಣೆ

**ನವದೆಹಲಿ (ಪಿಟಿಐ):** ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಕಾರ್ಯಕಾರಿ ಸಮಿತಿಗೆ ಚುನಾವಣೆ ಸೆ.2 ರಂದು ನಡೆಯಲಿದ್ದು, ಆಸಕ್ತ ಅಭ್ಯರ್ಥಿಗಳು ಆ.25 ರಿಂದ ನಾಮಪತ್ರ ಸಲ್ಲಿಸಬಹುದು.

ಎಐಎಫ್‌ಎಫ್ ದೈನಂದಿನ ವ್ಯವಹಾರಗಳ ಮೇಲ್ವಿಚಾರಣೆಗೆ ನೇಮಿಸಿದ್ದ ಮೂವರು ಸದಸ್ಯರ ಆಡಳಿತ ಸಮಿತಿಯನ್ನು (ಸಿಒಎ) ಸುಪ್ರೀಂ ಕೋರ್ಟ್ ಸೋಮವಾರ ರದ್ದುಗೊಳಿಸಿತ್ತು. ಆ.28 ರಂದು ನಡೆಯಬೇಕಿದ್ದ ಚುನಾವಣೆಯನ್ನು ಒಂದು ವಾರ ಮುಂದೂಡಿತ್ತು.

ಸುಪ್ರೀಂ ಕೋರ್ಟ್ ತೀರ್ಪು ಹೊರಬಿದ್ದ ಬೆನ್ನಲ್ಲೇ ಚುನಾವಣಾಧಿಕಾರಿ ಉಮೇಶ್ ಸಿನ್ಹಾ ಅವರು ಚುನಾವಣೆ ಪ್ರಕ್ರಿಯೆಗೆ ಸಂಬಂಧಿಸಿದ ಹೊಸ ನೋಟಿಸ್ ಹೊರಡಿಸಿದರು.

ಗುರುವಾರದಿಂದ ಶನಿವಾರದವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದ್ದು, ಆ.28 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ.

ನಾಮಪತ್ರ ವಾಪಸ್ ಪಡೆಯಲು ಆ.29 ಕೊನೆಯ ದಿನವಾಗಿದೆ. ಅಭ್ಯರ್ಥಿಗಳ ಅಂತಿಮಪಟ್ಟಿಯನ್ನು ಆ.30 ರಂದು ಎಐಎಫ್‌ಎಫ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ನವದೆಹಲಿಯಲ್ಲಿರುವ ಎಐಎಫ್‌ಎಫ್ ಕೇಂದ್ರ ಕಚೇರಿಯಲ್ಲಿ ಸೆ.2 ರಂದು ಮತದಾನ ನಡೆಯಲಿದ್ದು, ಅದೇ ದಿನ ಅಥವಾ ಸೆ.3 ರಂದು ಫಲಿತಾಂಶ ಪ್ರಕಟಗೊಳ್ಳಲಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಎಐಎಫ್‌ಎಫ್ ಮತದಾರರ ಪಟ್ಟಿಯಲ್ಲಿ 'ಖ್ಯಾತನಾಮ ಆಟಗಾರರು' ಇರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತನ್ನ ಹೊಸ ಆದೇಶದಲ್ಲಿ ತಿಳಿಸಿದೆ. ಆದ್ದರಿಂದ ಭಾರತ ತಂಡದ ಮಾಜಿ ನಾಯಕ ಭೈಚುಂಗ್ ಭುಟಿಯಾ ಅವರು ಯಾವುದಾದರೂ ರಾಜ್ಯ ಸಂಸ್ಥೆಯ ಬೆಂಬಲದೊಂದಿಗೆ ಹೊಸದಾಗಿ ನಾಮಪತ್ರ ಸಲ್ಲಿಸಬೇಕಿದೆ. ಈ ಮೊದಲು ಅವರು 'ಖ್ಯಾತನಾಮ ಆಟಗಾರ'ನಾಗಿದ್ದುಕೊಂಡು ನಾಮಪತ್ರ ಸಲ್ಲಿಸಿದ್ದರು.

ಫುಟ್‌ಬಾಲ್ ಸಂಸ್ಥೆಗಳ ಅಂತರರಾಷ್ಟ್ರೀಯ ಒಕ್ಕೂಟವು (ಫಿಫಾ) ಆ.15 ರಂದು ಎಐಎಫ್‌ಎಫ್ ಮೇಲೆ ಅಮಾನತು ಹೇರಿತ್ತು.

### ಅಮಾನತು ತೆರವಿಗೆ ಫಿಫಾಗೆ ಪತ್ರ

ಅಮಾನತು ತೆರವು ಮಾಡುವಂತೆ ಕೋರಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್, ಫಿಫಾಗೆ ಪತ್ರ ಬರೆದಿದೆ.

'ಎಐಎಫ್‌ಎಫ್‌ಅನ್ನು ಅಮಾನತು ಮಾಡಿರುವ ನಿರ್ಧಾರವನ್ನು ಮರುಪರಿಶೀಲಿಸಬೇಕು' ಎಂದು ಎಐಎಫ್‌ಎಫ್ ಹಂಗಾಮಿ ಕಾರ್ಯದರ್ಶಿ ಸುನಂದೊ ಧರ್ ಅವರು ಫಿಫಾ ಪ್ರಧಾನ ಕಾರ್ಯದರ್ಶಿ ಫಾತ್ಮ ಸಮೋರ ಅವರಿಗೆ ಮನವಿ ಮಾಡಿದ್ದಾರೆ.

'ಸುಪ್ರೀಂ ಕೋರ್ಟ್ ಆ.22 ರಂದು ನೀಡಿದ ತೀರ್ಪಿನಲ್ಲಿ ಸಿಒಎಯನ್ನು ರದ್ದುಗೊಳಿಸಿದೆ. ಇದೀಗ ಎಐಎಫ್‌ಎಫ್‌ನ ದೈನಂದಿನ ವ್ಯವಹಾರಗಳು ಎಐಎಫ್‌ಎಫ್ ಪದಾಧಿಕಾರಿಗಳ ಕೈಗೆ ದೊರೆತಿದೆ. ಅಮಾನತು ತೆರವಿಗೆ ನೀವು ವಿಧಿಸಿದ್ದ ಷರತ್ತುಗಳು ಈಡೇರಿವೆ. ಆದ್ದರಿಂದ ಶೀಘ್ರದಲ್ಲೇ ಅಮಾನತು ತೆರವುಗೊಳಿಸಿ' ಎಂದು ಪತ್ರದಲ್ಲಿ ಕೋರಿದ್ದಾರೆ.

# 26ರಿಂದ ರಾಜ್ಯ ಅಥ್ಲೆಟಿಕ್ ಕೂಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯ ಸಹಯೋಗದಲ್ಲಿ ಇದೇ 26ರಿಂದ 28ರವರೆಗೆ ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನಡೆಯಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಈ ಕೂಟದಲ್ಲಿ 28 ಜಿಲ್ಲೆಗಳಿಂದ ಎರಡು ಸಾವಿರ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆ ಇದೆ.

'ಈ ಕೂಟದಲ್ಲಿ 14, 16, 18 ವರ್ಷದೊಳಗಿನ ಬಾಲಕ, ಬಾಲಕಿಯರು, 20, 23 ವರ್ಷದೊಳಗಿನವರು, ಪುರುಷ ಹಾಗೂ ಮಹಿಳಾ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. 12 ಪ್ರಕಾರಗಳಲ್ಲಿ ಸ್ಪರ್ಧೆಗಳು ನಡೆಯಲಿವೆ' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಅಧ್ಯಕ್ಷ ಕುಮಾರನ್ ಸಂಪತ್ ಹಾಗೂ ಕಾರ್ಯದರ್ಶಿ ಆನದಂದಕುಮಾರ್ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮುಂಬರುವ ದಕ್ಷಿಣ ಭಾರತ ಕ್ರೀಡಾಕೂಟ, 23 ವರ್ಷದೊಳಗಿನವರ ರಾಷ್ಟ್ರೀಯ ಕೂಟ ಹಾಗೂ ಅಕ್ಟೋಬರ್‌ನಲ್ಲಿ ನಡೆಯಲಿರುವ ಅಂತರರಾಜ್ಯ ಓಪನ್ ಕ್ರೀಡಾಕೂಟಕ್ಕೆ ರಾಜ್ಯ ತಂಡಗಳನ್ನೂ ಇಲ್ಲಿ ಆಯ್ಕೆ ಮಾಡಲಾಗುವುದು' ಎಂದು ತಿಳಿಸಿದರು.

**ವಸತಿಗೆ ಮನವಿ:** ಸ್ಪರ್ಧಿಸಲು ಬರುತ್ತಿರುವ ಅಥ್ಲೀಟ್‌ಗಳಿಗೆ ಕಂಠೀರವ ಕ್ರೀಡಾಂಗಣದಲ್ಲಿರುವ ವಸತಿ ಸೌಲಭ್ಯಗಳಲ್ಲಿಯೇ ವ್ಯವಸ್ಥೆ ಕಲ್ಪಿಸಲು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮುಂದಾಗಬೇಕು ಎಂದು ಕೆಎಎ ಕಾರ್ಯದರ್ಶಿ ಎ. ರಾಜವೇಲು ಮನವಿ ಮಾಡಿದರು.

### ಪ್ರಶಸ್ತಿ ಮೊತ್ತ ಹೆಚ್ಚಿಸಲು ಆಗ್ರಹ

'ಅಂತರರಾಷ್ಟ್ರೀಯಮಟ್ಟದ ಕೂಟಗಳಲ್ಲಿ ಸಾಧನೆ ಮಾಡಿದ ಅಥ್ಲೀಟ್‌ಗಳಿಗೆ ಬೇರೆ ರಾಜ್ಯಗಳಲ್ಲಿ ದೊಡ್ಡ ಮೊತ್ತದ ಬಹುಮಾನ ನೀಡಲಾಗುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಹಣ ಕೊಡುತ್ತಿದ್ದಾರೆ. ಉದಾಹರಣೆಗೆ ಪ್ರಿಯಾ ಮೋಹನ್ ಅವರು ಹೋದ ವರ್ಷ ಜೂನಿಯರ್ ವಿಶ್ವ ಕೂಟದಲ್ಲಿ ಕಂಚು ಗೆದ್ದಿದ್ದರು. ಆಗ ₹ 5 ಲಕ್ಷ ಕೊಟ್ಟಿದ್ದರು. ಈಗ ಬೆಳ್ಳಿ ಜಯಿಸಿ ಬಂದರೂ ಅಷ್ಟೇ ಮೊತ್ತ ನೀಡುತ್ತಿದ್ದಾರೆ. ಹರಿಯಾಣದಲ್ಲಿ ₹ 40 ಲಕ್ಷ, ಉತ್ತರಪ್ರದೇಶದಲ್ಲಿ ₹ 75 ಲಕ್ಷವನ್ನು ಅಲ್ಲಿಯ ಅಥ್ಲೀಟ್‌ಗಳಿಗೆ ನೀಡಲಾಗುತ್ತಿದೆ. ರಾಜ್ಯ ಸರ್ಕಾರವು ಈ ಮೊತ್ತವನ್ನು ಹೆಚ್ಚಿಸಬೇಕು' ಎಂದು ಕೆಎಎ ಜಂಟಿ ಕಾರ್ಯದರ್ಶಿ ಅಜಯಕುಮಾರ್ ಆಗ್ರಹಿಸಿದರು.

## ದ್ರಾವಿಡ್‌ಗೆ ಕೋವಿಡ್: ಏಷ್ಯಾಕಪ್‌ಗೆ ಇಲ್ಲ



ದ್ರಾವಿಡ್

**ನವದೆಹಲಿ (ಪಿಟಿಐ):** ಭಾರತ ಕ್ರಿಕೆಟ್ ತಂಡದ ಮುಖ್ಯಕೋಚ್ ರಾಹುಲ್ ದ್ರಾವಿಡ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಇದರಿಂದಾಗಿ ಅವರು ದುಬೈನಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ತಂಡದೊಂದಿಗೆ ತೆರಳುತ್ತಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ಜಿಂಬಾಬ್ವೆ ವಿರುದ್ಧ ಸೋಮವಾರ ಕೊನೆಗೊಂಡ ಏಕದಿನ ಕ್ರಿಕೆಟ್ ಸರಣಿಗೂ ತಂಡದ ಜತೆ ದ್ರಾವಿಡ್ ಇರಲಿಲ್ಲ. ಸತತ ಪಂದ್ಯಗಳ ಕಾರಣ ದ್ರಾವಿಡ್, ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್, ಬೌಲಿಂಗ್ ಕೋಚ್ ಪಾರಸ್ ಮಾಂಬ್ರೆ ಹಾಗೂ ಸಿಬ್ಬಂದಿಗೆ ಬಿಸಿಸಿಐ ವಿಶ್ರಾಂತಿ ನೀಡಲಾಗಿತ್ತು.

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಆಗಸ್ಟ್ 27ರಂದು ಆರಂಭಗೊಳ್ಳಲಿದ್ದು, ಭಾರತ ತನ್ನ ಮೊದಲ ಪಂದ್ಯವನ್ನು 28ರಂದು ಪಾಕಿಸ್ತಾನ ವಿರುದ್ಧ ಆಡಲಿದೆ.

ಟೂರ್ನಿಗೆ ಭಾರತ ತಂಡವನ್ನು ಬಿಸಿಸಿಐ ಈಗಾಗಲೇ ಪ್ರಕಟಿಸಿದ್ದು, ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಬೆನ್ನುನೋವಿನ ಕಾರಣದಿಂದ ತಂಡದಿಂದ ಹೊರಗುಳಿದಿದ್ದಾರೆ. ಮಾಜಿ ನಾಯಕ ವಿರಾಟ್ ಕೊಹ್ಲಿ ಮತ್ತು ಗಾಯದಿಂದ ಚೇತರಿಸಿಕೊಂಡಿರುವ ಕೆ.ಎಲ್.ರಾಹುಲ್ ಅವರು ತಂಡಕ್ಕೆ ಮರಳಿದ್ದಾರೆ.



ಈಗಲ್ಸ್ ತಂಡದ ಡೆರಿಕ್ (ಬಲ) ಮತ್ತು ಬಿಯುಎಫ್‌ಸಿ ತಂಡದ ವಿವೇಕ್ ನಡುವಿನ ಪೈಪೋಟಿ –ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

# ಎಫ್‌ಸಿಬಿಯು ತಂಡಕ್ಕೆ ಭರ್ಜರಿ ಜಯ

**ಬೆಂಗಳೂರು:** ಗೋಲಿನ ಮಳೆಗರೆದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಎಫ್‌ಸಿಬಿಯು 17–0 ಗೋಲುಗಳಿಂದ ಜವಾಹರ್ ಯೂನಿಯನ್ ಫುಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು.

ಚೆಸ್ಟರ್‌ಪಾಲ್ ಲಿಂಗ್ಡೊ ನಾಲ್ಕು ಗೋಲುಗಳನ್ನು ಗಳಿಸಿ ಮಿಂಚಿದರೆ, ಹಾರ್ಡಿ ಕ್ಲಿಫ್ ನೊಂಗ್‌ಬ್ರಿನ್ ಮತ್ತು ಏನಮ್ ಗ್ರಾಫೆನ್ ತಲಾ ಮೂರು ಗೋಲುಗಳನ್ನು ತಂದಿತ್ತರು.

ಶಾಜನ್ ಫ್ರಾಂಕ್ಲಿನ್ ಮತ್ತು ಬೆದಶ್ವೊರ್ ಸಿಂಗ್ ಲೈಶ್ರಾಮ್ ತಲಾ ಎರಡು ಹಾಗೂ ಮನ್ವೀರ್ ಸಿಂಗ್, ಪ್ರಫುಲ್ ಕುಮಾರ್ ಮತ್ತು ಸೆಲ್ವಿನ್ ಮಿರಾಂಡ ತಲಾ ಒಂದು ಗೋಲು ಗಳಿಸಿದರು.

ದಿನದ ಮೊದಲ ಪಂದ್ಯದಲ್ಲಿ ಬಿಯುಎಫ್‌ಸಿ 2–0 ಗೋಲುಗಳಿಂದ ಬೆಂಗಳೂರು ಈಗಲ್ಸ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಪ್ಯಾಟ್ರಿಕ್ (65ನೇ ನಿ.) ಮತ್ತು ಕೆ.ಎನ್.ಜೀವಿತ್ (72) ಅವರು ಬಿಯುಎಫ್‌ಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ರೂಟ್ಸ್ ಎಫ್‌ಸಿ 1–0 ಗೋಲುಗಳಿಂದ ಎಂಇಜಿ ಮತ್ತು ಸೆಂಟರ್ ತಂಡವನ್ನು ಮಣಿಸಿತು. ಜಿ.ಅಮೋಫ್ 29ನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು.

ಬುಧವಾರ ನಡೆಯುವ ಪಂದ್ಯಗಳಲ್ಲಿ ಎಡಿಇ ಎಫ್‌ಸಿ– ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ; ಎಎಸ್‌ಸಿ ಮತ್ತು ಸೆಂಟರ್– ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ಹಾಗೂ ರೆಬೆಲ್ಸ್ ಎಫ್‌ಸಿ– ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡಗಳು ಎದುರಾಗಲಿವೆ.

## ರಾಯಲ್ ಲಂಡನ್ ಕ್ರಿಕೆಟ್: ಪೂಜಾರ ಮೂರನೇ ಶತಕ



ಪೂಜಾರ

**ಹೋವ್, ಇಂಗ್ಲೆಂಡ್ (ಪಿಟಿಐ):** ಭಾರತದ ಟೆಸ್ಟ್ ಪರಿಣತ ಬ್ಯಾಟರ್ ಚೇತೇಶ್ವರ್ ಪೂಜಾರ ರಾಯಲ್ ಲಂಡನ್ ಏಕದಿನ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮೂರನೇ ಶತಕ ದಾಖಲಿಸಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಪೂಜಾರ ಸಸೆಕ್ಸ್ ತಂಡದ ಪರ 90 ಎಸೆತಗಳಲ್ಲಿ 132 ರನ್ ಹೊಡೆದರು. ಇದರಿಂದಾಗಿ ಮಿಡಲ್ಸೆಕ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಸಸೆಕ್ಸ್ 50 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗಳಿಗೆ 400 ರನ್ ಗಳಿಸಿತು.

ಪೂಜಾರ ಒಟ್ಟು 20 ಬೌಂಡರಿ ಹಾಗೂ ಎರಡು ಸಿಕ್ಸರ್ ಸಿಡಿಸಿದರು. ಇದಕ್ಕೂ ಮುನ್ನ ಪೂಜಾರ ಅವರು ವಾರ್ವಿಕ್‌ಶೈರ್ ಎದುರು 107 (79ಎಸೆತ) ಹಾಗೂ ಸರೆ ಎದುರು 174 ರನ್ ಗಳಿಸಿದ್ದರು.

# ಅಪಘಾತ: ಮೂವರು ಭಾರತೀಯರ ಸಾವು

**ಲಂಡನ್ (ಪಿಟಿಐ):** ಸ್ಕಾಟ್ಲೆಂಡ್‌ನ 'ಎ828 ಹೆದ್ದಾರಿ'ಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೆಂಗಳೂರು ಮೂಲದ ಗಿರೀಶ್ ಸುಬ್ರಹ್ಮಣ್ಯಂ (23) ಎಂಬುವವರು ಸೇರಿ ಮೂವರು ಭಾರತೀಯರು ಮೃತಪಟ್ಟಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಹೈದರಾಬಾದ್‌ನ ಪವನ್ ಬಾಶೆಟ್ಟಿ (23), ಆಂಧ್ರಪ್ರದೇಶದ ನೆಲ್ಲೂರಿನ ಸುಧಾಕರ್ ಮೋದೆಪಲ್ಲಿ (30) ಎಂಬುವವರೂ ಈ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಹೈದರಾಬಾದ್‌ನ ಸಾಯಿ ವರ್ಮಾ (24) ಎಂಬ ವಿದ್ಯಾರ್ಥಿ ಗಾಯಗೊಂಡಿದ್ದು, ಗ್ಲಾಸ್ಗೊದ ಕ್ವೀನ್ ಎಲಿಜಬೆತ್ ಯುನಿವರ್ಸಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಗಂಭೀರವಾಗಿದೆ ಎಂದು ಮೂಲಗಳು ಹೇಳಿವೆ.

ಗಿರೀಶ್ ಹಾಗೂ ಪವನ್ ಅವರು ಲೀಸ್ಟರ್ ವಿಶ್ವವಿದ್ಯಾಲಯದಲ್ಲಿ ಏರೊನಾಟಿಕಲ್ ಎಂಜಿನಿಯರಿಂಗ್‌ನ ಸ್ನಾತಕೋತ್ತರ ವಿದ್ಯಾರ್ಥಿಗಳಾಗಿದ್ದರು. ಸುಧಾಕರ್ ಮೋದೆಪಲ್ಲಿ ಇದೇ ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿ. ಸಾಯಿ ವರ್ಮಾ ಇದೇ ವಿಶ್ವವಿದ್ಯಾಲಯದ ಮೆಕಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದಾರೆ.

ಕಳೆದ ಶುಕ್ರವಾರ, ಈ ನಾಲ್ವರು ಭಾರತೀಯರಿದ್ದ ಕಾರು ಹಾಗೂ ಭಾರಿ ಸರಕು ವಾಹನ (ಎಚ್‌ಜಿವಿ) ನಡುವೆ ಈ ಅಪಘಾತ ಸಂಭವಿಸಿದೆ. ಘಟನೆ ಕುರಿತು ತನಿಖೆ ಕೈಗೊಂಡಿದ್ದು, ಪೂರಕ ಮಾಹಿತಿ ನೀಡುವಂತೆ ಸ್ಕಾಟ್ಲೆಂಡ್ ಪೊಲೀಸ್ ಅಧಿಕಾರಿ ಕೆವಿನ್ ಕ್ರೇಗ್ ಮನವಿ ಮಾಡಿದ್ದಾರೆ.

## ಪೆರಗ್ವೆ: ಭಾರತೀಯ ರಾಯಭಾರ ಕಚೇರಿ ಉದ್ಘಾಟನೆ

**ಅಸುನ್‌ಸಿಯೋನ್ (ಪೆರಗ್ವೆ) (ಪಿಟಿಐ):** ಇಲ್ಲಿರುವ ಭಾರತೀಯ ರಾಯಭಾರ ಕಚೇರಿಯನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಪೆರಗ್ವೆಯ ವಿದೇಶಾಂಗ ಸಚಿವ ಜೂಲಿಯೊ ಸೀಸರ್ ಅರ್ರಿಯೋಲಾ ಜತೆಗೂಡಿ ಉದ್ಘಾಟಿಸಿದರು.

ಕಚೇರಿಯ ಉದ್ಘಾಟನೆಯಿಂದ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧವು ಹೊಸ ಎತ್ತರಕ್ಕೆ ಏರಲಿದೆ ಎಂದು ಜೂಲಿಯೊ ಸೀಸರ್ ಅಭಿಪ್ರಾಯಪಟ್ಟರು. ಭಾರತದ ಹಿಂದಿನ ಯಾವ ವಿದೇಶಾಂಗ ಸಚಿವರೂ ಪೆರಗ್ವೆಗೆ ಇದುವರೆಗೂ ಭೇಟಿ ನೀಡಿರಲಿಲ್ಲ. ಜತೆಗೆ, ಎರಡೂ ದೇಶಗಳ ರಾಜತಾಂತ್ರಿಕ ಸಂಬಂಧಕ್ಕೆ 60 ವರ್ಷ ತುಂಬಿದ ಸಂದರ್ಭವೂ ಇದಾಗಿದ್ದು, ಭೇಟಿಗೆ ಮಹತ್ವ ಬಂದಿದೆ ಎನ್ನಲಾಗಿದೆ.

## ರಷ್ಯಾ ದಾಳಿ ಭೀತಿ: ಉಕ್ರೇನ್‌ನಲ್ಲಿ ಸ್ವಾತಂತ್ರ್ಯೋತ್ಸವಕ್ಕೆ ನಿರ್ಬಂಧ

**ಕೀವ್ (ರಾಯಿಟರ್ಸ್):** ರಷ್ಯಾದ ನಿರ್ದಿಷ್ಟ ದಾಳಿಯ ಭೀತಿಯಿಂದಾಗಿ ಯುದ್ಧಪೀಡಿತ ಉಕ್ರೇನ್‌ನಲ್ಲಿ ಈ ಬಾರಿ ಸ್ವಾತಂತ್ರ್ಯೋತ್ಸವ ಆಚರಣೆಗೆ ಝೆಲೆನ್‌ಸ್ಕಿ ನೇತೃತ್ವದ ಸರ್ಕಾರ ನಿರ್ಬಂಧ ಹೇರಿದೆ.

ಸೋವಿಯತ್ ಒಕ್ಕೂಟದಿಂದ ಹೊರ ಬಂದು 31ನೇ ವರ್ಷ ಪೂರೈಸುತ್ತಿರುವ ಉಕ್ರೇನ್ ಬುಧವಾರ ಸ್ವಾತಂತ್ರ್ಯೋತ್ಸವ ಆಚರಿಸಬೇಕಿತ್ತು. ರಾಜಧಾನಿ ಕೀವ್‌ನಲ್ಲಿ ಯಾವುದೇ ಬಹಿರಂಗ ಆಚರಣೆ ಇರುವುದಿಲ್ಲ. ಹಲವು ನಗರಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ.

ಉಕ್ರೇನ್ ಸ್ವತಂತ್ರ್ಯೋತ್ಸವ ಗುರಿಯಾಗಿಸಿ ರಷ್ಯಾ ವಿಧ್ವಂಸಕ ದಾಳಿಗೆ ಯತ್ನಿಸುವ ಸಾಧ್ಯತೆ ಇದೆ. ಉಕ್ರೇನಿನ ಯಾವುದೇ ನಗರದ ಮೇಲೆ ರಷ್ಯಾದ ದಾಳಿ ನಡೆದರೆ ಪ್ರತಿದಾಳಿ ಅಷ್ಟೇ ಭೀಕರವಾಗಿರಲಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಂಗಳವಾರ ಎಚ್ಚರಿಕೆ ನೀಡಿದ್ದಾರೆ.

ಇದೇ 24ಕ್ಕೆ ರಷ್ಯಾ ಆಕ್ರಮಣ ಆರಂಭಿಸಿ, ಆರು ತಿಂಗಳು ತುಂಬುತ್ತಿದೆ.

### ಸಂಕ್ಷಿಪ್ತ ಸುದ್ದಿ

## ಬ್ರಿಟನ್–ಭಾರತ ಬಾಂಧವ್ಯ ಸುಧಾರಣೆ: ಸುನಕ್

**ಲಂಡನ್ (ಪಿಟಿಐ):** 'ದ್ವಿಮುಖ ವಿನಿಮಯವನ್ನು ಉತ್ತೇಜಿಸುವ ಉದ್ದೇಶದಿಂದ ಬ್ರಿಟನ್ ಹಾಗೂ ಭಾರತದ ನಡುವಣ ಬಾಂಧವ್ಯ ಸುಧಾರಿಸಲು ಪ್ರಯತ್ನಿಸುತ್ತೇನೆ' ಎಂದು ಬ್ರಿಟನ್‌ನ ಪ್ರಧಾನಿ ಅಭ್ಯರ್ಥಿ ರಿಷಿ ಸುನಕ್ ಮಂಗಳವಾರ ಹೇಳಿದ್ದಾರೆ.

ಉತ್ತರ ಲಂಡನ್‌ನಲ್ಲಿ ಕನ್ಸರ್ವೇಟಿವ್ ಫ್ರೆಂಡ್ಸ್ ಆಫ್ ಇಂಡಿಯಾ ಸಂಸ್ಥೆ (ಸಿಎಫ್‌ಐಎನ್) ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಮ್ಮ ಉತ್ಪನ್ನಗಳನ್ನು ಭಾರತದಲ್ಲಿ ಮಾರಾಟ ಮಾಡುವ ಹಾಗೂ ಅಲ್ಲೇ ಇದ್ದುಕೊಂಡು ಕೆಲ ಕೆಲಸಗಳನ್ನು ಮಾಡಲು ನಮಗೆ ಅವಕಾಶವಿದೆ. ಅದರ ಅರಿವೂ ನಮಗೆಲ್ಲಾ ಇದೆ. ಈ ಬಾಂಧವ್ಯವನ್ನು ನಾವು ಭಿನ್ನ ನೆಲೆಯಲ್ಲಿ ನೋಡಬೇಕಿದೆ. ಬ್ರಿಟನ್‌ನಲ್ಲಿರುವ ನಾವೆಲ್ಲಾ ಭಾರತದಿಂದ ಕಲಿಯುವುದೂ ಬಹಳಷ್ಟಿದೆ' ಎಂದಿದ್ದಾರೆ.

'ನಮ್ಮ ದೇಶದ ವಿದ್ಯಾರ್ಥಿಗಳು ಭಾರತಕ್ಕೆ ಹೋಗಿ ಕಲಿಯುವುದು ಸುಲಭ ಎಂಬುದನ್ನು ಖಾತರಿಪಡಿಸಿಕೊಳ್ಳಲು ನಾನು ಬಯಸುತ್ತೇನೆ. ನಮ್ಮ ದೇಶದ ಕಂಪನಿಗಳು ಹಾಗೂ ಭಾರತದ ಕಂಪನಿಗಳು ಜೊತೆಗೂಡಿ ಕೆಲಸ ಮಾಡುವಂತಾಗಬೇಕಿದೆ' ಎಂದು ತಿಳಿಸಿದ್ದಾರೆ.

## ಮಲೇಷ್ಯಾ: ನಜೀಬ್ ಶಿಕ್ಷೆ ಎತ್ತಿ ಹಿಡಿದ 'ಸುಪ್ರೀಂ'

**ಪುತ್ರಜಯ, ಮಲೇಷ್ಯಾ (ಎಪಿ):** ಭ್ರಷ್ಟಾಚಾರ ಪ್ರಕರಣದಲ್ಲಿ ಮಾಜಿ ಪ್ರಧಾನಿ ನಜೀಬ್ ರಜಾಕ್ ಅವರು ದೋಷಿ ಎಂದು ಘೋಷಿಸಿ, 12 ವರ್ಷ ಜೈಲು ಶಿಕ್ಷೆ ವಿಧಿಸಿ ಹೈಕೋರ್ಟ್ ನೀಡಿದ್ದ ತೀರ್ಪನ್ನು ಮಲೇಷ್ಯಾದ ಸುಪ್ರೀಂಕೋರ್ಟ್ ಮಂಗಳವಾರ ಎತ್ತಿ ಹಿಡಿದಿದೆ.

ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ನಜೀಬ್ ಅವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ, ಸುಪ್ರೀಂಕೋರ್ಟ್‌ನ ಐವರು ನ್ಯಾಯಾಧೀಶರನ್ನು ಒಳಗೊಂಡ ಸಮಿತಿಯು, 'ಈ ಪ್ರಕರಣದಲ್ಲಿ ಹೈಕೋರ್ಟ್ ನೀಡಿರುವ ತೀರ್ಪು ಸರಿಯಾಗಿಯೇ ಇದೆ' ಎಂದು ಹೇಳಿದೆ.

'ನಜೀಬ್ ಅವರ ಮೇಲ್ಮನವಿ ಪರಿಶೀಲನೆಗೆ ಅರ್ಹವಾಗಿಲ್ಲ' ಎಂದು ಹೇಳಿದ ಸಮಿತಿ, ಶಿಕ್ಷೆಯನ್ನು ಕಾಯಂಗೊಳಿಸಿತು.

ಮೇಲ್ಮನವಿ ತಿರಸ್ಕೃತಗೊಂಡಿರುವ ಪರಿಣಾಮ, ನಜೀಬ್ ಅವರು ಜೈಲು ಶಿಕ್ಷೆಗೆ ಗುರಿಯಾದ ದೇಶದ ಮೊದಲ ಮಾಜಿ ಪ್ರಧಾನಿ ಎನಿಸಲಿದ್ದಾರೆ.

## ಇಮ್ರಾನ್ ಖಾನ್‌ಗೆ ಷೋಕಾಸ್ ನೋಟಿಸ್

**ಇಸ್ಲಾಮಾಬಾದ್ (ಪಿಟಿಐ):** ನ್ಯಾಯಾಧೀಶೆಯೊಬ್ಬರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿರುವ ಆರೋಪದ ಮೇಲೆ ದಾಖಲಾಗಿರುವ ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಇಲ್ಲಿನ ಹೈಕೋರ್ಟ್ ಮಂಗಳವಾರ ಷೋಕಾಸ್ ನೋಟಿಸ್ ಜಾರಿ ಮಾಡಿದೆ.

ವಿಚಾರಣೆಗಾಗಿ ಆಗಸ್ಟ್ 31ರಂದು ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗುವಂತೆ ಇಮ್ರಾನ್ ಖಾನ್ ಅವರಿಗೆ ಸೂಚಿಸಿದೆ.

## ಸಂಕ್ಷಿಪ್ತ ಸುದ್ದಿ

### ಡೈಮಂಡ್ ಲೀಗ್ ನೀರಜ್ ಸ್ಪರ್ಧೆ



ನೀರಜ್

ನವದೆಹಲಿ (ಪಿಟಿಐ): ಒಲಿಂಪಿಕ್ ಚಾಂಪಿಯನ್ ಜಾವೆಲಿನ್ ಥ್ರೋ ಸ್ಪರ್ಧಿ ಭಾರತದ ನೀರಜ್ ಚೋಪ್ರಾ ಅವರು ಸ್ವಿಟ್ಜರ್‌ಲೆಂಡ್‌ನ ಲಾಸನ್‌ನಲ್ಲಿ ಆ.26 ರಂದು ನಡೆಯಲಿರುವ ಡೈಮಂಡ್ ಲೀಗ್ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ಅಮೆರಿಕದ ಯೂಜಿನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ ವೇಳೆ ಗಾಯಗೊಂಡಿದ್ದ ನೀರಜ್, ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕೂಟದಿಂದ ಹಿಂದೆ ಸರಿದಿದ್ದರು. ಇದೀಗ ಗಾಯದಿಂದ ಚೇತರಿಸಿಕೊಂಡಿದ್ದಾರೆ.

### ಅಗ್ರಸ್ಥಾನಕ್ಕೇರಿದ ಯೋಧಾಸ್

ಪುಣೆ (ಪಿಟಿಐ): ತೆಲುಗು ಯೋಧಾಸ್ ತಂಡ ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಮಂಗಳವಾರ 55–43 ರಲ್ಲಿ ಮುಂಬೈ ಖಿಲಾಡೀಸ್ ತಂಡವನ್ನು ಮಣಿಸಿತು.

ಈ ಗೆಲುವಿನೊಂದಿಗೆ 12 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನಕ್ಕೇರಿತು.

### ಮೇರಿ ಕೋಮ್‌ಗೆ ಶಸ್ತ್ರಚಿಕಿತ್ಸೆ

ನವದೆಹಲಿ (ಪಿಟಿಐ): ಆರು ಸಲದ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಎಂ.ಸಿ. ಮೇರಿ ಕೋಮ್ ಅವರಿಗೆ ಮಂಗಳವಾರ ಎಡಮೊಣಕಾಲಿನ ಭಾಗದ ಅಸ್ಥಿರಜ್ಜು ಶಸ್ತ್ರಚಿಕಿತ್ಸೆ ಮಾಡಲಾಯಿತು. ಮುಂಬೈ ಆಸ್ಪತ್ರೆಯಲ್ಲಿ ಪರಿಣತ ವೈದ್ಯಕೀಯ ತಂಡವು ಶಸ್ತ್ರಚಿಕಿತ್ಸೆ ನೆರವೇರಿಸಿತು.

### ಬಿಎಫ್‌ಸಿಗೆ ಜಯ

ಕೋಲ್ಕತ್ತ (ಪಿಟಿಐ): ಹೊಂದಾಣಿಕೆಯ ಆಟವಾಡಿದ ಬೆಂಗಳೂರು ಎಫ್‌ಸಿ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಪಡೆದರು.

ಮಂಗಳವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 4–0 ಗೋಲುಗಳಿಂದ ಇಂಡಿಯನ್ ಏರ್‌ಫೋರ್ಸ್ ತಂಡವನ್ನು ಮಣಿಸಿತು.

ರಾಯ್ ಕೃಷ್ಣ (9ನೇ ನಿ.), ಸುನಿಲ್ ಚೆಟ್ರಿ (23), ಫೈಸಲ್ ಅಲಿ (71) ಮತ್ತು ಶಿವಶಕ್ತಿ (93) ಅವರು ಬಿಎಫ್‌ಸಿ ಪರ ಗೋಲು ಗಳಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಒಡಿಶಾ ಎಫ್‌ಸಿ 2–0 ರಲ್ಲಿ ಕೇರಳ ಬ್ಲಾಸ್ಟರ್ಸ್ ತಂಡವನ್ನು ಮಣಿಸಿತು.

# ಯುಎಸ್ ಓಪನ್: ಹಿಂದೆ ಸರಿದ ಸಾನಿಯಾ

ನವದೆಹಲಿ (ರಾಯಿಟರ್ಸ್): ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಗಾಯದ ಕಾರಣದಿಂದ ಯುಎಸ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

2022ರ ಋತುವಿನೊಂದಿಗೆ ನಿವೃತ್ತಿಯಾಗುವುದಾಗಿ ಸಾನಿಯಾ ಪ್ರಕಟಿಸಿದ್ದರು. ಯುಎಸ್ ಓಪನ್‌ನಲ್ಲಿ ಪಾಲ್ಗೊಂಡು ಟೆನಿಸ್‌ಗೆ ‘ಗುಡ್‌ಬೈ’ ಹೇಳುವುದು ಅವರ ಯೋಜನೆಯಾಗಿತ್ತು. ಇದೀಗ ನಿವೃತ್ತಿ ನಿರ್ಧಾರವನ್ನು ಮುಂದಕ್ಕೆ ಹಾಕುವ ಸಾಧ್ಯತೆಯಿದೆ.

ಟೊರಾಂಟೊದಲ್ಲಿ ನಡೆದ ಟೂರ್ನಿಯಲ್ಲಿ ಮಹಿಳೆಯರ ಡಬಲ್ಸ್‌ನಲ್ಲಿ ಮ್ಯಾಡಿಸನ್ ಕೀಸ್ ಜತೆ ಆಡಿದ್ದ ಸಾನಿಯಾ, ಸೆಮಿಫೈನಲ್ ಪ್ರವೇಶಿಸಿದ್ದರು. ಕಳೆದ ವಾರ ಸಿನ್ಸಿನಾಟಿ ಓಪನ್ ಟೂರ್ನಿಯಲ್ಲೂ ಅವರು ಭಾಗವಹಿಸಿದ್ದರು.

‘ಎರಡು ವಾರಗಳ ಹಿಂದೆ ಕೆನಡಾದಲ್ಲಿ ನಡೆದ ಟೂರ್ನಿಯ ವೇಳೆ ಮೊಣಕೈಗೆ ಗಾಯವಾಗಿತ್ತು. ಅದನ್ನು ನಿರ್ಲಕ್ಷಿಸಿದ್ದೆ. ಆದರೆ ಸೋಮವಾರ ಸ್ಕ್ಯಾನಿಂಗ್ ಮಾಡಿಸಿದಾಗ ಗಾಯದ ಗಂಭೀರತೆ ತಿಳಿದಿದೆ’ ಎಂದು ಸಾನಿಯಾ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬರೆದಿದ್ದಾರೆ.

‘ಕೆಲವು ವಾರ ಅಂಗಳದಿಂದ ದೂರ ಉಳಿಯಬೇಕಾಗಿದೆ. ಯುಎಸ್ ಓಪನ್ ಟೂರ್ನಿಯಲ್ಲೂ ಆಡುವುದಿಲ್ಲ. ಇದರಿಂದ ನನ್ನ ನಿವೃತ್ತಿ ಯೋಜನೆಯೂ ಬದಲಾಗುವ ಸಾಧ್ಯತೆಯಿದೆ. ಎಲ್ಲವನ್ನೂ ಮುಂದಿನ ದಿನಗಳಲ್ಲಿ ತಿಳಿಸುವೆ’ ಎಂದಿದ್ದಾರೆ.

ಯುಎಸ್ ಓಪನ್ ಟೂರ್ನಿ ಆ.29 ರಂದು ಆರಂಭವಾಗಲಿದ್ದು, ಸೆ.11ರವರೆಗೆ ನಡೆಯಲಿದೆ.